ಕರ್ನಾಟಕ ಸರ್ಕಾರ

ಭರತೇಶನ ದಿನಚರಿ

# ಸರಸದ ದಿನಗಳು

ಪಿ.ಕೆ. ನಾರಾಯಣ



ಕನ್ನಡ ಪುಸ್ತಕ ಪ್ರಾಧಿಕಾರ

## ಭರತೇಶನ ದಿನಚರಿ

# ಸರಸದ ದಿನಗಳು

ಪಿ. ಕೆ. ನಾರಾಯಣ

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨

ದೂರವಾಣಿ : ೨೨೪೮ ೪೫೧೬

**BHARATESHANA DINACHARI - 'Sarasada Dinagalu' :**
by P.K. Narayana, *Published by:* **Ashoka N. Chalawadi**
Administrative officer Kannada Pustaka Pradhikara Kannada
Bhavana, J.C. Road, Banglaore - 560 002

Pages : xii + 105
Price : Rs. 50/-
First Edition : 1972
Second Edition : 2009
Copies : 500

© ಈ ಆವೃತ್ತಿಯ ಹಕ್ಕು ಕನ್ನಡ ಪುಸ್ತಕ ಪ್ರಾಧಿಕಾರದ್ದು

ಪುಟಗಳು : xii + ೧೦೫

ಬೆಲೆ : ರೂ. ೫೦

ಪ್ರಥಮ ಮುದ್ರಣ : ೧೯೭೨

ದ್ವಿತೀಯ ಮುದ್ರಣ : ೨೦೦೯

ಪ್ರತಿಗಳು : ೫೦೦

ಕರಡು ತಿದ್ದಿದವರು : ಡಾ. ವರದಾ ಶ್ರೀನಿವಾಸ್

**ಪ್ರಕಾಶಕರು :**
**ಅಶೋಕ ಎನ್. ಚಲವಾದಿ**
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ,
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು –೫೬೦ ೦೦೨

**ಮುದ್ರಕರು :** ಭಾಗ್ಯಂ ಬೈಂಡಿಂಗ್ ವರ್ಕ್ಸ್
ನಂ. ೨೫/೧, ೧ನೇ ಮುಖ್ಯರಸ್ತೆ, ೧ನೇ ಅಡ್ಡರಸ್ತೆ
ನ್ಯೂ ಟಿಂಬರ್ ಯಾರ್ಡ್ ಲೇಔಟ್
ಮೈಸೂರು ರಸ್ತೆ, ಬೆಂಗಳೂರು – ೫೬೦ ೦೨೬
ದೂರವಾಣಿ : ೨೬೭೫೮೭೨೮೦, ಫ್ಯಾಕ್ಸ್ : ೨೬೭೫೯೦೮೮

# ಅಧ್ಯಕ್ಷರ ಮಾತು

ಕನ್ನಡದ ಪ್ರಸಿದ್ಧ ಕವಿ ರತ್ನಾಕರವರ್ಣಿಯ ಭರತೇಶ ವೈಭವದ ಸರಳ ಕನ್ನಡ ಗದ್ಯಾನುವಾದ ಭರತೇಶನ ದಿನಚರಿ. ಸಾಂಗತ್ಯದಲ್ಲಿ ರಚಿತವಾಗಿರುವ ಈ ಕೃತಿಯನ್ನು ೯೦ ರಷ್ಟು ಹಿಂದೆಯೇ ಹೊಸಗನ್ನಡಕ್ಕೆ ತಂದ ಶ್ರೇಯಸ್ಸು ಹಿರಿಯರಾದ ದಿ. ಶ್ರೀ. ಪಿ.ಕೆ. ನಾರಾಯಣ ಅವರಿಗೆ ಸಲ್ಲಬೇಕು. ರತ್ನಾಕರವರ್ಣಿ ಭರತನ ಪಾತ್ರಕ್ಕೆ ಹೊಸತನ ನೀಡಿ ಉದಾತ್ತತೆಯನ್ನು ತಂದವನು. ಒಬ್ಬ ಚಕ್ರವರ್ತಿಯಾಗಿ ತನ್ನ ಬದುಕಿನಲ್ಲಿ ಯೋಗಭೋಗದ ಸಮನ್ವಯ ಸಾಧಿಸಿದವನು. ಸರಸಿಯೂ, ಪರಾಕ್ರಮಿಯೂ ಆಗಿದ್ದ ಭರತ ಕೊನೆಯಲ್ಲಿ ಎಲ್ಲವನ್ನು ತೊರೆದು ವೈರಾಗ್ಯಪರನಾದದ್ದು ಅತ್ಯಂತ ಮನನೀಯ ಸಂಗತಿ. ಭರತೇಶನ ದಿನಚರಿ – ಸರಸದ ದಿನಗಳು, ವಿಜಯದ ದಿನಗಳು, ತಪಸಿನ ದಿನಗಳು ಈ ಮೂರು ವಿಭಾಗದಲ್ಲಿ ಲೇಖಕರು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಈ ಕೃತಿಗಳನ್ನು ಹೊರತರಲು ಅನುಮತಿಸಿದ ಲೇಖಕರ ಮಕ್ಕಳಾದ ಶ್ರೀಮತಿ ವರದಾ ಶ್ರೀನಿವಾಸ್ ಅವರಿಗೆ ಆಭಾರಿಯಾಗಿದ್ದೇನೆ.

ಈ ಗ್ರಂಥವನ್ನು ಹೊರತರಲು ಸಹಕರಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್. ಚಲವಾದಿ, ನನ್ನ ಆಪ್ತ ಕಾರ್ಯದರ್ಶಿ ಶ್ರೀ ಕೆ. ಮುಕುಂದನ್, ಸಂಯೋಜನಾಧಿಕಾರಿ ಶ್ರೀ ಜೆ.ಎನ್. ಶಾಮರಾವ್, ಪ್ರಾಧಿಕಾರದ ಎಲ್ಲಾ ಸದಸ್ಯರು, ಸಿಬ್ಬಂದಿ ವರ್ಗದವರಿಗೆ ಹಾಗೂ ಈ ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿ ಕೊಟ್ಟಿರುವ ಭಾಗ್ಯಂ ಬೈಂಡಿಂಗ್ ವರ್ಕ್ಸ್‌ಗೆ ನನ್ನ ಕೃತಜ್ಞತೆಗಳು.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಒಂದು ಮಾತು

ಸರಸದ ದಿನಗಳು ಎಂಬೀ ಹೊತ್ತಗೆಯು ಮಹಾಕವಿ ರತ್ನಾಕರ ವರ್ಣಿಯ ಭರತೇಶ ವೈಭವದ ಮೊದಲ ಭಾಗವಾದ ಭೋಗ ವಿಜಯ. ವಿಜಯದ ದಿನಗಳು ಎಂಬುದು ಮತ್ತಿನ ಭಾಗವಾದ ದಿಗ್ವಿಜಯ. ಯೋಗ ವಿಜಯ, ಮೋಕ್ಷ ವಿಜಯ, ಅರ್ಕಕೀರ್ತಿ ವಿಜಯಗಳೇ ಮೂರನೆಯ ಭಾಗವಾದ ತಪಸಿನ ದಿನಗಳು.

ಈ ಭರತೇಶ ವೈಭವವನ್ನು ಮೊತ್ತಮೊದಲು ಸಂಪಾದಿಸಿದವರು ಪುತ್ತೂರು ಬೋರ್ಡು ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದ ಶ್ರೀಉಗ್ರಾಣ ಮಂಗೇಶರಾಯರು. ಅದನ್ನು ಪ್ರಕಟಿಸಿದವರು ಪುತ್ತೂರು ಜೈನ ಯುವಕ ಸಂಘದವರು. ಮೊದಲಿನ ಭಾಗವು ೧೯೩೩ರಲ್ಲೂ ಮತ್ತಿನ ಎರಡು ಭಾಗಗಳು ಕ್ರಮವಾಗಿ ಮುಂದಿನ ಎರಡು ವರ್ಷಗಳಲ್ಲೂ ಪ್ರಕಟವಾದುವು. ಭರತೇಶ ವೈಭವವು ಪುರುದೇವ ಕುಮಾರ ಭರತಚಕ್ರಿಯ ದಿನಚರಿಯಂತಿದೆ. ಅಷ್ಟು ವಿವರವಾಗಿ ಚಕ್ರವರ್ತಿಯ ದಿನದಿನದ ಆಗು–ಹೋಗುಗಳನ್ನು ಚಿತ್ತರಿಸಿದ್ದಾನೆ ಮಹಾಕವಿ. ಆ ಕವಿಯ ಶೈಲಿಯೇ ಈ ಗದ್ಯದಲ್ಲಿಳಿದು ಬರುವಂತೆ ಪ್ರಯತ್ನಿಸಿದ್ದೇನೆ. ಇದಕ್ಕಾಗಿ ನಾನು ಶ್ರೀ ಮಂಗೇಶರಾಯರು ಸಂಪಾದಿಸಿದ ಭರತೇಶ ವೈಭವದ ಈ ಮೂರು ಭಾಗಗಳನ್ನು ಉಪಯೋಗಿಸಿದ್ದೇನೆ.

ಇದನ್ನು ಗದ್ಯದಲ್ಲಿ ಬರೆಯುವಂತೆ ಸೂಚಿಸಿದವರು ಶ್ರೀ ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರಿ ಶ್ರೀ ಶ್ರೀ ಮಂಜಯ್ಯ ಹೆಗ್ಗಡೆಯವರು. ಅವರ ಸೂಚನೆಯನ್ನು ಆಜ್ಞೆಯೆಂದೇ ಶಿರಸಾವಹಿಸಿ ಗದ್ಯದಲ್ಲಿ ಬರೆದಾಗ, ಅದನ್ನು ತನ್ನ 'ವಿವೇಕಾಭ್ಯುದಯ' ಮಾಸಪತ್ರಿಕೆಯಲ್ಲಿ ಕ್ರಮವಾಗಿ ಪ್ರಕಟಿಸಿ ಕನ್ನಡಿಗರ ಮುಂದಿಟ್ಟವರು ಶ್ರೀ ಶ್ರೀ ಡಿ. ಪುಟ್ಟಸ್ವಾಮಿಯವರು. ಅವರಿಬ್ಬರೂ ಇಂದು ಕಣ್ಮರೆಯಾಗಿದ್ದಾರೆ. ಆದರೂ ಅವರಿಬ್ಬರನ್ನೂ ಈ ಸಂದರ್ಭದಲ್ಲಿ ಸ್ಮರಿಸುವುದು ನನಗೆ ಧರ್ಮವಾಗಿದೆ. ಎಂತಲೇ ಈ ಕೃತಿಯನ್ನು ಅವರಿಬ್ಬರ ನೆನಪಿಗೆ ಮುಡಿಪಾಗಿ ಅರ್ಪಿಸಿದ್ದೇನೆ.

ಆತ್ಮೀಯ ಶ್ರೀ ನಿರಂಜನರ ಒತ್ತಾಸೆಯಿಂದಾಗಿಯೇ ಈ ಕೃತಿಯು ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರದಿಂದ ಪ್ರಕಟವಾಗುತ್ತಿದೆ. ಅದಕ್ಕಾಗಿ ಸಂಪಾದಕೀಯ ಸಮಿತಿಗೂ ಮಂದಿರದ ಅಧಿಕಾರಿಗಳಿಗೂ ಕೃತಜ್ಞನಾಗಿದ್ದೇನೆ.

ಈ ಪುಸ್ತಕಕ್ಕೊಂದು ಮುನ್ನುಡಿ ಬರೆದುಕೊಡಬೇಕೆಂದು ಕೇಳಿಕೊಂಡಾಗ, ಸಹೃದಯ ಸ್ನೇಹಿತರಾದ ಶ್ರೀ ಮಿರ್ಜಿ ಅಣ್ಣಾರಾಯರು ಕವಿ ಕಾವ್ಯ ಪರಿಚಯವನ್ನೊಳಗೊಂಡ ಉತ್ತಮ ಮುನ್ನುಡಿಯನ್ನು ಬರೆದುಕೊಟ್ಟು ನನ್ನನ್ನು ಕೃತಾರ್ಥರನ್ನಾಗಿ ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಈ ಕೃತಿಗೆ ಹೊದಿಕೆಯ ಚಿತ್ರವನ್ನು ಬರೆದುಕೊಟ್ಟ ಕಲಾವಿದ ಶ್ರೀ ಮುರಲೀಧರರಿಗೂ ಮುದ್ದಾಗಿ ಮುದ್ರಿಸಿ ಕೊಟ್ಟ ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರದ ಪ್ರೆಸ್ ಮ್ಯಾನೇಜರ್ ಶ್ರೀ ಬಿ.ಎಸ್. ಹನುಮಂತೇಗೌಡರು ಹಾಗೂ ಕೆಲಸಗಾರ ಬಂಧುಗಳಿಗೂ ನನ್ನ ವಂದನೆಗಳು.

ಈ ಹೊತ್ತಗೆಯನ್ನೋದಿದವರು ಮೂಲಕೃತಿಯನ್ನೋದಲು ಬಯಸಿದರೆ, ಆ ಬಯಕೆಯಿಂದ ಮಹಾಕಾವ್ಯದ ರಸಾಸ್ವಾದ ಮಾಡಿದರೆ, ನಾನು ಧನ್ಯನು !

ಮಂಗಳೂರು
ಮೇ, ೧೯೭೨

ಪಿ.ಕೆ. ನಾರಾಯಣ

ಮಹಾಕವಿ ರತ್ನಾಕರವರ್ಣಿಯ

**ಭರತೇಶ ವೈಭವವನ್ನು**

ಗದ್ಯದಲ್ಲಿ ಬರೆಯಬೇಕೆಂದು ಸೂಚಿಸಿದ

**ಶ್ರೀ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ**

ಮತ್ತು

ಬರೆದಂತೆ, ಅದನ್ನು ತಮ್ಮ ವಿವೇಕಾಭ್ಯುದಯದಲ್ಲಿ ಕ್ರಮವಾಗಿ ಪ್ರಕಟಿಸಿದ

**ಶ್ರೀ ಶ್ರೀ ಡಿ. ಪುಟ್ಟಸ್ವಾಮಿಯವರ**

**ನೆನಪಿಗೆ**

ಈ ಕೃತಿಯು

**ಮುಡಿಪಾಗಿದೆ**

# ಮುನ್ನುಡಿ

ಮಹಾಕವಿ ರತ್ನಾಕರನ 'ಭರತೇಶ ವೈಭವ'ವು 'ಭರತೇಶನ ದಿನಚರಿ'ಯ ರೂಪದಲ್ಲಿ ಗದ್ಯದಲ್ಲಿ ಕನ್ನಡಿಗರಿಗೆ ಇದೀಗ ಲಭಿಸುತ್ತಿರುವುದು ತುಂಬ ಸಂತಸದ ಸಂಗತಿ. ಅದೂ ಕವಿಯ ಜಿಲ್ಲೆಯವರು, ಕವಿಯು ನಡೆದಾಡಿದ ನೆಲದಲ್ಲಿ ಓಡಾಡಿದವರು, ನನ್ನ ಮಿತ್ರರೂ ಆದ ಶ್ರೀಮಾನ್ ಪಿ.ಕೆ.ನಾರಾಯಣರು ಇದನ್ನು ಒದಗಿಸುತ್ತಿರುವುದು ಇನ್ನಿಷ್ಟು ಆನಂದದ ಸಂಗತಿಯಾಗಿದೆ. ಬಹು ದಿನಗಳಿಂದಲೂ 'ಭರತೇಶ ವೈಭವ'ವನ್ನು ಸತತ ಅಭ್ಯಸಿಸಿದ ಶ್ರೀಯುತರು ಅದನ್ನು ಸರಳ ಗದ್ಯದಲ್ಲಿ 'ಸರಸದ ದಿನಗಳು', 'ವಿಜಯದ ದಿನಗಳು', 'ತಪಸಿನ ದಿನಗಳು' ಎಂಬುದಾಗಿ ವಿಭಜಿಸಿಕೊಂಡು ನಮಗೆ ನೀಡುತ್ತಲಿದ್ದಾರೆ. ಇದರ ಕೆಲವು ಭಾಗಗಳು ನಮಗೆಲ್ಲ ಪೂಜ್ಯರಾದ ದಿವಂಗತ ಶ್ರೀ ಡಿ. ಪುಟ್ಟಸ್ವಾಮಿಯವರು ಸಂಪಾದಿಸುತ್ತಿದ್ದ ಮಂಗಳೂರಿನ 'ವಿವೇಕಾಭ್ಯುದಯ' ಮಾಸ ಪತ್ರಿಕೆಯಲ್ಲಿ ಪ್ರಕಟಗೊಂಡು ಜನ ಮೆಚ್ಚುಗೆಯನ್ನು ಪಡೆದಿವೆ. ಅಚ್ಚುಕಟ್ಟಾದ ಹೊಸಗನ್ನಡ ಶೈಲಿಗೆ ಈ ಬರೆಹವು ಮಾದರಿಯವಾಗಿದೆ.

ರತ್ನಾಕರನು ಕನ್ನಡ ಸಾಹಿತ್ಯದ ಐಶ್ವರ್ಯವನ್ನು ಹೆಚ್ಚಿಸಿದ ಮಹಾಕವಿಯು. ಕ್ರಿ.ಶ. ೧೬ನೆಯ ಶತಮಾನದ ಮಧ್ಯಭಾಗದಲ್ಲಿ ಪಶ್ಚಿಮ ಕರಾವಳಿಯ ಮೂಡುಬಿದರೆಯಲ್ಲಿ ಹುಟ್ಟಿ ಬೆಳೆದನು. ಕ್ಷತ್ರಿಯ ವಂಶಜನಾಗಿ ಹುಟ್ಟಿದ ಆತನು ಸುತ್ತಲಿನ ವಿದ್ಯಾಮಯವಾದ ವಾತಾವರಣದಲ್ಲಿ ಬಹು ಬೇಗನೇ ಕಾವ್ಯಾಲಂಕಾರಗಳನ್ನೆಲ್ಲ ತಿಳಿದುಕೊಂಡನು. ಅವನು ಶೃಂಗಾರ ಪ್ರಿಯನೂ ಸ್ವತಂತ್ರ ಪ್ರವೃತ್ತಿಯುಳ್ಳವನೂ ಆದ ಕನ್ನಡ ನಾಡಿನ ಹಿರಿಯ ಕವಿಯು, ಅದರಂತೆ ಯೋಗಿಯೂ ತಪಸ್ವಿಯೂ ಆಗಿದ್ದನು. ಇವನು 'ತ್ರಿಲೋಕಶತಕ, ಅಪರಾಜಿತೇಶ್ವರ ಶತಕ, ರತ್ನಾಕರಾಧೀಶ್ವರ ಶತಕ, ಹಾಡುಗಳು ಮತ್ತು ಭರತೇಶ ವೈಭವ'ಗಳನ್ನು ರಚಿಸಿದ್ದಾನೆ. ಈ ಕಾವ್ಯಗಳಲ್ಲಿ ರತ್ನಾಕರನ ಆತ್ಮಾನುಭವವೇ ವರ್ಣಿತವಾದಂತಿದೆ. ಈ ರತ್ನಾಕರ ಸಿದ್ಧನ ಸಿದ್ಧ ಹಸ್ತದಿಂದ ನಿರ್ಮಾಣವಾದ ಶ್ರೇಷ್ಠ ಕೃತಿಯು ಭರತೇಶ ವೈಭವವಾಗಿದೆ. ಆದಿ ತೀರ್ಥಂಕರನಾದ ಪುರುದೇವನ ಹಿರಿಯ ಮಗನೂ ಮೊದಲ ಚಕ್ರವರ್ತಿಯೂ ಆದ ಭರತನನ್ನು ನಾಯಕನ್ನಾಗಿ ಮಾಡಿಕೊಂಡು ವಿಸ್ತಾರವಾದ ಈ ಸಾಂಗತ್ಯ ಕಾವ್ಯವನ್ನು ಕವಿಯು ರಚಿಸಿದ್ದಾನೆ. ಎಂಭತ್ತು ಸಂಧಿ ಮತ್ತು ಸುಮಾರು ಹತ್ತು ಸಾವಿರ ಪದ್ಯಗಳುಳ್ಳ ಈ ಕಾವ್ಯವನ್ನು ಅವನು ಒಂಭತ್ತು ತಿಂಗಳಲ್ಲಿಯೇ ಬರೆದು ಮುಗಿಸಿದನು. ಇದರಲ್ಲಿ ಕವಿಯು ಉನ್ನತ ಜೀವನದರ್ಶನ, ಕಣ್ಣಿಗೆ ಕಟ್ಟುವಂಥ ಅದ್ಭುತ ಪಾತ್ರಸೃಷ್ಟಿಗಳನ್ನು ನಿರ್ಮಿಸಿ ಓದುಗರನ್ನು ಆಶ್ಚರ್ಯಗೊಳಿಸುತ್ತಾನೆ. ರತ್ನಾಕರನ ಈ ಅಸಾಧಾರಣ ಪ್ರತಿಭೆಯ ಕಾವ್ಯರಚನಾ ಕಾರ್ಯವು ಒಂದು ಪವಾಡದಂತಿದೆ.

ಈ ಕಾವ್ಯದಲ್ಲಿ ವರ್ಣಿತವಾದ ಭರತೇಶ್ವರನ ವೈಭವವು ಜಿನಯೋಗಿಯಾದ ಚಕ್ರವರ್ತಿಯ ಸಮ್ಯಕ್ ಜೀವನದ, ತ್ಯಾಗ–ಭೋಗಗಳ ಸಮನ್ವಯದ, ಸೌಂದರ್ಯ

ಪ್ರಿಯನ ರಸಿಕ ಜೀವನದ ವೈಭವದ ಸ್ಪಷ್ಟಚಿತ್ರವಾಗಿದೆ. ಇದು ತೀರ ಸ್ವಲ್ಪ ಕಥಾವಸ್ತುವುಳ್ಳ ಭರತೇಶನಂಥ ಸಿದ್ಧಪುರುಷನ ದಿನಚರ್ಯೆಯ ಬಿತ್ತರಣೆಯಾಗಿದೆ. ಇದನ್ನನುಭವಿಸಿಯೇ ಶ್ರೀ ಪಿ.ಕೆ. ನಾರಾಯಣರು ತಮ್ಮ ಈ ಗದ್ಯಾನುವಾದಕ್ಕೆ 'ಭರತೇಶನ ದಿನಚರಿ' ಎಂದು ಸಮರ್ಪಕವಾದ ಹೆಸರನ್ನಿತ್ತಿದ್ದಾರೆ. ಋಷಭದೇವನ ಹಿರಿಯ ಮಗನಾದ ಭರತೇಶ್ವರನು ತನ್ನ ವೈಭವಪೂರ್ಣವಾದ, ನಿರಾತಂಕವಾದ, ಸಮನ್ವಯ ಪೂರ್ಣವಾದ ರಸಿಕ ಜೀವನವನ್ನು ತೊಂಭತ್ತಾರು ಸಾವಿರ ಸುಂದರ ರಾಣಿಯರೊಡನೆ ನಡೆಯಿಸಿದನು. ಇದನ್ನು ಕವಿಯು 'ಭೋಗವಿಜಯ' ಎಂಬ ಹೆಸರಿನಿಂದ 'ಭರತೇಶ ವೈಭವ' ಮಹಾಕಾವ್ಯದ ಪ್ರಾರಂಭದಲ್ಲಿ ಬಹು ಮನೋಹರವಾಗಿ ವರ್ಣಿಸಿದ್ದಾನೆ. ಈ ಭಾಗವು ಈ ಗದ್ಯಕೃತಿಯಲ್ಲಿ 'ಸರಸದ ದಿನಗಳು' ಎಂದು ರೂಪುಗೊಂಡು ಇದೀಗ ಓದುಗರ ಕೈಗೆ ಬರುತ್ತಲಿದೆ. ಮುಂದೆ ಭರತೇಶನು ದಿಗ್ವಿಯಜಕ್ಕೆ ಹೊರಡಬೇಕೆಂದು ಸೂಚಿಸುವ ಚಿತ್ರರತ್ನವು ಅವನ ಆಯುಧಾಗಾರದಲ್ಲಿ ಉದಯಿಸುತ್ತದೆ. ಅವನು ದಿಗ್ವಿಜಯ ಕೈಕೊಳ್ಳುವನು. ಅವನು ಹೋದ ಹೋದಲ್ಲಿ ಗೆಲವು ಪಡೆದು, ಸ್ತ್ರೀರತ್ನಗಳನ್ನು ಕಪ್ಪಕಾಣಿಕೆಗಳನ್ನೂ ಪಡೆಯುವನು. ಆರು ಖಂಡಗಳನ್ನು ಸಾಧಿಸಿ ಚಕ್ರವರ್ತಿಯಾಗಿ ಅಯೋಧ್ಯೆಗೆ ಮರಳುವನು. ಮಾರ್ಗದಲ್ಲಿ ಪೌದನಪುರದಲ್ಲಿ ತನ್ನನ್ನು ಸೆಣಸಲು ಎದುರಾದ ತಮ್ಮನಾದ ಬಾಹುಬಲಿಯನ್ನು ಸರಸ ಮಾತಿನಲ್ಲಿಯೇ ಗೆಲ್ಲುವನು. ಇವೆಲ್ಲ ವಿವರಗಳು ಸ್ವಾರಸ್ಯಕರವಾಗಿ ಈ ಕೃತಿಯಲ್ಲಿ 'ವಿಜಯದ ದಿನಗಳು' ಎಂಬ ವಿಭಾಗದಲ್ಲಿ ಬರುತ್ತವೆ. ಬಹು ವೈಭವದಿಂದ ಚಕ್ರವರ್ತಿಯಾಗಿ ಸಾಮ್ರಾಜ್ಯವನ್ನು ಆಳಿದ ಭರತೇಶನು ಮುಂದೊಮ್ಮೆ ತಾನೂ ತಂದೆ–ತಮ್ಮಂದಿರಂತೆ ವೈರಾಗ್ಯ ತಾಳಿ ತಪಸ್ಸಿಗೆ ತೊಡಗುತ್ತಾನೆ. ಕೊನೆಗೆ ಕೈವಲ್ಯ ಪದವಿಯನ್ನು ಪಡೆಯುತ್ತಾನೆ. ಈ ವಿವರವೆಲ್ಲ ಇಲ್ಲಿ 'ತಪಸಿನ ದಿನಗಳು' ಎಂಬ ವಿಭಾಗದಲ್ಲಿ ಬರುತ್ತದೆ. ಹೀಗೆ ರತ್ನಾಕರವರ್ಣಿಯ ಮಹಾಕಾವ್ಯವಾದ 'ಭರತೇಶ ವೈಭವ'ವು ಸಮಗ್ರರೂಪದಲ್ಲಿಯೂ ವಿಸ್ತಾರವಾಗಿಯೂ ಪ್ರತಿ ಪದ್ಯಗಳ ಭಾವದೊಡನೆಯೂ ಕನ್ನಡದಲ್ಲಿ ಪ್ರಕಟವಾಗುತ್ತಿರುವುದು ಇದೇ ಮೊದಲ ಸಲವಾಗಿದೆ. ಇದು ಈ ಕೃತಿಯ ವೈಶಿಷ್ಟ್ಯವಾಗಿದೆ.

ಇನ್ನು 'ಸರಸದ ದಿನಗಳು' ಎಂಬ ಈ ವಿಭಾಗದಲ್ಲಿ ಕಥಾನಕ ತೀರ ಸ್ವಲ್ಪ. ಆದರೆ ಕಥಾನಾಯಕನ ಸ್ವಭಾವ ಚಿತ್ರಣ ಅತ್ಯದ್ಭುತ. ಇಲ್ಲಿ ವ್ಯಕ್ತವಾದ ಭರತೇಶನು ರಾಜಯೋಗಿ, ರಸಿಕ ಶಿರೋಮಣಿ, ಜಿನಯೋಗಿ, ತ್ಯಾಗಿ, ಭೋಗಿ. ಇಂಥ ವೈವಿಧ್ಯಮಯ ವ್ಯಕ್ತಿತ್ವವನ್ನೆಲ್ಲ ಅವನು ತನ್ನ ದೈನಂದಿನ ಜೀವನದಲ್ಲಿ ಅಭಿವ್ಯಕ್ತಗೊಳಿಸಿದ್ದಾನೆ. ಇದನ್ನು ರತ್ನಾಕರ ಕವಿಯು ಅನೇಕ ಬಗೆಯಾಗಿ ಚಿತ್ರಿಸಿದ್ದಾನೆ.

ಭೋಗ ವಿಚಾರವು ಬೇಕು ನೃಪತಿಗಾತ್ಮ।
ಯೋಗ ವಿಚಾರವು ಬೇಕು ॥
ರಾಗರಸಿಕನಾಗಬೇಕು ಭಾವಿಸೆ ವೀತ।
ರಾಗರಸಿಕನಾಗಬೇಕು ॥

ಇಂಥ ಪದ್ಯಗಳಲ್ಲಿ ಕವಿಯು ವರ್ಣಿಸಿದ ಆದರ್ಶವೇ ಭರತೇಶ್ವರನ ಪಾತ್ರದಲ್ಲಿ ಮೂಡಿ ಬಂದಿದೆ.

ಭರತೇಶ್ವರನು ಬೇರೆ ಬೇರೆ ಸ್ಥಾನದಲ್ಲಿ ಮತ್ತು ಬೇರೆ ಬೇರೆ ಸಂಬಂಧಗಳಲ್ಲಿ ಹೇಗೆ ವರ್ತಿಸುತ್ತಿದ್ದನೆಂಬುದನ್ನು ಈ ಕಾವ್ಯವು ವಿವರಿಸುತ್ತದೆ. ಮನುಷ್ಯನ ಜೀವನವು ಅವನ ದರ್ಶನದಿಂದ ಬೇರೆ ಬೇರೆ ಆಗುತ್ತದೆ. ಉನ್ನತವಾದ ದರ್ಶನ ಉಳ್ಳವನ ದಿನದ ನಡೆನುಡಿಗಳೂ ಸಹ ಉನ್ನತಗೊಳ್ಳುತ್ತವೆ. ದಿನದ ವ್ಯವಹಾರದಲ್ಲಿಯೂ ಇಂಥ ವ್ಯಕ್ತಿಯ ಅಸಾಮಾನ್ಯತೆಯು ವ್ಯಕ್ತವಾಗುತ್ತದೆ. ಭರತೇಶ್ವರನು ಇಂಥ ಅಸಾಮಾನ್ಯ ವ್ಯಕ್ತಿಗಳಲ್ಲಿ ಒಬ್ಬನೆಂಬುದನ್ನು ಈ ಗ್ರಂಥದ ಹಲವು ಸಹಜ ಸನ್ನಿವೇಶಗಳಿಂದ ನಾವು ತಿಳಿದುಕೊಳ್ಳಬಹುದು. ಆಯಾ ಸಂದರ್ಭದಲ್ಲಿ ಭರತೇಶನು ನಡೆದ ರೀತಿ, ಆಡಿದ ಮಾತು, ಇವು ಆ ಪ್ರಸಂಗದ ಭವ್ಯತೆಯನ್ನೂ ಸ್ವಾರಸ್ಯವನ್ನೂ ಹೆಚ್ಚಿಸಿವೆ. ರತ್ನಾಕರನ ಭರತೇಶನು ಮುನಿಗಳಿಗೆ ಆಹಾರ ನೀಡುವಾಗ ಉತ್ತಮ ಜೈನ ಶ್ರಾವಕನಾಗಿದ್ದಾನೆ; ಆರೋಗಣೆ, ಸರಸ ಪ್ರಸಂಗಗಳಲ್ಲಿ, ತನ್ನ ಪತ್ನಿಯರ ಮೇಳದಲ್ಲಿ ರಸಿಕ ಪತಿಯಾಗಿದ್ದಾನೆ; ಪಾರಣಾ ಸಂಧಿಯಲ್ಲಿ ತಾಯಿಯೊಡನೆ ಅವನು ನಡೆದುಕೊಳ್ಳುವ ರೀತಿಯು ಆದರ್ಶ ಪುತ್ರನದಾಗಿದೆ; ಅಲ್ಲಿ ಆದರ್ಶ ಪುತ್ರನಾಗಿದ್ದಾನೆ. ಮುಂದೆ ತಮ್ಮನಾದ ಬಾಹುಬಲಿಯೊಡನೆ ಬರುವ ಸಂಬಂಧದಲ್ಲಿ ಒಳ್ಳೆಯ ಅಣ್ಣನಾಗಿ ವ್ಯಕ್ತವಾಗಿದ್ದಾನೆ. ಈ ಭರತೇಶನ ಚಿತ್ರಗಳನ್ನು ಕಂಡಲ್ಲಿ ಭಾರತೀಯ ಸಂಸ್ಕೃತಿಯ ಆದರ್ಶ, ಕೌಟುಂಬಿಕ ಜೀವನ, ಸಾಮಾಜಿಕ ಜೀವನಗಳನ್ನು ಇಲ್ಲಿ ನಾವು ಅರಿಯುತ್ತೇವೆ. ನಿಜವಾದ ರಾಜನು ಹೇಗಿರಬೇಕೆಂಬುದನ್ನು ಕಾಣುತ್ತೇವೆ.

ಇಂಥ ಶ್ರೇಷ್ಠತಮ ಕಾವ್ಯವೊಂದನ್ನು ಸರಳ ಹೊಸಗನ್ನಡ ಗದ್ಯದಲ್ಲಿ ಶ್ರೀಮಾನ್ ಪಿ.ಕೆ. ನಾರಾಯಣರು ರೂಪಾಂತರಿಸಿದ್ದಾರೆ. ಈ ಕಾರ್ಯವು ಎಷ್ಟು ಕಷ್ಟತರವೆಂಬುದು 'ಭರತೇಶ ವೈಭವ' ಕಾವ್ಯವನ್ನು ಓದಿದವರಿಗೆ ಗೊತ್ತಾಗದೆ ಇರದು. ಆದರೂ ಅದನ್ನು ಯಶಸ್ವಿಯಾಗಿ ನೆರವೇರಿಸಿದ್ದಾರೆ. ಅವರಿಗೆ ಕನ್ನಡಿಗರೆಲ್ಲ ಕೃತಜ್ಞರಾಗಿರಬೇಕು. ಅದರಂತೆಯೇ ಈ ಕೃತಿಯನ್ನು ಸುಂದರವಾಗಿ ಪ್ರಕಟಿಸಿ ಕನ್ನಡಿಗರಿಗೆ ನೀಡುತ್ತಿರುವ ಕರ್ನಾಟಕ ಸಹಕಾರೀ ಪ್ರಕಾಶನದ ಸಂಚಾಲಕರೂ ವಂದನೆಗೆ ಪಾತ್ರರಾಗಿದ್ದಾರೆ. ಈ 'ಭರತೇಶನ ದಿನಚರಿ'ಯ ಪ್ರಕಟಣೆಯಿಂದ ಮಹಾಕವಿ ರತ್ನಾಕರನ 'ಭರತೇಶ ವೈಭವ' ಕಾವ್ಯದ ರಸವನ್ನು ಸವಿಯಲು ಕನ್ನಡಿಗರಿಗೆ ತುಂಬಾ ಸಹಾಯವಾಗುತ್ತದೆ. ಈ ಗ್ರಂಥದ ಮೂಲಕ ಮೂಲ ಕಾವ್ಯದ ಉಪಾಸನೆಯನ್ನು ಕನ್ನಡಿಗರು ಕೈಕೊಳ್ಳುವರೆಂದು ಕೋರುತ್ತೇನೆ.

— ಮಿರ್ಜಿ ಅಣ್ಣಾರಾಯ

ಶ್ರೀ ಚಂದ್ರಗಂಗಾ ಜ್ಞಾನಪೀಠ
ಶಾಂತಿ ಸೇವಾ ಸದನ
ಸೇಡಬಾಳ
ಫೆಬ್ರವರಿ ೫, ೧೯೭೨

# ಕೃತಜ್ಞತೆಗಳು

ದಿ|| ಪಿ.ಕೆ. ನಾರಾಯಣ ಅವರು ಅನುವಾದಿಸಿರುವ ಕೃತಿ ಇದು. ಇದು ರತ್ನಾಕರವರ್ಣಿಯ ಭರತೇಶ ವೈಭವ (ಸಾಂಗತ್ಯ)ದ ಗದ್ಯಾನುವಾದ. ಈ ಗದ್ಯಾನುವಾದ ೧೯೭೦ರಲ್ಲಿ ಬೆಂಗಳೂರಿನ ಸಹಕಾರಿ ಪ್ರಕಾಶನದ ಮೂಲಕ ಪ್ರಕಟವಾಯಿತು.

ದಿ. ಪಿ.ಕೆ. ನಾರಾಯಣ ಅವರು ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಸಾಹಿತಿ; ಪತ್ರಕರ್ತ, ಕವಿ, ಸಮಾಜ ಸೇವಕ, ಗಾಂಧೀವಾದಿ ಆಗಿದ್ದರು. ಅವರ ಕೃತಿಗಳು ಆ ಕಾಲದ ಸಹೃದಯರಿಗೆ ಚಿರಪರಿಚಿತವಾಗಿದ್ದವು. ಈಗಲೂ ಅವರು ಅಲ್ಲಿಯ ಸ್ಮರಣೀಯ ಸಾಹಿತಿಗಳಲ್ಲೊಬ್ಬರು.

ಆ ಅನುವಾದದ ಬಗ್ಗೆ ಶ್ರೀಯುತ ಬನ್ನಂಜೆ ಗೋವಿಂದಾ ಚಾರ್ಯರು 'ಉದಯವಾಣಿ'ಯಲ್ಲಿ ಶರೀ ಸೇವ ನಮಿರಾಜ ಮಲ್ಲರು 'ಕರ್ಮವೀರ'ದಲ್ಲಿ ವಿಮರ್ಶಿಸಿ, ಪ್ರಶಂಸಿದ್ದಾರೆ. ಕನ್ನಡದ ಕವಿ ಪಂಡಿತ ಶ್ರೀ ಸೇಡಿಯಾಪು ಕೃಷ್ಣಭಟ್ಟರು, ಅಭಿನವ ಕಾಳಿದಾಸ ರೆಂದು ಪ್ರಸಿದ್ಧರಾದ ಪ್ರೊ|| ಎಸ್.ವಿ. ಪರಮೇಶ್ವರ ಭಟ್ಟರು ಈ ಅನುವಾದವನ್ನು ಹೊಗಳಿದ್ದಾರೆ. ಪ್ರೊ|| ಜಿ. ಬ್ರಹ್ಮಪ್ಪನವರಿಗಿಂತ ಮೊದಲು ರತ್ನಾಕರವರ್ಣಿಯ ಸಮಗ್ರ ಕಾವ್ಯವನ್ನು ತಿಳಿಗನ್ನಡದಲ್ಲಿ ಸೊಗಸಾಗಿ ಅನುವಾದಿಸಿದವರು ಪಿ.ಕೆ. ನಾ. ಅವರು.'' ಎಂದು ಡಾ|| ಹಂಪನಾ ಅವರು ತಿಳಿಸಿದ್ದಾರೆ.

ಇಂಥ ಒಂದು ಅನುವಾದ ಮೂವತ್ತೇಳು ವರ್ಷಗಳ ನಂತರ ಪುನರ್ಮುದ್ರಣ ವಾಗುತ್ತಿದೆ. ಇದಕ್ಕೆ ಕಾರಣಕರ್ತರು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಸನ್ಮಾನ್ಯ ಡಾ|| ಸಿದ್ಧಲಿಂಗಯ್ಯ ಅವರು. ಅವರ ಈ ತೀರ್ಮಾನಕ್ಕೆ ನಾನು ಆಭಾರಿಯಾಗಿದ್ದೇನೆ.

ನಾನು, ದಿ|| ಪಿ. ಕೆ. ನಾರಾಯಣ ಅವರ ಮಗಳು ಕರಡಚ್ಚು ಪರಿಶೀಲಿಸಿ ಸಂದರ್ಭ ದಲ್ಲಿ ಎರಡೆರಡು ಬಾರಿ ಅನುವಾದ ಓದುವ ಅವಕಾಶ ಕಲ್ಪಿಸಿಕೊಟ್ಟರು. ಸಹೃದಯರಾದ ಡಾ|| ಸಿದ್ಧಲಿಂಗಯ್ಯ ಅವರು.

ರತ್ನಾಕರನ ಈ ಅನುವಾದ ಓದುತ್ತಿದ್ದಂತೆ ಆ ಮಹಾಕವಿಯ ಶಬ್ದಭಂಡಾರ, ತಾತ್ವಿಕ ವಿಚಾರ, ಹಂಸಕಲೆಯ ವಿವರ–ಎಲ್ಲವೂ ಅದ್ಭುತವಾಗಿದ್ದು ಗದ್ಯದಲ್ಲೂ ಅಷ್ಟೇ ಪರಿಣಾಮ ರಮಣೀಯವಾಗಿ ಬಂದಿರುವುದು ಗಮನಾರ್ಹ ಅಂಶವಾಗಿದೆ.

ಇಂಥ ಒಂದು ಬೃಹತ್ ಕೃತಿಯನ್ನು ಪ್ರಕಟಿಸುತ್ತಿರುವ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ನನ್ನ ಹೃತ್ಪೂರ್ವಕ ವಂದನೆಗಳು.

೨೪–೦೪–೦೯

ಡಾ. ವರದಾ ಶ್ರೀನಿವಾಸ
ಬೆಂಗಳೂರು

# ಸರಸದ ದಿನಗಳು

# ೧

# ಆಸ್ಥಾನ

ಭರತಭೂತಳಕ್ಕೆ ಸಿಂಗಾರವಾದ ಅಯೋಧ್ಯಾಪುರದಲ್ಲಿ ಮೂರು ಲೋಕ ಹೊಗಳುವಂತೆ ಭರತ ಚಕ್ರೇಶ್ವರನು ಸುಖವಾಗಿ ಬಾಳುತ್ತಿದ್ದನು. ಅವನು ಪುರುಪರಮೇಶನ ಹಿರಿಯ ಕುಮಾರ. ನರಲೋಕಕ್ಕೆ ಒಬ್ಬನೇ ರಾಜನಂತಿದ್ದನು. ಅವನು ಹದಿನಾರನೆಯ ಮನು! ಪ್ರಥಮ ಚಕ್ರೇಶ್ವರ ! ಸುದತಿ ಜನಕ್ಕೆ ರಾಜಮದನ ! ಚದುರರ ತಲೆವಣಿ ! ಇಂತಹವನನ್ನು ಬಣ್ಣಿಸುವುದು ಸುಲಭವಲ್ಲ. ಆ ಚಕ್ರಿ ಕೋಮಲಾಂಗನು; ಹೇಮವರ್ಣನು; ಜಗವೆಲ್ಲ ಕಾಮಿಸತಕ್ಕ ಚೆನ್ನಿಗನು; ಅಮೋದವುಕ್ಕುವ ಜವ್ವನಿಗನು. ಅಷ್ಟೇ ಅಲ್ಲ—ಸರ್ವಭೂಮೀಶರೊಡೆಯನು.

ಆ ವಿಭು ಒಂದು ದಿನ ಉದಯದಲ್ಲಿ ಎದ್ದು ದೇವತಾರ್ಚನೆಯನ್ನು ಮಾಡಿ, ಚಾವಡಿಗೆ ಬಂದು ಓಲಗಗೊಟ್ಟನು. ನವರತ್ನ ಹೇಮನಿರ್ಮಿತವೆನಿಸುವ ಆಸ್ಥಾನ ಭವನದಲ್ಲಿ ಆ ರಾಜರತ್ನನು ಛವಿವಡೆದು ರತ್ನಪುಷ್ಪಕದಲ್ಲಿ ದಿವಿಜೇಂದ್ರನೊಪ್ಪುವಂತೆ ಬೆಳಗಿದನು. ಶೃಂಗಾರವನದಲ್ಲಿ, ಝುಲ್ಲಿಪಟ್ಟೆ ಹೂಮಾಲೆಗಳಿಂದ ಸಿಂಗರಿಸಿದ ಮಂಟಪದಲ್ಲಿ ಮೆರೆವ ವಸಂತರಾಜನಿಗೆ ಎಣೆಯಾದನು. ತನುಕಾಂತಿ ತುಂಬಿದ ಸಭೆಯೆಂಬ ಕೊಳದಲ್ಲಿ, ಕನಕ ಸಿಂಹಾಸನವೆಂಬ ಕಮಲದ ಮೇಲೆ ರಾಜಹಂಸನೆಂಬಂತೆ ಅವನಿದ್ದನು. ಉದಯಗಿರಿಯನ್ನೇರಿ ಮೆರೆವ ಸೂರ್ಯನಿಗೆ ಇದಿರಾದ ಪ್ರತಿಸೂರ್ಯನಂತೆ, ಉತ್ತುಂಗ ಸಿಂಹಾಸನವನ್ನೇರಿ ತನ್ನ ದೇಹದ ಕಾಂತಿಯಿಂದ ಮೆರೆದನು.

ಅವನು ಎಡಗಾಲನ್ನು ಗದ್ದುಗೆಯ ಮೇಲೆ ಮೇಲೋವಿ ಮಡಚಿ ಕುಳಿತಿದ್ದನು. ಬಲಗೈಯ್ಯಲ್ಲಿದ್ದ ಹೊನ್ನೊರೆಯ ಕಠಾರಿಯು ಕೆಳಕ್ಕೆ ಇಳಿದಿತ್ತು, ಬೀರಸಿರಿಯನ್ನು ಪಡೆದ ಅವನು ಕಲಿಗಳ ದೇವನಂತೆ ಕಂಗೊಳಿಸಿದನು. ಮಿರುಗುವ ಕಿರೀಟ, ಗಾಳಿಗೆ ಹಾರುವ ದುಕೂಲ, ಮೈಗೆ ಮೋಹಿಸುವ ಕಾಗಿನ ದಟ್ಟಿ, ತುಂಬಿದ ಕಸ್ತೂರಿ ತಿಲಕ, ಇವುಗಳಿಂದವನು ಕಣ್ಗಿಂಬಾಗಿ ಕಂಡನು. ಠೀವಿಯ ನೋಟ, ಮಿತವಾಗಿ ಮಾತಾಡುವ ನುಡಿಯ ವಿಡಾಯ— ಇವುಗಳಿಂದ ಭರತೇಶನು ಗಂಭೀರನಾಗಿದ್ದನು. ಗಂಭೀರವೆಂಬುದು ಸರ್ವಗುಣಗಳಿಗೂ ಮೂಲವಾಗಿರುವುದು. ಆದ್ದರಿಂದ ರಾಜನಿಗೂ ರಾಜಯೋಗಿಗೂ ಗಂಭೀರವಿರಬೇಕು.

ಕೊರಳಲ್ಲಿ ಧರಿಸಿದ ತೋರಮುತ್ತುಗಳು ತಿಳಿಯಾದ ಕೊಳದಲ್ಲಿ ಕಾಣುವ ತಾವರೆಗಳಂತಿದ್ದುವು. ಪದಕ, ಕಡಗ, ಕಂಠಮಾಲೆಯ ನವರತ್ನ—ಇವುಗಳ ಕಾಂತಿಯು ದೇಹಕಾಂತಿಯಲ್ಲಿ ಸೇರಿ ಹೊಳೆಯುವಾಗ, ಭರತೇಶನು ಇಂದ್ರಚಾಪದಿಂದಲೇ ಕಡೆದು ಮಾಡಿದ ಅರಸನಂತೆ ತೋರಿದನು. ತೋರಮುತ್ತಿನ ಆಭರಣದೊಂದಿಗೆ ಜಗಜಗಿಸುವ

ಲಾವಣ್ಯದಿಂದ, ಹಗಲಲ್ಲೇ ನಕ್ಷತ್ರವೆರಸಿ ಚಂದ್ರಮನು ಹೊಳೆದಂತೆ ಹೊಳೆದನು. ಆ ಲಲಿತಾಂಗನ ತನುಕಾಂತಿಯು ಹೊದೆದ ದುಕೂಲದಿಂದ ಹೊರಹೊಮ್ಮುವಂತೆ ರಂಜಿಸಿತ್ತು. ಆದಿ ಜಿನನ ಕುಮಾರನಾಗಿ, ಭವಭಂಜನನಾಗಿ, ಅಂತ್ಯದೇಹಿಯಾದ್ದರಿಂದ ಅವನಿಗೆ ಆ ಕಾಂತಿಯಿರುವುದು ವಿಸ್ಮಯವಲ್ಲ. ಚಿತ್ರಿಸಲಾಗದ ಅವನ ರೂಪು ಕರುವಿಟ್ಟು ಸೂತ್ರಿಸಿ ಎರೆಯಲೂ ಅಸಾಧ್ಯ. ನೇತ್ರಕ್ಕೆ, ಮನಕ್ಕೆ ಗೋಚರವಲ್ಲದ ಅದು ವಾಕ್ಕಿಗೆ ಮಾತ್ರ ಗೋಚರವಷ್ಟೆ ! ಹೆಂಗಸರ ರೂಪು ಗಂಡಸರನ್ನೂ, ಗಂಡಸರ ರೂಪು ಹೆಂಗಸರನ್ನೂ ಸೋಲಿಸುವುದಾದರೆ ಭರತೇಶನ ಚೆಲ್ವಿಕೆಯು ಗಂಡುಗಳನ್ನೂ ಹೆಣ್ಣುಗಳನ್ನೂ ಸೆರೆಹಿಡಿಯುವುದು. ಅಂತಹ ಸೊಬಗು ! ಅಂಗಗಳಿಗೆ ತಕ್ಕ ಲಾವಣ್ಯ. ಲಾವಣ್ಯಕ್ಕೆ ತಕ್ಕ ಪ್ರಾಯ. ಪ್ರಾಯಕ್ಕೆ ತಕ್ಕ ಶ್ರೀಗಂಭೀರ. ಇಂತಹ ಪರಾಕ್ರಮಿ ಶೃಂಗಾರಶೋಭೆಯಲ್ಲಿ ಮೆರೆದನು. ಪೂರ್ವಜನ್ಮದಲ್ಲಿ ಯಾವ ನೋಂಪನ್ನು ನೊಂತಿದ್ದನೋ. ಯಾವ ಭಕ್ತಿಯಲ್ಲಿ ಆದಿಜಿನನ್ನು ಭಾವಿಸಿದ್ದನೋ. ಇಲ್ಲದಿದ್ದರೆ ಅವನಿಗೀ ಲೋಕದಲ್ಲಿ ಅಂತಹ ಲಾವಣ್ಯವೊದಗುತ್ತಿತ್ತೇ?

ದೇಹ ಬೇರೆ, ಆತ್ಮ ಬೇರೆ ಎಂದು ಆತ್ಮಕಲೆಯನ್ನು ಮೊದಲೇ ಧ್ಯಾನಿಸಿದ ಫಲದಿಂದ ಭರತೇಶನಿಗೆ ಆ ರೂಪು ದೊರೆಯಿತು. ಭೂಮಿಯಲ್ಲಿ ಎಲ್ಲರಿಗೂ ಅಂತಹ ರೂಪವೇಕೆ ಬಂದೀತು? ಅವನನ್ನು ನೋಡಿದರೆ ಕಣ್ಣಿಗೆ ಆಯಾಸವಿಲ್ಲ; ಕೊಂಡಾಡಿದವರ ಬಾಯಿ ಆರುವುದಿಲ್ಲ; ನೋಡಿದಷ್ಟಕ್ಕೆ, ಕೊಂಡಾಡಿದಷ್ಟಕ್ಕೆ ಮತ್ತಷ್ಟು ಆಶೆ ಹೆಚ್ಚುವಂತಿದ್ದ ಭರತೇಶ ಚಕ್ರಿ. ಈ ರೂಪು ರೇಖೆ,ಈ ಗಾಡಿ ಮೋಡಿ, ಈ ರಾಯನಿಗಲ್ಲದೆ ಅನ್ಯರಿಗೆ ಬಾರದು; ಬಂದರದು ದಕ್ಕದು ಎಂದು ನೋಡಿದವರು ನುಡಿಯುತ್ತಿದ್ದರು. ಹರಿಯುತ್ತಿರುವ ಬಿಳಿ ಮುಗಿಲುಗಳು ತೋರಿ ಮೆರೆಸುವ ಚಂದ್ರನೋ ಸೂರ್ಯನೋ ಎಂಬಂತೆ, ಚಾಮರಗಳ ಸಾಲಿನಲ್ಲಿ ಭರತೇಶನು ಮೆರೆಯುತ್ತಿದ್ದನು.

ಭರತೇಶನ ಬಲದಲ್ಲಿ ಭೂಭುಜರು ಕುಳಿತಿದ್ದರು. ಎಡದಲ್ಲಿ ಗಣಿಕೆಯರಿದ್ದರು. ಒಲುಮೆಯ ಕವಿಗಳು ಮುಂದೆ ಮಂಡಿಸಿದ್ದರು. ಚಕ್ರಿಯ ಹಿಂದೆ ಹಿತವಂತರಿದ್ದರು. ಗೆಳೆಯರೂ ಸಚಿವರೂ ಸಮೀಪದಲ್ಲಿದ್ದರು. ದೃಷ್ಟಿ ಸಲುವಷ್ಟು ದೂರದವರೆಗೆ ಜನ ತುಂಬಿದ್ದರು. ಚಂದ್ರ, ರಾಜಹಂಸ, ಗಿಳಿ ತಂಬೆಲರಿಂದ ಬಳಸಿ ಕಂಗೊಳಿಸುವ ಕಾಮಚಕ್ರೇಶ್ವರನಂತೆ ಭರತಚಕ್ರೇಶ್ವರನು ವಿರಾಜಿಸಿದನು.

ಆ ಓಲಗ ಸಾಲೆಯಲ್ಲಿ ಗಲಭೆಯಾಗದಂತೆ ಕಟ್ಟಿಗೆಕಾರರು, ಅಲ್ಲಲ್ಲಿ ದಿಟ್ಟಿ ಬೀರುತ್ತಿದ್ದರು. ನಿಲ್ಲು, ಸುಮ್ಮನಾಗು, ಚಿತ್ತೈಸು, ಲಾಲಿಸು, ಕುಳ್ಳಿರು—ಎಂದು ತಿರುಗಾಡುತ್ತಿರುವ ಕಟ್ಟಿಗೆಕಾರರು ನುಡಿಯುತ್ತಿದ್ದರು. ಮಂತ್ರಿಗಳು, ಮಾಂಡಲಿಕರು, ರಾಜಕುಮಾರರು, ಪಂಡಿತರು, ಗಾಯಕರು, ಎಂದು ಎಲ್ಲರಲ್ಲಿ ಎಡೆಗೊಂಡಿದ್ದರು. ನಟ್ಟುವರು, ಅಕ್ಕರಿಗರು, ಭಯಕಾರರು, ಭಟ್ಟರು, ವೈದ್ಯರು, ಜೋಯಿಸರು, ಜಟ್ಟಿಗಳು, ಅಂಕದಾಳುಗಳು, ಮಾವತಿಗಳು, ಸಾಣೆಗಳು, ಹೇರಿಗರು, ಸೇನಭೋವರು, ಮಂತ್ರಿಜೀವಿಗಳು, ರಾವುತರು, ನಾಯಕರು, ಅಲ್ಲದೆ ಬಹಳ ಮಂದಿ ಸೇವಕರೂ

ಅಲ್ಲಿದ್ದರು. ತಾವರೆಯು ಸೂರ್ಯನನ್ನೇ ನೋಡುವಂತೆ ನೈದಿಲೆಯು ಚಂದ್ರನನ್ನೇ ನೋಡುವಂತೆ ಆ ತುಂಬಿದ ಸಭೆಯು ರಾಜನನ್ನೇ ನೋಡುತ್ತಿತ್ತು.

ಸಭೆಯೆಲ್ಲ ತನ್ನನ್ನೇ ನೋಡುತ್ತಿರುವಾಗ ರಾಜನೊಮ್ಮೆ ಗಾಯಕರ ಮುಖವನ್ನು ನೋಡಿದನು. ಆ ಒಲುಮೆಯ ನೋಟವನ್ನರಿತು ಅವರು ಆಗಲೇ ಹಾಡತೊಡಗಿದರು.

ಬಳ್ಳಬಾಯಿ ತೆರೆಯದೆ, ಭ್ರಾಂತಿಗೊಂಡವರಂತೆ ಮೈಯೆಲ್ಲ ತೂಗಾಡದೆ, ಲಲಿತವಾಗಿ ಹಾಡಿದರು. ತಬ್ಬಿಬ್ಬಾಗದೆ, ತಳ್ಳಂಕಗೊಳ್ಳದೆ, ಬೊಬ್ಬೆಯಿಕ್ಕದೆ, ಜೋಕೆಯಿಂದ ಒಬ್ಬಿಬ್ಬರು ಮೂವರು ಒಂದಾಗಿ ಹಾಡಿದರು. ಪ್ರಾತಃಕಾಲದ ರಾಗವನ್ನು ಆಲಾಪಿಸಿದಾಗ ಕೇಳಿದ ಜನರೆದೆಗೆ ತಂಗಾಳಿ ಬೀಸಿದಂತಾಯ್ತು. ಚಂದ್ರನನ್ನು ಕಂಡ ಸಮುದ್ರದ ಭರತದಂತೆ, ರಾಜನ ಮುಖಚಂದ್ರನನ್ನು ನೋಡಿದ ಗಾಯಕರ ಆಲಾಪವುಕ್ಕುತ್ತಿತ್ತು. ಭರತ ಚಕ್ರಿಯ ನೆನೆದರೆ ಸಾಕು, ಬಾರದವರಿಗೂ ಭರತಶಾಸ್ತ್ರದ ಕಲೆ ಬಂದೀತು. ಪ್ರಾತಃಕಾಲದ ರಾಗದಲ್ಲೇ ವೀತರಾಗನ ಸ್ಮರಣೆಗಳಾದುವು. ಭೂಪಾಳಿಯಿಂದ, ಧನ್ಯಾಸಿಯಿಂದ, ಶ್ರೀ ಪುರುನಾಥನನ್ನು ಹಾಡಿದರು. ಮಲಿನವಿಲ್ಲದ ಮನದಿಂದ ಆದಿಜಿನನನ್ನು ಮಲಹರಿ ರಾಗದಿಂದ ಹಾಡಿದರು. ಇದನ್ನು ಕೇಳಿದವರ ಕರ್ಮ ಹರಿವಂತಾಯಿತು. ಜಿನೇಶನ ಗುಣಗಳನ್ನೂ ದೇಶಾಕ್ಷಿ ರಾಗದಲ್ಲೂ ಕೌಶಲ ಮಂಗಳಾಷ್ಟಕವನ್ನು ಮಂಗಳ ಕೌಶಿಕೆಯಲ್ಲೂ ಹಾಡಿದರು. ವೀಣೆಯ ಧ್ವನಿ ಯಾವುದು ಅದರೊಡನೆ ಹಾಡುವ ಗಾನದ ಧ್ವನಿ ಯಾವುದು, ಎಂದುಕಾಣಿಸಿ ಕೊಳ್ಳದಂತೆ ಜಿನಸಿದ್ಧ ಮಹಿಮೆಯನ್ನು ಹಾಡಿದರು.

ಇದನ್ನು ಕೇಳಿ, 'ಕಿನ್ನರರೇಕೆ? ಕಿಂಪುರುಷರೇಕೆ? 'ಇವರೇ ಸಾಕಿನ್ನು' ಎಂದು ಕೆಲವರು ನುಡಿದರು. ದನಿ, ಮೇಳ, ಆಲಾಪ, ಅನುಭವ ಅವುಗಳೊಂದಿಗೆ ಕೂಡಿದ ಜಿನನಾಮ— ಎಲ್ಲವೂ ಲೇಸಾಯಿತೆಂದು ಇನ್ನೂ ಕೆಲವರು ಹೇಳಿದರು. ಕಲ್ಲು, ಮರ, ಹಾವು, ಹಸುಳೆ, ಮೃಗಪಶುಗಳೆಲ್ಲ ಗಾನಕ್ಕೆ ಸೋಲುವಾಗ ರಸಿಕರು ಸೋಲದಿರುವರೆ? ಸಭೆಯೆಲ್ಲ ಆ ಸಂಗೀತವನ್ನು ಕೇಳುತ್ತ ಮೈ ಅಲುಗಾಡಿಸದೆ ಬೆರಗಾಗಿತ್ತು. ಗಾಯನವೆಂದರೆ ಎಲ್ಲಕ್ಕೂ ಹಿತಕಾರಿಯೇ. ಅದು ಧರ್ಮ ಕಥಾನುಚರಿತವಾದರೆ ಎಲ್ಲಕ್ಕೂ ಪುಣ್ಯ. ಹೀನ ಸತಿಯರ ಆಟ, ಬೇಟೆ, ಕಾಳಗಗಳಾದರೆ ಪಾಪ.

ಗಾಯಕರು ಜಿನನನ್ನು ಹೊಗಳಿದ ಮೇಲೆ ಸಿದ್ಧರನ್ನೂ ಮುನಿಗಳನ್ನೂ ಕೀರ್ತಿಸಿ ವಂದಿಸಿದರು. ಅನಂತರ ಅವರು ದೇಹದೊಳಗಿದ್ದ ಆತ್ಮದ ವಿಚಾರವಾಗಿ ಭರತೇಶನು ಮೆಚ್ಚುವಂತೆ ಹಾಡಿದರು. ತಮ್ಮ ಶರೀರದಲ್ಲೇ ತುಂಬಿರುವ ಹಂಸತತ್ವವರಿಯದೆ ಸಂಸಾರ ದುಃಖವನ್ನು ಉಣ್ಣುತ್ತಿದ್ದಾರೆ. ತನ್ನೊಳಗಿರುವ ಚಿದ್ರೂಪವನ್ನು ನೋಡದೆ ಜಗವೇ ಬಳಲುತ್ತದೆ. ಕಬ್ಬಿನಲ್ಲಿರುವ ರಸವನ್ನು ಕಾಣದ ಪಶುವು ಹೊರಗಿನ ಸೋಗೆಯನ್ನು ಮೆಲ್ಲುವಂತೆ, ಒಳಗಿನ ಆತ್ಮ ಸುಖವನ್ನು ಸವಿಯಲಾರದ ಕೆಲವರು, ಹೊರಗಿನ ಅಂಗಸುಖವನ್ನೇ ಬಯಸುವರು. ಆದರೆ ಕೆಲವು ಹಸಗೆಟ್ಟು ದೇಹ ಸುಖಕ್ಕೆ ಒಲಿಯದೆ ನಿಜಸುಖವನ್ನು ಭೋಗಿಸುತ್ತಾರೆ. ದೇಹವೊಂದು ವಾದ್ಯ, ಆತ್ಮನೇ ಅದನ್ನು ನುಡಿಸುವವನು. ವಾದ್ಯಗಾರ ಹೋದರೂ ವಾದ್ಯಗಳುಳಿಯುವುದು ಲೋಕದಲ್ಲಿ ಸಹಜ. ಆದರೆ ಈ ವಾದ್ಯ

ಹಾಗಲ್ಲ, ನುಡಿಸುವವ ಹೋದೊಡನೆ ಅದೂ ನಾಶವಾಗುವುದು. ಆತ್ಮನು, ನುಡಿಯಲಾರದ ನಡೆಯಲಾರದ ದೇಹವನ್ನು ನುಡಿಸುವನು, ನಡೆಸುವನು. ದೇಹವನ್ನು ಹೊಕ್ಕಿದ್ದರೆ ಅದರಿಂದಲೇ ಆತ್ಮನಿಗೆ ಬಾಧೆಯಾಗುವುದು. ಆ ದೇಹವಳಿದರೆ ಬಾಧೆಯುಂಟೆ? ಒಂದು ದೇಹವನ್ನು ಬಿಟ್ಟು ಆತ್ಮ ಮತ್ತೊಂದು ದೇಹವನ್ನು ಸೇರುವುದುಂಟು. ಹೊತ್ತ ದೇಹವನ್ನು ಬಿಟ್ಟಾಗ ಮತ್ತೊಂದು ದೇಹವನ್ನು ಸೇರದಿರುವುದೇ ಮುಕ್ತಿ. ಈ ಮುಕ್ತಿ ಪಡೆಯಬೇಕಾದರೆ ಸುಜ್ಞಾನಾಗ್ನಿಯಿಂದ ಕರ್ಮದ ಬೇರನ್ನೇ ಸುಡಬೇಕು. ಆದಿಜಿನನ ವಾಕ್ಯವೇ ಇದು. ನಿರ್ಭೇದವಾಗಿರುವ ಹಂಸಯೋಗ ಭಕ್ತಿಯ ಸುಯುಕ್ತಿಯೇ ಇದೆಂದು, ಗಾಯಕರು, ಆತ್ಮವಿದ್ಯಾವಿನೋದಿಯಾದ ಭರತೇಶನ ಮುಂದೆ ಹಾಡಿದರು. ರಾಜನಾಗಲಿ, ಯೋಗಿಯಾಗಲಿ, ಗೃಹಿಯಾಗಲಿ, ಈ ಜಿನತತ್ವವನ್ನರಿತು ಶ್ರೀ ಜಿನಭಕ್ತಿಯಲ್ಲಿದ್ದರೆ ಮುಕ್ತಿ ತಪ್ಪದು— ಎಂದವರು ಹಾಡಿದರು. ಆಗ ಚಕ್ರಿಯ ಮುಖದಲ್ಲಿ ನಸುನಗೆಯ ಎಸಳು ಎಸೆಯಲು, ತಾನೇ ತನ್ನ ಕೋಮಲ ಹಸ್ತದಿಂದಲೇ ಗಾಯಕರೆಲ್ಲರ ಹೆಗಲಲ್ಲಿ ದೇವಾಂಗ ವಸ್ತ್ರವನ್ನು ಉಡುಗೊರೆಯಾಗಿ ಹೊದಿಸಿದನು. ಸಭೆಗೆಲ್ಲ ಆನಂದವಾಯಿತು.

# ೨

# ಕವಿವಾಕ್ಯ

ಸಂಗೀತಗೋಷ್ಠಿ ನಿಂತಾಗ ನೃಪೇಂದ್ರನು ಸಾಹಿತ್ಯ ಸಂಗತಿಗೆಳಸಿ ವಿದ್ವಾಂಸರ ನೆರವಿಯನ್ನೊಮ್ಮೆ ನೋಡಿದನು. ಅಲ್ಲಿ ಕವಿಗಳು ಹಲವರಿದ್ದರು. ಅವರ ಮಧ್ಯದಲ್ಲಿ ದಿವಿಜಕಲಾಧರ ಕವಿಯಿದ್ದನು. ರಾಜನು ಅವನ ಮುಖವನ್ನು ನೋಡಿದಾಗ, ದಿವಿಜಕಲಾಧರನು ಭಾವವರಿತು ನುಡಿದನು.

''ಶ್ರೀಜಿನ ಚರಣಾಬ್ಜಸುರಭಮಧುವ್ರತ ರಾಜಾಧಿ ರಾಜಾಗ್ರಗಣ್ಯ।
ರಾಜಿತ''' ಹಂಸಕಲಾನಂದ ನಿನಗೆ ಮಹಾಜಯ ಸಿದ್ಧಿರಸ್ತೆಂದಾ॥

ಆ ಮೇಲೆ ತಾನೆದ್ದು ಜಯಸಿದ್ಧಿಯನ್ನು ವಿವರಿಸಿದನು. ವೈರಿಭೂಪರನ್ನೊತ್ತಿ ಜಯಸಿದರೆ ಅದು ಲೌಕಿಕಾರ್ಥದ ಜಯಸಿದ್ಧಿ. ಭಯಪಡಿಸುವ ಕಾಲಕರ್ಮವನ್ನೊತ್ತಿ ಜಯಿಸಿದರೆ ಅದು ಪರಮಾರ್ಥದ ಸಿದ್ಧಿ. ಲೌಕಿಕ ಜಯವಂತರು ಹಲವರಿದ್ದಾರೆ; ಆದರೆ ಲೌಕಿಕಜಯವನ್ನೂ ಪಾರಮಾರ್ಥಿಕ ಜಯವನ್ನೂ ಪಡೆದ ರಾಜರು ದುರ್ಲಭರು. ಅದಕ್ಕೆ ವಿವೇಕವಿರಬೇಕು. ರಾಜನಿಗೆ ಭೋಗವಿಚಾರವೂ ಯೋಗವಿಚಾರವೂ ತಿಳಿದಿರಬೇಕು. ಅವನು ರಾಗರಸಿಕನಾಗಿಯೂ ವೀತರಾಗರಸಿಕನಾಗಿಯೂ ಇರಬೇಕು. ಶೃಂಗಾರ ಕೋವಿದನಾದಂತೆ ಆತ್ಮಸುಸಂಗ ಸಂಮುಖನೂ ಆಗಬೇಕು. ಸಮರ ಸಂಮುಖನಾದಂತೆ ಯೋಗಾಂಗಕೋವಿದನೂ ಆಗಬೇಕು. ರಾಜನಾದವನು ಇಹಲೋಕ ಸುಖವನ್ನು ಭೋಗಿಸಿದರೂ ಧರ್ಮದಲ್ಲಿ ಉತ್ಸಾಹವುಳ್ಳವನಾಗಬೇಕು. ಹೊರಗೆ ಆಶೆಯುಳ್ಳವನಂತೆ ತೋರಿದರೂ ಅಂತರ್ಯದಲ್ಲಿ ನಿಸ್ಪೃಹನಾಗಿಯೂ ಇರಬೇಕು. ಉತ್ತಮರು, ಸಿರಿಯು ಧರ್ಮದಿಂದಾಯಿತೆಂದು ಧರ್ಮವನ್ನು ಮರೆಯದೆ ಸುಖಿಸುವರು; ಆದರೆ ಕರ್ಮಿಗಳು, ಭೋಗಕ್ಕೆ ಮರುಳಾಗಿ ಧರ್ಮವನ್ನು ಕಡೆಗಣಿಸಿ ಆಚರಿಸುವರು. ಕೊಡುವಾಗ ಪಾತ್ರವರಿತು ಕೊಡಬೇಕು. ಮಾತೂ ಮೌನವೂ ರಾಜರಲ್ಲಿರಬೇಕು. ಅವರು ಬಡವರಂತೆಯೂ ಪ್ರಭುವಿನಂತೆಯೂ ಇರಬೇಕು. ಪ್ರಜೆಗಳಿಗೆ, ಪರಿವಾರದವರಿಗೆ ಹಿತನಂತಿರಬೇಕು. ವೈರಿಭೂಭುಜರಿಗೆ ಮಾತ್ರ ಭುಜಗೇಂದ್ರನಂತಿರಬೇಕು. ಗುರುವಿಗೆ ಸೇವಕನಾಗಿ, ಧಾರ್ಮಿಕರಿಗೆ ಬಂಧುವಾಗಿ, ಕದನಕ್ಕೆ ಕಡುಗಲಿಯಾಗಿ, ಅರುಹನ ಆಗಮದಲ್ಲಿ ಆರ್ತಿಗನಾಗಿ, ಆತ್ಮಕಲೆಯಲ್ಲಿ ಸರಸಿಗನಾಗಿ ರಾಜನಿರಬೇಕು. ಇಂದ್ರಿಯಗಳನ್ನು ಹವಣಿಸಿಕೊಳ್ಳಬೇಕು. ಮಿಗ, ಮೀನು, ಆನೆ, ಪತಂಗ, ತುಂಬಿಗಳೆಲ್ಲ ಒಂದೊಂದು ಇಂದ್ರಿಯದಿಂದಲೇ ಕೆಡುವಾಗ ಐದು ಇಂದ್ರಿಯಗಳಿಗೆ ಸಿಕ್ಕಿದ ಅರಸು ಕೆಡುವುದು ಅಚ್ಚರಿಯಲ್ಲ. ಜ್ಞಾನಶೂನ್ಯನ ಪಂಚೇಂದ್ರಿಯಗಳು ಪಂಚಾಗ್ನಿಗಳು. ಆದೇ ಜ್ಞಾನಿಯ

ಪಂಚೇಂದ್ರಿಯಗಳು ಪಂಚರತ್ನಗಳು. ಜ್ಞಾನವಿಲ್ಲದೆ ಭೋಗಿಸುವವನು ಭೋಗಿ; ಕರ್ಮವು ಜ್ಞಾನಿಯನ್ನೆಂದೂ ಮುಟ್ಟದು. ''ಜ್ಞಾನವೇ ನಾನು; ಶರೀರವೆಂಬುದು ನಾನಲ್ಲ.'' ಈ ಅನುಭವವೇ ಜ್ಞಾನ !

''ಬಾಹ್ಯವಿಜ್ಞಾನವೆಂದೂ ಅಂತರಂಗ ವಿಜ್ಞಾನವೆಂದೂ ಉಂಟು. ರತ್ನಗಜಾಶ್ವ ಪರೀಕ್ಷೆಗೆ ಪ್ರಯತ್ನಿಸುವುದು ಬಾಹ್ಯವಿಜ್ಞಾನ; ರತ್ನತ್ರಯ ರೂಪನನ್ನು ಆತ್ಮನೆಂದರಿಯುವುದು ನೂತನವಾದ ಅಂತರಂಗವಿಜ್ಞಾನ. ಗಣಿತಶಾಸ್ತ್ರ, ಭರತಶಾಸ್ತ್ರ, ಪಂಚಾಂಗ, ವಸ್ತು ಲಕ್ಷಣವೆಲ್ಲ ಬಾಹ್ಯವಿಜ್ಞಾನ; ಗುಣಗುಣಿಯೊಡಗೂಡಿ ತನ್ನನ್ನೇ ತಾನರಿಯುವುದು ಉತ್ತಮವಾದ ಅಂತರಂಗವಿಜ್ಞಾನ, ಛಂದಸ್ಸು, ಅಲಂಕಾರ ಕಾವ್ಯನಾಟಕ ಶಾಸ್ತ್ರಗಳ ಸಮೂಹಗಳೆಲ್ಲ ಬಾಹ್ಯವಿಜ್ಞಾನ. ಆತ್ಮತತ್ತ್ವವನ್ನರಿಯುವುದು ಅಂತರಂಗವಿಜ್ಞಾನ. ಅಂತರಂಗವಿಜ್ಞಾನವು ಸಾಮಾನ್ಯವಲ್ಲ, ಮಹಾಮುಕ್ತಿಪದಕ್ಕೆ ಅದು ಬೀಜ. ಅದು ಬೇಡಿದ್ದನ್ನೆಲ್ಲ ನೀಡುವುದು.ಸುರತರು ಸುರಭಿ ಚಿಂತಾಮಣಿಗಳು ಅದಕ್ಕೆ ಸಾಟಿಯಲ್ಲ, ದೊರೆಗೆ ಅಂತರಂಗ ವಿಜ್ಞಾನವು ನಿಶ್ಚಲವಾಗಿ ದೊರೆತರೆ ಅವನಿಗೆ ದೊರೆಯಾದವರು ಯಾರೂ ಇಲ್ಲ. ಅವನು ಧರೆಗೆ ಇಂದಿನರಸು; ಸ್ವರ್ಗಕ್ಕೆ ಮುಂದಿನರಸು; ಮುಕ್ತಿಗೆ ಮತ್ತಿನರಸು. ಅವನು ಸಿರಿಗೆ ಉಬ್ಬಲಾರ; ಎಡರಿಗೆ ತಗ್ಗಲಾರ. ಆತ್ಮಜ್ಞಾನಿಯಾದವನು ಪರಿಹಾಸ್ಯಕ್ಕೆಳಸಲಾರ. ಹರವರಿಯದೆ ನುಡಿಯಲಾರ; ಧೈರ್ಯದಲ್ಲಿ ಮಂದರದಂತಿರುವನು. ಅವನಿಗೆ ಇಂದ್ರಿಯ ಸುಖದಲ್ಲಿ ಆಸಕ್ತಿಯಿಲ್ಲ ; ದೇವೇಂದ್ರನ ಸಿರಿಯೂ ಅವನಿಗೆ ಬೇಕಾಗಿಲ್ಲ. ಅವನು ಇಂದ್ರಿಯದ ಅನುಭವದಲ್ಲಿದ್ದಂತೆ ಕಂಡರೂ ಯೋಗೀಂದ್ರ ವೃತ್ತಿಯೇ ಅವನಿಗೆ ಮೆಚ್ಚು ! ಹಂಸನಿರೀಕ್ಷಣದಿಂದ ಉಕ್ಕಿದ, ಅಮೃತವನ್ನು ಹಂಸನಂತೆ ಈಂಟಿ ತಣಿಯುವನು. ಸಂಸಾರ ಸುಖದಲ್ಲಿ ಉದಾಸೀನಭಾವನಾಗಿ ಅವತಂಸಭಾವವನ್ನು ಅನುಭವಿಸುವನು. ಆತ್ಮ ತತ್ತ್ವದಲ್ಲೇ ನಿರತನಾಗಿದ್ದು ಕರ್ಮದ ನಾಶವನ್ನು ಮಾಡುತ್ತಿರುವನು. ಸಂಯಮಿಯಾಗಿದ್ದು ಮುಕ್ತಿಪಡೆಯುವೆನೆಂಬ ದೃಢವೂ ಅವನೆದೆಯಲ್ಲಿರುತ್ತದೆ.

''ಕಾಮಿಗೆ ಮಾತ್ರ ಕರ್ಮಬಂಧನ. ನಿಷ್ಕಾಮಿಗೆ ಆ ಬಂಧನವಿಲ್ಲ. ಹುರಿದು ಬಿತ್ತಿದ ಬೀಜ ಮೊಳೆಯುವುದೇ? ಅಂತೆ ರಾಗಾಂಕುರವ ಕೆಡಿಸಿದ ಆತ್ಮವೇದಿ. ಎಲ್ಲರನ್ನೂ ಕೆಡಿಸುವಂತಹ ಇಂದ್ರಿಯಸುಖ ತಸ್ಕರತನನ್ನು ಕೆಡಿಸಬಲ್ಲುದೆ? ಆತ್ಮವಿಜ್ಞಾನಿ ಸಚ್ಚಿದಾನಂದನಾಗಿರುವನು. ಅರಸನೇ, ನಿನ್ನ ವರ್ತನವು ಪರಮ ರಹಸ್ಯವಾದುದು. ಇನ್ನೊಬ್ಬರಲ್ಲಿ ಅದಿಂದು ಕಾಣುವುದಕ್ಕಿಲ್ಲ, ನಿನ್ನ ನಡೆಯನ್ನು ನಿನ್ನಲ್ಲೇ ಕಂಡು ನಿನ್ನ ಮುಂದಿಂತು ಓದಿದೆನು.

''ಅರಸನಿಗೆ ಮೆಚ್ಚಾದುದನ್ನೇ ಆಡಬೇಕೆಂದು ನಾನಿಂತು ನುಡಿದುದಲ್ಲ, ಭರತೇಶ, ನಿನ್ನ ವರ್ತನವೇ ತತ್ತ್ವದ ತಿರುಳಾಗಿದೆ. ಅದು ನಿಶ್ಚಯವಾಗಿಯೂ ಮೋಕ್ಷ ಮಾರ್ಗವು. ಹೊರಗೆ ಎಲ್ಲವನ್ನೂ ತೊರೆದು ಒಳಗೆ ನಿರ್ಮಲರಾಗಿ ಮೆರೆಯುವವರು ಈ ಲೋಕದಲ್ಲಿದ್ದಾರೆ ; ಆದರೆ ಹೊರಗೆಲ್ಲವೂ ಇದ್ದು ಒಳಗೇನೂ ಇಲ್ಲದಿರುವ ನಿನ್ನಂಥವರು ಯಾರಿದ್ದಾರೆ? ಈ ನಿನ್ನ ಸಿರಿಸೊಬಗು, ಪ್ರಾಯಗಳಲ್ಲಿ ಬುದ್ಧಿಬೇಸರವಾಗದೆ ಎಚ್ಚತ್ತು ಆ ಸಿದ್ಧಪದವಿಗೆ ನಿನ್ನಂತೆ

ಕಣ್ಣಿಟ್ಟ ತತ್ವವಿಲಾಸಿಯೂದ ಅರಸರು ಯಾರಿದ್ದಾರೆ? ಅವನನ್ನೆಂತು ಗೆಲ್ಲುವುದು? ಇವನನ್ನೆಂತು ಗೆಲ್ಲುವುದು? ಎಂದೆಣಿಸುವ ಅರಸರಿದ್ದಾರೆ. ಆದರೆ ನಿನ್ನಂತೆ ಜವನನ್ನು ''ಜಯಿಸುವ'' ಉಪಾಯವೇನೆಂದೆಣಿಸುವ ಅರಸರು ಯಾರೂ ಇಲ್ಲ. ನೀನು ರಾಜ್ಯದಲ್ಲಿದ್ದರೂ ನಿನ್ನ ನೆನಹು ಮುಕ್ತಿಸಂಧಾನದಲ್ಲಿದೆ. ನಲ್ಲಳ ಒಲುಮೆಗಾಗಿ ಸುಖಸಖಿದೂತಿಯರ ಮನ್ನಿಸುವಂತೆ ಸಲ್ಲಲಿತವಾದ ಆತ್ಮ ವಿಜ್ಞಾನಾರ್ಥಕ್ಕಾಗಿ ನಮ್ಮೆಲ್ಲರನ್ನೂ ಮನ್ನಿಸುವೆ. ಹೆಣ್ಣನ್ನು ಬಣ್ಣಿಸಿದರೆ ಎದೆ ಹಣ್ಣಾಗಿ ಕೇಳುವವರಿದ್ದಾರೆ. ಆತ್ಮ ತತ್ವವನ್ನು ಬಣ್ಣಿಸಿದಾಗ ನಿನ್ನಂತೆ ಕೇಳುವ ಅಣ್ಣಗಳೇ ಇಲ್ಲ. ಒಳಗಿರುವ ದೇವನನ್ನು ಕಾಣಲಾರದೆ ಹೊರಗೆ ದೇಗುಲವನ್ನೇ ಪೂಜಿಸುವ ಹೆಡ್ಡನಂತೆ ದೇಹದೊಳಗಿರುವ ಆತ್ಮನನ್ನು ಬಿಟ್ಟು ಮೈಯನ್ನೇ ತಾನೆಂದು ಚೆನ್ನಾಗಿ ಹೊಗಳಿಸಿಕೊಳ್ಳುತ್ತಿದ್ದಾರೆ. ಇಂದ್ರನಂತೆ, ಚಂದ್ರನಂತೆ, ಸೂರ್ಯನಂತೆ—ಎಂದು ರಾಜರನ್ನು ಹೊಗಳಿದರೆ ಅವರೆಲ್ಲ ಮೆಚ್ಚುವರು. ಉದ್ಧಾರಕೀರ್ತಿ, ಕೋಮಲಮೂರ್ತಿಯೆಂದು ವಂದಿಗಳು ಹೊಗಳಿದರೆ ಅವರನ್ನು ಉದ್ಧರಿಸುವರು. ಆದರೆ ನೀನು ಮಾತ್ರ ಹಾಗಲ್ಲ. ಆತ್ಮಗೆ ಮೂರ್ತಿಯಿಲ್ಲ ; ಆತ್ಮನು ಚಿತ್ಪುರುಷನೆಂದರೆ ಮೆಚ್ಚುವೆ. ಸಂಗೀತ ಸಾಹಿತ್ಯ ನೃತ್ಯಕೇಳಿಗಳಲ್ಲಿ ಆತ್ಮಕಲೆಯನ್ನೂ ಮಮತೆಯಿಂದ ಆದರಿಸುವ ದೊರೆಗಳು ನಿನ್ನಂತೆ ಬೇರೊಬ್ಬರಿಲ್ಲ. ನೀನಾದರೆ ಭೋಗದಲ್ಲಿದ್ದೇ ಯೋಗವನ್ನೂ ಮಾಡಿ ಭವಮುಕ್ತನಾಗುವೆ. ವಿಷಮಚಿತ್ತವನ್ನು ಆತ್ಮನಲ್ಲಿ ನೆಲೆಗೊಳಿಸಿ ನೀನು ರಾಜಋಷಿಯಾಗಿರುವೆ. ನಿನ್ನನ್ನು ನೋಡಿದವರಿಗೆ ಪುಣ್ಯ ಲಭಿಸುವುದು; ನಿನ್ನ ಹೆಸರು ಹೇಳಿದರೆ ಪಾಪವೂ ನಾಶವಾದೀತು. ಭರತೇಶಾ, ಕಂಡುದನ್ನೇ ನುಡಿದಿರುವೆನು. ಇದನ್ನು ಸ್ತುತಿಯೆನ್ನಬೇಡ. ನಿಜವನ್ನೇ ಕಾಣುತ್ತಿರುವಾಗ ಅತಿಶಯೋಕ್ತಿಗೆಳಸುವನೇ ಕವಿ?

''ತುಂಬಿಗಳು ಮಹೋತ್ಪಲ'' ರಸಕ್ಕೆ ಸೋಲುವಂತೆ ಸತ್ಪುರುಷರು, ಸತ್ಪಾತ್ರದಾನಿಗೆ, ತತ್ವವಿಜ್ಞಾನಿಗೆ ಚಿತ್ಪರಿಣಾಮಾನುಭವಿಗೆ ಸೋಲುವರು. ಜೀರ್ಣೋದ್ಧಾರ ಮಾಡುವವರನ್ನು, ಜಿನಯಜ್ಞ ಕಥೆಯನ್ನು ಕೇಳುವವರನ್ನು ವರ್ಣಿಸದವರಾರು? ತನುವು ಜಿನಗೃಹವೆಂದು, ಮನವು ಸಿಂಹಪೀಠವೆಂದು, ಅನುಪಮನಾದ ಆತ್ಮನೇ ಜಿನನೆಂದು, ಎಲ್ಲವನ್ನೂ ಮರೆತು ಕಣ್ಣುಮುಚ್ಚಿ ನೋಡಿದಾಗ, ತನ್ನಲ್ಲಿಯೇ ಜಿನನಾಥನು ತೋರುವನು. ರವಿಶಶಿಗಳನ್ನು ಕಟ್ಟಿ ಪ್ರಾಣಾಪಾನವಾಯುಗಳನ್ನು ಬ್ರಹ್ಮರಂಧ್ರಕ್ಕೇರಿಸಿದರೆ ಕವಿದ ಕತ್ತಲೆಯು ಸರಿದುಹೋಗಿ, ಪ್ರಕಾಶರೂಪನಾದ ಆತ್ಮನು ಮೈಯಲ್ಲೇ ಕಾಣುವನು. ಕೆಲವರು, ವಾಯುವನ್ನು ಜಯಿಸಿ ಆತ್ಮನನ್ನು ಕಾಣುವರು. ಕೆಲವರು ವಾಯುವನ್ನು ಜಯಿಸದೆ ಕಾಂತಿಯೇ ಕಾಯಸುಖವೇ ಸುಳುಹಾಗಿ ಆತ್ಮನನ್ನು ಕಾಣುವರು.

''ಒಂದು ದಿನದಲ್ಲಿ ಆತ್ಮನನ್ನು ಕಾಣುವಂತಿಲ್ಲ.ಕರ್ಮವೆಂಬುದು ನುಗ್ಗೆಯ ಮರದಂತಲ್ಲ, ಕರ್ಮವು ಜಗ್ಗಿದಾಗ ಥಕ್ಕನೆ ಆತ್ಮನು ತೋರುತ್ತಾನೆ. ಎಳೆಮಿಂಚಿನಂತಿರುವ ಬೊಂಬೆಯೋ, ತಿಳಿಬೆಳಕಿನಿಂದಾದ ರೂಪವೋ, ಪಳಕಿನ ಪುತ್ಥಳಿಯೋ ಎನ್ನುವಂತೆ ಆತ್ಮನ ರೂಪವು ಒಳಗೊಳಗೇ ಹೊಳೆಯುವುದು. ತನ್ನಲ್ಲಿರುವ ನಿಜವನ್ನು ತಿಳಿಯುವಾಗ—

ಜ್ಯೋತಿರ್ಲೋಕವನ್ನು ಹೊಕ್ಕಂತೆ, ತಂಪಿನ ಜ್ಯೋತಿಯ ನಡುವೆ ನಿಂತಂತೆ, ಗಾಳಿಯಲ್ಲಿರುವ ಸಿದ್ಧರಂತೆ ಆಗುವುದು. ಆ ಸ್ಥಿತಿಯಲ್ಲಿ ನುಡಿನಡೆ ತನುಮನಗಳೊಂದು ಇಲ್ಲದಂತಾಗಿ, ಪಂಚೇಂದ್ರಿಯಗಳೂ ಇಲ್ಲದಂತಾಗಿ ದೇಹವನ್ನೆಲ್ಲ ಆತ್ಮ ಕಾಂತಿಯು ಆವರಿಸುವುದು. ಆಗ ಉನ್ನತವಾದೊಂದು ಸುಖ ಹುಟ್ಟುವುದು. ಮುಕ್ತಿ ಸುಖಕ್ಕೆ ಬೀಜವಾವುದೆಂದು ಮುಕ್ತಿಗಾಮಿಗಳೇ ಬಲ್ಲರು, ಅದನ್ನು ರಾಜಯೋಗಿಯಾದ ನೀನೂ ಬಲ್ಲೆ. ಹಂಸಭಾವನೆಯಿಂದಾದ ಸುಖವನ್ನು ನುಡಿಯೋಣವೆಂದರೆ ನಾವೇನು ಬಲ್ಲೆವು? ಭಾವಿತಾತ್ಮರ ಶಿರೋಮಣಿಯಾದ ನೀನು ಮಾತ್ರ ಇದನ್ನೆಲ್ಲ ತಿಳಿದಿರುವೆ. ನಾವು ಮಾತ್ರ ಅದನ್ನಷ್ಟು ಒಡಂಬಡುವೆವು. ನಮಗಷ್ಟೆ ಗೊತ್ತು ಭರತೇಶಾ, ನೀನು ಆಧ್ಯಾತ್ಮ ರವಿಯು. ನಿನ್ನಿದಿರಲ್ಲಿ ನಾವಿದನ್ನು ತಿಳಿಸುವುದೆ? ಇದು ಸೂರ್ಯನಿಗೆ ಹಣತೆ ಹಿಡಿದಂತಾಯಿತು. ಗಂಧದ ಮರದ ಬಳಿಯಿರುವ ಮರಗಳೂ ಪರಿಮಳವಾಗುವಂತೆ, ನಿನ್ನೊಡನಾಡಿಗಳಾಗಿರುವ ನಾವೆಲ್ಲ ಜೀವಶುದ್ಧಿಯ ತುದಿಮೊದಲನ್ನು ತಿಳಿದುಕೊಂಡೆವು. ಇಂದೂ ಮುಂದೂ ನೀನೇ ಸುಖಿಯು ! ನಿನ್ನನ್ನು ಓಲೈಸಿದವರೆಲ್ಲರೂ ಸುಖಿಗಳೇ ! ಸ್ವಾಮಿ ಹೇಗೋ, ಹಾಗೆ ಪರಿವಾರದವರೆಂಬ ಮಾತಿನ ಅರ್ಥವನ್ನು, ನಾವಿಂದು ಕಂಡೆವು.''

ದಿವಿಜಕಲಾಧರ ಕವಿಯಾಡಿದ ಮಾತು ರಾಯನ ಕಿವಿ ಹೊಕ್ಕು ಎದೆಮುಟ್ಟಿತು. ಆಧ್ಯಾತ್ಮವೆಂದರೆ ಅವನಿಗಷ್ಟು ಲವಲವಿಕೆ. ''ತನ್ನ ಅಂತರಂಗ ಅನುಭವವನ್ನೆಲ್ಲ ಇವನು ಕಣ್ಣಾರೆ ಕಂಡವನಂತೆ ಹೇಳುವನು. ಇವನು ವಿಜ್ಞಾನಿಯು.'' ಎಂದು ಅರಸನು ಬಾಯಿ ತೆರೆದು ನುಡಿಯದೆ, ತನ್ನೆದೆಯಲ್ಲೇ ಮೆಚ್ಚಿ ನೆನೆದುಕೊಂಡನು. ಆ ನೆನಹಿನ ಮಾಲೆ ಮತ್ತೂ ಮುಂದುವರಿಯಿತು.

''ಇವನಿಗೆ ಆತ್ಮಧ್ಯಾನವುಂಟು; ಅಲ್ಲದಿದ್ದರೆ ಈ ಚಾತುರ್ಯದ ವಚನವೆಂತು ಬಂದೀತು? ಮಾತು ತಾನೇ ಮನಸ್ಸಿನಲ್ಲಿ ಸೂಚಿಸುವುದು? ಆ ಕಡೆಗೆ ಈ ಕಡೆಗೆ ಆಡಬಹುದು. ಎಲ್ಲರೂ ಆಕಾಶದೊಳಗಾಡಬಹುದೆ? ಲೋಕದ ಸಂಗತಿಯನ್ನೆಲ್ಲ ಹೇಳಬಹುದಾದರೂ ಬಾಹ್ಯಜನಕ್ಕೆ ಆಧ್ಯಾತ್ಮವು ಹೇಗೆ ಬಂದೀತು? ಶಬ್ದ ಸಮುದ್ರವನ್ನು ಹೊಕ್ಕು ಒಂದು ಪದಕ್ಕೆ ನೂರಬ್ಬಿ ಪ್ರಸಂಗಿಸಬಹುದು; ಆದರೆ ಶಬ್ದವರ್ಜಿತ ಹಂಸಯೋಗವನ್ನು ಹೀಗೆಂದು ಒಂದು ಶಬ್ದದಿಂದ ಹೇಳಬಹುದೆ? ತರ್ಕಶಾಸ್ತ್ರವನ್ನೋದಿ ತಗರು ತಗರಿನಂತೆ ಹೊಡೆದಾಡಬಹುದು; ಸೂರ್ಯನಂತೆ ಶೋಭಿಸುವ ಆತ್ಮಯೋಗವು ಹೀಗೆಯೇ ಎಂದು ಬಿಡಿಬಿಡಿಸಿ ಹೇಳಲಸಾಧ್ಯ. ಅಗಮ್ಯ ಕಾವ್ಯ ನಾಟಕಗಳಲ್ಲಿ ಎಲ್ಲರ ತಲೆದೂಗಿಸಿ ಮಲಗಿಸಬಹುದು. ಮೂಗರು ಕಂಡ ಕನಸಿನಂತೆ ಮೆರೆಯುತ್ತಿರುವ ಆತ್ಮಯೋಗದ ವಿಚಾರವಾಗಿ ಯಾರು ತಾನೆ ಮಾತಾಡಬಲ್ಲರು? ಪರಂಜ್ಯೋತಿಯನ್ನು ಹೀಗೆಂದು ನುಡಿದು ಮೆಚ್ಚಿಸಲು ಒಬ್ಬನಿಂದಾದೀತೆ? ಕದನದಲ್ಲಿ ಹಾಗೆ ಕಡಿದರು, ಹೀಗೆ ಇರಿದರು, ಎಂದು ಎದೆಕೊಳವೆಬ್ಬಿಸಬಹುದು. ಆದರೆ ಇದನ್ನಾರು ಹೇಳಬಲ್ಲರು? ಪರಬ್ರಹ್ಮನಿಗೂ ಇದು ಸಾಧ್ಯವೇ? ಆತ್ಯಾಸನ್ನ ಭವ್ಯರಿಗಲ್ಲದೆ ಆತ್ಮ ಸಂಗತ್ಯವು ಎಲ್ಲರಿಗೇಕೆ ಬಂದೀತು? ಸ್ತುತ್ಯರಾದ ಸುಜ್ಞಾನಿಗಳೇ ಆತ್ಮ ಸಾಹಿತ್ಯವು ಸದರವೆಂದು ಹೇಳುವರು.

ಉಂಡವನು ತೇಗುವಂತೆ, ಆತ್ಮನನ್ನು ಭಾವಿಸಿಕೊಂಡವನೇ ಅದನ್ನು ಹೇಳಬೇಕು. ಹಾಗೆ ಕಂಡು ನುಡಿದರೂ ನಿರ್ಭವ್ಯರು ಒಪ್ಪಲಾರರು; ಭವ್ಯರಾದ ಪುಂಡರೀಕರು ಅದನ್ನು ಮೆಚ್ಚಬೇಕು. ಈ ಕವಿಯು ಅಸನ್ನಭವ್ಯನೂ ಅಹುದು; ಸಿದ್ಧ ಲೋಕಪಥಿಕನೂ ಅಹುದು.''—ಎಂದು ಮನಸ್ಸಿನಲ್ಲೇ ನೆನೆದ ರಾಯನು ಮತ್ತೆ ಒಮ್ಮೆಗೆ ಮಾತನಾಡಿದನು.

''ಸುಕವಿ ದಿವಿಜಕಲಾಧರ ನೀನಿತ್ತ ಬಾ'' ಎಂದು ರಾಯನು ಬಳಿಗೊತ್ತಿಕೊಂಡು ತನ್ನ ತೋರಹಸ್ತಗಳಿಂದಲೇ ಉಡುಗೊರೆಗಳನ್ನಿತ್ತನು. ಅದು ಕಲ್ಪವೃಕ್ಷವೇ ಕೈನೀಡಿದಂತಿತ್ತು ಕಡಗ ಕಂಠಮಾಲೆ ಪದಕ ಕುಂಡಲ ಕುಲ್ಲಾಯಿ ಕಬಾಯಿ ನಿಡುಬೊಂಬೆ ಪಟ್ಟೆ ಪಚ್ಚಡ ಜಾಳಿಗೆಗಳನ್ನು ವೀಳ್ಯದೊಂದಿಗೆ ಕೊಟ್ಟನು. ಹತ್ತೆಂಟು ಭದ್ರಹಸ್ತಿಗಳನ್ನೂ ನೂರಾರು ದನಗಳನ್ನೂ ನೂರೊಂದು ಗ್ರಾಮಗಳನ್ನೂ ಮುದ್ರೆಯೊತ್ತಿ ಧಾರೆಯೆರೆದುಕೊಟ್ಟನು.

ಆ ಮೇಲೆ, ''ಚೆನ್ನಾಯ್ತು, ನಿನ್ನಾತ್ಮನೊಳಗನನ್ನು ನೀನೇ ಕಂಡೆ. ಲೇಸನ್ನೇ ನುಡಿದೆ. ಬಳಲಿದೆ; ಕುಳಿತುಕೋ'' ಎಂಬ ಐದು ನುಡಿಯೆಸಳು ರಾಜನ ನಗೆಮೊಗದಲ್ಲಿ ಅರಳಿತು.

''ಜೈನಾಗಮವನ್ನು ನುಡಿಯಲು ನಾನೆಷ್ಟರವನು ದೊರೆಯೆ? ಈ ನಿನ್ನ ಸಭೆಯ ವಿದ್ವಾಂಸರೆ ಅದನ್ನೆಲ್ಲ ಬಲ್ಲರು.'' ಎಂದ ದಿವಿಜಕಲಾಧರನು ಸಂತೋಷದಿಂದ ತೆರಳಲನುವಾದನು. ಅದನ್ನು ಕಂಡ ಸಭೆಯಿಂತು ಕೀರ್ತಿಸಿತು :—''ಈ ದೊರೆಯ ಅಂತರಂಗವನ್ನು ಕಂಡವರೇ ಇಲ್ಲ, ಈ ಧೀರನಿಂದು ಕಂಡು, ಸುಖವುಂಡು, ನಡೆದನು. ದಿವಿಜಕಲಾಧರ ಕವಿಯೆಂದರೆ ಬೋಧಾಗ್ರಣಿಯೇ.''

ಕವಿಯ ಜ್ಞಾನಕ್ಕೆ ರಾಜನೂ, ರಾಜನ ಉದಾರ ಗೌರವಕ್ಕೆ ಎಲ್ಲರೂ ಅರ್ತಿಸುತ್ತಿರುವಾಗ ಘಳಿಯಾರದಲ್ಲಿ ಮೊಳಗಿದ ಧವಲ ಶಂಖಧ್ವನಿಯು ಕೇಳಿಸಿತು. ಆರೋಗಣೆ ವೇಳೆಗೆ ಸನ್ನೆಯಾಯಿತೆಂದು ಆ ರಾಜಸಭೆಯೆದ್ದು ಭರತೇಶನಿಗೆರಗಿ ಬೀಳ್ಕೊಂಡಿತು. ಓಲಗದವರೆಲ್ಲ ಚದರಿದಾಗ ಜಿನಶರಣೆಂದು, ಭರತೇಶನು ಓಲಗದಿಂದೆದ್ದು, ನಿತ್ಯದಾನಕ್ಕೆ ಮುನಿಗಳನ್ನು ತರಬೇಕೆಂಬ ಕೆಲಸಕ್ಕನುವಾದನು. ಆ ದೊರೆಗೆ ನಿತ್ಯದಾನವನ್ನೀಯದೆ ಆರೋಗಿಸ ಬಾರದೆಂಬ ಸತ್ಯಾಂಗವುಂಟು.

## ೩

# ಮುನಿಭುಕ್ತಿ

ಭರತ ಚಕ್ರೇಶ್ವರನ ಮನದ ಅನುಭವವನ್ನು ಜಿನನೊಬ್ಬನೇ ಬಲ್ಲನು. ಅವನು ಮುನಿಗಳ ಚರಿಗೆಯ ಕಾಲವನ್ನರಿತು ಅರಮನೆಯ ಬಾಗಿಲಿಗೆ ನಡೆದನು. ಸಾರಿದ ಒಡ್ಡೋಲಗ ಹರಿದಾಗ ಭೂರಿ ವಿಡಾಯವನ್ನು ಬಿಟ್ಟು ಭಕ್ತಿಯಿಂದ ದ್ವಾರಾವಲೋಕನಕ್ಕೆ ಅಡಿಯಿಟ್ಟನು. ಛತ್ರ, ಚಾಮರ, ಖಡ್ಗ, ಹಾವುಗೆ—ಮುಂತಾದ ಧಾತ್ರೀಶ ಚಿಹ್ನೆಗಳನ್ನೆಲ್ಲ ಬಿಟ್ಟು, ಶ್ರಾವಕನಂತೆ ಪಾತ್ರದಾನದ ಅಪೇಕ್ಷೆಯಿಂದ ನಡೆದು ಬಂದನು. ಒಡನಿದ್ದ ಸೇವಕರನ್ನೆಲ್ಲ ತೊಲಗಿಸಿ ತಾನೊಬ್ಬನೇ ಮುನ್ನಡೆದನು.

ಧೋತ್ರವುಟ್ಟು ಹೊದೆದ ದುಕೂಲವನ್ನು ಸರಿಪಡಿಸುತ್ತ, ಪುಷ್ಪಾಕ್ಷತೆಗಳಿರುವ ಹೊಂಬಟ್ಟಲನ್ನು ಎಡಗೈಯಲ್ಲೂ ನಿಡುಗಿಂಡಿಯನ್ನು ಬಲಗೈಯಲ್ಲೂ ಹಿಡಿದುಕೊಂಡು, ತನ್ನ ತೊಡಿಗೆಯ ಪ್ರಭೆಯು ದಿಕ್ಕುದಿಕ್ಕಿಗೆ ಪಸರುವಂತೆ ಆ ರಾಜನು ಮುನ್ನಡೆದನು. ದ್ರವ್ಯಾರ್ಥಿಯು ಬಲಿಪುಷ್ಪಗಳಿಂದ ಪೂಜಿಸಿ ನಿಧಿಯನ್ನು ತರಲು ಹೋಗುವಂತೆ ಚೆಲುವರ ಅರಸನು ಅರ್ಚನಾದ್ರವ್ಯಗಳನ್ನೆಲ್ಲ ಹಿಡಿದುಕೊಂಡು ಹೋದನು. ಮಾಂಡಲಿಕರಿಂದ ಹಡಪ ಹಾವುಗೆ ಕುಂಚ ಗಿಂಡಿಗಳನ್ನು ಹಿಡಿಸಿಕೊಳ್ಳುವವನು ಗಂಡಗರ್ವವ ಬಿಟ್ಟು, ಗುರುವಿಗೆ ಗಿಂಡಿಯೊಳಿಗದವನಾಗಿ ತಾನೇ ನಡೆದನು. ಆ ಕಾಲದಲ್ಲಿ ಕಂಡವರು ಕೈಮುಗಿಯ ಬಾರದು. 'ಅಯ್ಯ', 'ಜೀಯ' ಎನ್ನಬಾರದು. ರಾಜನೆದುರಿನಲ್ಲಿ ಭೃತ್ಯನಿಗೂ, ಗುರುವಿನೆದುರಲ್ಲಿ ರಾಜನಿಗೂ ಹಮ್ಮು ಸಲ್ಲದೆಂಬ ರಾಜನೀತಿಯನ್ನರಿತ ರಾಜೇಂದ್ರನು ರಾಜ ವಿಡಾಯವನ್ನೆಲ್ಲ ಬಿಟ್ಟಿದ್ದನು.

ದಾನಪೂಜೆಯನ್ನು ತನುಮನ ಮುಟ್ಟಿ ಮಾಡಬೇಕು. ಅದನ್ನು ಲೋಗರಿಗೆ ತೋರಿಸಬಾರದು. ಈ ನಿಯಮದಂತೆ ಅರಸನು ಆನಂದದಿಂದಲೇ ನಡೆದನು. ಆದರೂ ಭರತೇಶನ ಮೈಗಂಪಿಗಾಗಿ ತುಂಬಿವಿಂಡು ಹಾಡುತ್ತಾ ಅವನನ್ನೇ ಹಿಂಬಾಲಿಸಿತು. ಬೇಡವೆಂದರೂ ಬೇಡನು ಕಳುವುದ ಬಿಡನು. ಅದರಂತೆ ಬೇಡರ ಬಣ್ಣದ ತುಂಬಿವಿಂಡು ತ್ಯಾಗಿಯನ್ನು ಬೇಡುವ ಯಾಚಕರಂತೆ—ಬೆನ್ನಬಿಡದೆ ನಡೆದುದು. ಭೂವರನು ಹಾವುಗೆ ಮೆಟ್ಟದೆ, ಕನ್ನಡಿ ನೆಲದಲ್ಲಿ ಅಡಿಯಿಡುವಾಗ ಮಾವಿನ ಕೆಂದಳಿರು ಕೆದರಿದಂತೆ ಹೆಜ್ಜೆಯ ಕೆಂಪು ಕಂಗೊಳಿಸಿತು. ಕೆಂಪು ಹೆಜ್ಜೆಗಳ ಸೋಂಕಿನಿಂದ ಭೂಮಿಯಲ್ಲಿ ಅರುಣಾಂಬುಜ ಗಳನ್ನು ಹಬ್ಬಿಸುತ್ತ, ತುಂಬಿವಿಂಡಿನ ಗಾನವನ್ನು ಕೇಳುತ್ತ ಭರತೇಶನು ಮುನ್ನಡೆದನು. ಇಂತು ಅತ್ತಿತ್ತ ನೋಡದೆ ರಾಜನು ಚಾವಡಿಯ ಮುಂಗಡೆಯ ಬಾಗಿಲು ಮಾಡದ ಕುಸುಕದಲ್ಲಿ ಬಂದು ನಿಂತನು.

ಆ ಮೇಲೆ ಭರತೇಶನು ಕೈಯ ಗಿಂಡಿಯನ್ನೂ ಹೊಂಬಟ್ಟಲನ್ನೂ ಹೊಂಬಲಿಗೆಯ ಮೇಲಿರಿಸಿ, ಹೊಳೆವ ಬಂಗಾರ ಕಂಬವನ್ನು ನೆಮ್ಮಿ ನಿಂತು ದಿಗ್ವಲಯವನ್ನು ನೋಡ ತೊಡಗಿದನು. ಹಾಗೆ ನಿಂತ ನಿಲುವಿನ ಚೆಲುವೇ ಚೆಲುವು ! ಎಡಗೈಯ ಬೆರಳೊಂದು ಮೂಗಿನ ತುದಿಯಲ್ಲಾದರೆ ಬಲಗೈ ಜಾನುವಿನ ಮೇಲೆ. ಈ ಸಂಸಾರ ಸಮುದ್ರವನ್ನು ಎಂದಿಗೆ ಈಸಿ ಮುಕ್ತಿಗೆ ಹೋಗುವೆನೆಂಬ ಯೋಚನೆಯೋ ಎಂಬಂತಿದ್ದನು ರಾಜೇಂದ್ರ. ಸಾಸಿವೆಯಲ್ಲಿ ಸಾಗರವೇ ಅಡಗಿದಂತೆ ಈ ಮೂರು ಲೋಕಗಳಷ್ಟು ವಿಸ್ತಾರದ ಹಂಸನು ಬಂಡ ಮೈಯಲ್ಲಿರುವುದನ್ನು ಅವನು ನೆನೆದು ಬೆಕ್ಕಸಪಟ್ಟು ನಿಂದ ಬೆಡಗೋ ಎಂಬಂತೆ ಇದ್ದನು. ದೇವೇಂದ್ರನೇ ದೇವಲೋಕದಿಂದ ಇಳಿದು ಬಂದು, ಆ ಪುರವನ್ನು ನೋಡಿ, ಆಶ್ಚರ್ಯದಿಂದ ಮೂಗಿನ ತುದಿಯಲ್ಲಿ ಬೆರಳಿಟ್ಟು ನಿಂತಿರುವನೋ ಎಂಬಂತೆ ಭರತ ರಾಜೇಂದ್ರನು ಕಂಗೊಳಿಸಿದನು. ನಡುಹಗಲಿನಲ್ಲಿ ತಣ್ಪಿಸಿಲನ್ನೀಯುವ ಭಾಸ್ಕರನಂತೆ ಅವನು ತೋರುತ್ತಿದ್ದನು. ಸೂರ್ಯನ ಬರವನ್ನೇ ಆಶಿಸುವ ಕಮಲದಂತೆ, ಮುನಿಗಳ ಬರವನ್ನೇ ಆಶಿಸುವ ಮುನಿಯಂತೆ, ಭರತೇಶನು ಧ್ಯಾನಿಸುತ್ತ ನಿಂತಿದ್ದನು.

ಮುನಿಗಳು ಬರುವ ದಾರಿಯನ್ನೊಮ್ಮೆ ಚರ್ಮ ದೃಷ್ಟಿಯಿಂದ ನೋಡಿದರೆ, ದೇಹದೊಳಗಿನ ಆತ್ಮಲೋಚನಗಳಿಂದ ಇನ್ನೊಮ್ಮೆ ನೋಡುತ್ತಿದ್ದನು. ಹೀಗೆ ಒಳ ಹೊರಗೆಲ್ಲ ಒಂದಾಗಿದ್ದನು ರಾಜೇಂದ್ರ. ಆ ಮಂಗಲದಾನ ಸಮಯವರಿತು ಜನರೆಲ್ಲ ಸಾವಿರ ಮಾರಳತೆಯ ದೂರದಲ್ಲೇ ಸರಿದಾಡುತ್ತಿದ್ದರು. ಕೆಲವರು ಊಳಿಗದವರು ಅರಸಗರಿಯದಂತೆ ದೂರದಲ್ಲೇ ನಿಂತು ಅರಸನನ್ನೇ ನೋಡುತ್ತಿದ್ದರು. ಲೋಕವೆಲ್ಲ ತನ್ನನ್ನು ಓಲೈಸುತ್ತಿದ್ದರೂ ತಾನು ಮಾತ್ರ ಲೋಕದೊಂದಿಗೆ ಬೆರತಿರಬಾರದೆಂಬುದನ್ನು ಲೋಕಕ್ಕೆ ತಿಳಿಸುವಂತೆ ರಾಜೇಂದ್ರನು ಏಕಾಕಿಯಾಗಿಯೇ ನಿಂತಿದ್ದನು. ಅಗ ಅವನ ಮನಸ್ಸು ಯೋಗೀಂದ್ರರಿಗೆ ಕೊಡುವ ಸಾರದಾನವನ್ನೇ ಹಾರೈಸುತ್ತಿತ್ತು, ಆರೋಗಿಪೆನೆಂಬ ನೆನಪು ಒಂದು ಇಷ್ಟಾದರೂ ಇರಲಿಲ್ಲ.

ಯೋಗೀಂದ್ರರನ್ನು ಶ್ರಾವಕರೆಲ್ಲ ಅಲ್ಲಲ್ಲಿ ನಿಲ್ಲಿಸಿದ್ದರಿಂದ ಅವರು ವೇಳೆಗೆ ಸರಿಯಾಗಿ ಭರತೇಶನ ಅರಮನೆಯತ್ತ ಬರಲಿಲ್ಲ. ಆದ್ದರಿಂದ ಅರಸನು ಅವರನ್ನೇ ಇದಿರು ನೋಡುತ್ತಿದ್ದನು. ಎಡಬಲದ ಬೀದಿಗಳನ್ನೂ ಇದಿರಿರುವ ಬೀದಿಯನ್ನೂ ನೋಡುವನು. ಯೋಗೀಂದ್ರನ ಸುಳಿವು ಕಾಣದೆ ಚಿಂತಿಸುವನು. ದೂರಕ್ಕೆ ದಿಟ್ಟಿಸಿ ಬೀದಿ ಬೀದಿಗಳನ್ನೂ ತೂಗಿ ನೋಡುವನು. ಒಬ್ಬರಾದರೂ ಮುನಿಗಳು ಬಾರದಿರುವುದನ್ನು ಕಂಡು ನೊಂದುಕೊಳ್ಳುವನು. 'ಇಂದೇನು ಪರ್ವೋಪವಾಸವೋ' ಎಂದು ತಿಥಿಯನ್ನು ಎಣಿಸುವನು. 'ಇಂದು ಪರ್ವವಲ್ಲ; ಮುನಿಗಳೇಕೆ ಚಿತ್ತೈಸಿಲ್ಲ?'—ಎಂದು ಮರುಗುವನು.

''ಬೀದಿಯಲ್ಲಿ ಆನೆ ಕುದುರೆಗಳು ಅಡ್ಡ ಕವಿದುವೊ? ಅವಿವೇಕಿಗಳು ಅವಮಾನಿಸಿದರೋ? ಯೋಗಿ ಸಂತಾನವು ನನ್ನರಮನೆಗೆ ಬಾರದಿರಲು ಕಾರಣವೇನಪ್ಪ? ಮುನಿಗಳಿಗೊಬ್ಬ ಜರೆದನಾದರೆ ಜಗದೊಡೆತನ ನನಗುಳಿದೀತೆ? ಯೋಚಿಸಿದರೆ ಅಂತಹ ಜನರೇ ಇಲ್ಲ, ಆದರೂ ಯೋಗಿಗಳೇಕೆ ಇತ್ತ ಬಂದಿಲ್ಲ, ಪರಮಾತ್ಮರತರಾದ ಮುನಿಗಳಿಗೆ ಅನ್ನದಾನವನ್ನು ಮುನಮುಟ್ಟಿ ಮಾಡುವ ಭಾಗ್ಯವನ್ನು ಪಡೆಯುವುದೇನು ಸಾಮಾನ್ಯವೇ?

ದೇಹ ಬೇರೆ, ಆತ್ಮ ಬೇರೆ ಎಂದು ಎಡೆಬಿಡದೆ ಧ್ಯಾನಿಸುವ ತಾಪಸರಿಗೆ ಪ್ರಿಯರಾದವರು ಕೈ ಮುಟ್ಟಿ ಭಕ್ತಿಯನ್ನಿಕ್ಕ ಬೇಡವೇ? ಆತ್ಮಸುಧೆಯನ್ನು ಆತ್ಮನಿಗರ್ಪಿಸುತ್ತ, ಅಖಿಲ ಭವ್ಯಾತ್ಮರಿತ್ತ ಅನ್ನವನ್ನು ಆತ್ಮಸಾಕ್ಷಿಯಿಂದ ದೇಹಕ್ಕರ್ಪಿಸುವ ಯೋಗಿಗಳಿಗೆ ಅನ್ನವಿತ್ತಾತ್ಮನು ಧನ್ಯಾತ್ಮನು! ಚಿದ್ಗುಣದ ಅನ್ನವನ್ನು ತಾನುಂಡು ಪುದ್ಗಲದ ಅನ್ನವನ್ನು ಕೊಡುತ್ತಿರುವ ಸದ್ಗುರುವಿಗೆ ಭಕ್ತಿಯಿಂದ ಭುಕ್ತಿಯನ್ನಿತ್ತರೆ ಸದ್ಗತಿ ದೊರೆಯುವುದು ಅಚ್ಚರಿಯೇ? ಸುಕ್ಷೇತ್ರದಲ್ಲಿ ಬಿತ್ತಿದ ಬೀಜವು ಹುಸಿಯಾಗದು. ಮೋಕ್ಷಗಾಮಿಯ ಹಸ್ತದಲ್ಲಿಟ್ಟ ಭಿಕ್ಷವು ಹುಸಿಯಾಗದೆ ಪ್ರತ್ಯಕ್ಷವಾದ ಫಲವನ್ನು ಈಯುವುದು, ಆತ್ಮಾರಾಮಗೆ ಉಣ್ಣಲಿತ್ತರೆ, ಸ್ವಾತಿಯ ಸೀರ್ಪನಿ ಮುತ್ತಾಗುವಂತೆ, ಕೈವಲ್ಯವೇ ಕೈಗೆ ಬರುವುದು ಆಶ್ಚರ್ಯವಲ್ಲ. ಉಣಲರಿಯದ ಜಿನ ಪ್ರತಿಮೆಯನ್ನು ಉಣಿಸುವುದು ಉಪಚಾರ ಭಕ್ತಿ. ಉಣಬಲ್ಲ ಮುನಿಯೆಂಬ ಜಿನಗನ್ನವೀಯುವುದು ಉಜ್ವಲ ಭಕ್ತಿ'' ಎಂಬ ಭರತ ಚಕ್ರಿಯ ಮನದ ಬಾವ ಬೆಳೆಯುತ್ತಿತ್ತು.

ಆಗ ಆಕಾಶದಲ್ಲಿ ವಿಸ್ಮಯವಾದೊಂದು ಕಾಂತಿಯೊಡ್ಡು ಕಾಣಿಸಿತು. ಭರತೇಶನು ಒಡನೆ ಆ ಕಡೆಗೆ ನೋಡಿದನು. ಅದನ್ನು ಕಂಡು ಅರಸನಿಗೂ ಅಚ್ಚರಿಯಾಯಿತು. 'ಈ ಪ್ರಭೆಯನ್ನು ನೋಡುವಾಗ, ಬೇರೊಂದು ಸೂರ್ಯನಂತೆ ತೋರುತ್ತಿದೆ' ಎಂದು ನೃಪನು ನೋಡುತ್ತಿರುವಾಗಲೇ ಆ ಪ್ರಭೆಗಳು ಅರಸನ ಮುಟ್ಟ ಮುಟ್ಟನೆ ಬರುತ್ತಿದ್ದವು. ಆಹಾ ! ಪ್ರಭೆಯದು ಚಾರಣ ಮುನಿಗಳ ರೂಪವೆಂದು ತಿಳಿದೊಡನೆ ಭರತೇಶನಿಗೆ ಚಿಂತೆ ಹರಿದು ಸಂತೋಷವಾಯಿತು. ದೇಹ ತುಂಬಿ ಪುಳುಕಿತನಾದನು. 'ಭರತನ ಪುಣ್ಯವೇ. ಭಾಪು !' ಎಂದು ಕೆಲದಲ್ಲಿರಿಸಿದ ಅರ್ಚನಾದ್ರವ್ಯಗಳನ್ನು ಕೈಗೆತ್ತಿಕೊಂಡನು.

ಗಿಂಡಿ ಬಟ್ಟಲುಗಳನ್ನು ಎತ್ತಿಕೊಳ್ಳುವಷ್ಟರಲ್ಲಿ ಸೂರ್ಯಮಂಡಲ ಚಂದ್ರ ಮಂಡಲಗಳು ಮುನಿಗಳಾದಂತೆ ಆ ಇಬ್ಬರೂ ಮುನಿಗಳು ಭೂಮಂಡಲಕ್ಕಿಳಿದು ಬಂದರು. ಬಡವ ನಿಧಿಯನ್ನು ಕಂಡಂತೆ, ರಾಜೇಂದ್ರನು ನಲಿಯುತ್ತ ಇದಿರಾದನು. ಕೂಡಲೇ ಗಂಧಾಕ್ಷತೆ ಪುಷ್ಪಗಳಿಂದ ದರ್ಶನಾಂಜಲಿಯನ್ನು ಮಾಡಿ, ಹಿರಿಯ ಗಿಂಡಿಯನ್ನೆತ್ತಿ ಭಾವ ಶುದ್ಧಿಯಲ್ಲಿ ಆದರದಿಂದ ಜಲಶುದ್ಧಿಯನ್ನಿತ್ತನು. ಆ ಮೇಲೆ ಮೂರು ಬಾರಿ ಬಲಗೊಂಡು ತನ್ನಲ್ಲಿ ತಾನೇ ಸಂತುಷ್ಟನಾಗಿ ಮುನಿಗಳಿಬ್ಬರಿಗೂ ನಮಸ್ಕರಿಸಿದನು. ಕೆಲಬಲದಲ್ಲಿದ್ದ ಊಳಿಗದವರೆಲ್ಲ ಆಗ ಜಯ ಜಯವೆಂದು ಮುಂದೆ ಬಂದರು. ಅವರು ಬಿಳುಪಟ್ಟೆಯ ಸುರುಳಿಯನ್ನು ತಂದು ಅರಸನ ಕೈಗಿತ್ತರು. ರಾಜೇಂದ್ರನು ಮುನಿಗಳಿಗೆ ಪ್ರೀತಿಯಿಂದ ನಿವಾಳಿಯನ್ನಿಟ್ಟು ತನ್ನ ಮನೆಗೆ ಚಿತ್ತೈಸಬೇಕೆಂದು ಅಡ್ಡಬಿದ್ದು ಮುನ್ನಡೆದನು. ಯೋಗಿಗಳು ಅವನನ್ನು ಹಿಂಬಾಲಿಸಿದರು.

'ನಮ್ಮರಸು ನಡುಹಗಲಲ್ಲಿ ಒಂದೆರಡು ಗಳಿಗೆ ಯೋಗವೆಸಗಿದ್ದರಿಂದ ಮುನಿಗಳು ಬಂದರು' ಎಂದು ಸೇವಕರು ಉಬ್ಬಿ ಮಾತನಾಡತೊಡಗಿದರು. ನಿಧಿಯನ್ನು ಹುಡುಕುತ್ತಿದ್ದು, ಅದು ದೊರೆತಾಗ ಮನೆಗೊಯ್ಯುವಂತೆ ರಾಜನು ಗುಣ ನಿಧಿಗಳಾದ ಮುನಿಗಳನ್ನು ತನ್ನರಮನೆಗೆ ಕೊಂಡೊಯ್ದನು. ಸೋತು, ಎರಗಿ ಪ್ರಾರ್ಥಿಸಿಕೊಂಡ ಕಾಮನ ಮನೆಗೆ ಹೋಗುವ ಯೋಗಿಗಳಂತೆ ಆ ಮುನಿಗಳು ನರಲೋಕ ಕಾಮದೇವನ

ಅರಮನೆಗೆ ನಡೆದರು. ಆ ಅರಮನೆಯ ಸೊಬಗೇನು ! ಹೊನ್ನ ಬಾಗಿಲುಗಳು ! ರನ್ನದ ತೋರಣಗಳು ! ಪನ್ನಿರು ಸಾದಿನಿಂದ ಮುನ್ನೆಸೆವ ಕನ್ನಡಿ ನೆಲ ! ಆ ಅರಮನೆಯೊಳಗೆ ನಿರ್ಭಿನ್ನಾಂತರಂಗರಾದ ಮುನಿಗಳು ಪ್ರವೇಶಿಸಿದರು. ಸೋಪಾನಗಳನ್ನು ಇಳಿವಾಗಲೂ ಏರುವಾಗಲೂ ಅರಸನು ಮುನಿಗಳಿಗೆ ನೆರವಾದ. ಭರತೇಶ ಮುನಿಗಳೊಡನೆ 'ಸ್ವಾಮಿ, ಶ್ರೀ ಪಾದವೆಚ್ಚರಿಕೆ' ಎನ್ನುವನು ; ಕೂಡಲೇ ತನ್ನ ಮಾತನ್ನು ಉಪಚಾರದ ನುಡಿಯೆಂದು ತಿದ್ದಿಕೊಳ್ಳುವನು. ವಾಯುವಿನಲ್ಲಿ ಅಲೆಯುವವರಿಗೇನು ಭಯ— ಎಂದು ಮತ್ತೆ ಸಮರ್ಥಿಸಿಕೊಳ್ಳುವನು. ಮತ್ತೆ ತನ್ನ ಮಾತಿಗೆ ತಾನೆ ವಿವರಣೆ ಕೊಡುವನು.

'ಅದಕ್ಕಲ್ಲ ಸ್ವಾಮಿ. ನೋಡಿ, ನಾವಿರುವ ಈ ಸದನವೆಲ್ಲವು ಡೊಂಕು. ನಮ್ಮ ಹೃದಯವು ಇನ್ನೆಷ್ಟು ಡೊಂಕೊ; ಅದನ್ನೆಲ್ಲ ನೀವೆ ಬಲ್ಲಿರಿ. ನಮ್ಮ ಮನೆ ಡೊಂಕು, ಮನಸು ಡೊಂಕು. ಆದರೂ ನಿಮ್ಮ ಶಿಷ್ಯನ ಮೇಲಣ ಅತಿ ಪ್ರೀತಿಯಿಂದ ಜಿನಕಲ್ಪರಾದ ತಾವು ಬಂದಿರಿ. ಇನ್ನು ನನ್ನ ಮನೆ ಮನಸ್ಸುಗಳು ನೇರವಾದವು.' ಇಂತು ಹೃದಯಕ್ಕೆ ಇಂಪುದೋರುವಂತೆ ನುಡಿದನು. ಅರಸನ ನುಡಿಗೇಳಿ ಮುನಿಗಳು, ನಸುನಗುತ್ತ ಒಮ್ಮೆ ನೋಡುವರು; ಮೌನದಲ್ಲೇ ಮುಂದುವರಿಯುವರು. ನುಡಿಯಬೇಕೆಂಬ ಇಚ್ಛೆಯುಂಟಾದರೂ ಭಿಕ್ಷೆಗೆ ಮೊದಲು ನುಡಿಯಬಾರದೆಂಬುದು ವ್ರತ. ಆದ್ದರಿಂದ ಆ ನಡೆಚಿನರು ಆತನ ಭಕ್ತಿರಸಕ್ಕೆ ಮನಸ್ಸಿನಲ್ಲೇ ಮೆಚ್ಚುತ್ತ ಮುಂದೆ ನಡೆದರು.

ಭಯ, ಭಕ್ತಿ ವಿನಯಗಳಿಂದ ರಾಜನು ಯೋಗಿಗಳನ್ನು ರಾಜಾಲಯಕ್ಕೆ ಒಯ್ಯುವಾಗ, ಜಯಮಹಾಲಕ್ಷ್ಮಿಯರು ಇದಿರುಗೊಳ್ಳುವಂತೆ, ಭರತೇಶನ ರಾಣಿಯರು ಬಂದರು. ಅವರು ಧರಿಸಿದ ನವರತ್ನಾಭರಣಗಳ ಕಾಂತಿಯು ಅವರ ದೇಹದ ಕಾಂತಿಯೊಂದಿಗೆ ಬೆರೆತು ಹೊರಹೊಮ್ಮುತ್ತಿರಲು, ಮಂದಿರದ ನೆಳಲನ್ನೋಡಿಸುತ್ತ, ದಿವಿಜಲತಾಂಗಿಯರಂತೆ ಬಂದರು.ಕಲಸಕನ್ನಡಿಯವರು ಮುಂದಾದರೆ, ಎಡಬಲದಿಂದ ಮಂಗಲಗಾಯಕಿಯರು. ಕುಲಸತಿಯರು ಹೊಳೆವಾರತಿ ಹಿಡಿದು ಬಂದು, ಆರತಿಯೆತ್ತಿ ನಿವಾಳಿಯನ್ನಿಟ್ಟು, ಗಂಭೀರ ಗಮಕದ ಓಜೆಯಿಂದ ಚಾರಣ ಯೋಗೀಂದ್ರರಡಿಗಳಿಗೆ ಒಲಿದೆರಗಿದರು. ಯತಿಗಳೊಡನೆ ಕಾದಿ ಸೋತು ಮನ್ಮಥನೇ ಅತಿ ಭಕ್ತಿಯಿಂದ ಅವರನ್ನು ತನ್ನ ಮನೆಗೊಯ್ದು ಸತಿಯರನ್ನು ಅವರ ಕಾಲಿಗೆರಗಿಸುವಂತೆ, ಭೂಪತಿಯು ಒಪ್ಪಿದನು; ತಮಗೆಲ್ಲ ಹೊಸತೊಂದು ಹಬ್ಬವಾದಂತೆ ಅವರೆಲ್ಲ ನಂಬಿದರು. ಹಬ್ಬವೇ? ಅದಕ್ಕಿಂತಲೂ ಮಿಗಿಲಾದ ಮದುವೆಯ ದಿಬ್ಬಣದಂತೆ ಅವರೆಲ್ಲ ರಾಗಿಸಿದರು. ಆ ಚೆನ್ನೆಯರು ಕಿನ್ನರ ನಾರಿಯರಂತೆ ಕಿನ್ನರಿ ವೇಣುವೀಣಾರವದೊಡನೆ ಅನ್ನದಾನದ ಮಹಿಮೆಯನ್ನು ಹಾಡುತ್ತಾ ಎಡಬಲದಿಂದ ಬಂದರು.ಮುಂದೆ ನಾಲ್ಕೆಂಟು ಮಾರು ನಡೆವಲ್ಲಿ ಮತ್ತೊಮ್ಮೆ ಎತ್ತುವ ಆರತಿ ಸೇಸೆಗಳು, ಇಡುವ ನಿವಾಳಿ, ಢಾಳಿಸುವ ಚಾಮರಗಳು ಈ ರೀತಿಯಲ್ಲಿ ಯೋಗಿಗಳನ್ನು ಮುನ್ನಡೆಸಿಕೊಂಡು ನಡೆದರು, ಆಳಿನ ಮನೆಗೊಡೆಯನು ಬಂದಾಗ, ಆ ಆಳು ತನ್ನೊಡೆಯನ ಸೇವೆ ಮಾಡುವಂತೆ ನಾರಿಯರಿಂದೊಡಗೂಡಿ ನೃಪೇಂದ್ರನು ಆ ತಾಪಸರಿಗೆ ತನ್ನ ಭಕ್ತಿಯ ಸೇವೆ ಸಲ್ಲಿಸಿದನು. ಮುನಿಗಳು ಮನಸ್ಸನ್ನು ಆತ್ಮನೊಳಗಿಟ್ಟು ತನುವೆಂಬ ಯಂತ್ರವನ್ನು ಮುನ್ನಡೆಸುತ್ತಿದ್ದರು.ಅರಸನನ್ನು ಕಂಡು,

ಅರಮನೆಯ ಅರಸಿಯರನ್ನು ಕಂಡು, ಅರಸನ ಗೀತಾಕಾಂತೆಯರ ಸ್ವರಕೇಳಿ ಯೋಗಿವರರ ಚಿತ್ತವು ಅಸ್ಥಿರವಾಗಲಿಲ್ಲ. ಪಾಟಿಗೆಟ್ಟಅಂಗ ಬೇರೆ, ಆತ್ಮ ಬೇರೆಯೆಂಬ ನೋಟವುಳ್ಳ ಆತ್ಮಸಿದ್ಧರಿಗೆ ಕೋಟಿರಂಜನೆಗಳು ಕಾಣಿಸಿದರೂ ಅದರ ಎದೆಗೆ ನಾಟದು.ಮುಂದೆ ಯೋಗಿವರರ ಪಾದಕಮಲಗಳನ್ನು ತೊಳೆದು, ರವಿ ಹುಟ್ಟಿದ ಮನೆಯೋ ಎಂಬಂತೆ ಬೆಳಗುತ್ತಿರುವ ಅಮೃತ ಗೃಹಕ್ಕೆ ಅವರನ್ನೊಯ್ದನು ರಾಜೇಂದ್ರ.

ರಾಜೇಂದ್ರನು ಉನ್ನತಾಸನವಿತ್ತು ಪಾದ ಪೂಜೆಯ ಮಾಡಿ, ಹೊನ್ನುಪಕರಣವ ಹರಹಿ ತನ್ನ ಅಬಲೆಯರೂ ತಾನೂ ಎಚ್ಚೆತ್ತು ಮುನಿಗಳಿಗೆ ಅನ್ನದಾನವಿತ್ತನು. ಸಿದ್ಧಾಂತ ಸೂತ್ರದಲ್ಲಿ ಹೇಳಿದಂತೆ ಅರಸನು ಪಾತ್ರವರಿತು ದಾನವಿತ್ತನು. ದಾತೃಗಳಲ್ಲಿ ಅವನೀಶನುತ್ತಮ ನಾಗಿದ್ದನು. ಸುಪಾತ್ರದಲ್ಲಿ ಮುನಿಗಳುತ್ತಮರಾಗಿದ್ದರು. ಆಗ ಹೊರಗೆ ಭೋರೆಂದು ಜಯ ಘಂಟೆ ಮೊಳಗಿತು. ಆ ರಾಜನು ಮಾಡುವ ಆಹಾರ ದಾನದ ಸಂಭ್ರಮವನ್ನು ಬಣ್ಣಿಸುವುದೇ ಸಾಧ್ಯವಿಲ್ಲ. ಕಾಮಧೇನುವೇ ಹಯನಾದಂತೆ ಆ ಜ್ಞಾನಶೀಲರಿಗೆ ಅಮೃತಾನ್ನವನ್ನು ಇತ್ತನು. ಕಲ್ಪವೃಕ್ಷವು ಹಣ್ಣುಗಳನ್ನು ನೀಡುವಂತೆ ಭಕ್ಷ ಪಾಯಸ ಶಾಕಪಾಕ ಮುಂತಾದ ಸುಭಕ್ಷ ಸುಪಕ್ವ ಫಲಗಳನ್ನೂ ಆ ಮೋಕ್ಷಗಾಮಿಗಳಿಗಿತ್ತನು. ಚಿಂತಾಮಣಿಯೇ ಪುರುಷ ರೂಪಕವಾಗಿ ಹೇಮಭಾಜನದಿಂದ ರೂಪ್ಯಭಾಜನದಿಂದ ದಿವ್ಯಾಮೃತಗಳನ್ನು ತೆಗೆತೆಗೆದು ಇಕ್ಕಿದನು. ಬಡಿಸುವ ಸ್ತ್ರೀಯರ ಯುಕ್ತಿ; ಕೈಗೆ ತುತ್ತು ಕೊಡುವ ರಾಜನ ಯುಕ್ತಿ; ಅವರೆಲ್ಲರೂ ತೋರುವ ಭಕ್ತಿ; ಇದರಿಂದ ಅವರಿಗೆ ತಡೆಯದಿರುವುದು ಮುಕ್ತಿ. ಭಿನ್ನ ರುಚಿಗೆ ಹಿಗ್ಗದೆ, ಒಂದು ವಸ್ತುವ ಬೇಡಿ ಸನ್ನೆದೋರದೆ, ಆ ಮುನಿವರರು ಚಕ್ರೇಶನು ಕೈಮುಟ್ಟಿ ಕೊಟ್ಟ ದಿವ್ಯಾನ್ನವನ್ನು ಕೊಂಡು ತಣಿದರು. ನೀರಸಾನ್ನವಾದರೂ ಸರಿಯೇ ಆ ಮುನಿಗಳ ಕೈಗೆ ಬಂದರದು ಸುರಸಾನ್ನವಾಗುವುದು ಸಹಜವು. ಭರತೇಶನು ಬಡಿಸಿದ ಅನ್ನವನ್ನು ಹಾಗೆ ಹೀಗೆ ಸೊಗಸಾಗಿತ್ತೆಂದು ಹೇಳಬಹುದೆ? ಅದನ್ನು ಜಿನನೊಬ್ಬನೇ ಬಲ್ಲ. ದೇವತೆಗಳು ಉಣ್ಣುವ ಸ್ವರ್ಗದ ಆಹಾರಕ್ಕೆಣೆಯಾಗುವಂತೆ ಮಾಡಿದ ಅನ್ನವನ್ನು ಜಿನನಾಥನೇ ತನ್ನ ಕೈಮುಟ್ಟಿ ಕೊಟ್ಟನೆಂದರೆ ಅದರ ಸುಖವನ್ನು ಏನೆಂದು ಹೇಳುವುದು? ಭರತೇಶನು ಆ ಮುನಿಗಳನ್ನು ಭುಕ್ತಿಯಿಂದ ತಣಿಸಿದನು. ಅಷ್ಟೇ ಅಲ್ಲ ತನ್ನ ಸುಭಕ್ತಿಯಿಂದಲೂ ಅವರನ್ನು ತಣಿಸಿದನು. ಹೀಗೆ ಭುಕ್ತಿ–ಭಕ್ತಿಗಳಿಂದ ಮುಕ್ತಿಮಾರ್ಗಕ್ಕೆ ಪುಣ್ಯ ಭುಕ್ತಿಯನ್ನು ಸಿದ್ಧಮಾಡಿಕೊಂಡನು. ಸಪ್ತ ವಿಧಗಳಿಂದ ನವವಿಧ ಪುಣ್ಯ ಸಂಪ್ರಾಪ್ತಿಯಿಂದ ಉತ್ತಮಾನ್ನವನ್ನು ಕಾಂಚನವರ್ಣನಾದ ರಾಜನು ಕೊಟ್ಟಾಗ ಮುನಿಗಳದನ್ನು ಸೇವಿಸಿ ಸಂತೃಪ್ತಿಗೊಂಡರು. ಹಂಸ ಹಾಲುಂಡ ಹಾಗೆ ಭುಕ್ತಿಯ ಕೈಕೊಂಡು ತಣಿದರು. ಆ ಮೇಲೆ ಮುಖ ಶುದ್ಧಿಯ ಕೊಂಡು ಕೈ ತೊಳೆದು ಸಿದ್ಧರ ಜಪಿಸಿ ಕಣ್ಣುಗಳನ್ನು ಮುಚ್ಚಿ ಒಳಗಿರುವ ನಿರಂಜನ ಸಿದ್ಧನನ್ನು ನೋಡಿದರು.

ಅದರೊಂದಿಗೆ ಹೊರಗಿನ ಘಂಟಾರವವೂ ನಿಂತಿತು. ಅರಸನ ರಾಣಿಯರೂ ಅಲ್ಲೇ ನಿಂತಿದ್ದರು. ಮುನಿಗಳ ಯೋಗವನ್ನು ನೋಡುತ್ತಾ ಅರಸನು ತನ್ನೆದೆಯಲ್ಲೇ ಆನಂದಿಸುತ್ತಿದ್ದನು. ಮುನಿಗಳು ಕಣ್ಣು ತೆರೆದು ಇದಿರಿದ್ದ ರಾಜನನ್ನು ಆನಂದದಿಂದ ನೋಡಿದರು. ಆಗ ಭರತೇಶನಿಗಾದ ಆನಂದೋತ್ಸಾಹಗಳನ್ನು ಬಣ್ಣಿಸುವುದು ಕಷ್ಟ.

ಭಕ್ತಿಯಿಂದಲೇ ನಮೋಸ್ತು ಎಂದನು. ಆಗ ಚಂದ್ರಗತಿಯೆಂಬ ಮುನಿ 'ಅಕ್ಷಯದಾನ ಫಲಮಸ್ತುತೇ' ಎಂದನು. ಆದಿತ್ಯ ಗತಿಯೆಂಬ ಯೋಗಿ 'ನಿರ್ಮಲಿನಾತ್ಮ ಸಿದ್ಧಿರಸ್ತು' ಎಂದನು. ಭರತೇಶನು ಆ ಮುನಿಹಂಸರ ಆಶೀರ್ವಾದಗಳನ್ನು ಕೇಳಿ ಸಿದ್ಧಿಪಡೆದವನಂತೆ ನಲಿದನು. ಸತ್ಪಾತ್ರ ತಾಂ ಸಿಗಲು ನಲಿಯದವರಾರು? ಆಗ ರಾಣಿಯರೆಲ್ಲರೂ ಸೂತ್ರದ ಗೊಂಬೆಗಳಂತೆ ನಮಸ್ಕರಿಸಿದರು. ಯೋಗಿಗಳು ಅವರೆಲ್ಲರನ್ನೂ ಹರಸಿದರು.

ಜಿನ ಜಿನ ! ಆಗಿನ ವಿಚಿತ್ರವನ್ನು ಏನೆಂದು ಹೇಳಲಿ ! ಆ ಕ್ಷಣವೇ ಹೂವಿನ ತೋಟಕ್ಕೆ ಹೊಕ್ಕ ಹಾಗಾಯಿತು; ಮನೆಯ ಒಳ ಹೊರಗೆಲ್ಲಾ ಕಂಪಿನಿಂದ ಘಮಘಮಿಸುವ ತಂಗಾಳಿಯು ತೀಡಿತು. ಅದರ ಬೆನ್ನಿನಲ್ಲೇ ಸ್ವರ್ಗ ಲೋಕದ ಹೂಮಳೆ ಸುರಿದಂತಾಯಿತು. ಆಗ ದೇವತೆಗಳೂ ಆಕಾಶದಲ್ಲಿ ನೆರೆದು ಭರತಚಕ್ರಿಯ ದಾನಮಹಿಮೆಯನ್ನು ಹೊಗಳಿದರು. ಸುರ ಲೋಕದಲ್ಲಿ ಹುಟ್ಟಿದುದರಿಂದ ಭರತೇಶನಂತೆ ಪಾತ್ರದಾನ ಮಾಡುವ ಭಾಗ್ಯವಿಲ್ಲದಾಯಿತಲ್ಲಾ ! ಭುಕ್ತಿಯನ್ನೀಯುವ ಭೂಪರು ಅಲ್ಲಲ್ಲಿ ಇದ್ದಾರೆ. ಆದರೆ ನಿನ್ನಂತಹ ಯುಕ್ತಿಯೂ ಭಕ್ತಿಯೂ ಅವರಲ್ಲಿಲ್ಲ. ಯುಕ್ತಿ ಭಕ್ತಿಯುಳ್ಳ ಮುಕ್ತಿಸಾಧಕ ನೀನೊಬ್ಬನೇ, ಸೌಭಾಗ್ಯವು ನರರನ್ನು ಸೊಕ್ಕುವಂತೆ ಮಾಡುತ್ತದೆ; ಆದರೆ ಸೌಭಾಗ್ಯವಾಗಲೀ ಹರೆಯವಾಗಲೀ ನಿನ್ನಲ್ಲಿ ಸೊಕ್ಕನ್ನುಂಟುಮಾಡಿಲ್ಲ. ಭೋಗ ನಿನ್ನಲ್ಲಿ ಮತಿ ಭ್ರಾಂತಿಯನ್ನುಂಟುಮಾಡಿಲ್ಲ. ಆತ್ಮನ ಸಿರಿಯನ್ನೇ ಕಂಡವನು ನೀನು. ಧರ್ಮ ಗುಣಕ್ಕೆ ಸೋತು ಹೊಗಳುವುದು ಧರ್ಮಶೀಲರ ಜಾತಿ ಗುರುತು. ಧರ್ಮ ಸಾಮ್ರಾಜ್ಯವನ್ನು ನೀನೇ ಆಳುತ್ತಿರು ಎಂದು ಹೊಗಳಿ ಸುರರೆಲ್ಲ ಬಯಲಾದರು. ಆಗ ಸುರವಾಕ್ಯ, ಸುರಭೇರಿ, ಹೂಮಳೆ ಹೊನ್ನ ಮಳೆ, ಸುರಭೀರ ಎಂಬ ಸುರಕೃತ ಪಂಚವೈಭವಗಳಾದುವು. ಹಾ ! ಭರತೇಶನ ದಾನವೈಭವವೇ !

ಜಿನ ಶರಣೆಂದು ಮುನಿಗಳೆದ್ದರು; ಶಾಂತಭಾವದಿಂದಲೇ ಅರಮನೆಯಿಂದ ಹೊರಟರು. 'ನನಗೆ ನೀವೇ ಶರಣು' ಎಂದು ಮುನಿಗಳ ಹಿಂದೆ ಹೋಗುತ್ತಿರುವ ರಾಜನನ್ನು ನಿಲ್ಲಲು ಮುನಿಗಳು ಕೇಳಿಕೊಂಡರು. ಆದರೂ ಅರಸನು ಕೇಳದೆ ಅವರನ್ನು ಹೊರಬಾಗಿಲಿನ ವರೆಗೆ ಮುಟ್ಟಿಸಿದನು. ಅದರೂ ಅವರನ್ನು ಬಿಡುವ ಇಚ್ಛೆಯಾಗಲಿಲ್ಲ. ಎಡೆಬಿಡದೆ ಹಂಸನನ್ನು ಕಾಣುತ್ತಿರುವ ಯೋಗಿರತ್ನರನ್ನು ಕಂಡರೆ ಮೋಕ್ಷಗಾಮಿಗಳು ಬಿಡುವರೆ? 'ಆದೀಶನಾಣೆ ನೀನಿನ್ನು ನಿಲ್ಲು' ಎಂಬ ಮುನಿಗಳ ಮಾತು ಕೇಳಿದೊಡನೆ ರಾಜನು ಅವರ ಪಾದಗಳಿಗೆ ಎರಗಿದನು. ನಲವಿಂದ ಅವನನ್ನು ಹರಸಿ ಮತ್ತೆ ಅಂಬರಕ್ಕವರು ಲಂಘಿಸಿದರು. ಕುಡಿಮಿಂಚಿನಂತೆ ಹೊಳೆದು ಹೋಗುತ್ತಿರುವ ಯತಿಗಳನ್ನೇ ರಾಜನು ನೋಡುತ್ತಾ ನಿಂತನು. ಚಂದ್ರಗತಿ ಆದಿತ್ಯಗತಿಗಳು ಚಂದ್ರಾದಿತ್ಯರಂತೆ ಹೋಗುವುದನ್ನು ಷಟ್ಖಂಡವರ್ಧನನಾದ ಆ ಸಾರ್ವಭೌಮನು ದಿಟ್ಟಿಸಿ ನೋಡುತ್ತಿದ್ದನು. ಅವರು ಕಣ್ಮರೆಯಾದೊಡನೆ ರಾಜನು ತನ್ನ ಅರಮನೆಯನ್ನು ಸೇರಿದನು.

೪

# ಆರೋಗಣೆ

ರಾಜಾದಿತ್ಯನಾದ ಭರತೇಶನು ರಾಜವಿಡಾಯವೇ ಬಿಮ್ಮೆನುವಂತೆ ರಾಜಮಂದಿರಕ್ಕೆ ಓಜೆಯಿಂದ ನಡೆದನು. ಎಡದ ಕಂಕುಳಲ್ಲಿ ಇರುಕಿದ ಹಚ್ಚಡ ಅಚ್ಚೊತ್ತಿದಂತಿತ್ತು; ಬೀಸುವ ಬಲದೋಳ ಬೆಡಗಿಂದ, ಮರಿಯಾನೆ ನಡೆವಂತೆ, ರಾಜನು ಮುನ್ನಡೆದನು. ಉತ್ಕೃಷ್ಟವಾದ ಪಾತ್ರದಾನಾರ್ಚನೆ ಆಯಿತೆಂದು ಹೃತ್ಕಮಲದ ಪ್ರೀತಿಯಿಂದ ಸೇವಕರನ್ನೆಲ್ಲ ಸತ್ಕರಿಸಿ ಕಳುಹಿಸಿದನು. ತನಗತಿ ಹಿತವಂತನಾದೊಬ್ಬನನ್ನು ಕರೆದು, 'ಈ ಹೊನ್ನ ರಾಶಿಯನ್ನು ಪುರದಲ್ಲಿರುವ ಬಡವರಿಗೂ ತಿರುಕರಿಗೂ ಹಂಚು' ಎಂದು ಹೇಳಿ ದೊರೆಯು ಮಂದಿರವನ್ನು ಸೇರಿದನು.

ಅಲ್ಲಿ ಪ್ರತಿವ್ರತೆಯರು ಯತಿಗಳ ಗುಣವನ್ನು ಬಣ್ಣಿಸುತ್ತ, ದಾನದಲ್ಲಾದ ಅತಿಶಯಕ್ಕೆ ಆನಂದಪಡುತ್ತ, ಪತಿ ಬರುವ ದಾರಿಯನ್ನೇ ನೋಡುತ್ತ ಗೆಲವಿನಿಂದ ನಿಂತಿದ್ದರು. ಮುಖಕಾಂತಿ ತಳತಳಿಸುತ್ತ, ತಮ್ಮಿದಿರಿನಲ್ಲೆ ಬರುತ್ತಿರುವ ಪತಿಯನ್ನವರು ಕಂಡರು. ತಂಡತಂಡವಾಗಿ ಬಂದು, ಮುಂದೆ ಇರಿಸಿಕೊಂಡು ನುಡಿದರು. 'ಇಂದು ದೇವನ ಪರಿ ಎಂದಿನಂತಲ್ಲ. ಪರಮ ಲಾಭವನ್ನು ಪಡೆದ ಠೀವಿಯಲ್ಲಿದ್ದೀರಿ.' 'ಅಕ್ಕಾಜಿ, ನೀನು ನೋಡು,' 'ತಂಗಿ, ನೀನು ನೋಡು', 'ಅಕ್ಕ ನೀನು ನೋಡು', ಎಂದು ತಮ್ಮ ನುಡಿ ಠಕ್ಕೋ ಸತ್ಯವೋ ಎಂಬುದನ್ನು ತಮ್ಮೊಳಗೇ ಕೇಳಿಕೊಂಡರು. ಆ ಬಗೆಗಾಗಿ ತಾವೇ ನಕ್ಕು ಆಡಿಕೊಂಡರು. 'ನಿಮ್ಮ ಮಾತು ಠಕ್ಕಲ್ಲ; ಸತ್ಯವೆ. ನಮ್ಮ ನೋಟವಿಂದು ಹಾಗಿದ್ದಿತು' ಎಂದೇ ರಾಜನು ಉತ್ತರವಿತ್ತನು. ಅದನ್ನು ಕೇಳಿದಾಗ, ತಾವು ಹೆಚ್ಚು ಆಡಲಿಲ್ಲವೆಂದು ವನಿತೆಯರು ತಮ್ಮನ್ನು ತಾವೇ ಮೆಚ್ಚಿಕೊಂಡರು.

'ದೇವ, ನಾವು ಕಂಡ ಕಾಣ್ಕೆಯು ಅಹುದೊ ಅಲ್ಲವೊ!' ಎಂದು ಮಹಿಳೆಯರೆಲ್ಲ ನಗುನಗುತ್ತ ಕೇಳಿದರು. 'ಅಹುದು, ಅಹುದು; ಚೆನ್ನಾಗಿ ಕಂಡಿರಿ. ನನ್ನೆದೆಯ ಒಳಗನ್ನು ನಿಮ್ಮಂತೆ ಕಾಣುವವರು ಬೇರಿದ್ದಾರೆಯೆ? ಬನ್ನಿ ನಾವೆಲ್ಲರೂ ಆರೋಗಿಸುವ' ಎಂದವರನ್ನೂ ಕರೆದು ಮುನ್ನಡೆದ. 'ಅತಿ ವೇಳೆಯಾಯಿತು. ಇಂದು ಸತಿಯರಿಗೂ ನಮ್ಮ ಪಂತಿಯಲ್ಲೆ ಊಟವಾಗಲಿ.' ಎಂದು ಸತಿಯರನ್ನೆಲ್ಲ ಹೆಸರಿಸಿ ಕರೆದ.

ಕನ್ನಾಜಿ, ಕಮಲಾಜಿ, ವಿಮಲಾಜಿ, ಸುಮನಾಜಿ, ಮಧುರಾಜಿ, ಚಿನ್ನಾಜಿ, ಕಾಂತಾಜಿ, ಮುಕುರಾಜಿ, ವಸಂತಾಜಿ, ಕುಸುಮಗಂಧಾಜಿ, ಶಾಂತಾಜಿ, ಸುಖಾಜಿ, ಸುಖಾವತಿ, ಗುಣವತಿ, ಶೃಂಗಾರವತಿ, ನೇತ್ರಾವತಿ, ಪದ್ಮಾವತಿ, ಚಿತ್ರವತಿ, ಮಿತ್ರಾವತಿ, ಚಿತ್ರಲೇಖಿ,

ಕುಂದಲತೆ, ಕನಕಮಾಲೆ, ನೀಲಲೋಚನೆ, ರಂಗಲೋಚನೆ, ವಿದ್ಯಾದೇವಿ, ವೀಣಾದೇವಿ, ಶ್ರೀದೇವಿ—ಎಂದು ಮುಂತಾಗಿ ಎಲ್ಲರನ್ನೂ ಮುನಿಶೇಷಾನ್ನವುಣ್ಣಲು ಕರೆದನು.

'ಸ್ವಾಮಿಗೆ ಆರೋಗಣೆಯಾದ ಮೇಲೆ ಉಣ್ಣುವುದು ನಮಗೆ ನೇಮ. ಆದ್ದರಿಂದ ಸ್ವಾಮಿ, ಭೋಜನಕ್ಕೆ ಚಿತ್ತೈಸಿ' ಎಂದವರು ಭಕ್ತಿಯಿಂದ ಭಿನ್ನವಿಸಿಕೊಂಡರು. ಆದರೆ ರಾಜ ಒಪ್ಪುವನೆ? ಎಂದಿನಂತಲ್ಲ ಇಂದಿನ ಕ್ರಮ. ಇಂದೆಲ್ಲರೂ ಒಂದಾಗಿ ಒಂದೇ ಪಂಕ್ತಿಯಲ್ಲುಣ್ಣಬೇಕು. ಬನ್ನಿ' ಎಂದನು ರಾಜ. ಆಗ ಒಬ್ಬೊಬ್ಬರೇ ಅಲ್ಲಲ್ಲಿ ತರ್ಕಿಸತೊಡಗಿದರು.

'ಅಕ್ಕಾಜಿ, ಸ್ವಾಮಿಯ ನುಡಿಯ ನಾವಿಂದು ಮೀರಿದರೂ ದೋಷವಿಲ್ಲ''

'ಮುನಿಭಕ್ತಿಯ ನೇಮವನ್ನು ಸ್ವಾಮಿ ಪಾಲಿಸುವುದಿಲ್ಲವೇ? ಹಾಗೆ ನಾವೂ ನಮ್ಮ ನಿಯಮ ಬಿಡಬಾರದು.

'ಪುರುಷಗೆ ಅನ್ನವನ್ನಿತ್ತು ಉಣ್ಣುವವಳೆ ಸ್ವರ್ಗಸರಣಿ. ಸರಿಪಂತಿಯಲ್ಲಿ ಉಣ್ಣುವವಳು ಕಾಡಬೆರಣಿ.'

'ತಾನೇ ಬೆರೆತು ಪತಿಯೊಡನೆ ಪಂತಿಯಲ್ಲಿ ಉಣ್ಣುವವಳು ದುರುಳೆ; ತನ್ನರಸನೇ ಕರೆದಾಗ ಉಂಡರೇನಂತೆ ?'

'ಪತಿಗುತ್ತರ ಕೊಡಬಾರದು; ಕೈಗೊಂಡ ವ್ರತವನ್ನು ಕೆಡಿಸಬಾರದು; ಅತಿ ವೇಳೆಯಾಯಿತು; ಇದಕ್ಕೇನು ಗತಿಯಪ್ಪಾ?'

ಎಂದೆಲ್ಲ ರೀತಿಯಾಗಿ ಮಾತನಾಡಿ, ಕೊನೆಗೆ ಮೌನವಾಗಿ ಮನಸ್ಸಿನಲ್ಲೇ ವಿಚಾರಿಸತೊಡಗಿದರು.

'ನಿಮಗೆ ವ್ರತವನ್ನಿತ್ತ ಗುರುಗಳು ಯಾರು?' ಎಂದು ಅರಸನೇ ಅವರ ವ್ರತವು ಸತ್ಯವೋ, ಸಟೆಯೊ ಎಂದು ವಿಚಾರಿಸಿದನು. 'ಗುರುಸಾಕ್ಷಿ, ದೇವ ಸಾಕ್ಷಿಯಾಗಿ ವ್ರತವನ್ನು ಧರಿಸಿದುದಲ್ಲ. ಸರಸಕ್ಕಾಗಿ ಒಂದು ಏಳೆಂದು ದಿನವಾಚರಿಸಿದೆವು.' ಎಂದರಸನಿಗೆ ತಿಳಿಸಿದರು. 'ಗುರು ಕೊಟ್ಟುದಲ್ಲ ; ನೀವಾದರೂ ಅರ್ತಿಯಿಂದ ಸ್ಮರಿಸುತ್ತಿಲ್ಲ. ನಿಮ್ಮ ವ್ರತವನ್ನು ಭಿನ್ನಮಾಡುವವನೂ ನಾನಲ್ಲ. ತಪಸಿಗಳ ಪಾನೀಯಾಮೃತವನ್ನು ಉಣ್ಣಲು ಬನ್ನಿರಿ' ಎಂದು ರಾಯನೇ ತೀರ್ಮಾನವಿತ್ತನು. ಆಮಾತನ್ನು ಆಲಿಸಿ, ಅವರೆಲ್ಲರೂ ಅಹುದೆಂದು ಒಪ್ಪಿದರು. ಷಟ್ಖಂಡದಲ್ಲಿ ಅವನ ಮಾತನ್ನೇ ಮೀರುವವರಿಲ್ಲವೆಂದ ಮೇಲೆ ಆ ಹೆಂಗಸರ ಪಾಡೇನು?

ಮಂಗಳವಾದ ಮೃದುತರಾಸನದಲ್ಲಿ ರಾಯನು ಮಂಡಿಸಿದನು. ಜಂಗಮ ಲತೆಗಳಂತೆ ಸತಿಯರೆಲ್ಲರೂ ಪಂತಿಯಲ್ಲಿ ಕುಳಿತರು. ಲತೆಗಳ ಪಂತಿಯಲ್ಲಿ ವಸಂತ ರಾಜನಿರುವಂತೆ ಕಾಂತೆಯರ ಮಧ್ಯದಲ್ಲಿ ಭರತೇಶನು ಕುಳಿತಿದ್ದನು. ಹಲವರು ರಾಯನೊಡನೆ ಕುಳಿತಿದ್ದರೆ ಕೆಲವರು ಆರೋಗಣೆಗೆಡೆ ಮಾಡಲು ಸುಳಿದಾಡುತ್ತಾ ಇದ್ದರು. ತಳಿಗೆ, ತಂಬಿಗೆ, ಗಿಂಡಿ, ಹರಿವಾಣ, ಪಡಿಗ, ಬಟ್ಟಲು ಮೊದಲಾದ ಭೋಜನಕ್ಕೆ ಸಲ್ಲುವ ಉಪಕರಣಗಳೆಲ್ಲವನ್ನೂ ಅಳವಡಿಸಿದರು. ಧಗಧಗಿಸುವ ಲಾವಣ್ಯದಿಂದೊಪ್ಪುವ ರಾಜನ ಮುಂದಿಟ್ಟ ಹರಿವಾಣಗಳು

ರವಿಯ ಸನ್ನಿಧಿಯ ಹೊಂದಾವರೆಗಳಂತೆ ತೋರುತ್ತಿದ್ದುವು. ಆರೋಗಣೆಗೆ ರಾಯನೊಡನೆ ಕುಳಿತ ನಾರಿಯರನ್ನು ನೋಡುವಾಗ ಚಂದ್ರನೊಡನೆ ಅಮೃತ ಉಣ್ಣಲು ಕುಳಿತ ತಾರಾಂಗನೆಯರು ನೆನಪಾಗುವುದು. ದೇವಾಮೃತವನ್ನು ಉಣ್ಣುವ ಅಮರೇಂದ್ರನ ಒತ್ತಿನ ದೇವಾಂಗನೆಯರೆಂಬಂತೆ, ಕಾಮದೇವನ ಪಂತಿಯೂಟದ ಮೋಹನ ದೇವಿಯರೆಂಬಂತೆ, ಭರತೇಶನೊಡನೆ ಊಟಕ್ಕೆ ಕುಳಿತ ಹೆಂಗಸರು ತೋರುತ್ತಿದ್ದರು.

ಸುರಲೋಕದ ಅಮೃತವನ್ನು ತಂದು ಎಡೆಮಾಡುವ ಸುರಸುದತಿಯರೋ ಎಂಬಂತೆ ಸತಿಯರು ಭರತೇಶನಿಗೆ ಉಣಬಡಿಸಿದರು. ಅಮೃತಾನ್ನ, ಭೋಜ್ಯಾನ್ನ, ದೇವಾನ್ನ, ದಿವ್ಯಾನ್ನ, ಅಮೃತ ರಸಾಯನವೆಂಬ ಪಂಚಾನ್ನಗಳನ್ನು ಕ್ರಮವರಿತು ಬಡಿಸಿದರು. ಆಕೆಗೆ, ಈಕೆಗೆ, ಸ್ವಾಮಿಗೆ, ಅವಳಿಗೆ ಇವಳಿಗೆ ಎಂದು ಜೋಕೆಯಿಂದ ಬಡಿಸಿದರು.ಸಡಗರದಿಂದ ಸಂತಸದಿಂದ ಸೈರಣೆಯಿಂದ ಸ್ವಾಮಿಗೂ ಸ್ವಾಮಿಯೊಳಿಗದವರಿಗೂ ಇಕ್ಕಿದರು. ಅನಂತರ ಪತಿಗಾರತಿಯೆತ್ತಿ ಕುಸುಮಾಂಜಲಿ ಮಾಡಿ, ಕೈ ಮುಗಿದು ಸರಿದು ನಿಂತರು. ಸತಿಯರ ಈ ಹೊಸ ಬಗೆಯ ಭಕ್ತಿಗೆ ಭರತೇಶನು ನಸುನಕ್ಕನು. ಹಸ್ತಪ್ರಕ್ಷಾಲನ, ಕೈಗಟ್ಟಿ ಮೊದಲಾದ ಕ್ರಿಯೆಗಳನ್ನು ಮಾಡಿ ಪಲ್ಯಂಕಾಸನವನ್ನು ಸೇರಿದನು. ಶಾಂತಭಾವದಿಂದ ಕಣ್ಣು ಮುಚ್ಚಿ ಸಿದ್ಧರನ್ನು ಅಂತರಂಗದಲ್ಲಿ ಪೂಜಿಸಿ, ಕಣ್ಣು ತೆರೆದನು.ಕಣ್ಣುಗಳಿಂದ ಅನ್ನವನ್ನು ನೋಡಿ, ಜ್ಞಾನದ ಮೂಲಕ ಅಂತರಂಗದ ಆತ್ಮನನ್ನು ನೋಡಿ, ಉತ್ತಮ ಭಾವದಿಂದ ಹಂಸನಿಗೆ ಅನ್ನಪಾನಗಳನ್ನು ಸಮರ್ಪಿಸಿದನು. ಭರತೇಶನು ಜ್ಞಾನಾನ್ನವನ್ನು ಆತ್ಮನಿಗೂ ಅನ್ನಪಾನಾದಿಗಳನ್ನು ಶರೀರಕ್ಕೂ ಕೊಡುತ್ತಿದ್ದನು. ಈ ರೀತಿಯ ಭರತೇಶನ ಎದೆಯ ಸಂಧಾನವನ್ನು ಯಾರು ಬಲ್ಲರು? ಭಕ್ಷ ಸುಖವು ದೇಹಕ್ಕಾದರೆ, ಮೋಕ್ಷಸುಖವು ಆತ್ಮನಿಗಾಗುವುದು ! ಒಗರು ಉಪ್ಪು ಕಹಿ ಸಿಹಿ ಹುಳಿಕಾರಗಳ ಸವಿಯನ್ನು ನಾಲಗೆಗೀಯು ವಂತೆ ದೃಗವಬೋಧನ ಶಕ್ತಿಸುಖವನ್ನು ಆತ್ಮನಿಗೆ ಬಗೆಬಗೆದು ಒದಗಿಸುತ್ತಿದ್ದನು.ತುತ್ತನ್ನು ಕಲಸುವ ಬೆಡಗು, ಕೈವಿಡಿವ ಕುಶಲ, ಜಿಹ್ವೆಗಿಡುವ ಜೋಕೆ, ಅಲುಗಿ ಸವಿಯುವ ಗಂಭೀರಗಳೆಲ್ಲ ಉಣ್ಣುವ ಚೆಲುವನ್ನು ಕೋರಯಿಸುತ್ತಿತ್ತು.

ಆರೋಗಿಸುತ್ತಿದ್ದ ಅರಸನು ಕಿಕ್ಕಣ್ಣಿಂದ ಅರಸಿಯರನ್ನು ನೋಡಿದನು. ಅವರೆಲ್ಲರೂ ಸುಮ್ಮನೆ ಕುಳಿತಿರುವುದನ್ನು ಅರಿತು ಅರಸನಿಗೆ ವಿಸ್ಮಯವಾಯಿತು. ಕೈಸನ್ನೆಯಿಂದಲೆ ಉಣ್ಣಿರೆಂದು ಸೂಚಿಸಿ, ಅವರನ್ನೆಲ್ಲ ನೋಡಿದನು. ಆಗ ಆ ಕುಶಲೆಯರು ಬಡಿಸುವವರನ್ನು ಕರೆದುಗುಟ್ಟಿನಲ್ಲೇನೋ ಹೇಳಿದರು. ಸರಿ; ಅದರಂತೆ, ಬಡಿಸುವವರು ಅವನುಣ್ಣುವೆಡೆ ಯಿಂದ ಒಂದೊಂದು ತುತ್ತನ್ನೊಯ್ದು ಅವರವರೆಡೆಯಲ್ಲಿ ಬಡಿಸಿದರು. ಆ ಮೇಲೆ ಎಲ್ಲರೂ ಆರೋಗಿಸಿದರು. ಅದನ್ನು ಕಂಡು ಭರತೇಶನು ಮನದಲ್ಲೇ ಮೆಚ್ಚಿದನು.

ಜೀವಬಲವನ್ನೂ ದೇಹಬಲವನ್ನೂ ಹೆಚ್ಚಿಸುವ ಸಂಜೀವನರಸಪಿಂಡವೆನಿಸುವ ಮೂವತ್ತೆರಡು ತುತ್ತುಗಳಿಂದ ಅವನು ತಣಿದನು. ತಮ್ಮ ರುಚಿಗೆ ತಕ್ಕಂತೆ ಹಿತವರಿತು ಮಿತವಿಡಿದು, ಸ್ವಲ್ಪವನ್ನುಂಡು ಸತಿಯರೂ ತಣಿದರು. ಸಂತೋಷದಿಂದ ಸದಾ ತೃಪ್ತರಾದ ಅವರಿಗೆ ಅತ್ಯಂತ ಕ್ಷುಧಾಗ್ನಿಗಳಿಲ್ಲ.

ರಾಜನೆದ್ದು ಕೈತೊಳೆದು ಮೇಲೆ ಆ ಕಾಂತೆಯರೂ ಎದ್ದು ಕೈತೊಳೆದರು. ಅನಂತರ ಬಡಿಸಿದವರು ಉಣಲೆಂದು ಅವನೇ ಸೂಚಿಸಿದನು. 'ಭೋಜನಾ ನಂತರದ ಕ್ರಿಯೆ ನಮಗುಂಟು; ಅವರಿಗೆ ನೀವು ಬಡಿಸಿ' ಎಂದು ಯುವತಿಯರಿಗೆ ಸನ್ನೆ ಮಾಡಿ ತಾನು ಕಣ್ಣು ಮುಚ್ಚಿ ಯೋಗದಲ್ಲಿ ಮೆರೆದನು. ಬಡಿಸಿದವರ ಊಟವಾಗುವಾಗ ಅರಸನು ಯೋಗದಿಂದಿಳಿದನು. ಸಿದ್ಧಾಂತ ಮಂತ್ರವನ್ನು ಸ್ಮರಿಸಿ ಚಿದಂಬರ ಪುರುಷನನ್ನು ನೋಡಿ ನೋಡಿ, ಭರತೇಶನು ಕಣ್ಣು ತೆರೆದು ಜಿನಸಿದ್ಧ ಶರಣೆಂದನು. ಆ ಮೇಲೆ ಹಚ್ಚಡವನ್ನು ಹೊದೆದು, ಹಾವುಗೆಯನ್ನು ಮೆಟ್ಟಿ, ಸಚ್ಚಿದಾನಂದ ರೂಪವನ್ನು ಮೆಚ್ಚಿ ಭಾವಿಸುತ್ತ, ಕುಂದಿಲ್ಲದ ರಾಜಚಂದ್ರಮನು ಚಂದ್ರಶಾಲೆಗೆ ಬಂದನು. ಅಲ್ಲಿ ತೂಗುಮಂಚದ ಮೇಲೆ ಒರಗು ಮೂಡೆಗೆ ವಾಮಭಾಗವನ್ನಿಟ್ಟು ಕುಳಿತುಕೊಂಡನು. ಆಗ ಅಬಲೆಯರೂ ಆ ಗಾಡಿಕಾರನಿದ್ದಲ್ಲಿಗೆ ಘುಳಘುಳನೆ ಬಂದರು. ಪರಿಮಳವನ್ನು ತೊಡೆಯುತ್ತ, ಪನ್ನೀರನ್ನು ಚಿಮ್ಮುತ್ತ, ಬೀಸಣಿಗೆಗಳಿಂದ ಬೀಸುತ್ತ, ಚರಣವನ್ನೊತ್ತುತ್ತ, ವೀಳೆಯವನ್ನು ಕೊಡುತ್ತ, ಸುಂದರಿಯರು ರಾಜನನ್ನು ಬಳಸಿ ನಿಂತರು. 'ನಿಂತ ಓಲಗ ಸಾಕು; ಕುಳಿತಿರಿ' ಎಂದರಸನು ಒಲವಿಂದ ನುಡಿದ ಮೇಲೆಯೇ ಆ ಮಂದಗಮನೆಯರು ಮೃದುತಲ್ಪದಲ್ಲಿ ಕುಳಿತರು.

ಆ ಮೇಲೆ ಆ ವಾರಿಜಾಕ್ಷಿಯರೊಂದಿಗೆ ಸರಸಸಲ್ಲಾಪದ ಗಂಭೀರ ಪ್ರಸಂಗ ಕೇಳಿಯಲ್ಲಿ ಆ ರಾಜಯೋಗೀಂದ್ರನಿದ್ದನು.

೫

# ಉಪ್ಪರಿಗೆಯಲ್ಲಿ ಓಲಗ

ಮತ್ತೊಂದು ದಿನದ ಉದಯದಲ್ಲಿ ಭರತೇಶನೆದ್ದು ಜಿನಸಿದ್ಧರ ಉತ್ತಮಾರಾಧನೆ ಮಾಡಿ ಉಪ್ಪರಿಗೆಯಲ್ಲಿ ಓಲಗವಿತ್ತನು. ಉಪ್ಪರಿಗೆಯ ಮೇಲೆ ನವರತ್ನದಿಂದಾದ ಮಂಟಪದಲ್ಲಿ ರಾಜೇಂದ್ರನು ಬಂದು ಕುಳಿತನು. ರಾಜೇಂದ್ರನ ತನುಕಾಂತಿ, ಭೂಷಣಕಾಂತಿ, ಆ ಮಂಟಪದ ಕಾಂತಿ, ಇವುಗಳೊಂದಾಗಿ ಸೂರ್ಯೋದಯದ ಕಾಂತಿಯನ್ನು ಕಡೆಗಣಿಸುವಂತಿತ್ತು. ಕಾಳಂಜಿ, ಹಡಪ, ಚಾಮರ, ಗಿಂಡಿ ಮೊದಲಾದವುಗಳನ್ನು ಹಿಡಿದುಕೊಂಡು ಊಳಿಗದ ಹೆಣ್ಣುಗಳು ಸಾಲಭಂಜಿಕೆಗಳಂತೆ ಎಡಬಲದಲ್ಲಿ ನಿಂತು ಓಲೈಸುತ್ತಿದ್ದರು.

ಗಾಯಕಿಯರು, ವೀಣೆ, ದಂಡಿಗೆ, ಸ್ವರಮಂಡಲ, ಕಿನ್ನರಿ, ವೇಣು, ಸಂಪುಟ, ಪುಸ್ತಕಾದಿಗಳನ್ನು ಹಿಡಿದುಕೊಂಡು ಬಂದು ಅರಸಗೆರಗಿದರು. ಅರಸನ ಹೆಂಡತಿಯರಿಗೆ ಕಾವ್ಯಾದಿಗಳನ್ನು ಕಲಿಸಿದ ಪಂಡಿತೆಯೆಂಬ ದಾದಿಯು ಬಂದು ಭರತೇಶನಿಗೆ ಕೈ ಮುಗಿದು ನಿಂತಳು. ರಾಣಿಯರೆಲ್ಲರೂ ಸಿಂಗರಿಸಿಕೊಂಡು ಪ್ರಾಣನಾಥನನ್ನು ಕಾಣಲೆಂದು ಉಪ್ಪರಿಗೆಯನ್ನೇರಿದರು. ಮನ್ಮಥನನ್ನು ನೋಡಲಿಕ್ಕಾಗಿ ಸುದತಿಯರು ಮೇರುಗಿರಿಯನ್ನೇರಿ ಬರುವಂತೆ ಚದುರೆಯರೆಲ್ಲ ಮೇರುಸೌಧವೆಂಬ ಉಪ್ಪರಿಗೆಯನ್ನೇರಿ ಬರುತ್ತಿದ್ದರು.

''ನೋಡಿ ಬಾ ತಂಗಿ.''

''ಅಕ್ಕಾಜಿ, ಎಚ್ಚರಿಕೆ.''

''ಕೈನೀಡಕ್ಕ.''

''ಅಕೋ ಹಿಡಿ ತಾಯಿ.''

''ಓಡದಿರಕ್ಕ.''

''ಬಾ ಬಾ ತಂಗಿ.''

ಎಂದವರು ಸರಸದ ಮಾತುಗಳನ್ನಾಡುತ್ತಲೇ ಉಪ್ಪರಿಗೆ ಹತ್ತುತ್ತಿದ್ದರು.

''ಹೌದು ! ಬೇಗನೆ ಸರಿದುಬಿಡು. ನಿನ್ನರಸನು ನಿನಗೆ ಹಿರಿದಾದ ಮೆಚ್ಚನ್ನೀವನು.'' ಎಂದು ಬೇಗಬೇಗನೆ ಹೋಗುವವಳನ್ನು ಕರೆದು ಚುಚ್ಚು ನುಡಿಯುತ್ತಿದ್ದಳು.

''ಅಯ್ಯೋ ! ಅವಳು ಹತ್ತಲಾರಳು. ಅವಳಿಗೆ ಕೈಕೊಡಿರಿ. ನಮ್ಮ ಭರತ ಚಕ್ರೇಶ್ವರನಿಗೆ ಒಂದಿಷ್ಟೂ ಕರುಣೆಯಿಲ್ಲ. ಇಲ್ಲವಾದರೆ ಈ ಉಪ್ಪರಿಗೆಗೆ ಬರಹೇಳುವುದೇ'' ಎಂದು ಹತ್ತಲಾರದವಳನ್ನು ತಮ್ಮ ನುಡಿಯಿಂದ ಹತ್ತಿಕ್ಕುತ್ತಿದ್ದರು.

''ಮೌನವು ಈಕೆಗೆ ! ತನ್ನ ಗಂಡನಂತೆ ಆತ್ಮನನ್ನು ಧ್ಯಾನಿಸುತ್ತ ಹತ್ತುವ ರೀತಿಯೋ?''

ಎಂದು ಪರೋಕ್ಷವಾಗಿ ನುಡಿದು ತೃಪ್ತಿಪಡೆಯದೆ— ''ನಿನಗೀ ಧ್ಯಾನವನ್ನ ಕಲಿಸಿದವರು ಯಾರೆ?'' ಎಂದು ಕೊಂಕಿನಿಂದ ನುಡಿಯುತ್ತಿದ್ದರು.

''ಧ್ಯಾನಗೀನವನ್ನೆಲ್ಲ ನೀವು ನಿಮ್ಮರಸನೂ ಬಲ್ಲಿರಿ. ನಾನೇನು ಬಲ್ಲೆನು? ಈ ನಿಮ್ಮ ಸರಸಸಲ್ಲಾಪಕ್ಕೆ ಮನಸ್ಸಿನಲ್ಲೇ ಆನಂದಿಸುತ್ತ ಮೌನವಾಗಿದ್ದೆನು.'' ಎಂದಾಕೆಯು ಮೌನವನ್ನೊಡೆದು ಮಾತನಾಡಿದಳು.

''ಹಿಂದುಳಿದರೆ; ಮುಂದೆ ನಡೆದರೆ; ಸುಮ್ಮನೆ ಬಂದರೆ; ಮಾತನಾಡಿದರೆ ; ಒಂದೊಂದು ಕಲ್ಪಿಸುವಿರಿ. ನಿಮ್ಮನ್ನು ಗೆಲ್ಲುವ ರೀತಿಯನ್ನು ಆ ಚಕ್ರಿಯೊಬ್ಬನೇ ಬಲ್ಲ'' ಎಂಬ ಮಾತು ಕಲಿತವರ ಬಗೆಯನ್ನೂ ಕದಡಿತು.

''ವಿನೋದ ಸಾಕಿನ್ನು; ಸುಮ್ಮನೆ ಬನ್ನಿ ; ಮಂಟಪವು ಹತ್ತಿರವಾಯಿತು'' ಎಂದು ಕೆಲವರು ನುಡಿಯುತ್ತನಡೆದರು.

ಅರಸಿಯರೆಲ್ಲ ಆನಂದದಿಂದ ಮಾಡವನ್ನೇರಿ ಬರುತ್ತಿದ್ದಾರೆಂಬ ವಾರ್ತೆಯನ್ನು ಚರಣದಂದುಗೆಯ ಕಟಿಸೂತ್ರದ ದನಿ ಮುಂದೆ ಹರಿದು ಅರಸನಿಗೆ ತಿಳಿಸಿತು. ಅವರೆಲ್ಲರೂ ಸೌಧಶಾಲೆಯನ್ನು ಹೊಕ್ಕು ನಲ್ಲನನ್ನು ಕಂಡು, ಮುಂದೆ ಒಬ್ಬೊಬ್ಬರೆ ತಾವು ತಂದಿದ್ದ ಕಾಣಿಕೆಗಳನ್ನಿತ್ತು ನಿಂತುಕೊಂಡರು.

ಹೊಂಬಣ್ಣದಾಕೆ ಹೊಸ ನಿಂಬೆ ಹಣ್ಣನ್ನು ಕಾಣಿಕೆಯಿತ್ತು ಹೊನ್ನ ಬೊಂಬೆಯಂತೆ ನಿಂತುಕೊಂಡಳು. ನೀಲಾಂಗಿಯ ನೀಲಾಂಬುಜವನ್ನೂ, ರಾಣಿಯು ಹೊಂದಾವರೆಯನ್ನೂ ಕಾಣಿಕೆಯಿತ್ತರು. ಸಂಪಗೆ ಬೆಟ್ಟದಾವರೆಗಳನ್ನೂ ಕಾಣಿಕೆಯಿತ್ತು ಇನ್ನಿಬ್ಬರು ರಾಯನ ಬಳಿಯಲ್ಲೇ ನಿಂತರು. ರತಿದೇವಿಯು ಸುರಗಿಯನ್ನು ಮದನನಿಗೆ ಕೊಡುವಂತೆ ಒಬ್ಬಳು ತಾನು ಕರಕುಶಲದಿಂದ ರಚಿಸಿದ ಸುರಗಿಯ ಮಾಲೆಯನ್ನಿತ್ತಳು. ಮತ್ತೊಬ್ಬಳು ಹೊಂಗೇದಗೆಯ ಕಠಾರಿಯನ್ನರಸನ ಕರಕ್ಕೇರಿಸಿದಳು. ಮುಗ್ಧೆಯೊಬ್ಬಳು ನಾಚುತ್ತಬಂದು ಮಲ್ಲಿಗೆಯ ಸರವನ್ನೀಯುವಾಗ ಅದು ಜಾರಿಹೋಯಿತು. ''ಮಲ್ಲಿಗೆ ಜಾರಿದರೇನು? ಅದು ನಮ್ಮಲ್ಲಿಗೇ'' ಎಂದರಸನು ಸರಸವಾಡಿದನು. ಪಾದರಿ ಪುಷ್ಪವನ್ನರ್ಪಿಸುವಾಗ ಅದು ಪಾದದೆಡೆಯಲ್ಲೆ ಬಿತ್ತು. ಕಾಲಿಗೆರಗಿದ ಪಾದರಿಯನ್ನು ನೂಕುವಂತೆ ಅರಸನದನ್ನು ನೂಕಿದನು. ''ಪರದಾರಸೋದರನ ಒತ್ತಿಗೆ ಪಾದರಿ ಬರಬಹುದೆ? ಚರಣದಿಂದೊದೆದುದು ಒಳಿತಾಯಿತರಸ.'' ಎಂದು ಪಂಡಿತೆ ತನ್ನ ಟಿಪ್ಪಣಿಯಿಂದ ಅರಸನನ್ನು ನಗಿಸಿದಳು.

ಗಂಡಹೆಂಡಿರು ನಿರ್ದೋಷರೆಂಬುದನ್ನು ತೋರಿಸಿಕೊಡಲು ಒಲೆಯ ಕೆಂಡವನ್ನೆತ್ತಿ ತರುವಂತೆ ಮಾಣಿಕ್ಯವನ್ನೊಬ್ಬಳು ತಂದುಕೊಟ್ಟಳು. ಮುತ್ತಿನ ಮಣಿಯನ್ನೊಬ್ಬಳು ತಂದು ನೃಪನ ಕೈಗಿತ್ತು ಕೈಮುಗಿದಳು. ಅದನ್ನು ಕಂಡು ಪಂಡಿತೆ ಮತ್ತೊಂದು ವಿನೋದದ ಮಾತನ್ನಾಡಿದಳು ''ವರನ ಸೋಂಕಿ ಮುತ್ತಕೊಡುವುದು ಲೋಕದಲ್ಲಿದೆ, ಕರಯುಗ ಸೋಂಕಿ ಮುತ್ತನ್ನೀಯುವುದು ವಿಚಿತ್ರಕರವಾಗಿದೆ.''

ಕಾಮಕಾಯನಿಗೆ ಕಾಣಿಕೆಯಿತ್ತು ವನದೇವಿಯರು ಓಲೈಸುವಂತೆ ಲಲನಾ ಜೀವಮೋಹನನ ಪಕ್ಕದಲ್ಲಿ ಲಲನೆಯರೆಲ್ಲ ನಿಂತಿದ್ದರು. ಅರಸನು ಅವರನ್ನೆಲ್ಲ ನೋಡಿ ಕೈಸನ್ನೆಯಿಂದಲೆ ಕುಳ್ಳಿರಲು ಹೇಳಿದನು. ಮೃದುತಲ್ಪದಲ್ಲಿ ಅರಸಿಯರೆಲ್ಲರೂ

ಸನ್ನೆಯನ್ನರಿತು ಕುಳಿತುಕೊಂಡರು. ಮನ್ಮಥನ ಮುಂದೆ ಅತ್ತಿತ್ತ ಹಾರಿನಲಿದಾಡುವ ಅರಸಂಚೆಗಳ ಸಾಲಿನಂತೆ ತರುಣಿಯರು ಬೀಸುತ್ತಿದ್ದ ಚಾಮರಗಳು ಒಪ್ಪಿದುವಾಗ.

ರಾಜನು ಗಾಯಕಿಯರ ಮೊಗವನ್ನು ನೋಡಿದನು. ಇವರು ಆ ನೋಟದ ಆಯವನ್ನರಿತು ಠಾಯೆ, ಬಜಾವಣೆ, ಗಮಕವೆಸೆಯುವಂತೆ ಹಾಡಲನುವಾದರು. ಅರೆತೆರೆದ ತಾವರೆಯಲ್ಲಿರುತ್ತಿದ್ದ ಮರಿದುಂಬಿ ಸ್ವರಮಾಡಿ ಹೊರಡುವಂತೆ, ಗಾಯಕಿಯರು ಕೆಂಬಾಯಿ ತೆರೆದು ಆಳಾಪನೆ ಮಾಡಿದರು. ಅವರ ನೋಟ ರಾಯನ ಮೇಲೆ; ನೆನಪು ರಾಗದ ಮೇಲೆ; ಬೆರಳು ತಂತಿಯ ಮೇಲೆ ! ಛಾಂದಸಿಕೆಯನ್ನು ನೂಕಿ ಘಾಟಿಕೆಯಿಂದವರು ಹಾಡಿದರು. ಚಕ್ಕವಕ್ಕಿಗಳು ಸೂರ್ಯನ ಮುಂದೆ ತಮ್ಮ ದುಃಖವನ್ನೆಲ್ಲ ಕಳೆದುಕೊಂಡು ನುಣ್ದನಿ ಮಾಡುವಂತೆ ಆ ಜೊಕ್ಕರಾಯನ ಮುಂದೆ ತಮ್ಮ ಮನಸ್ಸಿನ ಜಾಡ್ಯಗಳನ್ನೆಲ್ಲ ಒತ್ತಿಟ್ಟಿಗಿಟ್ಟು ಗಾಡಿಯಿಂದ ಹಾಡಿದರು. ಮೊದಲವರು ಉದಯರಾಗವನ್ನು ಚಕ್ರೇಶ್ವರನು ಅನುರಾಗಿಸುವಂತೆ ರಾಗಿಸಿದರು. ಆ ವೇಳೆಯಲ್ಲಿ ಅಮರೇಂದ್ರನತ್ತ ಸುಳಿದನಾದರೆ ಅವನು ಮುಂದೆ ಹೋಗದೆ ಅಲ್ಲಿಯೇ ನಿಂತು ಈ ಗಾನವನ್ನಾಲಿಸುತ್ತಿದ್ದನು. ಆ ಗಾಯಕಿಯರು ಸಂಗೀತ ಸಮುದ್ರವನ್ನು ಹೊಕ್ಕು ಮುಕ್ಕಳಿಸಿ ಮುತ್ತುಗಳನ್ನೇ ಉಗುಳುವಂತೆ, ಗಳತುಂಬಿ ಗಾನವನ್ನು ತೆಗೆದು ಬಾಯಿಯನ್ನು ತೆರೆದು ಅದರ ಸುಳುಹನ್ನು ತೋರಿಸಿದರು. ಉಕ್ಕಂದವಾಗಿ ತುಂಬಿದ ಗಾನರಸವನ್ನು ದಿಕ್ಕು ದಿಕ್ಕಿಗೆ ಚಿಮ್ಮುವಂತೆ ತಾನಗಳ ತಂದು ಕೊರಳಲ್ಲಿ ಜಿಕ್ಕುಲಿಸಿದರು. ಅವರು ಶ್ರೀದೇವಿ ಶೋಭನವನ್ನು ನಾಭಿಯಿಂದೆಬ್ಬಿಸಿ, ಎದೆಯಲ್ಲಿ ಓಲಾಡಿಸಿ, ಕಂಠದಲ್ಲಿ ಶೋಭೆಯನ್ನುಂಟುಮಾಡಿ ಅರಸನು ಮೆಚ್ಚುವಂತೆ ಹಾಡಿದರು. ಕೇಳುವವರಿಗೆ ಜ್ಞಾನೋದಯವಾಗುವಂತೆ ಉದಯರಾಗದಲ್ಲಿ ಅರುಹನನ್ನು ಒಲಿದೊಲಿದು ಹಾಡಿದರು. ನೆರವಾಗು ಗಾಯನಕ್ಕೆ; ಏಳು ಏಳೆಂದು ಮಲಗಿದ್ದ ಸರಸ್ವತಿಯನ್ನು ತನ್ನ ಬೆರಳುಗಳಿಂದ ಮಿಡಿವಂತೆ ದೊಡ್ಡ ದಂಡಿಗೆಯನ್ನೊಬ್ಬಳು ಮಿಡಿಯುತ್ತಿದ್ದಳು. ನಿದ್ರಿಸಿದ್ದ ನಲ್ಲನನ್ನು ಮುದ್ದಿಸಿ ಕರೆಯುತ್ತ ಸರಸಕ್ಕೇಳಿಸುವಂತೆ ತರುಣಿಯೊಬ್ಬಳು ದಂಡಿಗೆಯನ್ನು ಮಿಡಿಯುತ್ತಿದ್ದಳು.

ಆದರೆ ಅರಸನಿಗದು ಹೊಳೆಯುತ್ತಿದ್ದ ರೀತಿಯೇ ಬೇರೆ. ನೀರಸವು ಈ ಸಂಸಾರವೆಂದು ನೆನೆದು ಹೇಸಿಹೇಸಿ, ಬೆರಳನ್ನು ಮಿಡಿಯುವಳೋ— ಎಂದರಸನಿಗರಿವಾಯಿತು. ಪರಮಂಡಲವನ್ನು ಗೆದ್ದ ರಾಜನು ಮೆಚ್ಚುವಂತೆ, ಕರ್ಮವೆಂಬ ವೈರಿಮಂಡಲವನ್ನೂ ಗೆದ್ದವನಾದ ಭರತೇಶನನ್ನು ತಮ್ಮ ಸ್ವರಮಂಡಲದಿಂದ ಅವರು ಹೊಗಳಿ ಹಾಡಿದರು.

ಗಾಯಕಿಯರು, ಅರುಹಂತದೇವನನ್ನೂ ಸಿದ್ಧರನ್ನೂ ಮುನಿಗಳನ್ನೂ ಸ್ಮರಿಸಿ ಭರತೇಶನ ಮನಸ್ಸಿನ ರೀತಿಯನ್ನರಿತು ಭೋಗಯೋಗಗಳೆರಡನ್ನೂ ಬೆರಸಿ ಹಾಡಿದರು. ಸುಖವನ್ನು ಅನುಭವಿಸುವುದೇನು ಸುಲಭವೇ? ಅದಕ್ಕೆ ಇಹಪರದ ಚಿಂತೆಬೇಕು; ಇದಿರನ್ನು ತಿಳಿಯಬೇಕು; ತನ್ನನ್ನೂ ತಿಳಿಯಬೇಕು; ಎಲ್ಲಕ್ಕೂ ಮೇಲಾಗಿ ಚದುರುತನವಿರಬೇಕು. ಎರಡೂ ಕಣ್ಣುಗಳಿಂದ ಈ ಲೋಕವನ್ನು ನೋಡಬೇಕು; ತನ್ನಿರವನ್ನು ಸುಜ್ಞಾನದ ದೃಷ್ಟಿಯಿಂದ ತಿರುತಿರುಗಿನಿಟ್ಟಿಸಬೇಕು. ಇಂತಹ ಮುಕ್ಕಣ್ಣರಿಗಲ್ಲದೆ ಸಾಮಾನ್ಯರಿಗೆ

ಸುಖಸಿದ್ಧಿಯಾದೀತೇ? ಬಾಲೆಯರೊಡನಿರಬೇಕು; ಆತ್ಮರತಿಯೆಂಬ ಹಾಲುಗಡಲಿನಲ್ಲಿರಬೇಕು ; ಇಂತಹ ಸುಖಸಿದ್ಧಿ ಪುರುಷೋತ್ತಮರಿಗಲ್ಲದೆ ಆಲಸ್ಯ ಪುರುಷರ್ರಿಗೆ ದೊರಕುವುದೆ? ಒಮ್ಮೆ ಪರಸತಿಯರೊಡನೆ ನುಡಿದಾಡಿದರೆ, ಇನ್ನೊಮ್ಮೆ ಸುರಸತಿಯೊಡನೆ ನುಡಿದಾಡಬೇಕು. ಪರಸತಿಯ ವಿಚಾರದಲ್ಲಿ ಮೌನದಿಂದಿರಬೇಕು. ಮುಕ್ತಿ ಸತಿಯ ಧ್ಯಾನ ಸದಾ ಕಾಲದಲ್ಲೂ ಇರಬೇಕು. ಮನುಷ್ಯನಿಗೆ, ಈ ರೀತಿಯಲ್ಲಿ ನಾಲ್ಕು ಮುಖವಿರಬೇಕು.

ಮೈಯ ಸುಖಕ್ಕೆ ಮರುಳಾಗಿ ಆತ್ಮನ ಸಯ್ಯನ್ನರಿಯದೆ ಭೋಗಿಸುವುದು ಮರುಳಯ್ಯಗಳ ಮಾರ್ಗ. ಯೋಗವಿಡಿದ ಭೋಗಿಗಳ ಬಳಿ ಎಲ್ಲ ಗುಣಗಳೂ ತಾವಾಗಿಯೆ ಬರುವುವು. ಪರುಷದ ಮಣಿಯಿರುವವನಿಗೆ ಎಲ್ಲ ಸಿರಿಗಳೂ ದೊರಕುವಂತೆ ಪರಬ್ರಹ್ಮನ ಅನುಭವವಿರುವವನಿಗೆ ಎಲ್ಲ ಸಿರಿಗಳೂ ದೊರಕುವಂತೆ ಪರಬ್ರಹ್ಮನ ಅನುಭವವಿರುವವನಿಗೆ ದೊರಕಲಾರದ ದೊಡ್ಡಿತೆಂಬುದುಂಟೆ? ಕೈವಲ್ಯ ಸುಖವನ್ನೊದಗಿಸುವ ಆತ್ಮಾನುಭವಕ್ಕೆ ಎಣೆಯಿಲ್ಲ. ಭರತೇಶನು ಒಮ್ಮೆ ಮುಗ್ಧೆಗೆ ಮೋಹನ ಕಲೆಗಳನ್ನು ಕಲಿಸಿ ಆಕೆಯನ್ನು ವಿದಗ್ಧೆಯನ್ನಾಗಿ ಮಾಡಿದರೆ, ಇನ್ನೊಮ್ಮೆ ತನ್ನ ನುಡಿ ಜಾಣ್ಮೆಯಿಂದ ವಿದಗ್ಧೆಯನ್ನು ಮೌನಗೊಳಿಸಿ ಮುಗ್ಧೆಯನ್ನಾಗಿ ಮಾಡುವನು. ಅವನು ಸರಸವನ್ನಾಡಲಾರ. ಆದರೆ ಅವನಾಡಿದ ಮಾತುಗಳಲ್ಲಿ ವಿರಸವೆಂಬುದಿರಲಾರದು. ಆದರಿಂದ ಅಂಗನೆಯರನ್ನೆಲ್ಲ ಪರವಶಗೊಳಿಸಿದರೂ ತನ್ನ ಪರಿಣತಿಯಲ್ಲಿ ಎಚ್ಚರವಾಗಿರುವನು. ಅರಸನು ತಾನು ಮುನಿಯಲಾರ; ಅನ್ಯರು ಮುನಿಯಲೂ ಬಿಡಲಾರ. ಆತ್ಮರಸಿಕನ ಅನುಭವವೆಂದರೆ ತನಿವಾಲನ್ನು ಕಾಸಿದಂತೆ. ಅರಸನು ಮಾನ ತಪ್ಪದೆ ನಿತ್ಯವೂ ಗಂಭೀರ ತಪ್ಪದೆ ನಡೆಯುವನು. ಅವನಂತೆ ಮಾನಿನಿಯರೂ ನಡೆಯುವರು. ಭರತೇಶನೇನು ಸಾಮಾನ್ಯನೇ? ಒಲಿಸುವನು, ಒಲಿಯುವನು, ಇಚ್ಛೆಯನ್ನು ಸಲಿಸುವನು. ಅವನು ಒಮ್ಮೆ ದುರ್ಗದಂತಿದ್ದರೆ; ಇನ್ನೊಮ್ಮೆ ಗ್ರಾಮದಂತಿರುವನು. ತನ್ನ ಸಂಸರ್ಗದಿಂದ ಸುಖನೀಡುವನು. ಗೂಳಿನಡೆವ ಹಜ್ಜೆ ತೋರುವುದು ; ಗಾಳಿ ನಡೆವ ಹಜ್ಜೆ ತೋರುವುದೆ? ಜಾಳುಗಳ ಒಳಗು ಕಾಣುವುದಲ್ಲದೆ ತತ್ವಶೀಲನ ಒಳಗನ್ನು ಕಾಣುವವರಾರು? ಈ ನಮ್ಮ ಭರತ ಚಕ್ರೇಶ್ವರನ ನಡತೆಯೆಂದರೆ ಪೂರ್ವದಲ್ಲಿ ಆತ್ಮಭಾವನೆಯನ್ನು ಮಾಡಿದ ಫಲ.—ಹೀಗೆಂದು ಗಾಯಕಿಯರು ಹಾಡಿದರು.

ಹಾಡು ನಿಂತಾಗ, ಗಾಯಕಿಯರ ಜಾಣ್ಮೆಗೆ ಮೆಚ್ಚಿದ ಅರಸು ಅವರಿಗೆಲ್ಲ ಉಡುಗೊರೆ ಕೊಟ್ಟು, ''ಎದೆದಟ್ಟಿ ಹಾಡಿದಿರಿ ; ಲೇಸಾಯ್ತು '' ಎಂದು ಸನ್ಮಾನಿಸಿದನು. ಅವರು ಪಟ್ಟವರ್ಧನನ ಕಾಲಿಗೆರಗಿ ಸರಿದು ಕುಳಿತರು. ಹೀಗೆ ಸರಸಿಜಗಳು ಬಳಸಿರುವ ಅರಸಂಚೆಯಂತೆ ರಾಜೇಂದ್ರನು ಅರಸಿಯರ ಓಲಗದಲ್ಲಿದ್ದನು.

## ೬

# ರಾಜಲಾವಣ್ಯ

ಅಭಿನವ ಕುಸುಮ ಕೋದಂಡನಾದ ಭರತೇಶನು ಮಾನಿನಿಯರೋಲಗದಲ್ಲಿ ಒಪ್ಪಿರುವಾಗ ಗಾಯಕಿಯೊಬ್ಬಳು ಪಂಡಿತೆಗೊಂದು ಮಾತನ್ನು ಕಿವಿಗಚ್ಚಿ ತಿಳಿಸಿದಳು. ಪಂಡಿತೆ ಕೂಡಲೆ ಎದ್ದು ಅರಸನ ಬಳಿಗೆ ಸರಿದಳು.

'ಸರಸಲೀಲೆಯ ಕಾವ್ಯವೊಂದುಂಟು; ರಾಯರದನ್ನು ಅವಧರಿಸಬೇಕು' ಎಂದಾಕೆ ಬಿನ್ನಹ ಮಾಡಿದಳು.

'ಆ ಕಾವ್ಯವನ್ನು ಹೇಳಿದವರು ಯಾರು? ಯಾರ ವರ್ಣನೆ ಅದು? ಆ ಹೊಸ ಕೃತಿಯನ್ನು ಆರಯ್ದು ತಿದ್ದಿದವರಾರು?' ಎಂದು ವಿಚಾರಸಂಮುಖನಾದ ಅರಸನು ಕೇಳಿದನು.

'ಈ ಕೃತಿಯನ್ನು ರಚಿಸಿದವರು ಪರರಲ್ಲ. ಇದು ಪರರ ವರ್ಣನೆಯೂ ಅಲ್ಲ; ಇದನ್ನು ದಕ್ಷತೆಯಿಂದ ತಿದ್ದುವ ಪರರೂ ಇಲ್ಲ. ಅರಸಾ, ನಿನ್ನರಮನೆಯಲ್ಲಾದ ಈ ಕೃತಿ ಚರಿತ್ರೆಯೇ ಆಗಿದೆ. ನೀನೇ ಇದನ್ನು ತಿದ್ದಬೇಕು.'

'ಅರಮನೆಯೊಳಗಾದುದೇ?' ಎಂದರಸನು ನಗುತ್ತ ನುಡಿದನು.

'ಕುಸುಮಾಜಿಯರು ಅರಗಿಳಿಯೊಡನೆ ನಿನ್ನೆ ಸರಸವಾಡಿದುದನ್ನು ನೆರೆಮನೆಯಲ್ಲಿದ್ದ ಸುಮನಾಜಿಯರು ಕೇಳಿ ಈ ಚರಿತೆಯನ್ನು ಮಾಡಿದರು. ನಿನ್ನೆ ಅಮರಾಜಿಯರು ಸುಮನಾಜಿಯರ ಮನೆಗೆ ವಿನೋದಕ್ಕಾಗಿ ಹೋಗಿದ್ದರು. ಅಲ್ಲಿ ಅವರು ಅಮೃತವಾಚಕನೊಡನೆ ಮಾತನಾಡುತ್ತಿರುವುದನ್ನು ಕೇಳಿದರು. 'ಕುಸುಮಾಜಿ ನುಡಿದುದು ಚೆನ್ನಾಯಿತು. ಸುಮನಾಜಿ ನೀನಿದನ್ನು ಕಾವ್ಯವಾಗಿ ಬಿತ್ತರಿಸು; ನಾನದನ್ನು ಬರೆಯುವೆನು' ಎಂದು ಅಮರಾಜಿಯರು ಬರೆದ ಕಾವ್ಯವನ್ನು ರಾಯರೀಗ ಕೇಳಬೇಕು'— ಎಂದು ಪಂಡಿತೆ ವಿವರಿಸಿದಳು.

'ಆಗಲಿ. ನೀನೀಗ ಕುಳಿತು ಕಾವ್ಯವನ್ನೋದಿಸು' ಎಂದು ಅರಸನು ಅಜ್ಞೆಯಿತ್ತನು.

ಕೂಡಲೇ ಕಾವ್ಯವೋದಲು ಕನ್ನೆಯೊಬ್ಬಳು ಬಂದು ಇದಿರಲ್ಲಿ ಕುಳಿತಳು. ಆಗ ಕುಸುಮಾಜಿ ಜಗ್ಗನೆದ್ದು ರಾಯನ ಬಳಿ ಸೇರಿ— 'ನೋಂಪಿಯಂಟೆನಗೆ, ಸುಗತ ನಿವಾಸಕ್ಕೆ ಹೋಗಲು ಅಪ್ಪಣೆಯಾಗಲಿ'— ಎಂದು ಕೈಮುಗಿದಳು.

ಅರಸನು ಆಕೆಗೆ ಕಂಕಣ ನೀಡುವ ನೆವದಿಂದ ಅವಳ ಕೈಹಿಡಿದು ನಿಲ್ಲಿಸಿಕೊಂಡನು. 'ಕಂಡೆಯ, ಪಂಡಿತೆ, ಕುಸುಮಾಜಿ ಕುಸುಮದ ಚೆಂಡಿನಂತೆ ಹಾರಿದುದನ್ನು?' ಎಂದು ರಾಯನು ತಾನೇ ದೂರು ಕೊಟ್ಟನು.

'ಕಂಡೆನು ಸ್ವಾಮಿ. ಕಾಂತೆಯರ ಮನಸ್ಸನ್ನು ತಮ್ಮಂತೆ ಕಾಣಬಲ್ಲ ಸಮರ್ಥರಿದ್ದಾರೆಯೆ? ತನ್ನನಡೆಯಾಟದ ಹೆಜ್ಜೆ ಪರರಿಗೂ ತಿಳಿಯಿತಲ್ಲಾ ಎಂದು ಆಕೆಗೀಗ ಲಜ್ಜೆಯಾಗುತ್ತಿದೆ. ಸಜ್ಜನಸತಿಯರ ಗುಣವಿದು' ಎಂದು ಪಂಡಿತೆ ಕಂಡಿತದ ಮಾತನ್ನೇ ಹೇಳಿದಳು.

'ಹಾಗೋ. ಹೋಗು ಸುಮನಾಜಿ.' ಎಂದರಸನು ಬಿಟ್ಟುಬಿಡಲು ಸುಮನಾಜಿ ಮಹಿಳೆಯರೊಡನೆ ಸೇರಿಕೊಂಡಳು. ಅನಂತರ ಭರತೇಶ್ವರನ ಅಪ್ಪಣೆಯಂತೆ ಆ ಕನ್ನೆ ಕಾವ್ಯವೋದತೊಡಗಿದಳು. ಆ ಕಾವ್ಯದ ಸಾರವಿದು:

ಸಿದ್ಧರ ಅಡಿಗಳನ್ನು ನೆನೆದು, ನವಕೋಟಿ ಮುನಿಗಳಿಗೆರಗಿ, ಶ್ರೀವಾಣಿಗೆ ತಲೆಬಾಗಿ ಚಿದಂಬರ ಪುರುಷನಿಗೆ ನಮಿಸಿ, ಪುರುದೇವರ ಸ್ತುತಿಸಿ, ಅಮರಾಜಿಯಾಜ್ಞೆಯಂತೆ ಒಂದು ಕಾವ್ಯವನ್ನು ಹೇಳುವೆನು. ಶೃಂಗಾರಹಾರನೂ ಸೊಬಗನೂ ನುಡಿಯ ಬೆಡಗನೂ ಆದ ಭರತೇಶನನ್ನು ಕುಸುಮಾಜಿಯ ಗಿಳಿಯೊಂದಿಗೆ ಬಣ್ಣಿಸಿದುದನ್ನು ಸಂಗತಿ ಮಾಡುವೆನು. ಕುಸುಮಾಜಿಯು ಅಮೃತವಾಚಕನೆಂಬ ಹೆಸರಿನ ಗಿಳಿಯ ಕರೆದು ತನ್ನ ಪತಿಯ ಗುಣಗಳನ್ನು ಹೀಗೆ ಬಣ್ಣಿಸತೊಡಗಿದಳು.

'ಅಮೃತವಾಚಕ, ರಮಣಿಯರೆಲ್ಲರ ಮನವನ್ನು ಭ್ರಮೆಗೊಳಿಸುವಂತಹ ರೂಪವನ್ನು ಪಡೆಯಲು ಭರತೇಶ್ವರನು ಯಾವ ನೋಂಪಿಯನ್ನು ಮಾಡಿದನು? ಯಾರಿಗೂ ಅರ್ಥವಾಗದಂತೆ ನಡೆವ ಗಂಭೀರತೆಯು ಅವನಿಗೇತರಿಂದಾಯಿತು? ಅಂಬರದೊಳಗಿರುವ ಸೂರ್ಯನು ಜಲತುಂಬಿದ ಎಲ್ಲರ ಕುಂಭಗಳಲ್ಲೂ ಬಿಂಬಿಸುವಂತೆ ನಮ್ಮರಸನು ಎಲ್ಲರ ಹೃದಯಗಳಲ್ಲೂ ಇಂಬುಗೊಂಡಿರಲು ಕಾರಣವೇನು? ಅವನೊಡನಿರುವ ಕನ್ನೆಯರಲ್ಲಿ, ಮತ್ಸರವಳಿದಿರಲು ಕಾರಣವೇನು? ಭರತೇಶನು ದಿನದಿನವೂ ನವೀನ ಪುರುಷನಾಗಿ ಕಂಗೊಳಿಸುವುದು ಹೇಗೆ?'

ಕುಸುಮಾಜಿಯ ನುಡಿಯನ್ನು ಗಿಳಿಯಾಲಿಸಿ ಕೇಳುತ್ತಿತ್ತು, ಆಕೆ ತನ್ನ ಪತಿಯ ಸರ್ವಾಂಗಶೋಭೆಯನ್ನು ಮಕುಟದಿಂದ ಉಂಗುಟ ಮುಟ್ಟ ಬಣ್ಣಿಸಿದಳು.

'ನಗೆಯಿಂದಲೂ ಚೆಲುವಿಕೆಯಿಂದಲೂ ಕೂಡಿದ ಮೋಹನವಾದ ರಸವನ್ನು ಮೊಗೆ ಮೊಗೆದು ಚೆಲ್ಲುವಂತೆ ಭರತೇಶನ ಮುದ್ದುಮೊಗವೊಪ್ಪುತ್ತಿದೆ. ಪೆರೆನೊಸಲಲ್ಲಿ ಕಸ್ತೂರಿ ತಿಲಕ ಕಂಗೊಳಿಸುತ್ತಿದೆ. ಕಬ್ಬುವಿಲ್ಲನು ನಮ್ಮರಸನ ನಿಡುಹುಬ್ಬಿಗಾಗಿ ಓಲೈಸುವಷ್ಟು ಸೊಗಸಾಗಿ ಬಾಗಿದೆ ಅವನ ಹುಬ್ಬು. ಕಂಪಿಗೆ ಸೋತೆರಗಿದ ಭೃಂಗಗಳ ಕೊಲ್ಲುವ ಸಂಪಗೆಗೆ ನಮ್ಮರಸನ ನಾಸಿಕವು ಸಾಟಿಯಲ್ಲ; ಚೆಲುವಿನಲ್ಲಿ ಅದಕ್ಕೂ ಮಿಗಿಲು. ಚಿತ್ತದಿಚ್ಛೆಯನ್ನು ಕಿವಿಗೊರೆಯುವಾಗ ಅಲ್ಲಿಯೇ ಹತ್ತಿಕೊಂಡ ಬೆಳುನಗೆಯಂತೆ ಅರಸನ ಕಿವಿಗಳಲ್ಲಿ ಮುತ್ತಿನ ಚೌಕಳಿಗಳು ಮಿರುಗುತ್ತಿವೆ. ಜವ್ವನದ ಸೋಂಕಿನ ಮದವುಬ್ಬಿಯೊಸರಿ ಹರಿವಂತೆ ಚೆಲುವಾದ ಮೀಸೆಗಳು ಒಪ್ಪುತ್ತಿವೆ. ಮಕರಂದ ತುಂಬಿದ ತಾವರೆಯಂತೆ ನಮ್ಮರಸನ ಕೆಂಬಾಯತುಟಿಗಳು. ಅವನು ಅಜಾನುಬಾಹು. ಅದರ ಬೆಡಗನ್ನೆಂತು ಬಣ್ಣಿಸಲಿ. ಐದಂಬುಗಳ ಮನ್ಮಥಗಿಮ್ಮಡಿ ಚೆಲುವನಾದ ನಮ್ಮರಸಗೆ ಹತ್ತಂಬುಗಳೋ ಎಂಬಂತೆ ಅವನ ಬೆರಳುಗಳೆಸೆಯುತ್ತಿವೆ. ಹಾರಪದಕದ ರತ್ನಾವಳಿ ನೆರೆದು ಅರಸನ ಪೇರುರವು ಲಾವಣ್ಯ

ಜಲಧಿಯಂತಿದೆ.' ಹೀಗೆ ದೊರೆಯ ಅಂಗಾಂಗಗಳ ಚೆಲವು ಕಾಂತಿಗಳನ್ನು ಬಗೆಬಗೆಯಾಗಿ ಬಣ್ಣಿಸಿದಳು.

'ಭರತೇಶನೆಂದರೆ, ತೊಳೆದು ಒಪ್ಪವಿಟ್ಟ ಅಪರಂಜಿಯ ಚೆಲುವಿನ ಪುತ್ಥಳಿಯು ಜೀವ ಪಡೆದುದೋ ಎಂಬಂತೆ ನಮ್ಮ ಕಣ್ಣಿಗೆ ಕಂಡು; ಎದೆಯಲ್ಲಿ ಬೆಳಗುವನು. ಕಂಪಿನ ಪುರುಷನೋ ಕಾಂತಿಯ ಪುರುಷನೋ ಎಂಬಂತೆ ಇಂಪುದೋರುವನು. ಉಡಿಗೆತೊಡಿಗೆಗಳಿಂದ ನೀತಿರೀತಿಗಳಿಂದ, ನುಡಿನೋಟ ಸರಸಗಳಿಂದ ಅವನ ಆಕಾರ ಮೋಹಿಸುವಂತಿದೆ. ನಮ್ಮ ಅರಸನಂತಹ ಇಂಗಿತ ಕುಶಲರು ಯಾರೂ ಇಲ್ಲ. ಒಲಿದವಳು ಬಣ್ಣಿಸುವ ನುಡಿಯೆಂದು ಭಾವಿಸಬೇಡ—ಗಿಳಿಯೆ. ಆ ದಿವ್ಯದೇಹನ ಗುಣಗಳ ಹೇಳಲು ನಾನೆಷ್ಟರವಳು? ಪ್ರಥಮ ತೀರ್ಥೇಶನ ಹಿರಿಯ ಕುಮಾರನಿವನು. ನಲ್ಲರ ದೇವನು, ನೀರೆಯರ ದೇವನು, ಕಲೆಗಳ ಬಲ್ಲವರ ದೇವನು—ಎಂಬ ಬಿರುದಿಗಿವನು ತಕ್ಕವನು. ಗಂಡರ ಚೆಲುವರಗಂಡ, ಮಲೆವರ ಹಿಂಡಿನಗಂಡ—ಎಂಬ ಕೊಂಡಾಟಕ್ಕೂ ಇವನೊಪ್ಪುವವನು. ಕಬ್ಬುವಿಲ್ಲು ಇಲ್ಲದ ಕಂದರ್ಪನಿವನು. ಒಂದಿನಿತು ಕಲೆಯಿಲ್ಲದ ಪೂರ್ಣ ಚಂದ್ರಮನು.'

'ಬಾ, ನುಡಿದ ಈ ನುಡಿಗಳು ನಿನ್ನಲ್ಲಿಯೇ ಇರಲಿ. ಅನ್ಯರಿಗೆ ಹೇಳಬೇಡ. ನನ್ನವನೆಂದೇ ನಿನಗಿದನ್ನು ಹೇಳಿದೆ. ಇನ್ನೊಬ್ಬರಿಗೆ ಹೇಳುವವಳಲ್ಲ... ಅಹುದು, ಅಲ್ಲವೆನ್ನದೆ ಸುಮ್ಮನಿರುವುದೇಕೆ ಗಿಳಿಯೆ? ನನ್ನ ನುಡಿ ನಿನ್ನ ಮನಸ್ಸಿಗೊಪ್ಪಿತವಾಯಿತೆ?

'ಅಯ್ಯೋ. ನಿನ್ನ ನುಡಿ ನನ್ನ ಚಿತ್ತಕ್ಕೊಪ್ಪದೆ ಉಂಟೇ ಅಕ್ಕ? ಹಕ್ಕಿಗೇಕೆ ಈ ಜಾಣ್ಮೆಯೆಂದು ಸುಮ್ಮನಿದ್ದೆ. ಭೂಮಿಯಲ್ಲಿ ಎಲ್ಲರ ನಡೆನುಡಿಗಳನ್ನೂ ಕಲಿಯುವುದು ಕಷ್ಟ. ಆದ್ದರಿಂದ ಸುಮ್ಮನೇ ಕೇಳುತ್ತಿದ್ದೆ . ಈಗ ನೀನೇ ಒತ್ತಾಯಿಸಿದುದಕ್ಕಾಗಿ ನಾನು ಎದೆಯರಿತವನ್ನು ಹೇಳುವೆನು.'

## ೭

# ಅರಗಿಳಿಯ ಆಳಾಪ

'ಅಕ್ಕ ಕುಸುಮಾಜಿ, ನಿನ್ನ ಮುಂದೆ ಇಂತೆಂದು ಹೇಳುವ ದಕ್ಷ ನಾನಲ್ಲ. ಆದರೂ ನೀನು ಹೇಳಿದ ಮೇಲೆ, ನಿನ್ನಾಜ್ಞೆಯನ್ನು ಮನ್ನಿಸಿ, ತಿಳಿದಷ್ಟು ಹೇಳುವೆನು' ಎಂದು ಅರಗಿಳಿಯು ಕುಸುಮಾಜಿಗೆ ಉತ್ತರವೀಯತೊಡಗಿತು.

'ಭರತೇಶ ಚಕ್ರಿಯ ಕುರಿತು ನೀನು ಹೇಳಿದ ಮಾತುಗಳೆಲ್ಲ ಸಹಜವಾದವುಗಳೇ. ಮುಕ್ತಿಗೊಡೆಯನಾದ ಪುರದೇವನ ಹಿರಿಯ ಕುಮಾರನಿಗೆ ದಶದಿಕ್ಕುಗಳಲ್ಲೂ ಸರಿ ಸಮಾನರಾರು?'

'ಭೂವಳಯಕ್ಕೇ ಮಾತೆಯಲ್ಲವೆ ಯಶಸ್ವತಿದೇವಿ. ಆದ್ದರಿಂದಲೇ ಈ ಮಗನನ್ನು ಪಡೆದಳು. ನೀವೆಲ್ಲ ಯಾವ ನೋಂಪಿಯ ಫಲದಿಂದ ಅವನ ದೇವಿಯಾರಾದಿರೋ ನಾನು ಹೇಳಲರಿಯೆ. ಅವನಿಗೊಡೆಯನಾದ ನಿಮ್ಮರಸನಿಗೆ ಸರಿಸಮಾನರೇ ಇಲ್ಲ, ಅವರ ಅರಸಿಯರಾದ ನಿಮಗೂ ಸರಿಸಮಾನರಿಲ್ಲ. ಎಂದ ಮೇಲೆ ನಿಮ್ಮೊಡನೆ ಆಡಿದ ನಮಗೂ ಸರಿಸಮಾನರಾರು?' ಗಿಳಿಯ ಜಾಣ್ಮೆಯ ನುಡಿಗಳನ್ನು ಕುಸುಮಾಜಿ ಕುತೂಹಲದಿಂದ ಕೇಳುತ್ತಿದ್ದಳು.

'ಉತ್ತಮ ಪುರುಷನನ್ನು ಉತ್ತಮ ಸತಿಯರು ಕೂಡಿದರೆ ಉತ್ತಮವಾಗುವುದು; ಅದು ಉತ್ತಮ ಕನಕದಲ್ಲಿ ಉತ್ತಮ ಮಣಿಗಳನ್ನು ಕೆತ್ತಿಸಿದಂತೆ ! ಎಳೆಮಾವನಪ್ಪಿದ ದುಂಡುಮಲ್ಲಿಗೆ ಗಳಂತೆ, ಅಶೋಕೆಯನ್ನಪ್ಪಿದ ಜಾಜಿಲತೆಗಳಂತೆ, ಮಲಯಜ ವೃಕ್ಷವನ್ನು ಏಳೆಲೆವಾಳೆಗಳು ಅಪ್ಪಿದಂತೆ, ನಿಮ್ಮರಸನಾದ ಚಕ್ರೇಶನನ್ನು ನೀವು ಕೂಡಿದ ರೀತಿಯಾಗಿದೆ. ಪತಿ ಹೊಲ್ಲ ಸತಿ ಲೇಸು; ಸತಿ ಹೊಲ್ಲ ಪತಿ ಲೇಸು ; ಎಂಬ ಅತಿ ವಿಕೃತಿಗಳು ಅನ್ಯ ದಂಪತಿಗಳಲ್ಲುಂಟು. ಪತಿಲೇಸು ಸತಿಯರು ಲೇಸು ಎಂಬ ಖ್ಯಾತಿವೆತ್ತವರು ನೀವಲ್ಲದೆ ಮತ್ತಾರಿಲ್ಲ. ಕಲೆಯನ್ನರಿವ ಪುರುಷನನ್ನು ಪಡೆಯುವುದು ಪೂರ್ವದಲ್ಲಿ ನಾರಿ ಮಾಡಿದ ಪುಣ್ಯಫಲ. ಕಲೆಗನುಕೂಲೆ ಯಾದ ಸ್ತ್ರೀಯನ್ನು ಪಡೆಯುವುದು ಪುರುಷನ ಪುಣ್ಯಫಲ. ಜಾಣೆ ಜಾಣರು ಕೂಡಿದರೆಂದರೆ ಅದು ತಂತಿಗೂಡಿದ ವೀಣೆಯ ನುಡಿಸಿದಂತಿರುವುದು. ಜಾಣೆಯೂ ಹೆಡ್ಡನೂ ಕೂಡಿದರೆ ವೀಣೆಗೆ ನೇಣನ್ನು ಬಿಗಿದು ನುಡಿದಂತಿರುವುದು.'

'ಸಮರೂಪ,ಸಮಪ್ರಾಯ, ಸಮಗುಣಗಳು ನಿಮಗೂ ನಿಮ್ಮ ರಮಣನಿಗೂ ಸಮವೆನಿಸಿವೆ. ಆದರಿಂದಲೆ ನಿಮಗೆ ಅನ್ಯೋನ್ಯವಾದ ಸಂಭ್ರಮವೂ ಮೋಹವೂ ದೊರೆಕೊಂಡಿದೆ. ರೂಪಿನಿಂದ ಸೋಲಿಸಿ ಮತ್ತೆ ಸರಸಕಲಾಪದಿಂದ ಎಡೆಗೊಳಿಸಿ, ಅರಸನು ನಿಮ್ಮ ಮನಸ್ಸನ್ನು ಸರ್ವಾಪಹಾರಮಾಡಿದನು. ನಿಜವಾಗಿಯೂ ನೀನು ನಿನ್ನರಸನಿಗೆ

ಸೋತವಳೆ; ಇಲ್ಲದಿದ್ದರೆ ಅರಸನನ್ನು ಈ ರೀತಿ ಬಣ್ಣಿಸುತಿರಲಿಲ್ಲ, ಆ ಬಣ್ಣನೆಯ ಮುದ್ದುಸೊಲ್ಲುಗಳೂ ಬರುತ್ತಿರಲಿಲ್ಲ. ಮನಮೆಚ್ಚಿದೆಡೆಯಲ್ಲಿ ತನುಮೆಚ್ಚುವುದು; ನುಡಿಯೂ ಅನುಕೂಲವಾಗುವುದು. ನಿನ್ನ ಮನಸ್ಸಿನ ಇಚ್ಛೆಯು ಅರಸನನ್ನು ಹೊಗಳಿದೆ. ನೀನು ನಿಜವಾಗಿಯೂ ಸಜ್ಜನಸತಿಯರ ತಲೆವಣಿಯಾಗಿರುವೆ. ಆನಂದ ರಸವನ್ನು ತನ್ನೆದೆಗಿತ್ತ ಪುರುಷನನ್ನು ಮಾನಿನಿಯು ಬಣ್ಣಿಸದಿರುವಳೇ?'

ಈ ರೀತಿಯಲ್ಲಿ ಗಿಳಿಯು ಚಕ್ರೇಶನ ಹೊಗಳುತ್ತ ಸಜ್ಜನರ ಚರಿತಕ್ಕೆ ತನ್ನೆದೆ ಸೋಲುವುದೆಂಬುದನ್ನೂ ಕುಸುಮಾಜಿಗೆ ತಿಳಿಸಿತು. ಕುಸುಮಾಜಿ ಗಿಳಿಯ ವಾಗ್ಜಾಲದ ಮರ್ಮಕಲೆಗಳನ್ನೆಲ್ಲ ಕೇಳುತ್ತಿದ್ದಳು. ಈ ರೀತಿ ಮಾತನಾಡುವ ಇದು ನಿಜವಾಗಿಯೂ ಗಿಳಿಯಲ್ಲವೆಂದಾಕೆಯು ಯೋಚಿಸತೊಡಗಿದಳು.

'ಕಲಿಸಿದಷ್ಟನ್ನೆ ನುಡಿಯುವುದು ಪಕ್ಷಿಯ ರೀತಿ. ಈ ಗಿಳಿಯು ಹೊಸ ಕಲೆಯನ್ನೇ ನನಗೆ ಕಲಿಸುತ್ತಿದೆ. ಆದ್ದರಿಂದಿದು ಗಿಳಿಯಲ್ಲ, ವ್ಯಂತರನಾಗಲಿ, ಸುರನಾಗಲಿ ಇದರ ದೇಹಾಂತರಾಳದಲ್ಲಿದ್ದು ಈ ರೀತಿ ನುಡಿಯುತ್ತಿರಬೇಕು. ಆದರೆ ಇದರ ನುಡಿಯನ್ನಾಲಿಸಿದಾಗ ಅದು ಪುರುಷರ ನುಡಿಯಂತಿರಲಿಲ್ಲ, ಯುವತಿಯ ನುಡಿಯಂತಿತ್ತು, ಆದ್ದರಿಂದ ಈಕೆ ಯಾರೆಂದು ತಿಳಿಯಬೇಕು' ಎಂದು ಕೋವಿದೆಯಾದ ಕುಸುಮಾಜಿಯು ಸವಿನುಡಿಯಿಂದಲೇ ಆ ಗಿಳಿಯನ್ನು ಮಾತನಾಡಿಸಿದಳು.

'ಪಕ್ಷಿಯೇ, ನಿನ್ನ ನುಡಿಯು ಸತ್ಯ; ಆದರೆ ನಿನ್ನ ವೇಷ ಮಾತ್ರ ಠಕ್ಕೆಂದು ನನಗೆ ತೋರುತ್ತದೆ. ಆದ್ದರಿಂದ ನೀನೇ ಚಿಕ್ಕವೇಷವನ್ನು ಬಿಟ್ಟುಕೊಟ್ಟು ನಿಜವೇಷದಿಂದ ನನ್ನೊಡನೆ ಮಾತನಾಡು.'

'ಚಿಕ್ಕ ವೇಷವು ಚಿಕ್ಕಂದಿನಲ್ಲೇ ಹೋಗಿರುವುದಕ್ಕ, ಇದು ದೊಡ್ಡ ವೇಷ. ಠಕ್ಕಿನ ವೇಷವಲ್ಲ, ಇದು ಸತ್ಯ ವೇಷವೇ.' ಎಂದುಗಿಳಿಯು ಉಕ್ಕಿ ನಗುತ್ತನುಡಿಯಿತು.

ಆದರೆ ಚದುರರ ದೇವನರ್ಧಾಂಗಿ ಅದನ್ನೊಪ್ಪಲಿಲ್ಲ. 'ಆ ಚದುರರ ಕೂಡೆ ಅತಿ ಚಾತುರ್ಯ ಸಲ್ಲದು. ಸುದತಿಯಲ್ಲವೆ ನೀನು. ನಿನ್ನ ಸದಮಲ ಆಕಾರವನ್ನು ತೋರೆ' ಎಂದು ಮತ್ತೆ ನುಡಿದಳು.

ಆಗಲೇ ಆಶ್ಚರ್ಯವಾಯಿತು. ಗಿಳಿಯಕೆಲದಲ್ಲಿ ಛೋಂಕನೆ, ಅನುಪಮ ರತ್ನ ಸಂಕುಲಭೂಷಣವು ಎಸೆಯುವಂತೆ ಕುಂಕುಮ ವರ್ಣ ಕೋರಿಜವ್ವನದ ಪಂಕಜಾನನೆ ಮೈದೋರಿದಳು. ಆಕೆ ಮರೆಸಿಕೊಂಡಿದ್ದ ತನ್ನಾಕಾರವನ್ನು ಕುಸುಮಾಜಿಯರಿತ ಜಾಣ್ಮೆಗೆ ಮೆಚ್ಚಿ, ಶೀಲವತಿಯಾದ ಆಕೆಯನ್ನೇ ದಿಟ್ಟಿಸಿ ನೋಡುತ್ತ, ಕಾಂತಿಗರೆವುತ್ತ, ನಸುನಗುತ್ತ, ನಿಂತಳು.

'ಅಬಲೆ. ನೀನಾರು? ಇಲ್ಲಿಗೇತಕ್ಕೆ ಬಂದೆ?'

'ಸೊಬಗೆ, ನಾನು ವ್ಯಂತರ ಕನ್ನೆ. ಗಿರಿವನ ಶಿಬಿರದಲ್ಲಿರುವೆನು. ಲೀಲಾರ್ಥವಾಗಿ ಗಗನದಲ್ಲಿ ಹೋಗುತ್ತಿದ್ದೆನು. ನೀನೀ ಗಿಳಿಯೊಡನೆ ಮಾತನಾಡುತ್ತಿರಲು, ಅದನ್ನು ಕೇಳಿ ಪ್ರೀತಿಯಿಂದಿಲ್ಲಿಗೆ ಬಂದೆನು; ಕನ್ನಡ ಹಕ್ಕಿಯಂಗವ ಹೊಕ್ಕು ನಿನ್ನೊಡನೆ ಮಾತನಾಡುತ್ತಿದ್ದೆನು. ಜಾಣನರ್ಧಾಂಗಿಯಾದ ನೀನದನ್ನು ತಿಳಿದುದು ಚೆನ್ನಾಯಿತು.

ರೂಪು, ಯೌವನ, ಜಾಣ್ಮೆ, ಸಿರಿಸಂಪತ್ತುಗಳನ್ನೆಲ್ಲ ಪಡೆಯಬಹುದು. ಆದರೆ ಈ ಪತಿಭಕ್ತಿ ಸಂಪದವನ್ನು ಆ ಪುರುಷೋತ್ತಮನ ಅರ್ಧಾಂಗಿಯರಾದ ನೀವೇ ಪಡೆದು ಬಂದವರು. ಅನ್ಯರಿಗೀ ಭಾಗ್ಯವಿಲ್ಲ. ಜಿನನ ಕುಮಾರನು ನಿಮ್ಮರಸನು. ನೀವು ಆತನ ವನಿತೆಯರು. ಆದ್ದರಿಂದ ನಿಮ್ಮ ಅನುಪಮ ಚರಿತವೆಂಬುದು ನಿಮಗಲ್ಲದೆ ಅನ್ಯರಿಗೆ ಬರುವುದಲ್ಲ. ಪರನಾರಿ ಸೋದರನಾದ ಆ ರಾಯನು ನಮಗಣ್ಣನು.

'ಅಕ್ಕ, ಇಷ್ಟು ಹೊತ್ತು ಗಿಳಿಯ ಮೈಹೊಕ್ಕು ಹೇಳಿದ ಮಾತು ಆ ಗಿಳಿಗಿರಲಿ. ಈಗ ನೀನೆನ್ನ ಅತ್ತಿಗೆಯೆಂದು ನಾನಿನ್ನ ನಾದಿನಿಯೆಂದು ನಾಲ್ಕು ಮಾತು ಹೇಳುವೆ. ಈ ಮಾತು ನಮಗಿಬ್ಬರಿಗೂ ಇರಲಿ' ಎಂದು ವ್ಯಂತರಕನ್ನೆ ಕುಸುಮಾಜಿಯೊಡನೆ ಮಾತು ಮುಂದುವರಿಸಿದಳು.

'ಅತ್ತಿಗೆ. ಅಣ್ಣಾಜಿಯಲ್ಲಿ ನೀನು ಚಿತ್ತವಿತ್ತುದನ್ನು ಕಂಡು ನನ್ನ ಚಿತ್ತವೂ ಮೆಚ್ಚಿತು. ಮೆಚ್ಚಿದೆನೆಂದು ನಾನು ನಿನಗೇನೀಯಲಿ? ನವನಿಧಿಗೊಡೆಯನಾದ ನನ್ನಣ್ಣ ನಿನಗೆ ಅಭಿನವ ಭೂಷಣಗಳನ್ನೇ ಕೊಟ್ಟಿದ್ದಾನೆ. ಸುವಿನಯದಿಂದ ಒಂದನ್ನು ನಾನೀವೆನೆಂದರೂ ನೀನೊಪ್ಪಲಾರೆ ! ನಾನದನ್ನು ಬಲ್ಲೆ. ಉಡಿಗೆತೊಡಿಗೆಗಳನ್ನು ಕೊಡುವ ಗೊಡವೆಗೂ ನಾ ಹೋಗುವುದಿಲ್ಲ. ನಿನಗೇನಾದರೂ ಚಿಂತೆಯುಂಟಾದಾಗ ನನ್ನನ್ನು ನೆನೆಯುವುದು' ಎಂದು ನುಡಿದ ವ್ಯಂತರ ಕನ್ನೆ ಕಾಣದಾದಳು.

ಕುಸುಮಾಜಿ ಬೆಕ್ಕಸಗೊಂಡಳು. ಕೆಲಬಲ ದಿಕ್ಕನ್ನು ನೋಡಿ ಒಂದಿಷ್ಟು ನಕ್ಕಳು. ಜಿನಸಿದ್ಧಯೆಂದು ನುಡಿವಷ್ಟರೊಳಗೆ ಹೆಮ್ಮಕ್ಕಳು ಆಟಕ್ಕಾಗಿ ಬಂದರು. ಅಲ್ಲಿಗೆ ಬಂದ ಅಕ್ಕತಂಗಿಯರಿಗೆ ವಿನಯವನ್ನು ಮಾಡಿ, ಹಿಂದಾದ ಚೋದ್ಯ ವಾರ್ತೆಯನ್ನೊಂದನ್ನೂ ನುಡಿಯದೆ ಕುಸುಮಾಜಿ ಮಾಚಿಕೊಂಡು ಎಂದಿನಂತೆ ಇದ್ದಳು.

ಅಮರಾಜಿ ಬರೆದಳು; ಕುಸುಮಾಜಿ ನುಡಿದಳು. ಸುಮನಾಜಿ ಕೃತಿಗೈದಳು. ಗಮಕದ ನುಡಿಯಷ್ಟೆ ! ಚಕ್ರೇಶ್ವರ ಪುಣ್ಯ ಸಂಭ್ರಮವಿಂತು ಮಾಡಿತು. ಈ ಕೃತಿಯಲ್ಲಿ ತಪ್ಪಿದ್ದರೆ ಅದನ್ನು ತಿದ್ದುವುದು. ಒಪ್ಪವಾದರೆ ಕೇಳುವುದು. ನಮಗೆ ತಪ್ಪೂ ಇಲ್ಲ ; ತಾಗೂ ಇಲ್ಲ. ಜಿನಶರಣು ! ಸರ್ವಕಾಲವೂ ಈ ಕಾವ್ಯವೊಪ್ಪುತ್ತಿರಲಿ' — ಎಂದು ಆ ಗಾಯಕಿಯು ನಾಂದಿ ಯನ್ನೋದಿ ಮುಗಿಸಿ ನಲವಿಂದ ಹೊತ್ತಗೆಯನ್ನು ಕಟ್ಟಿದಳು. ಮಂದಸ್ಮಿತವಾಗಿ ರಾಜೇಂದ್ರನು ಆನಂದಿಸುತ್ತಿದ್ದನು.

'ಅವಳು ಅರಗಿಳಿಯೊಡನೆ ನುಡಿದಾಡುತ್ತಿರುವುದನ್ನು ಕೇಳಿ, ಅದರ ಹವಣರಿತು ಕವಿತೆ ಮಾಡಿದ ಇವರು ಅತಿನಿಪುಣೆಯರು.' ಇವರ ವಿದ್ಯಾತಂತ್ರವು ಲೇಸಾದುದು. ಗಿಳಿಯೊಡನೆ ಮಾತನಾಡಲು ಆ ಗಿಳಿಯ ಮೈಯೊಳಗಿದ್ದ ವ್ಯಂತರಾಂಗನೆಯನ್ನು ಸ್ವರ ಮಾತ್ರದಿಂದ ತಿಳಿದುದು ಆಶ್ಚರ್ಯವು.' ಎಂದು ಭರತೇಶ್ವರನು ಕವಿತೆ ಮಾಡಿದವರನ್ನೂ ಕುಸುಮಾಜಿಯನ್ನೂ ಮನದಲ್ಲೇ ಮೆಚ್ಚಿದನಲ್ಲದೆ ಮಾತಿನಲ್ಲಿ ನುಡಿಯಲಿಲ್ಲ. ಸುರಸತಿಯು ತನ್ನನ್ನು ಕೊಂಡಾಡಲು ಅದನ್ನು ಅನ್ಯರಿಗೆ ಹೇಳದೆ ಮರೆಮಾಚಿಸಿರುವ ಕುಸುಮಾಜಿಯ ಗಂಭೀರ ಗುಣಕ್ಕೂ ಭೂವರನು ಮನಸ್ಸಿನಲ್ಲೇ ಮೆಚ್ಚಿದನು.

'ಸರಸಿಜಾಕ್ಷಿಯರ ಲೀಲಾರ್ಥವು ಲೇಸಾಗಿದೆ'. ಎಂದು ಭರತೇಶನು ಎಣಿಸಿದನು.

## ೮

# ಮನೆಯಲ್ಲಿ ಮನ್ನಣೆ

ಭರತೇಶನು ಆ ಕಾವ್ಯ ರಚನೆಯನ್ನು ತನ್ನೆದೆಯಲ್ಲೇ ಭಾವಿಸಿ ನೋಡಿ ಮೆಚ್ಚಿದನು. 'ಈ ಕೃತಿ ಚೆನ್ನಾದುದು. ಇದಕ್ಕೊಂದು ವಿಚಾರವಿರುವುದು' ಎಂದು ಮತ್ತೆನುಡಿದನು.

'ಇದು ಸುಮನಾಜಿಯ ಕವಿತೆಯಲ್ಲ. ಅಮರಾಜಿ ಪಡೆದು ಹೇಳಿದ ಕೃತಿ' ಎಂದು ರಾಯನಾಡಿದ ಮಾತುಗಳನ್ನು ಕೇಳಿ ಅವರಿಬ್ಬರೂ ಒಬ್ಬೊಬ್ಬರ ಮುಖ ನೋಡಿ ಒಳಗೊಳಗೆ ನಕ್ಕರು.

'ಅಕ್ಕ ನೀನೆನ್ನ ಮೇಲೆ ಈ ಗುಟ್ಟನ್ನು ಹೊರಿಸದಿರೆಂದು ಆಗಲೇ ಹೇಳಿದೆ. ಈಗಾಯಿತಲ್ಲ!' ಎಂದು ಸುಮನಾಜಿಯೇ ನಗೆಯನ್ನು ನುಂಗಿ ಮಾತನಾಡಿದಳು. ಆದರೆ ಅದು ಹೆಚ್ಚು ಹೊತ್ತು ಸಾಗಲಿಲ್ಲ. ಒಡನೆ ನಗುತ್ತಲೇ—'ಅಹುದು ಅಹುದು'— ಎಂದಳು. ರಾಯನೆದುರು ಸತ್ಯವನ್ನೇ ಬಿಡಿಸಿದಳು.

'ತಂಗೀ ನೀನಿದನ್ನು ಕೃತಿ ಮಾಡೆಂದಳು. ಆ ಕಾವ್ಯದ ಅಂಗ ನನಗೆ ಬಿರಿಸೆಂದು ನಾ ಹೇಳಿದೆ. ಸಂಗತಿ ಮಾಡೆಂದಳು ಅಮರಾಜಿ. ನಾನದನ್ನು ಅಂಗೀಕರಿಸಿ ಬರೆದೆನು. ನಾನು ಹೇಳಿದುದೆಂಬುದು ಏನು? ನಿನ್ನ ಅಭಿದಾನವೆ ಅಲ್ಲಿದೆ ಎಂದು ಹೇಳಿದೆ. ಅವಳದನ್ನು ಕೇಳದೆ ಮರೆಸಿ ಪೇಳಿದಳು. ನಾನೂ ಹೇಳು ಹೇಳು ಎಂದೆ. ಎಲ್ಲರ ಚಿತ್ತದ ಓರೆಕೋರೆಯ ಬಲ್ಲ ಅರಸನನ್ನು ಯಾರು ಮರೆಮಾಚಬಹುದು—ಎಂಬ ಧೈರ್ಯದಿಂದ ಬರೆದೆ. ಅಕ್ಕನಿಗೆ ಹೇಳಲೂ ಇಲ್ಲ; ಅವಳೊಡನೆ ಹೋರಲೂ ಇಲ್ಲ. ಇದೇ ಲೇಸು ಲೇಸು ಎಂದುಕೊಂಡೆ. ಜಾಣರನ್ನು ಯಾರು ಚಾಳಿಸಬಹುದು? ಅದಿಲ್ಲಿ ಕಣ್ಣಾರೆ ಕಾಣಿಸಿತು. ನನಗೀಗ ಪ್ರತಿಜ್ಞೆ ಮಾಡಿದ ಹೊರೆ ಜಾರಿದಂತಾಯಿತು' ಎಂದೇ ಆ ಜಾಣೆ ಅಮರಾಜಿ ಅರ್ತಿಯಿಂದ ವಿವರಿಸಿದಳು.

'ಮೊದಲರ್ಧವು ಅವಳ ಕವಿತ್ವ; ಆ ಕಡೆಯರ್ಧವು ನಿನ್ನ ಸುಕವಿತ್ವ' ಮೌನದಿಂದಾಲಿಸುತ್ತಿದ್ದ ರಾಯನು ಆಗೊಂದು ಮಾತನ್ನಾಡಿದನು. ರಾಯನನ್ನು ನೋಡುತ್ತ ನಗುತ್ತ ಅಮರಾಜಿಯು ಅದು ಅಹುದೆಂದು ಸಂತೋಷದಿಂದ ಒಪ್ಪಿಕೊಂಡಳು.

'ತಾಯಿ, ನೀನುಸುರೆಂದರೆ ಒಪ್ಪದಾದಳು. ಮತ್ತೆನಾನೇ ಉಪಾಯದಿಂದ ಒಂದಿಷ್ಟು ಒಯ್ಯಾರದಿಂದ ಹೇಳೆಂದಾಗ ಹೇಳಿದಳು. ಅದರ ಆದಿ ಮಂಗಲವು ನನ್ನದಹುದು. ಅಂತ್ಯದಲ್ಲೂ ಮಧ್ಯದಲ್ಲೂ ಆದ ಮಂಗಲಗಳು ಅಕೆಯವು. ದೇವರಿದನ್ನು ಭೇದಿಸಿ ತಿಳಿದುದು ವಿಚಿತ್ರವಲ್ಲ.ಆದೀಶನು ನಿನಗಿದನ್ನು ಅಂತರ್ಯದಲ್ಲೇ ತಿಳಿಸಿದನೇನೋ?'

'ನಮ್ಮಂತರಂಗದ ಸುಕ್ಕು ಸುಳುಹುಗಳನ್ನು ಅಂತರಿಸದೆ ಹೇಳುವೆನು' ಅವನನ್ನೆಂತು ಜಯಿಸುವುದು?' ಎಂದು ಕಾಂತೆಯರೆಲ್ಲ ಒಳಗೊಳಗೆ ನಲಿದರು.

'ಲೇಸಾದುದು ಈಕೃತಿ. ಸತಿಯರೆ ನಿಮ್ಮ ಕವಿತ್ವದ ಅಭ್ಯಾಸವೂ ಒಳ್ಳಿತು. ಈ ಸುಕಥೆಗೆ ಮೆಚ್ಚಿದೆನು. ಬೇಡಿ, ನೀವೇನು ಹೇಳುವಿರೋ ಅದನ್ನೀ ಸಮಯದಲ್ಲಿ ಕೊಡಬೇಕು.'

'ಮೆಚ್ಚಿಸಿ, ನಾವೊಂದು ವಸ್ತುವನ್ನು ಪಡೆಯುವೆವು ಎಂದು ಉಚ್ಚರಿಸಿದ ಕೃತಿಯಲ್ಲ, ಇಂದು ನಮ್ಮ ಮನದಲ್ಲಿ ಹೆಚ್ಚಾದ ಬಯಕೆಯೂ ಇಲ್ಲ. ಆ ಮೆಚ್ಚು ಭಂಡಾರದೊಳಗೇ ಇರಲಿ.'

'ಆಗಲಿ; ನೀವು ಆ ಮೆಚ್ಚನ್ನು ಮುಂದೆ ಬೇಡಿದಾಗ ಕೊಡುವೆನು. ಈಗ ನಾನು ಧರಿಸಿದ ಆಭರಣಗಳನ್ನು ಕೊಡುವೆನು.'

'ನಮಗಿಹ ಭೂಷಣಗಳೇನೂ ಕಡಿಮೆಯಾಗಿಲ್ಲ. ವಿಶೇಷವಾಗಿದ್ದ ಅವುಗಳ ಘೋಷಣೆಯು ಈಗ ಹಾಗೆಯೇ ಇರಲಿ.'

'ಮೊದಲಿದ್ದ ಭೂಷಣಗಳೆಲ್ಲ ಹಾಗೇ ಇರಲಿ ; ಅದಕ್ಕೇನು? ಈಗ ನನ್ನ ಭೂಷಣಗಳನ್ನೇ ನೀಡುವೆನು; ಬನ್ನಿ' ಎಂದು ಅರಸನು ಅವರನ್ನು ಕರೆಯುತ್ತ ತನ್ನ ಭೂಷಣಗಳಿಗೆ ಕೈಯಿಕ್ಕಿದನು.

ಬೇಡವೆಂದರೂ ರಾಯನು ಕೊಡಲುದ್ಯುಕ್ತನಾದನು. ಇದಕ್ಕೇನು ಮಾಡುವುದೆಂದು ಇಬ್ಬರೆದ್ದು ಉಳಿದವರಿಗೆಲ್ಲ ಸೂಚಿಸಿ, ತಾವೆಲ್ಲರೂ ಭರತೇಶನಿಗೆ ಸಾಷ್ಟಾಂಗವೆರಗಿದರು. ಬಲುಗಾಳಿ ಬೀಸಿದಾಗ ಮರದಿಂದ ನೆಲಕ್ಕೆ ಬಿದ್ದ ಲತೆಗಳೋ ಎಂಬಂತೆ ಲಲಿತಾಂಗವು ನಿಮಿರ್ದು ಸಾಷ್ಟಾಂಗವೆರಗಿದ ಕೋಮಲೆಯರ ಭಾವವು ರಂಜಿಸಿತು.

ಇದನ್ನು ಕಂಡ ಅರಸನು—'ಇವರೆಲ್ಲರೇತಕ್ಕೆ ಸಾಲುಗೊಂಡೆರಗಿದರು?' ಎಂದು ನಗುತ್ತ ಪಂಡಿತೆಯ ಮುಖವನ್ನು ನೋಡಿದನು. ಆ ನೋಟದಿಂದಲೇ ರಾಯನ ಒಳಗೇನೆಂಬುದನ್ನು ಅರಿತ ಪಂಡಿತೆಯ ಎಡೆಗೊಂಡು ಮಾತನಾಡಿದಳು.

'ದೊರೆಯೇ, ನೀನು ಆಭರಣಗಳನ್ನು ನೀಡುವೆನೆನ್ನಲು ಅದು ಸತಿಯರಿಗೆ ರುಚಿಸಲಿಲ್ಲ. ಪತಿಯ ಅಲಂಕಾರವನ್ನು ಹಾಳುಮಾಡಿ ನೋಡಲಾರರು; ಪತಿಭಕ್ತೆಯರ ಚರಿತವಿದು. ನಿನ್ನ ಶೃಂಗಾರವು ತಮ್ಮ ಕಣ್ಣಿನ ಪ್ರೀತಿ; ನೀನು ಧರಿಸಿದ ರತ್ನದೊಡಿಗೆಗಳನ್ನು ತೆಗೆಸಿ ನಿನಗೊಂದು ಭಿನ್ನವನ್ನುಂಟುಮಾಡಿ ಅವರೆಂತು ನೋಡುವರು. ಅದಕ್ಕಾಗಿ ಅವರೆಲ್ಲ ನಿನ್ನ ಮುಂದೆರೆಗಿದರು. ಅವರು ಒಲ್ಲೆವೆಂದರು; ಬೇಡವೆಂದರು. ನೀನು ಬಲವಂತದಿಂದ ಕರೆದಾಗ ವಲ್ಲಭವನಿಗೆ ಇದಿರುತ್ತರ ಕೊಡಲಾಗದೆಂದು ಎಲ್ಲರೂ ಎರಗಿದರು.'

'ಇಬ್ಬರಿಗೆ ಕೊಡುವೆನೆಂದು ನಾನು ಕರೆದಾಗ ಇವರೆಲ್ಲರೂ ಈ ರೀತಿಯಲ್ಲಿ ಎರಗಿದುದೇಕೆ?'

'ಅರಸಾ, ಅವರು ಒಬ್ಬೊಬ್ಬರೂ ಬೇರೆ ಬೇರೆಯಾಗಿಲ್ಲ. ತಮ್ಮಲ್ಲಿನ ಸ್ನೇಹದಿಂದ ಎಲ್ಲರೂ ಒಂದಾಗಿದ್ದಾರೆ. ನಗೆಕಾರನಾಗಿ, ಬಗೆಕಾರನಾಗಿ, ಮರೆಕಾರನಾಗಿ, ಚೌಳಿಕಾರನಾಗಿ ನೀನಿದನ್ನು ಅರಿಯೆಯಾ? ತಿಳಿಯದವನಂತೆ ನನ್ನನ್ನು ಕೇಳುವೆಯಲ್ಲ' ಎಂದವಳು ರಾಯನ ಒಳಗನ್ನು ಒತ್ತಿ ಮಾತನಾಡಿದಳು. 'ನಮ್ಮ ದೇವಿಯರು

ಸಾಷ್ಟಾಂಗವೆರಗಿ ಬಹಳ ಹೊತ್ತಾಯಿತು. ಇನ್ನಾದರೂ ಏಳಿರೆಂಬ ವಾಕುದೋರು' ಎಂದು ಪಂಡಿತೆಯು ಝುಂಕಿಸಿದಳು. ಆಗ ದೊರೆಯು ನಸುನಕ್ಕನು.

'ಏಳಿರಿ. ನೀವೀಗ ಬಹಳ ಬಳಲಿದಿರಿ' ಎಂದು ರಾಯ ನುಡಿದೊಡನೆ ಎಲ್ಲರೂ ಎದ್ದುನಿಂತರು. ಆಗ ಅಲ್ಲಿನ ಅಧಿಕವಾದ ಲೀಲೆಯನ್ನು ಹೇಳುವುದೇ ಕಷ್ಟ.

'ನಾನು ಧರಿಸಿದ ತೊಡಿಗೆ ಬೇಡವಾದರೆ ಹೋಗಲಿ; ನಿಮಗೆ ನವೀನ ಆಭರಣಗಳನ್ನೇ ಕೊಡುವೆನು' ಎಂದರಸು ಮುಂದಾದರೆ—

'ನಾವಿಂದು ಏನೊಂದನ್ನೂ ಒಲ್ಲೆವು. ನಮಗಿಂದು ವ್ರತವಿದೆ' ಎಂದವರು ಸಂಧಾನಿಸಿ ಹಿಂದಕ್ಕೆ ಸರಿದರು.

ನನಗಿಂದು ಇವರ ಮೇಲೆ ಮೂಡಿದ ಪ್ರೀತಿಗಾಗಿ ಏನಾದರೊಂದನ್ನು ಕೊಡಲೇಬೇಕೆಂದು ಅರಸನು ಯೋಚಿಸಿದ. ಬಗೆಹರಿದು ಭಾವನೆ ಮೂಡಿತು. ಮುಖ ಕನ್ನಡಿಸಿತು.

'ಕುಸುಮಾಜಿ ಚಿತ್ರಭ್ರಮೆಯಲ್ಲಿರುವಳು. ಅದಕ್ಕೊಂದು ಕ್ರಮವನ್ನು ಹೇಳುತ್ತೇನೆ' ಎಂದರಸನು ಅಮರೆಯನ್ನೂ, ಸುಮನೆಯನ್ನೂ ತನ್ನೊತ್ತಿಗೆ ಕರೆದನು. ನಡೆದು ಬಂದ ಅವರಿಬ್ಬರನ್ನೂ ಅರಸನು ಅಪ್ಪಿಕೊಂಡನು. ಬೆದರಿದಂತಾದ ಅವರಿಗೆ ಮೆಚ್ಚಿದೆನೆಂದು ನುಡಿದನು. ಆಗ ಸತಿಯರೆಲ್ಲ ಘೊಳ್ಳನೆ ನಕ್ಕರು. ಭೂವಲ್ಲಭನೂ ನಸುನಕ್ಕನು. 'ಒಳ್ಳೆಯದಾಯಿತು; ಹಾಗೇ ಆಗಬೇಕು' ಎಂದು ಕುಸುಮಾಜಿ ಗೆದ್ದವಳಂತೆ ನಕ್ಕಳು. 'ಕೋಣೆಯಲ್ಲಿ ನಾನೊಂದು ಮಾತನಾಡುತ್ತಾ ಆಡುತ್ತಾ ಇದ್ದರೆ ಅದನ್ನು ತಂದು ಅರಸನಿಗೆ ಹೇಳಿದಿರಿ. ದೈವವಿದನ್ನು ಕಾಣದೆ? ನಿಮಗಿಂತು ತಕ್ಕ ಫಲವನ್ನು ತೋರಿಸಿತು. ಒಬ್ಬರ ಗೂಢ ಚರಿತವನ್ನು ಬಾಹ್ಯಕ್ಕೆ ಹಬ್ಬಿಸಿ ನಗುವವರನ್ನು ದೈವವೇ ತಬ್ಬಿ ನಗಿಸುವುದೆಂಬ ನುಡಿಗೆ ನೀವಿಬ್ಬರೇ ಗುರಿಯಾದಿರಿ'. ಇಷ್ಟು ನುಡಿದರೂ ಕುಸುಮಾಜಿಯ ಒಳಗಿನ ನಗು ಮತ್ತು ಮತ್ತು ಉಕ್ಕಿ ಉಕ್ಕಿ ಹೊರಗೆ ಬರುತ್ತಿತ್ತು. ಸೆರಗನ್ನು ಮೋರೆಗೆ ಮುಚ್ಚಿ ನಕ್ಕಳು. ಕಂಬದ ಮರೆಗೆ ಹೋದಳು. ಒಡನೆ ನಾಚಿಕೆಯಿಂದಲೇ ಅರಸನಿದಿರಲ್ಲೇ ಬಂದು ನಿಂತಳು. ಅರಸನು ಇದನ್ನು ಗಮನಿಸದೆ ಇಲ್ಲ. ಕಿಕ್ಕಣ್ಣಿಂದ ನೋಡಿದನು. ಸರಸಲೀಲೆಗೆ ಹಿಗ್ಗಿ ನಸುನಕ್ಕನು. ಶಿರಬಾಗಿಕೊಂಡಿದ್ದವಳು ಈಗ ಉಬ್ಬಿದಳೆಂದು ಅವನಿಗೂ ಹರುಷವಾಯಿತು.

ಅಮರಾಜಿ, ಸುಮನಾಜಿಯರು ಮುಂದೆ ಬಂದು, ರಾಯನಿಗೆ ನಮಿಸಿದರು. ಲಜ್ಜೆಯ ಮೇರೆಯನ್ನು ಮೀರದ ವಿಮಲ ಕಟಾಕ್ಷದಿಂದ ಅರಸನನ್ನು ನೋಡಿ—'ಈ ಜನದ ಗೋಷ್ಠಿಯಲ್ಲೂ ಇದನ್ನು ನೆನೆಯಬಹುದೇ?'—ಎಂದು ಕೇಳಿದರು. ಆಗ ಅವರ ಮನಸ್ಸಿನ ಸಂತೋಷವೂ ಮಾತಿನ ರಂಜನೆಯೂ ಅವರಿಗೊಂದು ವಿಶೇಷ ಸೌಂದರ್ಯವನ್ನು ತಂದಿತ್ತು.

'ಇಲ್ಲಿ ಅನ್ಯರಾರಿದ್ದಾರೆ? ಇವರು ನನ್ನ ರಾಣಿಯರು; ಇವರು ನನ್ನ ಊಳಿಗದವರು. ಒಪ್ಪವಾದೊಂದು ಕಾವ್ಯಕ್ಕೆ ಮೆಚ್ಚಿದರೆ, ಅದಕ್ಕೇನು ದೋಷ?'

'ಕುಸುಮಾಜಿಗೊಂದು ತಂತ್ರವನ್ನು ಹೇಳುವೆನೆಂದು ನಮ್ಮನ್ನು ಕರೆದು ಈ ರೀತಿಯಲ್ಲಿ ಸುಳ್ಳಾಡುವುದೇ ?'

'ಕುಸುಮಾಜಿ ನಕ್ಕಳಲ್ಲವೇ? ತಂತ್ರವೆಂತು ಸುಳ್ಳಾಯಿತು?'

'ಅಕ್ಕಾ, ಈ ಅರಸನನ್ನು ಗೆಲ್ಲುವುದು ನಮ್ಮಿಂದ ಸಾಧ್ಯವಿಲ್ಲ' ಎಂದು ಅವರಿಬ್ಬರೂ ನುಡಿದು ಒಳಸರಿದು ಗದ್ದುಗೆಯ ಬಳಿಯಿಂದ ಹೋಗಿಬಿಟ್ಟರು. ಮುಂದೆ ಹೋದವರು ಕುಸುಮಾಜಿಯನ್ನು ಕಂಡು ಮಾತನಾಡದೆ ಇರಲಿಲ್ಲ. 'ತಂಗಿ ನೀನಾಡಿದ ನುಡಿ ಹಸನಾಯಿತು. ನಿನ್ನನ್ನು ನಾವು ಸ್ತುತಿಮಾಡಲು ಅದರ ಫಲವು ಕೂಡಲೇ ಕಾಣಿಸಿತು.'

'ಅಯ್ಯೋ, ನನ್ನನ್ನು ನೀವಿಷ್ಟು ಉತ್ಸಾಹದಿಂದ ಹೊಗಳುವುದಕ್ಕೆ ನಾನೆಂತಹ ಗುಣವಂತಳಪ್ಪ. ಬಹುಗುಣಿಗಳು ಸ್ವಲ್ಪ ಗುಣಗಳನ್ನು ಕೊಂಡಾಡಬಹುದೇ? ನಾನಾದರೆ ಕಿರಿಯವಳು. ನಿಮ್ಮನ್ನು ಕೀರ್ತಿಸಬಹುದು. ಈ ನುತಕೃತಿ ನನಗೇಕೆ? ಹೀನಾಧಿಕವೆಂಬ ಹೆಚ್ಚು ಕಡಿಮೆಗಳಿಲ್ಲವೆ? ಅಕ್ಕ ನಿಮಗೆ ಇದು ತಿಳಿಯದೆ?'

'ತಂಗಿ, ನೋಯದಿರು; ವಿನೋದಕ್ಕಾಗಿ ಹೇಳಿದೆವು.'

'ನಿಮ್ಮಂಥ ವನಿತೆಯರು ಯಾರಿದ್ದಾರೆ? ನಾನೂ ವಿನೋದಕ್ಕಾಗಿಯೇ ಹೇಳಿದೆನು ಅಕ್ಕ.'

ಈ ಮಾತುಗಳನ್ನು ಕೇಳುತಿದ್ದ ರಾಜನು ಒಳಗೊಳಗೆ ಮನವುಬ್ಬಿ ನಗುತ್ತಿದ್ದ.

'ಸಾಕು ಇದರಲ್ಲಿ ಬಂದ ಕೊರತೆಯೇನು? ಹೆಂಗಸರು ಇಷ್ಟು ಮಾತನಾಡುವುದೇ?' ಎಂದು ಕೆಲಬಲದಲ್ಲಿದ್ದ ಅರಸಿಯರು ಮಾತನಾಡಿದಾಗ ಇವರು ಮಾತಿಲ್ಲದ ಮೂಕರಂತೆ ನಿಂತರು. 'ಸೌಜನ್ಯ ಪುರುಷನು ಹೇಳಿದಂತೆ ಕೈಹಿಡಿದ ಸರೋಜಾಕ್ಷಿಯರು ಕೇಳಬೇಕು. ಸೂಜಿಯ ಹತ್ತಿರದ ನೂಲಿನಂತೆ ಪತಿಯೊಡನಿರುವುದು ಸತಿಯರಿಗೆ ಓಜೆಯಲ್ಲವೆ? ಸ್ವಾಮಿಯ ಮನಕ್ಕೆ ಮೆಚ್ಚಾದುದು ನಮಗೆ ಮೆಚ್ಚಲ್ಲವೆ? ಇಂತಹ ಮಹಾವೈಭವವನ್ನು ಎಲ್ಲಿ ಕಂಡೇವು?' ಎಂದು ಎಲ್ಲರೂ ಪ್ರೇಮದಿಂದ ನುಡಿದರು. ಮತ್ತೂ ಅವರ ಮಾತು ಮುಂದುವರಿಯಿತು.

'ಯಾವಾಗಲೂ ಸ್ವಾಮಿ ಈ ರೀತಿಯಲ್ಲಿ ಸಭೆಯಲ್ಲಿ ಬಾಯಿ ತೆರೆದು ಮಾತನಾಡಿದ್ದಿಲ್ಲ. ಇಂದು ಮಹಾ ಸುಪ್ರಸನ್ನನವಾದುದು. ಇದೊಂದು ಹೊಸತೇ ಲೀಲಾಗೋಷ್ಠಿಯಾಯಿತು. ಅರಸನ ಮೇಲಿನ ಕಾವ್ಯವನ್ನೂ ಕೇಳಿದೆವು; ಏಳಿ. ನಾವಿನ್ನು ನಿವಾಳಿಯನ್ನಿಡುವೆವು.' ಎಂದಾಲೋಚಿಸಿ ಅವರೆಲ್ಲ ರಾಜನ ಬಳಿ ಸೇರಿದರು.

ಒಬ್ಬೊಬ್ಬರು ಒಂದೊಂದು ಭೂಷಣವನ್ನು ತೆಗೆದು ರಾಜನಿಗೆ ನಿವಾಳಿಸಿ ನೆಲದಲ್ಲಿಡಲು ಆಭರಣಗಳ ರಾಶಿಯೇ ಆಯಿತಲ್ಲಿ. ಪತಿಗೆ ನಿವಾಳಿಯರ್ಚನೆಯನ್ನು ಮಾಡಿ ಸತಿಯರು ನಿಂತಾಗ ಉಳಿಗದವರು ಆ ಉತ್ತುಂಗಭೂಷಣ ರಾಶಿಯನ್ನು ಹೊತ್ತುಕೊಂಡು ಹೋದರು.

ಅಲ್ಲಿದ್ದ ಅರಸಿಯರೆಲ್ಲ ಒಟ್ಟುಗೂಡಿ ಸಂಭ್ರಮದಿಂದ ನಿವಾಳಿಸುತ್ತಿರುವುದನ್ನು ಕಂಡ ರಾಜನು ಪಂಡಿತೆಯೊಡನೆ ಒಂದು ಪ್ರಶ್ನೆ ಕೇಳಿದನು.

'ಅಮರೆ, ಸುಮನೆ, ಕುಸುಮೆಯರ ಜಗಳವೀಗ ಎಲ್ಲಿಗೆ ಹೋಯಿತು? ಆಗ ಶತ್ರುಗಳಂತೆ ಹೋರಿದವರು ಈಗಲೇ ಮಿತ್ರಭಾವದಿಂದ ಒಂದಾಗಿ ಸೂತ್ರಿಸಿದಂತಿದ್ದಾರಲ್ಲ. ಇದೇನು ವಿಚಿತ್ರವೆಂಬುದನ್ನು ಹೇಳು, ಪಂಡಿತೆ?'

'ರಾಜನೆ, ಬಿನ್ನಹವು. ಸುಮನಾಜಿಯಲ್ಲೂ ಕುಸುಮಾಜಿಯಲ್ಲೂ

ನೋವುಂಟಾಗುವುದೇ?' ಎಂಬುದು ಪಂಡಿತೆಯ ಪಾಂಡಿತ್ಯದ ಉತ್ತರ. ಆಜಿಯೆಂದರೆ ಯುದ್ಧಕ್ಕೆ ಹೆಸರೆಂದು ತಿಳಿದುಕೊಂಡ ಆಕೆಯ ಜಾಣ್ಮೆಗೆ ಅರಸನು ಮೆಚ್ಚಿದನು.

'ಹಾಗೇ ಅದು ಚೆನ್ನಾಯಿತು. ಖಡ್ಗದಾಜಿಯಲ್ಲಿ ನೋವಾಗುವುದಷ್ಟೆ.ಹೂವಿನ ಯುದ್ಧದಲ್ಲಿ ಈ ಭೂಮಿಯಲ್ಲಿ ನೊಂದವರು ಯಾರಿದ್ದಾರೆ?' ಎಂದು ಭರತೇಶನು ಮೆಚ್ಚಿ ನುಡಿದನು.

'ಅರಸಾ, ಅಸುರಾಜಿಯಲ್ಲಿ ಕರ್ಕಶವುಂಟು. ಅಮರಾಜಿಯಲ್ಲಿ ಕರ್ಕಶವಿರುವುದೇ?'

'ಇದೂ ಹೊಸತೆ. ಇಲ್ಲಿ ದೇವತೆಗಳಿಗೆ ಯುದ್ಧ ಸಂಭವಿಸಿದರೂ ಅದು ಕೂಡ ಮೃದುವಾಗುವುದಷ್ಟೆ.'

'ಭೂಲೋಕ ಮದನನಂತಿರುವ ನಮ್ಮ ರಾಜನೆ, ನಾಲಗೆ ಅಲ್ಲಾಡುವುದರೊಳಗೆ ನೀನು ಯೋಚನೆ ಮಾಡದೆ ಮುಂಗಟ್ಟಿ ಹೇಳಿದುದೇ ವಿಸ್ಮಯವು.'

'ಜಿನನಾಣೆ ! ನಿನ್ನ ನುಡಿ ಚೆನ್ನಾಯ್ತು' ಎಂದು ರಾಜನು ಪಂಡಿತೆಗೆ ಒಲಿದು ಕನಕಭೂಷಣವನ್ನು ಕೊಟ್ಟನು. ಅದರೊಡನೆ ಆ ಮೂವರು ವನಿತೆಯರಿಗೂ ಉಚಿತಗಳನ್ನಿತ್ತನು.

'ನಾಗರಿಕೋತ್ತಮನೆ ! ನೀನು ಈ ಗುಣನಿಧಿಗಳೆನಿಸುವ ಹೆಂಡತಿಯರೊಂದಿಗೆ ಭೋಗಸಾಮ್ರಾಜ್ಯವನ್ನಾಳುತ್ತಿರು'—ಎಂದು ನುಡಿದ ಪಂಡಿತೆ ತನ್ನ ಹಿಂದಿನ ಸ್ಥಾನಕ್ಕೆ ಸರಿದು ನಿಂತಳು.

ಲಲನೆಯರೆಲ್ಲ ತಳತಳಿಸುವ ಮೊಗದಿಂದ ಲೀಲೆಯಲ್ಲಿದ್ದರು. ಸುಜಾಣರ ತಿಲಕನಾದ ಭರತೇಶನು ಅವರೆಲ್ಲರ ಮುಖವನ್ನೊಮ್ಮೆ ನೋಡಿ ಪಂಡಿತೆಯೊಡನೆ ಮಾತನಾಡಿದನು.

'ಪಂಡಿತೆ, ನಾವಿಂದು ನಮ್ಮ ಮನೆಯಲ್ಲೆ ಉಂಡರೊಳ್ಳಿತೊ, ಭುಕ್ತಿಗಾಗಿ ನಮ್ಮ ಸತಿಯರಲ್ಲಿ ಒಬ್ಬರ ಮನೆಗೆ ಹೋಗುವುದು ಲೇಸೋ, ನಿನಗೆ ತೋಚಿದುದನ್ನು ಹೇಳು.'

ಪಂಡಿತೆಗೆ ಆಗ ಅರಸನ ಅಂತರಂಗ ತಿಳಿಯಿತು.

'ಇಂದು ಆರೋಗಣೆಯು ದೇವರ ಗೃಹದಲ್ಲಿ ಚಂದವಲ್ಲ; ಒಬ್ಬರ ಮನೆಗೆ ಸಂದರೆ ಉತ್ತಮವು.'

'ಹಾಗಾದರೆ ಯಾರ ಮನೆಗೆ ಹೋಗಬಹುದು.'

ಪಂಡಿತೆ ಕೂಡಲೆ ಯೋಚನಾಮಗ್ನಳಾಗಿ ಮೌನದಲ್ಲಿ ಕುಳಿತಳು. ಮೂಗಿನ ಮೇಲೆ ಬೆರಳನ್ನಿಟ್ಟು, ಕಣ್ಣು ಮುಚ್ಚಿ, ತಲೆಯನ್ನು ಒಂದಿಷ್ಟು ತೂಗಿ, ಯೋಗಿಗಳಂತೆ ಧ್ಯಾನಿಸಿ, ಮತ್ತೆ ಕಣ್ಣು ತೆರೆದಳು. ಅರಸನೊಡನೆ ಬಿನ್ನವಿಸಿದಳು.

'ಇಂದು ಕುಸುಮಾಜಿಯವರ ಮನೆಗೆ ಅಡಿಯಿಟ್ಟರೆ ಉತ್ತಮವು.'

'ಅದು ಉತ್ತಮವೆಂತು?' ಅರಸನ ಏನೂ ಅರಿಯದ ಪ್ರಶ್ನೆ.

'ಹೊಸ ಕಾವ್ಯ ಮೂವರಿಂದಾದುದು. ಇಬ್ಬರನ್ನು ಮನ್ನಿಸಿದೆ. ಇನ್ನೊಬ್ಬಳನ್ನು ಮನ್ನಿಸಿಲ್ಲ, ಅವಳ ಮನೆಗೆ ಹೋಗಿ ಮನ್ನಿಸುವುದೇ ಉಚಿತವು.'

'ಅದೇ ಲೇಸು; ಲೇಸು' ಎಂದಾಗ ಇತರರೂ ದನಿಗೂಡಿಸಿದರು.

ಎದೆಯಲ್ಲಿ ಆನಂದ ಉಕ್ಕೇರುತ್ತಿದ್ದರೂ ಮುಖದಲ್ಲಿ ಮಾಂದ್ಯಭಾವದಿಂದ ರಾಜನದಕ್ಕೆ ಒಡಂಬಟ್ಟನು. ಆಗ ಪಂಡಿತೆಯು ಕುಸುಮಾಜಿಗೆ ಸಲಹೆಯಿತ್ತಳು.

'ಅಮ್ಮ ರಾಯನಿಗಿಂದು ನಿನ್ನ ಅರಮನೆಯಲ್ಲಿ ಸನ್ಮಾನ, ನೀನು ಮೊದಲೆ ಹೋಗಿ, ಎಲ್ಲವನ್ನೂ ಅಣಿಗೊಳಿಸು.'

ಪಂಡಿತೆಯು ಈ ಮಾತನ್ನು ಎಲ್ಲರ ಇದಿರಿನಲ್ಲೇ ನುಡಿದುದರಿಂದ, ಕುಸುಮಾಜಿಗೆ ನಾಚಿಕೆಯಾಯಿತು. ಆದರೆ ಆ ಸವತಿಯರು ಅದನ್ನರಿತು ಆಕೆಯನ್ನು ಸುವಿನಯದಿಂದಲೇ ಕಳುಹಿಸಿದರು. ದಾರಿ ತೆಗೆದು ನಿಂತ ಕುಸುಮಾಜಿಯ ಕುರಿತು ವೇತ್ರಧಾರಿಣಿಯರು ಅರಸನೊಂದಿಗೆ ಇಂತೆಂದರು.

'ಒಡೆಯ, ರತಿಯಂತೆ ಒಪ್ಪುವ ಒಡತಿಯನ್ನು ಕಣ್ಣಾರೆ ಚಿತ್ತವಿಸು. ಗಗನದಲ್ಲಿ ಹೋಗುತ್ತಿರುವ ಹೆಣ್ಣನ್ನು ತನ್ನ ನುಡಿಯಿಂದಲೇ ತಿರುಗಿಸಿ, ಗಿಳಿಯೊಳಗೆ ಅಡಗಿಸಿ, ನುಡಿಸಿರುವ ಈ ಮಡದಿಯನ್ನೊಮ್ಮೆ ನೋಡು. ಸ್ವರಮಾತ್ರದಿಂದ ಗಿಳಿಯ ಮೈಯಲ್ಲಿ ಅಡಗಿರುವ ಸುರಸುದತಿಯ ನೆಲೆಯನ್ನು ತಿಳಿದ ಜಾಣೆಯನ್ನು ನೋಡು. ವ್ಯಂತರ ಕಾಮಿನಿಯಿಂದ ಕೀರ್ತಿಸಿಕೊಂಡರೂ ಅದನ್ನು ಯಾರೊಡನೆಯೂ ಹೇಳದ ಅತ್ಯಂತ ಗಂಭೀರೆಯನ್ನು ನೋಡು. ಗರುವಿಕೆ, ಗಾಡಿ ಬಿನ್ನಣ, ಬೆಡಗುಗಳೇ ಮೈಸಿರಿಯಾದ ಈ ದೇವಿಯನ್ನು ಕಳುಹಿಸಿ ಕೊಡು.'

ಈ ನುಡಿಗೇಳಿದ ದೊರೆ, ಅವರಿಗಾಗಲೇ ಹೊನ್ನ ತೊಡಿಗೆಗಳನ್ನು ಕೊಟ್ಟು ತನ್ನ ಮೆಚ್ಚನ್ನು ತೋರಿಸಿದನು. ಕುಸುಮಾಜಿ ಕೈಮುಗಿದು ಮುನ್ನಡೆದಳು. ದೇವಲೋಕದ ನಾರಿ ನರಲೋಕಕ್ಕೆ ಇಳಿವಂತೆ ಕುಸುಮಾಜಿ ಸಾಗಿದಳು. ಆಮೇಲೆ ಅರಸಿಯರೆಲ್ಲರೂ ಒಬ್ಬೊಬ್ಬರಾಗಿ ತೆರಳಿದರು. ವೇತ್ರಧಾರಿಣಿಯರು ಹೆಸರು ಹೇಳಿದಂತೆ ಅರಸನವರನ್ನು ಬೀಳ್ಕೊಟ್ಟನು. ಅಂದಿನ ಕಾವ್ಯದ ಅಮರಾಜಿ ಸುಮನಾಜಿಯರು ನಮಿಸುವಾಗ ಅರಸನಿಗೆ ನಗೆ ಸಹಿಸಲಾಗಲಿಲ್ಲ. ಅವರೂ ನಗುತ್ತಲೇ ನಡೆದುಬಿಟ್ಟರು. ಪಂಡಿತೆ, ಗಾಯಕಿಯರೆಲ್ಲ ಎದ್ದ ಬಳಿಕ ದಂಡಧಾರಿಣಿಯರೂ ಮರೆಯಾದರು.

ಊಳಿಗದವರೆಲ್ಲರೂ ಸರಿದು ಹೋದ ಮೇಲೆ ಭರತೇಶನು ಕಾಲೋಚಿತವಾದ ಆತ್ಮಯೋಗವನ್ನೆಸಗಿದನು. ಪಲ್ಯಂಕಾಸನದಲ್ಲಿ ಶಲ್ಯವರ್ಜಿತನಾಗಿ ಕಣ್ಣುಮುಚ್ಚಿ ಕುಳಿತು ಧವಳಯೋಗವನ್ನು ಕಂಡನು. ಇಷ್ಟು ಹೊತ್ತು ಹೆಂಗಳೊಂದಿಗೆ ತಾನಾಡುತ್ತಿದ್ದ ಲೀಲೆಯೆತ್ತ ಸರಿಯಿತೊ ! ಈಗ ಹತ್ತು ಸಾವಿರ ವರ್ಷ ಕಾಲ ತಪಸ್ಸು ಮಾಡಿದ ಮುನಿಪೋತ್ತಮನಂತೆ ಇದ್ದಾನೆ. ರಾಜನು ಹೋಗೆನಲು ಹೋಗುವ, ಬಾರೆಂದರೆ ಬರುವ ಸೇವಕರಂತೆ, ನಾಲ್ಕು ಕರಣಗಳೂ ಐದು ಇಂದ್ರಿಯಗಳೂ ಭರತೇಶನು ನುಡಿದಂತೆ ನಡೆಯುತ್ತಿರುವುವು. ಬೇಕಾದಾಗ ಪ್ರೀತಿಯಿಂದ ಗಾಳಿಪಟವನ್ನು ಆಡುವ; ಮತ್ತೆ ಸಾಕಾದಾಗ ಅದರ ಸೂತ್ರವನ್ನು ಸುರುಳಿಸುವಂತೆ ಒಮ್ಮೆ ಮನಸ್ಸನ್ನು ಹೊರಗಾಡಲು ಬಿಡುವನು; ಮತ್ತೊಮ್ಮೆ ತನ್ನಲ್ಲಿ ಏಕವಾಗಿರಿಸುವನು. ಹೊರಗೆ ಕಣ್ಣಿಕ್ಕಿ ಸೇವಕರಿಂದ ಸೇವಿಸಿಕೊಂಡರೆ, ಒಳಗೆ ಒಡನೆ ಕಣ್ಣಿಕ್ಕಿ ಹಂಸಗೆ ಕರಣೇಂದ್ರಿಯಗಳ ಸೇವೆಯನ್ನೇ ಕೈಗೊಳ್ಳುವನು. ಇಂದ್ರಿಯಭೋಗವ ಹೊರಗೆ ಭೋಗಿಸಿದರೆ, ಅತೀಂದ್ರಿಯ ಸುಖವನ್ನು ಚಂದ್ರಿಕಾಸುಖವನ್ನು ಚಕೋರವುಂಡಂತೆ— ಉಂಡು ಜಿತೇಂದ್ರಿಯನಂತಿರುವನು. ತನ್ನ ಮನವನ್ನು ದಂಡಿಸಿ ಕರ್ಮವನ್ನು ಒಣಗಿಸಿ ಮಾಡುವ ತಪಸ್ಸು ಅವನದು. ಶಾಸ್ತ್ರದ ಗಡಿಬಿಡಿಯಲ್ಲಿ ಮುಳುಗಿ

ದೇಹದ ವಸ್ತ್ರಗಳನ್ನು ಮಾತ್ರ ಬಿಟ್ಟ ಮುನಿಯಲ್ಲ ಅವನು. ಆ ರಾಜಯೋಗಿಯು ವಸ್ತ್ರದಂತಿರುವ ಮೂರು ಶರೀರಗಳನ್ನು ಬೇರ್ಪಡಿಸಿ ಅಂತರ್ಯದಲ್ಲೇ ತೃಪ್ತಿಪಟ್ಟನು. ಈ ಲೋಕದ ಸತಿಯರನ್ನು ಬಿಟ್ಟು ಸ್ವರ್ಗದ ಸತಿಯರಿಗೊಲಿಯುವ ಜಡ ಬ್ರಹ್ಮಚಾರಿ ಅವನಲ್ಲ. ಅವನೆಂದರೆ ಆತ್ಮರತಿಯೊಂದನ್ನೇ ಹಿಡಿದು, ಉಳಿದುದೆಲ್ಲವನ್ನೂ ತೊರೆದಿರುವ ಕಟು ಬ್ರಹ್ಮಚಾರಿ. ಆತ್ಮನಿಗೆ ಬ್ರಹ್ಮವೆಂಬ ಹೆಸರುಂಟು. ತನ್ನನ್ನು ಹೊಂದಿರುವ ಗಗನದಲ್ಲಿ ತನ್ನ ಮನಸ್ಸನ್ನು ಹೆಚ್ಚಾಗಿ ಚರಿಯಿಸುವಂತೆ ಮಾಡಿದರೆ ಅದು ಮಹಾ ಬ್ರಹ್ಮಚರ್ಯ. ಅದು ಮುಕ್ತಿಗೆ ಬೀಜವು. ಅದು ನಮ್ಮ ಭರತೇಶ್ವರನಲ್ಲುಂಟು. ಸ್ತ್ರೀಯರನ್ನು ಬಿಟ್ಟಿರುವುದು ವ್ಯವಹಾರದ ಬ್ರಹ್ಮಚರ್ಯಾಂಗವು. ಮನಸ್ಸನ್ನೇ ಆತ್ಮನೊಳಗಿರಿಸಿದರೆ ಅದು ನಿಜವಾದ ಬ್ರಹ್ಮಚರ್ಯಾಂಗವು. ಹೊರಗೆಲ್ಲವನ್ನೂ ನೋಡುತ್ತಿದ್ದರೂ ಒಳಗೆಲ್ಲವನ್ನೂ ಖಂಡಿಸಿದ ಆಚಾರ್ಯನೇ ನಮ್ಮ ಭರತೇಶನು.

ಜಿನ ! ಜಿನ ! ಎಂದು ಕಣ್ಣು ಮುಚ್ಚಿದಾಗ ತನ್ನಲ್ಲಿಯೇ ತನ್ನನ್ನವನು ಕಂಡನು. ಅಲ್ಲಿಯೇ ಅವನು ಸಿದ್ಧನನ್ನೂ ಕಂಡನು. ಒಡನೆ ಅಲ್ಲಿಯೇ ಆತ್ಮಸುಖವನ್ನೂ ಅನುಭವಿಸಿದನು. ಸರ್ವಾಂಗದಲ್ಲೂ ತಳತಳಿಸುತ್ತಾ ತನ್ನಾತ್ಮವನ್ನು ತೋರುವನು. ಆಗ ಕರ್ಮವು ಜಾರುವುದು; ಸುಪ್ರಕಾಶವು ಏರುವುದು; ಅಪೂರ್ವದ ಸುಖವು ಹುಟ್ಟುವುದು. ಭರತೇಶನಿಗೆ ಆತ್ಮವು ಅಂತರಂಗದಲ್ಲೇ ಕಾಣುವುದು. ಒಮ್ಮೆ ಪುರುಷಾಕಾರದೊಳಗೆ ತೋರುವುದು; ಇನ್ನೊಮ್ಮೆ ಪ್ರಭೆಯ ರೂಪವಾಗಿ ಬೆಳಗುವುದು. ಒಡನೆಯೇ ಮಾಯವಾದಂತೆ ಕಾಣುವುದು. ಒಮ್ಮೆ ಕತ್ತಲೆಯಾಗುವುದು; ಒಮ್ಮೆ ಬೆಳಕಾಗುವುದು; ಒಮ್ಮೆ ತಂಪಿನ ಸೊಡರನ್ನು ಹೊತ್ತಿಸಿದಂತಾಗುವುದು. ಭರತೇಶನ ಚಿತ್ತದಲ್ಲಿ ಆತ್ಮಯೋಗವು, ಹೊತ್ತಿಸಿದಂತಿರುವುದು, ಅವನಾಗ ಪರಬ್ರಹ್ಮದಲ್ಲೇ ಓಲಾಡುತ್ತಿರುವನು. ಅಂತರ್ಯದಲ್ಲಿ ತನ್ನ ಆತ್ಮವನ್ನೇ ಕಂಡಾಗ ಒಂದು ಹೊಸ ಬೆಳಕೇ ತೋರುವುದು. ಕೂಡಲೇ ಕರ್ಮವು ಮರಳಿನಂತೆ ಜಾರಿ ಹೋಗುವುದು. ನಿಜವಾದ ಸುಖವೇ ಹೊಳೆಯಂತೆ ಹೊಳೆದು ಉಕ್ಕೇರುವುದು. ಇದು ಭವ್ಯ ಜನರಿಗೆ ಮಾತ್ರ ಸಾಧ್ಯ. ನಿರ್ಭವ್ಯರ ಮನಸ್ಸಿಗೇ ಇದು ಪರಮವಿರುದ್ಧವಾಗಿ ಕಂಡೀತು.

ಭರತೇಶ್ವರನು ಆತ್ಮಯೋಗಾಮೃತದ ಶೋಭೆಯಲ್ಲೇ ಓಲಾಡಿ, ಮನಸ್ಸಿನ ಲೋಭವೇ ಮೊದಲಾದ ದೋಷಗಳನ್ನು ತೊಳೆದು, ಸುಖಲಾಭದಲ್ಲಿದ್ದನು. ಆದರೂ ಗುಣಕ್ಕೆ ಮತ್ಸರಿಸದೆ,ಕಾಂತೆಯರು ಲಕ್ಷಣವಾದ ಆ ಕಾವ್ಯವನ್ನು ಹೇಳಲು ಅವರನ್ನು ಪ್ರಣಯವಿನೋದದಲ್ಲಿ ಮನ್ನಿಸಿ ಮೆಚ್ಚುಗೊಟ್ಟನು.

# ೯

# ಸರಸ

ನಾನು ಆತ್ಮ; ಇದು ದೇಹ; ನಾನೇ ಸುಜ್ಞಾನಿ; ಈ ದೇಹವೆಂಬುದು ಅಜ್ಞಾನಿ;— ಎಂದು ತಿಳಿದುಕೊಂಡು ಭರತಚಕ್ರಿಯು ಜ್ಞಾನಾಕ್ಷಿಯಿಂದ ತನ್ನ ದೇಹದಲ್ಲೇ ಹಂಸನನ್ನು ನೋಡುತ್ತಿದ್ದನು. ಮೊದಲೊಮ್ಮೆ ದೇಹ ಬೇರೆ, ಆತ್ಮ ಬೇರೆಂದು ತನ್ನ ಎದೆಯಲ್ಲಿ ಸ್ಮರಿಸಿದನು. ಆದರೆ ಅನಂತರ ತನ್ನ ಆತ್ಮವನ್ನೇ ಕಂಡು, ರಾಜನು ಸಂತೋಷದಲ್ಲಿದ್ದನು. ಈಗಲಾದರೆ ಸಂಕಲ್ಪವೂ ಅಲ್ಲ, ವಿಕಲ್ಪವೂ ಇಲ್ಲ. ಒಂದರ ಸೋಂಕೂ ಇಲ್ಲದೇ ತನ್ನನ್ನೇ ತಾನು ಸೋಂಕಿ ತನ್ನಲ್ಲೇ ಹುಟ್ಟಿದ ಆನಂದ ರಸದಲ್ಲಿ ತೇಂಕಾಡುತ್ತಿದ್ದನು. ಆಗ ಕರ್ಮದ ರಜವು ಇಳಿದಿಳಿದು ಹೋಗುತ್ತಿತ್ತು. ಹೊಸ ಬೆಳಕು ಸಾಗಿ ಸಾಗಿ ಬರುತ್ತಿತ್ತು. ಸುಜ್ಞಾನದ ಸುಖಗಳು ಹಾರಿಹಾರಿ ಬರುತ್ತಿದ್ದುವು. ಯೋಗದ ಸಿರಿಯು ಹಾಗಿತ್ತು. ಅವನು ರಾಜ್ಯವನ್ನು ಮರೆತನು. ಸತಿಯರನ್ನು ತೊರೆದನು. ಮೈಯ ನೆನಪೇ ಮರೆತುಹೋಯಿತು. ಆ ಸ್ಥಿತಿಯಲ್ಲಿ ಚಕ್ರಿಯು ಆತ್ಮಯೋಗ ಸಾಮ್ರಾಜ್ಯದಲ್ಲಿ ಸಿದ್ಧರಂತೆ ಇದ್ದನು. ಮಿಸುಕದೆ, ಅಲ್ಲಾಡದೆ ಇರುವ ಆ ರಾಜಯೋಗಿಯು ಹೊಸ ಚೆಲುವಿನ ಪುತ್ಥಳಿಯಿಂದ ಒಸೆದು ಗದ್ದುಗೆಯಲ್ಲಿ ಸಿಂಗರಿಸಿ ಕೀಲಿಸಿದಂತೆ ಇದ್ದನು. ರಾಜನು ಮನೆಯಲ್ಲಿದ್ದಾನೆ ; ಗದ್ದುಗೆಯಲ್ಲಿ ಇದ್ದಾನೆ; ದೇಹದಲ್ಲಿದ್ದಾನೆ— ಎಂದೆಲ್ಲ ಹೇಳುತ್ತಿದ್ದರು. ಆದರೆ ಅವನು ನಿಜವಾಗಿಯೂ ಅನುಪಮನಾದ ಆತ್ಮನಲ್ಲಿದ್ದನು. ಆಕಾಶವೇ ಪುರುಷರೂಪವಾಗಿ, ಸುಜ್ಞಾನ ಕಾಂತಿಗಳಿಂದ ತುಂಬಿ, ಅವನ ಮೈಯಲ್ಲಿ ರೂಪುಗೊಂಡಿತೋ ಎನ್ನುವಂತೆ ಚಿದಂಬರಪುರುಷನೇ ಆ ರಾಜಯೋಗಿಗೆ ತೋರುತ್ತಿದ್ದನು. ಧ್ಯಾನತತ್ಪರನಾಗಿ ಹೊರಗನ್ನೇ ಮರೆತು ತನ್ನನ್ನು ತನ್ನಲ್ಲೇ ಲೀನಗೊಳಿಸಿ ಆ ನರಪತಿಯಿರಲು ಘಳಿಯಾರದಲ್ಲಿ ಶಂಖಧ್ವನಿಯು ಘೂರ್ಣಿಸಿತು. ಅದು ಭರತೇಶನಿಗೆ ಕೇಳಿಸಿದೊಡನೆ ಅವನು ಹಂಸನಾಥನಿಗೆ ಅಷ್ಟವಿಧದಲ್ಲಿ ಅರ್ಚನೆ ಮಾಡಿ ಕಣ್ಣು ತೆರೆದನು.

ಆಗ— 'ರಾಜಯೋಗೀಂದ್ರ, ರಾಜಿತ ಹಂಸತತ್ವ, ನೀರೇಜ ಭಾಸ್ಕರ, ಭವ ಮಥನಾನ್ಯಜನಿಷ್ಠಿತ ಜಯಜಯ'— ಎಂದು ಕಟ್ಟಿಗೆಯ ಹೆಂಗಳೆಯರು ಓಜೆಯಿಂದ ಉಗ್ಗಡಿಸಿದರು.

'ಮುನಿಭುಕ್ತಿಯ ವೇಳೆಯಾದುದು ಸ್ವಾಮಿ' ಎಂದು ಸೇವಕಿಯರು ಮೆಲ್ಲನೆ ಬಿನ್ನವಿಸಿದರು. ಆಗ ಆ ಸಾರ್ವಭೌಮನು, — ಜಿನಸಿದ್ಧ; ಶರಣು. ನಿರಂಜನ ಸಿದ್ಧ ಎಂದು ಹೇಳುತ್ತಾ ಎದ್ದನು. ಹೊನ್ನಬೆಟ್ಟವನ್ನೇರಿ ತಪಸ್ಸು ಮಾಡುತ್ತಿದ್ದ ಮುನಿರತ್ನನು ಭೂಮಿಗಿಳಿದು ಬರುವಂತೆ ರಾಜನು ಉಪ್ಪರಿಗೆಯಿಂದ ಇಳಿದು ಬಂದನು. ನಿಜವಾಗಿಯೂ ಭರತೇಶನೆಂದರೆ 'ಉತ್ಪನ್ನಾತ್ಮರಸಿಕ ನಾಯಕ'ನೇ ಆಗಿದ್ದನು.

ಉಪ್ಪರಿಗೆಯಿಂದ ಇಳಿದ ಅರಸನು, ಯೋಗಿಗಳು ಬರುವ ದಾರಿಯಲ್ಲಿ ಕಾದುನಿಂತು, ಅವರನ್ನು ಅರಮನೆಗೆ ಕರೆದೊಯ್ದು ಪರಿಕರದ ಅನುಪಮವಾದ ಅನ್ನವನ್ನಿತ್ತು ತಣಿಸಿ ಬೀಳ್ಕೊಟ್ಟನು. ಮುನಿಭುಕ್ತಿಯಾಗಿ ರಾಜನಿರುವಾಗಲೆ ಕುಸುಮಾಜಿಯ ತಂಗಿ ನೇರಜವ್ವನದ ಮಕರಂದಾಜಿಯು ಅಲ್ಲಿಗೆ ಬಂದಳು. ಚೆಲುವೆಯೂ ಜಾಣೆಯೂ ಆದ ಅವಳು ಶೃಂಗಾರಮಂಗಲೆಯಾಗಿ ಸಖಿಯರಿಂದ ಕೂಡಿಕೊಂಡು ಅಲ್ಲಿಗೆ ಬಂದು ತೂಗುಮಂಚದಲ್ಲಿ ಉಯ್ಯಾಲೆ ಆಡುತ್ತಿರುವ ತನ್ನ ಭಾವನನ್ನು ಕಂಡಳು. ಕೆಳದಿಯ ಕೈಯ ಹೊಂದಟ್ಟೆಯಲ್ಲಿದ್ದ ಅಕ್ಷತೆಯನ್ನು ಅರಸನಿಗಿತ್ತಳು.

'ಭಾವಾಜಿ, ಆರೋಗಣೆಗೆ ಅನುಕೂಲವಾಗಿ ನಮ್ಮ ಮನೆಗೆ ಏಳಿ' ಎಂದು ಮಕರಂದಾಜಿಯು ಆಮಂತ್ರಣವಿತ್ತಳು. ಅರಸನು ತನ್ನ ನಾದಿನಿಯೊಡನೆ ಒಂದಿಷ್ಟು ಸರಸವಾಡಿದನು. ಅದು ಅತಿಸರಸವಾಗದ ಮುನ್ನವೇ ಮಿನುಗುವ ಹಾವುಗೆಗಳನ್ನು ಮೆಟ್ಟಿ, ಹೊರಟನು. ಕುಸುಮವಿದ್ದಲ್ಲಿಗೆ ಮಧುವ್ರತ ಹೋಗುವಂತೆ ಕುಸುಮಾಜಿಯ ಆ ಮನೆಗಾಗಿ ಆ ಕುಸುಮಾಯುಧಜಿತಲಾವಣ್ಯನು ತನ್ನ ನಾದಿನಿಯೊಂದಿಗೆ ನಡೆದನು.

ದೇವರು ಬರುತ್ತಿದ್ದಾರೆಂಬ ಸೇವಕಿಯರ ಮಾತು ಕೇಳಿದೊಡನೆಯೇ ಕುಸುಮಾಜಿಯು ಅರಸನನ್ನು ಇದಿರುಗೊಳ್ಳುವುದಕ್ಕಾಗಿ ಬಂದಳು. ಜಗದ ಮೋಹನ ಶಕ್ತಿಯೇ ನಡೆದು ಬಂದಂತೆ ಬಂದಳು. ಅವಳ ತನುಗಂಧಕ್ಕಾಗಿ ತುಂಬಿಗಳು ಝೇಂಕರಿಸುತ್ತ ಅವಳನ್ನನು ಸರಿಸಿದುವು. ಹಂಸೆಗಳು ಅವಳ ಹೆಜ್ಜೆವಿಡಿದು ಅನುಗತಿಯನ್ನು ಪಡೆದುವು. ಅಳವಡಿಸಿದ ನೂತನ ಶೃಂಗಾರದಿಂದ ಮೆರೆವ ಕುಸುಮಾಜಿಯು ರತ್ನದಾರತಿ ಸಹಿತ ಬಂದು ಅರಸನಿಗೆ ಆರತಿ ಬೆಳಗಿದಳು. ಆಗ ಮುಖಕಾಂತಿ ಮಿನುಗಿತು. ಆರತಿಯೊಡನೆ ಅರಸನಿಗೆ ಅಡ್ಡ ಬೀಳುವಷ್ಟರಲ್ಲಿ ಅರಸನೇ ಅವಳನ್ನು ಹಿಡಿದೆತ್ತಿ ತಡೆದನು. ಮತ್ತೆ ಏಳೆಂಟು ಮಾರು ಮುನ್ನಡೆವ ಮೊದಲೇ ಕುಸುಮಾಜಿ ಅರಸನ ಪಾದಗಳನ್ನು ತೊಳೆದು ಸೀರೆಯ ಸೆರಗಿನಿಂದೊರಸಿದಳು.

ಅರಸ ಅಂತಃಪುರವನ್ನು ಸೇರಿದನು.

'ಅಕ್ಕ ; ಅಕ್ಕ ಭಾವ ಬಂದನು ಮನೆಗೆ. ದೇವಿ, ಗದ್ದುಗೆ ಇಕ್ಕು, ಮನ್ನಿಸು' ಎಂದು ಅಲ್ಲಿರುವ ಅರಗಿಳಿಯು ಹೇಳಿತು.

'ಇವನೆ, ಅಮೃತ ವಾಚಕನು ಕುಸುಮಾಜಿ?' ಎಂದು ಕೇಳುತ್ತ ರಾಯನು ಅಲ್ಲಿದ್ದ ಗದ್ದುಗೆಯಲ್ಲಿ ಕುಳಿತನು,ರವಿ ಪೂರ್ವಗಿರಿಯನ್ನು ಏರುವಂತೆ.ಆಗ ಅವನೊಡನೆ ಅರಗಿಳಿಯ ಮಾತನಾಡಿತು.

'ಬಂದೆಯ ಭಾವ. ಬಂದೆಯ ಸುಪ್ರಭಾವ. ಸುಗುಣಸ್ವಭಾವ ನೀನು ಬಂದೆಯ. ನೀನು ಬಂದುದು ಲೇಸಾಯಿತು ಮಹಾನುಭಾವ. ಭಾವಾಜಿ ನಿನಗೆ ಕ್ಷೇಮವೆ? ನಿನಗೆ ಪರಿಣಾಮವೆ ಭಾವಾಜಿ? ಈ ಮನೆಗೆ ನೀನೇಕೆ ಆಗಾಗ ಬರಲೊಲ್ಲೆ? ಈ ಭೂಮಿಯನ್ನಾಳುವವನೆಂಬ ಗರ್ವವೋ? ಬಂದ ನೀನಿನ್ನು ಹೋಗುವೆನೆಂದು ಎಣಿಸಿದೆಯಾ? ನಿನ್ನ ಕಾಲುಗಳಿಗೆ ಉರುಳುಗಳನ್ನಿಕ್ಕುವೆನು.'

ಗಿಳಿಯ ಈ ಮಾತುಗಳನ್ನು ಕೇಳಿ ರಾಜನು ನಕ್ಕನು.

'ರಾಯ ನಿನಗಿದು ನಗೆಯಲ್ಲವೆ? ನಮ್ಮ ಅಕ್ಕನ ಜೀವವನ್ನೇ ಸೂರೆಗೊಂಡು ಹತ್ತಿರಕ್ಕೆ ಬಾರದೆ ದೂರದಲ್ಲೇ ಇದ್ದೆ. ಇಂದು ಸಿಕ್ಕಿದೆಯಲ್ಲವೆ. ನಮಗೆ ಲೇಸಾಯಿತು. ನಮ್ಮ ಅಕ್ಕನ ಹತ್ತಿರ ಸುಳಿಗುರುಳುಗಳೆಂಬ ಉರುಳುಗಳುಂಟು. ನಳಿ ತೋಳುಗಳೆಂಬ ಪಾಶಗಳುಂಟು. ಈಗ ಬಂದ ಭಾವನು ಹೇಗೆ ಹೋಗುವನೆಂದು ನೋಡಬೇಕು. ರಾಜನೆ, ನಮ್ಮ ಅಕ್ಕನ ಹತ್ತಿರದಲ್ಲೇ ಇರು. ನೀನು ಹೋಗಲು ಹೊರಟರೆ ಆಕೆಯ ಕಡೆಗಣ್ಣ ಕಾಂತಿಯ ಬೆಳ್ಳಿ ಸಂಕಲೆಗಳನ್ನು ಹಾಕಿಸುವೆನು.'

'ಅಮೃತವಾಚಾಂಕ, ಇಷ್ಟೇಕೆ ಕೋಪ. ನಿಮ್ಮ ಅಕ್ಕನಿಗೆ ನಾನು ಮಾಡಿದ ಕಷ್ಟವೇನು? ಶಿಷ್ಟರೆಂದು ಬಂದೆವು. ನೀವಿಬ್ಬರೂ ದುಷ್ಟರಲ್ಲವೆ?' ಎಂದೊಡನೆ ಅರಸನು ನುಡಿದನು.

'ನೋವಾಯಿತೆ ಭಾವಾಜಿ? ಅದಕ್ಕೆ ನಮ್ಮ ಅಕ್ಕನಲ್ಲಿ ಅದರ ಸಂಜೀವ ಇದೆ. ಅದನುಂಡು ಜೀವಸಿದ್ಧಿಯು ಪಡೆದಿರು. ಮಾನಿನಿಯ ಮುಖದಲ್ಲಿ ಜೇನೆಯ್ಯ ಕೊಡವೆ ಇದೆ. ನಿನಗದು ಹೇಗಾದೀತು? ನೀನು ಜೈನ ಅಲ್ಲವೆ ಭಾವ?

—ಎಂದ ಗಿಳಿಯ ಸರಸದ, ಶೃಂಗಾರದ ನುಡಿಗೆ ಅರಸನು ನಕ್ಕನು. ಗಿಳಿಯ ಈ ಮಾತುಗಳನ್ನು ಕೇಳುತ್ತ ,ತನ್ನಲ್ಲೇ ಯೋಚಿಸಿದನು. 'ಗಿಳಿಗೆ ಈ ರೀತಿಯ ಯೋಚನೆ ಹೊಳೆಯದು. ಸತಿಯೊಬ್ಬಳು ಈ ರೀತಿ ಕಲಿಸಿರಬೇಕು.' ಎಂದಾಲೋಚಿಸಿ, ಇದು ನನ್ನ ನಾದಿನಿಯೇ ಮಾಡಿದ ಕೆಲಸವೆಂದು ಮನಸ್ಸಿನಲ್ಲೇ ತಿಳಿದುಕೊಂಡನು. ಆಕೆಯ ಆ ಜಾಣ್ಮೆಗಾಗಿ ಅರಸನು ಮೆಚ್ಚಿದರೂ ಅದನ್ನು ಬಿಚ್ಚಿ ಹೇಳಲಿಲ್ಲ, ನಾದಿನಿಯನ್ನು ತಕ್ಕಿಸಿಕೊಳ್ಳಬೇಕೆಂಬ ಪ್ರೀತಿಯುಂಟಾದುದರಿಂದ ಒಂದು ತಂತ್ರ ಹೂಡಿದನು.

'ಮಕರಾಂದಾಜಿ, ಚೆಂದದಿಂದ ಮಾತನಾಡಿದುದು ಆ ಗಿಳಿ. ಅದನ್ನಿಲ್ಲಿಗೆ ಕೊಂಡು ಬಾ...'

ಆಕೆ ಗಿಳಿಯನ್ನು ತಂದು ಕೊಡುವಾಗ, ಆಕೆಯನ್ನು ಸಂತೋಷದಿಂದ ಬಿಗಿದಪ್ಪಿಕೊಂಡನು.

'ದೇವ ಅವಳಲ್ಲೇನ ಕಂಡು ಮೆಚ್ಚಿದಿರಿ?' ಎಂಬುದು ಕುಸುಮಾಜಿ ಭಾವಿಸಿ ಕೇಳಿದ ಪ್ರಶ್ನೆ.

'ನಿಮ್ಮ ತಂತ್ರವನ್ನು ನಾವಿಷ್ಟು ಬಲ್ಲೆವು' ಎಂಬುದು ಅರಸನ ಉತ್ತರ. ಅಷ್ಟೇ ಅಲ್ಲ ಅರಸನು ಮತ್ತೂ ಮಾತನಾಡಿದ.

'ಈಕೆಯಿಂದು ಈ ಗಿಳಿಗೆ ಓದಿಸಿದುದು ಹೊಸ ನುಡಿಯಲ್ಲವೆ? ಆಕೆಯ ಜಾಣ್ಮೆ ಹಸನಾದುದು. ಅದಕ್ಕಾಗಿ ಮನಮೆಚ್ಚಿ ತಕ್ಕಿಸಿಕೊಂಡುಬಿಟ್ಟೆ.'

'ಆಯಿತಲ್ಲ ತಂಗಿ; ನಾನಾಗಲೇ ಬೇಡವೆಂದೆ. ನೀನು ಒಪ್ಪದಾದೆ. ಹೋದ ಗಾಳಿಯ ಹೆಜ್ಜೆಯನ್ನು ಕಾಣುವವರೊಡನೆ ಹೇಗೆ ವಾದ ಮಾಡುವೆ?' ಎಂದು ತಂಗಿಗೆ ಹೇಳಿದ ಕುಸುಮಾಜಿ, ಮತ್ತೆ ಅರಸನೊಡನೆ ನುಡಿದಳು.

'ನಾನಾಗ ಮಾಡದಿಂದಿಲ್ಲಿಗೆ ಬರುವಾಗ ಗಿಳಿಗೆ ಹೊಸ ಮಾತು ಕಲಿಸುತ್ತಿದ್ದಳು. 'ಏನು ಹೇಳುತ್ತಿರುವೆ ತಂಗಿ'—ಎಂದುಕೇಳಿದೆ. 'ಅಕ್ಕ , ಭಾವಾಜಿ ಇಂದು ನಮ್ಮ ಮನೆಗೆ ಬರುವಾಗ ಗಿಳಿಯಿಂದ ನಾನು ಸರಸವಾಡಿಸುವೆನು. ಜಾಣ್ನುಡಿಯ ಲೆಕ್ಕ

ದೋರುವೆನು'— ಎಂದಳು. ನಿನ್ನ ಭಾವನನ್ನು ಜಯಿಸಲು ಸಾಧ್ಯವಿಲ್ಲ ತಂಗಿ. ಬಟ್ಟಬಯಲಲ್ಲಿ ರೂಪ ಬರೆಯುವವರು ಅವರು. ಬಯಲಿಗೆ ಪ್ರಯಾಸಗೊಳ್ಳಬೇಡ ಎಂದೆ. ನನ್ನ ಮಾತು ಮೀರಿದಳಾಗ. ಬೇಡವೆಂದರೆ, ಕೇಳಲಿಲ್ಲ, ಅರಗಿಳಿಯನ್ನೇ ಕೊಡೆಂದು ಬೇಡಿದ ಕೂಡಲೆ ಗಿಳಿಯೊಡನೆ ಹಿತ್ತಲಿಗೆ ಓಡಿದಳು. ಹಿಡಿಯಲು ಹೋದ ಸಖಿಯರಿಗೂ ಸಿಗಲಿಲ್ಲ, ಇವಳೊಡನೆ ಆಟದ ವೇಳೆಯಲ್ಲವೆಂದು ನಾನು ಭವನಕೃತ್ಯದಲ್ಲಿದ್ದೆ, ಅವಳು ಅರಗಿಳಿಯನ್ನೋಡಿಸಿಕೊಂಡು ಬಂದಳು. ಏನವಳ ಉತ್ಸಾಹ ! ಈ ಕನ್ಯೆ ಕೌಟಿಲಗಾತಿಯೇ!''

'ಏನು ಮಾಡಿದೆನಕ್ಕ ನಾನಿಲ್ಲಿ —ನಿನಗೂ ನಿನ್ನರಸನಿಗೂ ಕುಟಿಲ ತಂತ್ರವನ್ನು? ಗಿಳಿಯ ತಾರೆಂದು ಚೇಷ್ಟೆಯ ಮಾಡುವ ನಿನ್ನ ಪತಿಯೇ ಕುಟಿಲ.'

'ಮುಚ್ಚು, ಮುಚ್ಚೆ ನಿನ್ನ ಬಾಯನ್ನು. ಸ್ವಾಮಿ ಮೆಚ್ಚನ್ನಿತ್ತರೆ ಚೇಷ್ಟೆಯೆಂದೆ.'

'ಮೆಚ್ಚದು ನಿನಗಿರಲಿ. ನಾನೇನು ಇವನ ಹೆಂಡತಿಯೆ? ಬೆಚ್ಚಂತೆ ಅಪ್ಪುವುದಕ್ಕೆ. ಅಕ್ಕನನ್ನು ನೋಡಬೇಕೆಂದು ನಿನ್ನ ಬೀಡನ್ನು ಹೊಕ್ಕರೆ ನನಗೀಗ ಫಲದೋರಿತು. ಚಿಕ್ಕನೆ ನಮ್ಮೂರಿಗೆ ಹೋಗುತ್ತೇನೆ. ನಿನ್ನೂರ ದಿಕ್ಕು ನೋಡಿದರೆ ನಾನೇನು ಹೆಣ್ಣೆ? ಇವನು ನಮ್ಮ ಮಾನಭಂಗ ಮಾಡಿದ. ಆನೆಯಂತೆ ಎಳೆದು ಅಪ್ಪಿಕೊಂಡ, ದೊಡ್ಡ ಭೂನಾಥನೆಂಬ ಹೆಮ್ಮೆಯಿಂದ.'

ಮತ್ತೆ ಮಾತು ಬರಲಿಲ್ಲ, ಅಳುವಂತೆ ಮೊಗವನ್ನು ಕಿರಿದು ಮಾಡಿ ಕೊಂಡಳು. ತಲೆವಾಗಿದ್ದರೂ ದೃಷ್ಟಿ ಅರಸನೆಡೆಗೆ ಓಡುತ್ತಿತ್ತು; ಒಳಗೆ ಸಂತಸವುಂಟು. ಕಣ್ಣಲ್ಲಿ ನೀರಿಲ್ಲ; ಆದರೂ ಬಿಕ್ಕಳಿಸುತ್ತ ನುಡಿಯುವಳು. ಮಕರಂದಾಜಿಯ ಮನದ ಇಂಗಿತ ಭರತೇಶನಿಗೆ ಅರಿಯದಿರಲಿಲ್ಲ, ಅವನೂ ಮೆಚ್ಚುತ್ತ, ಸಂತಸಗೊಳ್ಳುತ್ತ ಮುಗುಳು ನಗುತ್ತ ಶಿರದೂಗುತ್ತಿದ್ದನು; ಆಗಾಗ ಕುಸುಮಾಜಿಗೂ ಕಣ್ಣನ್ನೆ ಮಾಡುತ್ತಿದ್ದನು. ಕುಸುಮಾಜಿ ಯಾದರೋ ತರಳೆಯ ತಕ್ಕಿಗಾಗಿ ಒಳಗೊಳಗೆ ಬೆರಗಾಗುತ್ತಿದ್ದಳು.

'ಮಕರಂದೆ, ನಿನಗೇಕೆ ಇಷ್ಟು ವ್ಯಾಕುಲ?'

'ಹೋಗಕ್ಕ. ನಿನ್ನಿಂದ ನಾನಿಂದು ಕಾಕಾದೆ.'

'ಅಯ್ಯೋ. ನಿನಗೇನು ಕೊರತೆಯಾಯಿತೆ?'

'ಕೊರತೆಯ ಮಾತೇ? ಅನ್ಯರು ಅಪ್ಪಲು ಸಾವಲ್ಲದೆ ಮತ್ತೇನು? ಕ್ಷತ್ರಿಯಪುತ್ರಿ ಈ ರೀತಿ ಮಾತನಾಡುವುದೆ?''

'ಕೋವಿದನ ಇದಿರಲ್ಲಿ ಕೃತಕ ಸಲ್ಲದು. ನಿನ್ನ ಭಾವಾಚಿ ಭಾವಜ್ಞನು. ಇದನ್ನು ತಿಳಿದುಕೋ. ನಿನ್ನ ಕಣ್ಣೀರು ಕಂಡು ಎದೆನೋವುತಿದ್ದನು.'

ಮಕರಂದಾಜಿಯಾಗ, ಕುಸುಮಾಜಿಯ ಮಾತು ಕೇಳಿ ಕಣ್ದೊರೆಸಿಕೊಂಡಳು. ಆದರೂ ನಯನವಾರಿ ಇಳಿದು ಬರುತ್ತಿತ್ತು, ಇದನ್ನು ಕಂಡ ಅರಸನು ತನ್ನ ಮನದಲ್ಲೇ ಭಾವಿಸುತ್ತಿದ್ದ,

'ನಮ್ಮರಸನ ಮುಂದೆ ಹೆಮ್ಮಕ್ಕಳಿಗೆ ದುಃಖದ ಕಣ್ಣೀರು ಬಾರವು. ಸುಮ್ಮಾನದಿಂದ ಕಣ್ಣೀರು ಒಸರುವುದುಂಟು. ನಿನಗೀಗ ಉಕ್ಕಿದ ಅಶ್ರುಗಳು ಲೇಸಾದುದು.' ಎಂದು ಕುಸುಮಾಜಿ ಮತ್ತೆ ಮಾತನಾಡಿದಳು.

'ನಿನಗೇನು ಗಂಡನೆಂದು ಅವನನ್ನು ಬಣ್ಣಿಸುವೆ. ನನಗಾತನನ್ನು ಕಂಡರೆ ಸೇರುವುದಿಲ್ಲ. ನಮ್ಮನ್ನು ಬಂಡುಮಾಡುವ ಅವನಾಟವನ್ನು ನಾನು ಕಂಡಿಲ್ಲವೆ?'

'ಸಾಕು ತಂಗಿ. ಗಿಳಿಯೋದಿನಿಂದಿಷ್ಟು ಮಾತಾದುದು.' ಎಂದ ಕುಸುಮಾಜಿಯ ನುಡಿಗೆ ಮಕರಂದಾಜಿ ತಲೆವಾಗಿ ನಗುತಿದ್ದಳು.ಆಗ ಅರಸನು ಮತ್ತೊಂದು ಸರಸ ಹೂಡಿದನು. ಕುಸುಮಾಜಿ ಅದನ್ನು ಸಮರ್ಥಿಸಿ ಅರಸನನ್ನು ಕೊಂಡಾಡಿದಳು. ಆದರೆ ಮಕರಂದಾಜಿಯ ಕೋಪ ಕೆರಳಿತು.

'ಏನು ನುಡಿವೆ ಅಕ್ಕ? ನೀನಿವನಿಗೆ ಸೋತು ತವರೂರಿಗೆ ಹೀನದೋರುವೆ. ನಿನ್ನರಸನು ಆಳುವಷ್ಟು ರಾಜ್ಯ ನಮಗಿಲ್ಲದಿದ್ದರೂ ನಾವೇನು ವಂಶದಲ್ಲಿ ಕಡಿಮೆಯಲ್ಲ. ನಲ್ಲನು ಒಲಿದು ತಾನು ಸುಖಿಯಾದೆನೆಂದು ಹೇಳಬಹುದು; ಆದರೆ ಎಲ್ಲರನ್ನೂ ಕ್ಷೀಣಗಾಣಿಸುವುದು ಬಲ್ಲಿಕೆಯೇ?' ಎಂದು ಕ್ಷತ್ರಿಯಾತ್ಮಜೆಯೆಂಬ ಬಲ್ಲಿತವನ್ನು ತೋರಿ ಅಕ್ಕನನ್ನು ಜರೆದಳು.ಆದರೂ ಭಾವನ ರೂಪು ಕುಲ ಶೀಲ ಹೆಚ್ಚೆಂದು ತನ್ನಲ್ಲೇ ಮೆಚ್ಚುತ್ತಿದ್ದಳು. ಅದರೊಡನೆ ತವರೂರಿನ ಹೆಚ್ಚಳವನ್ನೂ ಹೊಗಳುತಿದ್ದಳು.

'ಕ್ಷೀಣಭಾಗ್ಯದ ರಾಜಸುತೆ ದೊಡ್ಡರಾಯನಿಗೆ ರಾಣಿಯಾದರೆ ತನ್ನ ಜಾಣತನದಿಂದ ತವರೂರನ್ನು ಆತನಿಗೆ ಸರಿಗಾಣಿಸದೆ ಇರುವಳೇ ಹೇಳಕ್ಕ? ಬಡದೊರೆಯ ಮಗಳು ಬಲುದೊರೆಯ ಕೈ ಹಿಡಿದಾಗ ಪುರುಷನನ್ನು ಒಲಿಸಿಕೊಂಡು ಈ ಮನೆಗೆ ಆ ಮನೆಯೂ ಸರಿಯೆಂದು ನಡಿಯಿಸದಿದ್ದರೆ ಆಕೆ ರಾಜಕುಮಾರಿಯೆ ಹೇಳಕ್ಕ? ಕಟ್ಟಾಣಿವೆಣ್ಣು ಎನಿಸುವ ಕ್ಷತ್ರಿಯ ಕುಮಾರಿಯು ಪಟ್ಟವರ್ಧನನ ಕೈಹಿಡಿದು ಹುಟ್ಟಿದ ಮನೆಯನ್ನೂ ಹೊಕ್ಕ ಮನೆಯನ್ನೂ ಸರಿಗಟ್ಟಿ ನಡಿಸುವುದೇನೊಂದು ತಿಳಿಯದ ವಿಚಾರವೇ? ಅವಳು ತವರು ಮನೆಯನ್ನೂ ತನ್ನ ಪತಿಯ ಮನೆಯನ್ನೂ ಬೆಳಗಬೇಕು. ತನ್ನ ಮನವನ್ನೂ ಪತಿಯ ಮನವನ್ನೂ ಬೆಳಗಬೇಕು. ಹಾಗೆ ಬೆಳಗದಿದ್ದವಳು ಮಾನವಪತಿಯ ಮಗಳಾಗುವಳೇ? ರಾಜಪುತ್ರಿಯರ ಲಕ್ಷಣವಿವು. ನೀನು ಇವರ ತೇಜಸ್ಸನ್ನೆಲ್ಲ ಬಿಟ್ಟು ನಿನ್ನ ರಾಜನೇ ಘನನೆಂದು ಹೊಗಳುತ್ತಿರುವೆ. ಇದು ಬಲ್ಲತನವೆ? ನೀನೇ ಹೇಳು ಕುಸುಮಾಜಿ.'

'ಜಾಣೆ, ನಿನಗಾ ಗುಣ ಆದೀತು. ನೀನೊಬ್ಬ ಭೂಪನ ಕೈಹಿಡಿದಾಗ ನಿನ್ನ ಜನನಿಜನಕರ ಬಲ್ಮೆಯನ್ನು ಅಲ್ಲಿ ತೋರಿಸು. ನನಗೆ ಬಾರದು ಬರಿ ಹೆಮ್ಮೆ. ನಾಡಾಡಿಗಳಿಗೆ ನಾಡಾಡಿಗಳನ್ನು ಸರಿ ಮಾಡಬಹುದು. ನಾಡೆಲ್ಲವನ್ನೂ ಒಂದೇ ಕೊಡೆಯೊಳಗೆ ಆಳುವವನನ್ನು ಮಿಕ್ಕವರೊಡನೆ ಸರಿ ಮಾಡುವುದು ಹೇಗೆ? ಪ್ರಥಮ ತೀರ್ಥೇಶನ ಹಿರಿಯ ಕುಮಾರನಿಗೆ, ಪ್ರಥಮ ಚಕ್ರಿಗೆ, ಕಟ್ಟ ಕಡೆಯ ಪೃಥುಳ ಮನುವಿಗೆ, ಯಾರನ್ನು ಸರಿಯಿಡಬಹುದು? ನೀನೇ ಹೇಳು. ಹೊರಗನ್ನು ಮೆಚ್ಚಿದ ಕುರುಬರಿಗೆ ಕುರುಬರನ್ನು ತಂದು ಚೆನ್ನಾಗಿ ಹೋಲಿಸಬಹುದು. ಒಳಗೇ ಆತ್ಮತತ್ತ್ವವನ್ನರಿತು ಮೆಚ್ಚಿ ಸುಖಿಸುತ್ತಿರುವ ನಮ್ಮ ಒಡೆಯನಿಗೆ ಯಾರನ್ನು ಎಣೆಯೆನಬಹುದು?ಕಂಡದ್ದನ್ನೇ ಹೇಳುವೆನೀಗ; ಕೇಳು ತಂಗಿ. ನಮ್ಮ ದೊರೆ ಒಲಿದು ಕಂಡರೆ ಮಾತ್ರ ಅರಸುಮಕ್ಕಳು; ಮುನಿದು ನೋಡಿದರೆ ಎಲ್ಲರೂ ದಾಸರೆ, ಸಾಕು ನಿನ್ನೀ ದೊಡ್ಡಸ್ತಿಕೆ. ನಿಗರಣೆ ಪಗರಣೆಗಳೆಲ್ಲ ಇಲ್ಲಿ ಸಲ್ಲದು ತಂಗಿ. ತವರೂರಿನ ಒಡನಾಟದ ಸೊಕ್ಕಿನಿಂದ ಈ ಕೇಡನ್ನು ನುಡಿಯುತ್ತಿರುವೆ. ಬಿಡು ಅದನ್ನು.'

'ಹೇಗೆ ಒಲಿಸಿಕೊಂಡನೋ ನಿನ್ನನ್ನು ಈ ಮಾಯಗಾರ.ತಾನಲ್ಲದೆ ಅನ್ಯರು ನಿನ್ನದೆಯೊಳಗಿಲ್ಲ. ಇದರಿಂದ ನಮ್ಮ ಒಲುಮೆಗೆ ಹಾನಿಯಾಯಿತು. ಮಾನವನ್ನೀತನಿಗೆ ಮಾರಿದೆ. ಇಂದ್ರಿಯಗಳು ಐದನ್ನೂ ಅನುರಾಗ ಮಿಕ್ಕಿ ಸೂರೆ ಮಾಡಿದೆ. ದೇಹವನ್ನೂ ದಂಡಿಸಿದೆ. ತವರೂರನ್ನು ಬಿಟ್ಟುಕೊಡುವುದು ನಿನಗೆ ಗಣ್ಯವೆ? ಇವನು ಕೊಡುವ ವೀಳೆಯದಲ್ಲಿ ಮದ್ದುಂಟೋ? ತಿಲಕದಲ್ಲಿ ಬೇಳುವೆಯುಂಟೋ? ಇಲ್ಲದಿದ್ದರೆ ನೀನಿಂತಾಗುತಿದ್ದಿಲ್ಲ. ಹುಸಿಯಲ್ಲ ಅಕ್ಕ.'' ಎಂದು ಮಕರಂದಾಜಿ ತನ್ನ ಅನುಭವವನ್ನೇ ವಿವರಿಸಿದಳು.ಏನು ಹೇಳಲಿ ನಿನ್ನ ಗಂಡನ ಮಾಯವನೆಂದು ಚೋದ್ಯಪಟ್ಟಳು.

ಆಕೆ ಹೇಳುವ ಮಾತನ್ನು ಕುಸುಮಾಜಿಯೊಡನೆ ರಾಯನೂ ಕೇಳುತ್ತಿದ್ದನು.ಮರುಕ, ಮುನಿಸು, ಲಲ್ಲೆ, ಗಂಭೀರ, ಜಾಣ್ನುಡಿ, ಕರೆಮರೆ, ಭಯಭಕ್ತಿ, ಗರ್ವ,ದೊಡ್ಡಸ್ತಿಕೆಗಳನ್ನೆಲ್ಲ ಎಲ್ಲ ಕಲಿತಳೆಂದು ಬೆರಗಾಗಿ ತಲೆದೂಗುತ್ತಿದ್ದನು. ಆಕೆಗೆ ಚಿತ್ತದಲ್ಲೇ ಸೋಲುತ್ತಿದ್ದನು. 'ಎಳುವ ಮೊಳೆಯಲ್ಲೇ ಕೊಂದುಕೂಗುವ ಇವಳು ಎಳೆಲೆ ಹೋದ ಮೇಲೆ ನಮ್ಮನ್ನು ಬಾಳಲು ಬಿಡುವಳೇ?' ಎಂದು ಮನಸ್ಸಿನಲ್ಲೇ ಯೋಚಿಸುತಿದ್ದವನು ಮತ್ತೆ ಮಾತನಾಡಿದನು.

'ಕುಸುಮಾಜಿ, ನೊಂದಿರುವಳು ಮಕರಂದಾಜಿ. ಅವಳನ್ನು ಕರೆ. ಮನ್ನಿಸುವೆನು.'

'ತಂಗಿ, ಬಾ' ಎಂದು ಅರಸಿ ಕರೆದರೆ 'ಹೋಗೆ' ಎಂದು ಕೋಪಿಸಿದಳು ತಂಗಿ. 'ಆಗ ನಿನ್ನ ವಲ್ಲಭನ ಒತ್ತಿಗೆ ಹೋದಾಗ ಮನ್ನಿಸಿದ್ದೇ ಸಾಕು.'

'ಮೊದಲ ಮನ್ನಣೆ ನಿನ್ನನ್ನು ನೋಯಿಸಿತು. ಅದನ್ನು ಮೀರಿದ ಮನ್ನಣೆ ಕೊಡುವೆನು' ಎಂದು ಅರಸನೇ ಮಾತು ಕೊಟ್ಟ.

'ಕೆದರಿಸದಿರು ನನ್ನ ಚಿತ್ತವನ್ನು' ಎಂದು ಭಾವನಿಗೂ ಕೋಪದ ಉತ್ತರವನ್ನೇ ಕೊಟ್ಟಳು. ಉತ್ತರದ ಮೊನೆ ಮತ್ತೂ ಮತ್ತೂ ಮುಂದುವರಿಯಿತು.

'ಅಯ್ಯಯ್ಯೋ. ನೀನೊಬ್ಬ ಭೂಪತಿ ಬಂದೆ ಈ ಭೂಮಿಗೆ.ಮಾನಿನಿಯರ ಕಂಡರೆ ಅಪ್ಪಿಕೊಳ್ಳುವುದೇ ನಿನ್ನ ಧ್ಯಾನವು. ಒಬ್ಬರೆ? ಇಬ್ಬರೆ?' ಎಂದೊಮ್ಮೆ ಮೂದಲಿಸಿ ನುಡಿವಳು. 'ನಿನ್ನ ಬಗೆಯ ಕಂಡರೆ ಹುಚ್ಚು ನಗೆ ಬರುತ್ತದೆ' ಎಂದು ಕಿಲಕಿಲನೆ ನಗುವಳೊಮ್ಮೆ 'ದೊಡ್ಡತನವೆ ನಿನಗಿದು ಭಾವಾ?'' ಎಂದು ನುಡಿದು ನುಡಿದು ಎಡಿಸುವಳು ಇನ್ನೊಮ್ಮೆ.

ರಾಯನು ಅದನ್ನೆಲ್ಲ ಅಸಡ್ಡೆಯಿಂದಲೇ ಕೇಳುತ್ತಿದ್ದನು. ರಾಯನಿಗೆ ನಾದಿನಿಯಲ್ಲಿ ಚಿತ್ತದ ಬೆಸುಗೆಯಾದುದೆಂದು ಕುಸುಮಾಜಿ ಅರಿತುಕೊಂಡಳು.ಆದರೆ ಪುರುಷಭಕ್ತಿಯಿಂದ ಅದನ್ನು ಹೇಳದೆ, ಹುಸಿಜಗಳವನ್ನೇ ನೋಡುತಿದ್ದಳು.

'ಎಲೆ ಧೂರ್ತೆ.ನಿನಗೆ ಮನ್ನಣೆ ಕೊಡುವೆನೆಂದರೆ ನನ್ನನ್ನೇಕೆ ಹಳಿಯುವುದು?'

'ಬಲು ಧೂರ್ತ ಹೋಗು. ನಿನ್ನ ಮನ್ನಣೆ ನಿನಗೇ ಇರಲಿ.'

ಈ ಮಾತನ್ನು ಕೇಳಿ ರಾಜನೂ ನಕ್ಕನು.

'ನಾನು ಧೂರ್ತ ನೀನು ಧೂರ್ತೆ. ಅಹುದಹುದು. ಹಾಗಾದರೆ ಅರ್ಥವೇನಾಯಿತು?'

'ಭಾವಾ. ಎಲ್ಲಿರಿಸಿದೆ ನಿನ್ನ ಗಂಭೀರ ಗರ್ವವನ್ನು? ರಾಚೋಲ್ಲಾಸದ ಗಮಕವನ್ನು ಎಲ್ಲಿರಿಸಿದೆ? ' ಚೆಲ್ಲಾಟಕ್ಕೆ ಪ್ರೀತಿಯಾಯಿತೆಂದು ಭಾವನನ್ನು ಜರೆದಾಡಿದಳು.

ರಾಯನಿಗೆ ಅವೆಲ್ಲವೂ ಸವಿಯಾಯಿತು.

'ಸಭೆಯಲ್ಲಿ ಕುಳಿತಾಗ ನಾಲ್ಕೆಂಟು ವಚನಗಳು ದುರ್ಲಭವಾಗಿರುವುವು— ಭಾವ ನಿನಗೆ. ಅಭಿಮುಖ ಪಡೆದೀಗ ವಚನ ಸುಲಭವಾಗಿ ಹುಟ್ಟಿರುವ ಅಂದವೇನು?'

'ನೊಂದಳೆಂದು ಹೇಳಿದುದಕ್ಕಾಗಿ ಮನ್ನಣೆ ಕೊಡುವೆನೆಂದು ಹೇಳಿದೆ. ಇನ್ನು ಒಂದು ಮಾತನ್ನೂ ಆಡುವುದಿಲ್ಲ.'

'ಹಿಂದೆ ನೀನಿತ್ತ ಮನ್ನಣೆಯೇ ಭಾರವಾಗಿದೆ ನನಗೆ' ಎಂದು ಮಕರಂದಾಜಿ ಹಾರವನ್ನು ತೆಗೆಯಲು ಕೈಹಾಕಿದಳು. ಅದರದು ಕೊರಳಿಂದ ಬರುವಂತಿರಲಿಲ್ಲ. ಇದನ್ನು ಭಾವನೇ ಸ್ತಂಭನಗೈದನೆಂದು ಮನಸ್ಸಿನಲ್ಲೇ ಉಬ್ಬಿನಕ್ಕಳು.

'ನೀನಿತ್ತ ಈ ಕೊರಳ ಹಾರವೂ ಏಕೆ ಬರುವುದಿಲ್ಲ. ನಿನ್ನಂತೆ ಅದು ಕೂಡ ಬಾಕುಳಿ, ಸಾಕು; ಬಿಡು ಎಂದರೂ ಬಿಡದಿದೆ' ಎಂದಾಕೆ ಚೆಲ್ಲದಲ್ಲೇ ನುಡಿದಳು.

'ಕೊಡುವಾಗ, ಕೊರಳಿಗೊಂದು, ಎದೆಗೊಂದು, ಬಾಯ್ಗೊಂದು ತೊಡಿಗೆಗಳನ್ನು ನಾ ಕೊಟ್ಟೆ. ಎರಡನ್ನು ನೀನಿಟ್ಟುಕೊಂಡು ಒಂದನ್ನೇ ಕೊಡಬಂದರೆ ಅದು ಬಂದೀತೇ?' ಎಂದರಸನು ವಿವರಿಸಿದನಾಗ. 'ಕೊಟ್ಟ ಒಡವೆಗಳನ್ನು ತೆಗೆದು ಕೊಳ್ಳುವವರು ನಾವಲ್ಲ, ಅವನ್ನು ಮುಟ್ಟಬೇಡ. ಅದು ನಿನಗಿರಲಿ. ವೆಟ್ಟೆತಿಟ್ಟೆಯಲ್ಲಿ ನೀನಾಡಿದ ಮಾತುಗಳಿಗೆ ತಕ್ಕ ತಿಟ್ಟವನ್ನು ಮಾಡುವೆವು. ಯಾವುದಕ್ಕೂ ಆರು ತಿಂಗಳಾಗಲಿ.'

'ಬಿರುಬೆದರೇನು ಭಾವ. ನೀನು ಕಂಡುದನ್ನು ಹೇಳು ನನಗೆ?'

'ಬಿಡಿಸಿ ಹೇಳಬೇಕೆ?'

'ಬೇಕು'

'ಹಾಗಾದರೆ ಕೇಳು. ನಿನ್ನನ್ನು ನಿಮ್ಮಕ್ಕನ ಸವತಿಯಾಗಿ ಮಾಡುವೆನು.'

ಈ ಮಾತು ಕೇಳಿ ನಗೆ ಬಂದರೂ ಮಕರಂದಾಜಿ ಅಲ್ಲಿ ಎಲ್ಲಿಲ್ಲ,ಕಂಭದ ಮರೆಯಲ್ಲಿ ಮರೆಯಾದಳು.

ಈಗ ಕುಸುಮಾಜಿಗೆ ಸಂತೋಷವಾಯಿತು. ಅವಳು ತಂಗಿಯನ್ನು ಕರೆದು ಅರಸನ ನುಡಿ ಹುಸಿಯಾಗದೆಂದು ತಿಳಿಸಿದಳು. 'ನಾಳೆಯೆ, ನಮ್ಮ ಅಪ್ಪಾಜಿಯನ್ನು ಕರೆಯಿಸುವೆನು. ನಿನಗೆ ಹೊಸ ಸಿರಿಯನ್ನೇ ಮಾಡಿಸುವೆನು. ಧಾರಿಣೀಶನ ಕರದಲ್ಲಿ ನಿನ್ನಕರವನ್ನಿರಿಸಿ ಧಾರೆಯೆರೆಯಿಸುವೆನು.'

ಮಂಗಳೋತ್ಸವವಾಯಿತೆಂದು ನಗುತ್ತ ಕುಸುಮಾಜಿ ತಂಗಿಯಿದ್ದೆಡೆಗೆ ಹೋಗಿ ಪುರುಷನಿಗೆ ಉತ್ತರವಿತ್ತ ದೋಷವನ್ನು ಹಿಂಗಿಸಿಕೊಳ್ಳಲು ಸೂಚಿಸಿದಳು.

'ನನಗಿಷ್ಟು ಬುದ್ಧಿ ಹೇಳಿದ ಜಾಣೆ, ನಿನಗೆ ತಿಳಿಯದೆ. ಇನಿಯನಿಗೆರಗು. ದೋಷವಳಿವುದು ಬಾ' ಎಂದು ತಂಗಿಯ ಕೈ ಹಿಡಿದು ಕರೆದಳು.

ಆದರೆ ಮಕರಂದಾಜಿಯ ಸ್ಥಿತಿಯೊ?

ಒಲ್ಲದಂತೆ ಅತ್ತಿತ್ತ ಒಲೆವಳು. ನಾಚುವಳು; ಅಲ್ಲಲ್ಲಿ ನಿಲ್ಲುವಳು. ಅಕ್ಕನನ್ನು ಆಧರಿಸಿದ ಆಕೆ, ಅಕ್ಕನ ಅಡಿಯಲ್ಲೆ ಅಡಿಯಿಟ್ಟು ಮೆಲ್ಲಗೆ ಇದಿರಿಗೆ ಬಂದಳು.

ಮೊದಲಾಡಿದ ನುಡಿ,ನೋಟ,ಚೆಲ್ಲಾಟ, ನಗೆಯಸೊಕ್ಕು ಈಗ ಎಲ್ಲಿ ಹೋದುದೊ ! ನಲ್ಲನ ನೋಡಳು. ಅಂಜುತ್ತ, ಲಜ್ಜೆಗೊಳ್ಳುತ್ತ, ಎಳೆಹುಲ್ಲೆಯಂತಿದ್ದಳು !

'ಪಾದಕ್ಕೆರಗು' ಎಂದಾಗ ಅಕ್ಕನನ್ನು ಆಧರಿಸಿಕೊಂಡೇ ಅವಳು ಬಗ್ಗಿಸಿದಂತೆ, ಅರಸನಿಗೆ ಎರಗಿದಳು.

'ತಪ್ಪು ಪಾಲಿಪುದೆಂದು ಹೇಳು—ತಂಗಿ' ಎಂದರೆ ಮಾತ್ರ ಕೇಳಲಿಲ್ಲ. 'ತಪ್ಪು ನನ್ನಲ್ಲಿಲ್ಲ; ನಿನ್ನ ಗಂಡನಲ್ಲಿ, ತಪ್ಪದೆ ಗಿಳಿಯ ತಂತ್ರವನ್ನು ತಿಳಿದು ಹೇಳಿದುದಕ್ಕೆ ಎರಗಿದೆನು. ಒಪ್ಪುಕೊಳ್ಳು' ಎಂದು ಕೂಡಲೆ ಎದ್ದಳು.

ಮನಸ್ಸಿನ ಉಲ್ಲಾಸದಿಂದ, ತನಗೆರಗಿದ ಹೆಣ್ಣನ್ನು ನೋಡಿ 'ಮೊನೆಗಾತಿ, ಬಲು ಮೋಡಿಗಾತಿ' ಎಂದು ರಾಜನೇ ಹೇಳಿಕೊಂಡನು.

ಆಗ, ಕುಸುಮಾಜಿ ಅರಸನನ್ನು ನೋಡಿ, 'ಇವಳೊಡನೆ ಆಟ ಸಾಲದೆ? ಭೋಜನಕಿನ್ನು ವೇಳೆ ಮೀರಿತು ದೇವ. ಮೇಲಿನ ಮಾಳಿಗೆಗೆ ಚಿತ್ತೈಸು' ಎಂದು ಬಿನ್ನವಿಸಿದಳು.

ಅರಸನು, ಕೆಲದಲ್ಲಿದ್ದ ಅಮೃತವಾಚಕನ ಮೈದಡವಿ 'ಸರಸನಪ್ಪ ನೀನು' ಎಂದು ನುಡಿದು, ನವರತ್ನ ಪಂಜರವನ್ನು ತರಿಸಿ, ಅದರಲ್ಲಿರಿಸೆಂದು ಕೊಟ್ಟನು. ಕಾಂತೆಯ ಕೈಹಿಡಿದು, ಜಿನಸಿದ್ಧ ಶರಣೆನುತ ಮೇಲ್ನೆಲೆಗೆ ನಡೆದನು.

# ೧೦

# ಸನ್ಮಾನ

ಭೂಪತಿಯು ಸತಿಯ ಕೈವಿಡಿದು ಮೇಲಿನ ನೆಲೆಗೆ ನಡೆದು ಬಂದನು. ಅಲ್ಲಿನ ಕಲಾಮಯವಾದ ಸಿಂಗರವನ್ನು ಕಂಡ ಅರಸನು ಕುಸುಮಾಜಿಯೊಡನೆ ಆ ಕುರಿತು ಮಾತನಾಡಿದನು. ರತಿದೇವಿಯೊಡನೆ ಮನ್ಮಥ ನುಡಿವಂತೆ ಲಲಿತವಾದ ವಾಕ್ಯದಿಂದಲ್ಲೇ ನುಡಿದನು.

''ಕುಸುಮೆ, ನಿನ್ನ ಹೆಸರಿನಂತೆ ನಿನ್ನ ಮನೆಯೂ ಕುಸುಮೋಪಹಾರದಲ್ಲೇ ಎದ್ದು ತೋರುತ್ತದೆ. ಅಲ್ಲಿ ಪೂರ್ಣ ಕುಸುಮಮಾಲೆಗಳ ಮೇಲ್ಕಟ್ಟಿಂದಲೇ ವ್ಯಾಪಿಸಿರುವುದು ಸೊಗಸಾಗಿದೆ. ಶೃಂಗಾರಕ್ಕಾಗಿ ಈ ನಡುರ್ಝುಲ್ಲಿಯ ಪಟ್ಟೆಪರ್ವತವನ್ನು ಎಲ್ಲಿಂದ ತರಿಸಿದೆ? ಇವು ನಮ್ಮ ಮಾವಾಜಿಯರ ಮನೆಯಿಂದ ಬಂದವುಗಳೇ? ಮುತ್ತು ಮಾಣಿಕದ ಈ ಲಂಬಣವು ಸೊಗಸಾಗಿದೆ. ಅಳಿಯನ ಚಿತ್ತಕ್ಕೆ ಉತ್ಸವವಾಗಲೆಂದು ಅತ್ತೆಯವರಿದನ್ನು ಕಳುಹಿಸಿದರೇನು? ಬಿಳಿಬಣ್ಣದ ಈ ಮೇಲ್ಕಟ್ಟುಗಳು ಹೊಸತೆರನಾಗಿವೆ. ತಂಗಿಯ ಕಣ್ಣಾರ್ತಿಗಾಗಿರಲೆಂದು ನಿನ್ನ ಅಣ್ಣಂದಿರು ಅವುಗಳನ್ನು ಕಳುಹಿಸಿದರೆ? ಅಕ್ಕನ ಸುಮ್ಮಾನಕ್ಕಿರಲೆಂದು ನಿನ್ನ ತಮ್ಮಂದಿರು ಕಳುಹಿಸಿದರೆ?'' ಎಂದು ಅರಸ ಒಂದೊಂದನ್ನು ನೋಡಿ, ತನ್ನ ಮೆಚ್ಚನ್ನು ವ್ಯಕ್ತಗೊಳಿಸಿದನು.

''ಕುಸುಮೆ ಸಾರಣೆ ಚೆನ್ನಾಗಿದೆ.

ಕುಸುಮಿ, ಕುಂಕುಮದ ಸಾರಣೆಯೂ ಚೆನ್ನಾಗಿದೆ.

ಕುಸುಮು, ತೋರಣವೂ ಚೆನ್ನಾಗಿದೆ.

ಕುಸುಮಾಜಿ ಚಳಯಗೊಟ್ಟುದೂ ಲೇಸಾಗಿದೆ.

ಕುಸುಮಾಂಗಿ, ಹೊಸ ರಂಗವಲ್ಲಿಯೂ ಲೇಸಾಗಿದೆ.

ಕುಸುಮಕೋಮಲೆ, ಈ ನಿಳಯದ ಶೃಂಗಾರವೇ ಸೊಗಸಾಗಿದೆ.''

— ಎಂದು ರಾಯನು ಚಿನನಾಣೆಯಿಟ್ಟು ನುಡಿದನು.

''ಈ ಗೃಹವೇ ನವರತ್ನಮಯವಾಗಿ, ಹೇಮಮಯವಾಗಿ ಮಹಿಮೆಗೊಂಡಿದೆ. ನಾನಿಷ್ಟು ವಸ್ತುಗಳನ್ನು ನಿನಗಿತ್ತುದಿಲ್ಲ, ನೀನಿವುಗಳನ್ನು ಎಲ್ಲಿಂದ ಸಂಗ್ರಹಿಸಿದೆ? ಹೇಳು''— ಎಂದು ರಾಯನು ಮತ್ತೂ ಕೇಳಿದನು.

''ತವರೂರು ಗಿವರೂರು ಹಂಗು ನನಗೆ ತಿಳಿಯದು. ನಮ್ಮರಸನ ಅರಮನೆಯಲ್ಲಿ ನವನಿಧಿಯೇ ಉಂಟು. ಅದರಿಂದ ನನಗೆ 'ಇವೆಲ್ಲ ಗಣ್ಯವೇ ಅಲ್ಲ'' ಎಂದು ಕುಸಮಾಜಿ ಗಂಡನ ಪ್ರಶ್ನೆಗೆವಿತ್ತರಿಸಿದಳು.

ತನ್ನ ಮೇಲಿನ ಪ್ರೀತಿಯಿಂದ,ತನ್ನ ತವರೂರನ್ನು ರಾಯನಿಂತು ಬಣ್ಣಿಸಿದನೆಂದು ಆಕೆ ತನ್ನೆದೆಯಲ್ಲೇ ಭಾವಿಸಿಕೊಂಡು, ಅದಕ್ಕಾಗಿ ಹಿಗ್ಗದೆ, ಮನಸ್ಸಿನಲ್ಲೇ ರಾಜನ ಉನ್ನತಿಯನ್ನು ಹೇಳಿಕೊಂಡಳು. ಅವನೀಶರನ್ನೆಲ್ಲ ಅವನಿವನೆಂದು ಹೇಳುವ ತನ್ನ ದೊರೆಯು ಇವರವರೆಂದು ತನ್ನನ್ನು ಪಡೆದವರನ್ನು ಹೇಳಿದನೆಂದು ಆಕೆ ಮನದಲ್ಲೇ ಹಿಗ್ಗಿದಳು. ಸೇವಕರನ್ನು ಕರೆವಂತೆ ರಾಜರನ್ನು ಕರೆಯುತ್ತಿರುವ ತನ್ನ ರಾಯನು, ತನ್ನನ್ನು ಹೆತ್ತವರನ್ನು ಮಾವಾಜಿ, ಅತ್ತೆಯರೆಂದು ಸಂಭೋದಿಸಿದನೆಂದು ಆಕೆ ಮಹಾ ವಿಭವಾರ್ಥವನ್ನೇ ಹೊಂದಿದಂತಾದಳು.

ರಾಜನಾದರೋ, ಅದು ಏಕಾಂತವಾದ್ದರಿಂದ ಆಕೆಯ ತಂದೆತಾಯಿಗಳನ್ನು ಅರಿತು ಮನ್ನಿಸಿದನು. ಲೋಕಾಂತವಾಗುತ್ತಿದ್ದರೆ ಆತನಂತು ನುಡಿಯುತ್ತಿದ್ದಿಲ್ಲ, ಕಾಲೋಚಿತಕ್ಕೆ ತಕ್ಕ ವಿನಯ ತೋರಿ ನುಡಿಯುವುದನ್ನು ಆ ಪ್ರೌಢ ದೊರೆಯೇ ಬಲ್ಲನು.

ಈ ಮನೆಯ ಸಿಂಗಾರವೆಲ್ಲವು ತನ್ನ ದೇವನಿಂದಲೇ ತನಗೆ ದೊರೆತುದೆಂದು ಕುಸುಮಾಜಿಯು ಭರತೇಶನಿಗೆ ತಿಳಿಸಿ, ಅವನನ್ನು ಮಂಗಲಾಸನವೇರಲು ಕೇಳಿಕೊಂಡಳು. ಅರಸನು ಅಂತೇ ಆಸನವೇರಿ ಕುಳಿತನು. ಅಲ್ಲಿ ಮಾಣಿಕ ಮಿಸುನಿಗಳ ಅಡ್ಡಣಿಗೆ, ಬಟ್ಟಲು ಹರಿವಾಣ, ಗಿಂಡಿಗಳೂ ರತ್ನಮಯದ ತಾಣದೀವಿಗೆಗಳೂ ಬಳಸಿದ್ದುವು.

ಕುಸುಮಾಜಿ ಎಲ್ಲರನ್ನೂ ಹೊರಡಿಸಿ ಒಬ್ಬಳನ್ನು ಮಾತ್ರ ಗಂಟೆಗಾಗಿ ಬಾಗಿಲಲ್ಲಿ ನಿಲ್ಲಿಸಿದಳು. ಆ ಮೇಲೆ ಕದವನ್ನಿಕ್ಕಿಕೊಂಡು ಅಣ್ಣನಿದ್ದಲ್ಲಿಗೆ ಓಜೆಯಿಂದ ಸಾಗಿದಳು.

'ಕುಸುಮಾಜಿ, ಏಕೆ ಕದವನ್ನಿಕ್ಕಿದೆ?' ಎಂದರಸನು ಗುಟ್ಟಾಗಿ ಕೇಳಿದರೆ—

''ಸಾಕದು; ಮತ್ತೆ ನುಡಿವೆನು; ಅಂತಿರಲಿ'' ಎಂದವಳು ಅದನ್ನೂ ಗುಟ್ಟಾಗಿಯೆ ಇರಿಸಿದಳು. ಆದರೆ ಅರಸನಿಗಿದು ತಿಳಿಯದಿರಲಿಲ್ಲ, ಹಿಂದೊಮ್ಮೆ ತಾನು ಗಿಳಿಯೊಂದಿಗಾಡಿದ ಮಾತು ಹೊರಹೊಮ್ಮಿದುದನ್ನು ಅವಳು ತಿಳಿದಿದ್ದಳು. ಆದ್ದರಿಂದ ತಾನಾಡಿದ ಮಾತುಗಳೂ ಹೊರಹೊಮ್ಮಬಹುದೆಂದು ಅಂಜಿ ಆಕೆ ಎಲ್ಲನ್ನೂ ಹೊರಡಿಸಿದಳೆಂದು ರಾಜನು ತನ್ನಲ್ಲೇ ನೆನೆದುಕೊಂಡನು.

ಅಷ್ಟರಲ್ಲಿ ಕುಸುಮಾಜಿಯು ತನ್ನ ಕೈಮುಟ್ಟಿ, ವಲ್ಲಭನ ಅನ್ನಪಾನವನ್ನು ಶಾಕಪಾನವನ್ನು ಎಡೆಮಾಡಿ ಮನ್ನಿಸಿದಳು. ಸ್ವರ್ಗದಲ್ಲಿ ಬಿತ್ತಿ ಬೆಳೆದ ಶಾಲಿಯನ್ನು ಅಪವರ್ಗದಲ್ಲಿ ಅಡುಗೆಮಾಡಿ ಎಡೆಮಾಡುತ್ತಿರುವ ಲಕ್ಷ್ಮಿಯೋ ಎಂಬ ರೀತಿಯಲ್ಲಿ ಅರಸನಿಗವಳು ಅನ್ನವನ್ನು ಬಡಿಸಿದಳು. ಭೋಗಭೂಮಿಯ ಕಲ್ಪಲತೆಯೇ ನೀಡುವಂತೆ, ಮೇಲೋಗರ ಲವಣಗಳನ್ನೂ ಕಚ್ಚರಿಯ ಹಪ್ಪಳಗಳನ್ನೂ ನೀಡಿದಳು. ಎಳೆಮಿಂಚಿನಂತೆ ತುಪ್ಪವನ್ನೆರೆದಳು. ಬೆಳುಮುಗಿಲಿನಂತಹ ಮೊಸರನ್ನೂ ಎಡೆಮಾಡಿದಳು. ಖಜ್ಜಾಯ ಕರ್ಪೂರ ಕದಂಬ ಭಕ್ಷಗಳನ್ನೂ ಆ ರಾಣಿ ತನ್ನ ರಮಣನಿಗೆ ಪೀತಿಯಿಂದ ಅರ್ಪಿಸುತ್ತಿದ್ದಳು. ಹಾಲು, ರಸಾಯನ, ಸಕ್ಕರೆ, ಪರಮಾನ್ನಗಳನ್ನು ಆ ಮೇಲೆ ಎಡೆಮಾಡಿದಳು. ಕುಸುಮಾಜಿ ಕೊನೆಯಲ್ಲಿ ಪಕ್ವವಾದ ಫಲಗಳನ್ನಿತ್ತು ಆರತಿಯೆತ್ತಿ ಪುಷ್ಪಾಂಜಲಿ ಮಾಡಿ, ಪ್ರೀತಿಯಿಂದ ಕರಗಳನ್ನು ಮುಗಿದಳು.

ಭರತೇಶನು ತಿಲಕ,ಚಿಮ್ಮುರಿ, ಯಜ್ಞಸೂತ್ರ,ಕುಂಡಲ, ದೋತ್ರಗಳನ್ನು ಮಾತ್ರ ಧರಿಸಿ,

ಉಳಿದುವುಗಳನ್ನು ತೆಗೆದಿರಿಸಿ ಹಸ್ತಪ್ರಕ್ಷಾಲನ ಮಾಡಿದನು. ಸಿದ್ಧರನ್ನು ಪೂಜಿಸಿ ಕಳುಹಿಸಿದನು. ಅನಂತರ ಸಿದ್ಧಾಂತದಲ್ಲಿ ಹೇಳಿದ ಕ್ರಮದಂತೆ ನಿರಂಜನ ಸಿದ್ಧನಿಗೆ ಅನ್ನಪಾನವನ್ನು ಅರ್ಪಿಸಿ, ಜಲಶುದ್ಧಿಯನ್ನು ಸ್ವೀಕರಿಸಿದನು.

ಆಗಲೇ ಬಾಗಿಲಿನೆಡೆಯಿಂದ ಘಂಟಾನಾದವು ಕೇಳಿಸಿತು. ಭರತೇಶನು ಪರಮಾತ್ಮನಿಗಿತ್ತ ಅನ್ನಪಾನಗಳನ್ನು ತನ್ನ ಮೈಗರ್ಪಿಸತೊಡಗಿದನು. ಭೇದವಿಜ್ಞಾನದಿಂದ ಭರತೇಶನು ಆತ್ಮಕ್ಕಿದೆಂದೂ ದೇಹಕ್ಕಿವೆಂದೂ ಉಣ್ಣತೊಡಗಿದನು. ಖಂಡಿತವಿಲ್ಲದೆ ಮೊದಲು ಮಾಡಿದ ಪುಣ್ಯವು ತಂಡತಂಡವಾಗಿ ಕೊಟ್ಟಂತಹ ಸುಖಗಳನ್ನು ಈಗ ಉಂಡು ಉಂಡು ತೀರಿಸಿ ಬಿಡೆಂದು ಹಂಸಗುರುರಿ ಉಣ್ಣತೊಡಗಿದನು. ನಾಳೆ ಸುಜ್ಞಾನ ಸುಖವನ್ನು ಉಣ್ಣಬಹುದು. ಇಂದು ಈ ಅನ್ನದ ಸುಖವನ್ನು ಉಣ್ಣೆಂದು ಹೇಳುತ್ತ ಆತ್ಮದೇವಗೆ ಅನ್ನವೆಂದು ಅರಸು ತಾನು ಉಣ್ಣುತ್ತಿದ್ದನು.

ಕುಸುಮಾಜಿ, ಕೆಲದಲ್ಲೇ ಇದ್ದರೂ ತನ್ನ ನೆರಳು ರಾಯನನ್ನು ಮುಸುಕ ಬಾರದೆಂಬ ಓಜೆಯಿಂದಿದ್ದಳು. ಆರೋಗಿಸುವ ಪತಿಗನುಕೂಲೆಯಾಗಿ ಎಲ್ಲವನ್ನೂ ನೀಡುತ್ತಿದ್ದಳು. ಉಣ್ಣುತ್ತಿರುವ ಅರಸು, ಸಾಕು ಸಾಕೆನ್ನುತ್ತಿದ್ದನು. ಬಡಿಸುತ್ತಿರುವ ಕುಸುಮಾಜಿ, ಇರಲಿ ಇರಲೆನ್ನುತ್ತಿದ್ದಳು. ಕಾಂತೆ ಬಲುಹಿಂದೆ ನೀಡಿದುದನ್ನು ಆ ನೃಪತಿ ತೃಪ್ತಿಪಡೆದು ಕೈ ತೊಳೆದು ಅನ್ನಪಾನಾಂತಕ್ರಿಯೆಯ ಮಾಡಿದನು. ಅಂಗದೊಳಗಿರುವ ಆತ್ಮನನ್ನು ಕಣ್ಣುಮುಚ್ಚಿ ಕಂಡು, ಮಂಗಲಾರಾಧನೆ ಮಾಡಿ, ಕಣ್ಣುಗಳನ್ನು ತೆರೆದನು. ಅದನ್ನು ಕಂಡು ಕುಸಮಾಜಿಯೂ ಕೈಮುಗಿದು ನಸುನಕ್ಕಳು.

ಒಡನೆ ಬಾಗಿಲ ಘಂಟೆ ಮೊಳಗಿತು.

ಜಿನಶರಣೆಂದು ಭರತೇಶನೆದ್ದು ಸಿದ್ಧ ಹಚ್ಚಡವನ್ನು ಕೈಗೊಂಡು ಮುದ್ದು ಮೊಗದ ಕಾಂತೆ ತೋರಿಸಿದ ಹೂವಿನ್ನುಪ್ಪರಿಗೆಯನ್ನು ಆಕೆಯ ಕೈಹಿಡಿದೇ ಹತ್ತಿದನು.

ಹೂವಿನುಪ್ಪರಿಗೆಯೇರಿದ ಭರತೇಶನು ಮಾಡದ ನಡುವಣ ಗೂಢ ಗೃಹದಲ್ಲಿರುವ ಶಕುನಿ ಮಂಚದಲ್ಲಿ ಎಡದ ಮಗ್ಗಲನ್ನೂರಿ ಮಲಗಿದನು. ಕುಸುಮಾಜಿಯು ವೀಳೆಯ ವನ್ನಿತ್ತು, ಪನ್ನೀರನ್ನು ಚಿಮ್ಮಿಸಿ, ಕಣ್ಣುಗಳ ಆಲಿಗೆ ಕರ್ಪೂರವನ್ನು ಹಚ್ಚಿ, ಆಲಿವಟವನ್ನು ಇಟ್ಟು, ಗಂಧವನ್ನು ಲೇಪಿಸಿ, ಪತಿಯನ್ನು ಮನ್ನಿಸಿದಳು.

ಆ ಮೇಲೆ ಪಾದಸೇವೆಗೆ ಕುಳಿತಳು.

ರಾಯನದನ್ನು ಕಂಡು, 'ಈಗ ಹೊತ್ತಾದುದು; ಹೋಗು; ಅನ್ನರಸವನ್ನು ಸ್ವಾದಿಸಿ ಮತ್ತೆ ಬಾ', ಎಂದು ಕಳುಹಿಸಲು ಕುಸುಮಾಜಿ ಪರಮ ಲೀಲೆಯಿಂದೆದ್ದಳು.

ಭರತೇಶನು ತಾನು ಬೇರೆ,ತನ್ನ ಆತ್ಮ ಬೇರೆ ಎಂದಾಲೋಚಿಸುತ್ತ ಮಲಗಿರುವಾಗ ಅನ್ನದ ಸೊಕ್ಕಿನ ನಸುನಿದ್ರೆಯು ಅವನನ್ನು ಕವಿಯಿತು. ಮಲಗಿದ ಮೇಲೆ ವಾಮಹಸ್ತವನ್ನಿಟ್ಟು ಅದರ ಮೇಲೆ ತಲೆಯಿಟ್ಟು, ಜಂಘೆಯ ಮೇಲೆ ಬಲಗೈಯಿಯಿಟ್ಟು ಅರಸ ನಿದ್ರೆಯಲ್ಲಿದ್ದನು. ಕದಪಿನಲ್ಲೂ ಕೊರಳಲ್ಲೂ ಒಂದಿಷ್ಟು ಬೆವರು. ಪ್ಪೃದು ತಲ್ಪದಲ್ಲರಸನು ಯಾವ ರೀತಿಯ ವಿಚಾರವಿಲ್ಲದೆ ನಿದ್ರೆ ಹೋಗಿದ್ದನು. ವೀಣೆಯ ತಂತಿ ಮಿಡಿದಂತೆ ಎದೆಯೊಳಗೆ ಉಸಿರಾಟ ಕಾಣುತ್ತಿತ್ತು, ಮಲಗಿಸಿದ ಕುಂದಣದ ಪುತ್ಥಳಿಯಂತೆ

ಜಾಣರದೇವನು ಮಲಗಿದ್ದನು. ಚೆಲುವನ ಅಂಗರಾಗಕ್ಕೂ, ಗೃಹ ಗಂಧಕ್ಕೂ ತುಂಬಿಗಳು ಉಲಿದಾಡುತ್ತಿದ್ದುವು. ಮೊರೆವ ತುಂಬಿಗಳ ಸುಸ್ವರಗಾನವು ತಲೆಗೇರಿ ಪರವಶನಾದ ನೆಂಬಂತೆ ಭರತೇಶನು ತೆಳುವಾದ ನಿದ್ರೆಯಲ್ಲಿದ್ದನು.

ಕೆಳಗಿಳಿದು ಕುಸುಮಾಜಿ, ತಾನುಂಡು ತೃಪ್ತಿಗೊಂಡು ಆನಂದಪಟ್ಟಳು.ತೂಗು ಮಂಚದಲ್ಲೊರಗಿ ಅನ್ನದ ಸೊಕ್ಕಿನ ನಿದ್ರೆಯನ್ನು ತೀರಿಸಿ, ಬೇಗ ಕಣ್ತೆರೆದೆದ್ದಳು. ಉಪ್ಪರಿಗೆಯಲ್ಲಿ ಗಂಡನನ್ನಿರಿಸಿದ ಸಜ್ಜನೆಗೆ ಬಂದೀತೆ ನಿದ್ರೆ? ತಪ್ಪು ಮಾಡಿದವಳಂತಾಕೆಯ ಎದೆ ಧಿಗಿಧಿಗಿಲೆನಲು ಕೂಡಲೆ ಎದ್ದಳವಳು. ಆಗ ಬಂದ ಅಬಲೆಯರಿಬ್ಬರು ಅಂದಿನಿರುಳು ಅರಸನನ್ನು ಕಾಣುವಂತೆ ಬಿನ್ನಹ ಮಾಡಬೇಕೆಂದು ಸೂಚಿಸಿದರು. 'ಆಗಲಿ. ಸ್ವಾಮಿಗೆ ನಾನು ಹೇಳುವೆನು ನೀವು ಅನುವಾಗಿರಿ' ಎಂದವರನ್ನು ಕಳುಹಿಸಿ ಒಳಗಿದ ಹೆಂಗಸರನ್ನೂ ಹೊರಗೆ ಕಳುಹಿಸಿ, ಬಾಗಿಲನ್ನಿಕ್ಕಿಕೊಂಡಳು. ಆ ಮೇಲೆ ಕನ್ನಡಿಯಲ್ಲಿ ಹೊಳೆ ಹೊಳೆವ ಮೊಗವನ್ನು ನೋಡಿ, ತಿಲಕವನ್ನು ಚೆನ್ನಾಗಿ ತಿದ್ದಿಕೊಂಡಳು. ಭಿನ್ನ ಕುಂತಳವನ್ನು ಸಾಗಿ ಸಾಗಿಸಿಕೊಳ್ಳುತ್ತ ತನ್ನನ್ನು ಕಂಡು ತಾನೇ ನಕ್ಕು ಉಬ್ಬಿಕೊಂಡಳು. ತುರುಗಿದ ಆಭರಣಗಳ ಓರೆ ಕೋರೆಯ ತಿದ್ದಿ, ಎದೆ ತುಂಬಿದ ಆರ್ತಿಯಿಂದ ಅಣ್ಣನೆಡೆಗೆ ನಡೆದಳು. ಬೇಗ ಬೇಗನೆ ನಡೆತರಲು ಆಭರಣಗಳ ಸದ್ದಾಗುತ್ತಿತ್ತು, ಸಮೀಪಕ್ಕೆ ಬಂದವಳೆ ಸದ್ದಾಗದಂತೆ ಮುಂದುವರಿದಳು.

ಹೂವಿನುಪ್ಪರಿಗೆಯಲ್ಲಿ ಪವಡಿಸಿದ್ದ ರಾಜನಾದರೋ, ಒಂದಿಷ್ಟು ಹೊತ್ತಿನಲ್ಲಿ ಎಚ್ಚೆತ್ತು ಶುದ್ಧಾತ್ಮವೃತ್ತಿಯಲ್ಲಿದ್ದನು. ಹರಿಯುತ್ತಿರುವ ಕಾರ್ಮೋಡವು ಸೂರ್ಯನನ್ನು ಎಷ್ಟು ಹೊತ್ತು ಮುಚ್ಚಿಡಬಹುದು? ಅದರಂತೆ ಅರಸನ ನಿದ್ರೆಯಾದರೋ ಅರೆಗಳಿಗೆಯಲ್ಲೇ ಹರಿದುಹೋಯಿತು. ರಾಜನು ಆತ್ಮಯೋಗದಲ್ಲಿದ್ದನು. ನಿದ್ರೆ ಮಾಡುವವನಂತೆ ಪವಡಿಸಿದ ಅರಸನು ಚಿದ್ರೂಪಿನಲ್ಲಿ ಮನಸ್ಸನ್ನಿಟ್ಟು ಮುದ್ರಿಸಿದ ನಯನಗಳಿಂದ ಸುಜ್ಞಾನ ಸಮುದ್ರದಲ್ಲೇ ಇದ್ದನು. ತಳತಳಿಸುವ ಆ ತನುವನ್ನು ತುಂಬಿ ಶುದ್ಧಾತ್ಮನು ಹೊಳೆಹೊಳೆದು ತೋರುತ್ತಿದ್ದನು. ಆಗ ಕರ್ಮಗಳೆಲ್ಲ ಇಳಿಯುತ್ತಿದ್ದುವು; ಸುಜ್ಞಾನಸುಖಗಳು ಉಜ್ವಲಿಸುತ್ತಿದ್ದುವು. ರಾಜನಿಂತು ಆತ್ಮಸುಖವನ್ನು ಉಣ್ಣುತ್ತಿರಲು ಕುಸುಮಾಜಿಯಲ್ಲಿಗೆ ಬಂದಳು. ಅಂಬುಜಲೋಚನೆ ಬಂದುದನ್ನರಿತ ರಾಜನು ಚಿದಂಬರ ಪುರುಷಗೆ ನಮಿಸಿ, ಹೊದೆದ ದಿವ್ಯಾಂಬರವನ್ನು ಸರಿಸಿದನು.

ಕುಸುಮಾಜಿಯು ಪತಿಗೆ ಪನ್ನೀರೆರೆದು ಬಾಯಿ ಮುಕ್ಕುಳಿಸುವಂತೆ ಮಾಡಿದಳು. ಆ ಮೇಲೆ ವೀಳ್ಯದೆಲೆಯ ಮಡಚಿಕೊಟ್ಟಳು. ರಾಜನವುಗಳನ್ನು ಸ್ವೀಕರಿಸಿ ಆಕೆಯೊಡನೆ ನಗುನಗುತ್ತ ಸರಸದ ಮಾತುಗಳನ್ನಾಡಿದನು.

'ಕುಸುಮಾಜಿ, ಈ ಕುಸುಮಿಯೇಕೆ ಬಂದಳಂತೆ?'

'ಏಕೆ ಬಂದಳೆಂಬುದನ್ನು ದೇವರೆ ಬಲ್ಲಿರಿ'

'ಆಕೆಯ ಮುಖ ನೋಡಿದರೆ, ಅವಳಿಂದು ನಮ್ಮೊಡನೆ ಜಗಳವಾಡಲು ಬಂದವಳಂತೆ ತೋರುತ್ತದೆ. ನೀನೊಮ್ಮೆ ಕೇಳಿ ಹೇಳು.'

'ಕೇಳಿದೆನು ದೇವ. ಜಗಳಕ್ಕಾಗಿ ಬಂದುದಲ್ಲವಂತೆ. ಆಕೆ ಬಂದುದಕ್ಕೆ

ಗೂಢಾರ್ಥವೊಂದುಂಟಂತೆ. ಅದನ್ನೇ ಅರಸನೊಂದಿಗೆ ಆಲೋಚಿಸಬೇಕೆಂದು ಬಂದೆನೆಂದು ಹೇಳಿದಳು.'

ಇಂತು ಸರಸದ ಮಾತುಗಳಾದ ಮೇಲೆ ಆ ಸುಖಿಗಳು ನಲಿದು ಕ್ರೀಡಿಸಿದರು. ಪಂಚೇಂದ್ರಿಯಗಳೂ ತೃಪ್ತಿಗೊಳ್ಳುವಂತವರು ನಸುನಿದ್ರೆಯಲ್ಲಿ ವಿಶ್ರಾಂತಿಗೊಂಡರು. ಆ ನಿದ್ರೆಯಲ್ಲೂ ಭರತೇಶನು ಚಿದ್ರೂಪನ ಕನಸನ್ನೇ ಕಾಣುವನು. ಕುಸುಮಾಜಿಗೆ ಕನಸಿನಲ್ಲೂ ಭರತೇಶನ ತದ್ರೂಪವೇ ಹೊಳೆದು ಕಾಣುವುದು.

ಸ್ವಲ್ಪ ಹೊತ್ತಿನಲ್ಲೇ ಅವರು ಎಚ್ಚರಗೊಂಡರು. 'ನಿರಂಜನ ಸಿದ್ಧ' ಎನ್ನುತ್ತ ಕಂಜಾಸ್ತ್ರ ಜಿತರೂಪನಾದ ಭರತೇಶನು ಕಣ್ಣು ತೆರೆದನು. ಕುಸುಮಾಜಿಯೂ ಎದ್ದಳು. ಪನ್ನೀರ ಪಾನ ಕರ್ಪೂರ ತಾಂಬೂಲಗಳಾದ ಮೇಲೆ ಕುಸುಮಾಜಿ ವೀಣೆಯನ್ನು ತಂದು ರಾಯನೆದುರು ಕುಳಿತಳು. ಚಿನ್ಮಯ ತತ್ವವನ್ನು ಹಾಡತೊಡಗಿದಳು. ಆ ಮನ್ಮಥರೂಪನು ಆಲಿಸುತ್ತಿದ್ದನು.

# ೧೧

# ವೀಣೆಗಿವಳು ಎಣೆ

ಕುಸುಮಾಜಿ ಹಾಡುವ ಗಾಯನವನ್ನು ಏನೆಂದು ಬಣ್ಣಿಸಲಿ? ಅವಳು ಹಾಡುವಾಗ ಆ ವೀಣೆಗೆ ಅವಳೊಬ್ಬ ಸಖಿಯೋ ಎಂಬಂತೆ ಶಾರೀರದಲ್ಲಿ ಸಮಾನತೆಯಿತ್ತು, ಎಡಗೈಯಲ್ಲಿ ವೀಣೆಯನ್ನುಮರಿಸಿ ಅಂತು ಮೇಗಡೆಯ ಮೆಟ್ಟಿನಲ್ಲಿ ಬೆರಳಾಡುತ್ತಿದ್ದರೆ ಕೆಳಗಡೆಯಲ್ಲಿ ಬಲಗೈ ಬೆರಳುಗಳು ತಂತಿಯ ಮೇಲಾಡುತ್ತಿದ್ದುವು. ಕೆಂಬಾಯ ನಸುದೆರೆದು ಆ.....ಯೆಂದು ರಾಗವನ್ನು ತೊಡಗಿದಳು. ಕೂಡಲೇ ಆ ರಾಗಕ್ಕೆ ಶ್ರುತಿಗೊಡುತ್ತ ತುಂಬಿಗಳು ಘಂಮ್ಮೆಂದು ಎಡಬಲದಲ್ಲಿ ಹಾರಿದುವು. ಆಕೆ ಒಮ್ಮೆ ವೀಣೆಯಲ್ಲೂ ಒಮ್ಮೆ ತನ್ನ ಕಂಠದಲ್ಲೂ ರಾಗವನ್ನು ತೋರುವಳು. ವೀಣೆಯನ್ನು ನುಡಿಸುತ್ತ ಆಕೆ ಹಾಡಿದಾಗ ಎರಡು ವೀಣೆಗಳನ್ನೊಂದಾಗಿ ನುಡಿಸಿದಂತೆ ಕೇಳಿಸುತ್ತಿತ್ತು ! ಹಾ ! ರಾಣಿಯ ರಾಗದ ಚೆಲ್ವಿಕೆಯೆ !

ಅವಳು ವೇಳೆಯನ್ನರಿತು, ಶ್ರುತಿಯನ್ನರಿತು, ಕಟ್ಟಳೆಯನ್ನರಿತು ಆಲಾಪನೆಯ ಅನುಭವವನ್ನೂ ಅರಿತು ಹಾಡಿದಳು. ಭರತಾಗಮವೂ ಭರತೇಶ್ವರನ ಸತಿಗೆ ವಿಸ್ಮಯವೆ? ಕುಸುಮಾಜಿಯು ಮೊದಲು ಶ್ರೀರಾಗವನ್ನು ಆಲಾಪಿಸಿ, ಮತ್ತೆ ಮಾಳವ ಶ್ರೀರಾಗವನ್ನೆತ್ತಿಕೊಂಡಳು. ಶ್ರೀರಾಗವು ಈ ರೀತಿಯಲ್ಲಾಗದಿದ್ದರೆ ಅದು ದಾರಿದ್ರ್ಯ ರಾಗವೇ ಆದೀತೆಂಬಂತೆ ಆಕೆಯ ಆಲಾಪನೆಯಿತ್ತು, ಆಲಾಪನೆ ಮಾಡುತ್ತ ಅರಸನ ಮುಖವನ್ನೊಮ್ಮೆ ನೋಡುವಳು. ಆಗ ನಗೆ ಮೂಡಿ, ತನಗೆ ತಾನೇ ಕಣ್ಣುಮುಚ್ಚಿ ನಗುತ್ತ ಹಾಡುವಳು. ಇದನ್ನು ನೋಡಿದ ರಾಯನು ಲೀಲೆಯಿಂದಿರುತಿದ್ದನು. ಒಳಗುಮ್ಮಿದ ಆನಂದರಸವು ತನ್ನ ತನುತುಂಬಿ ಆ ಮೇಲೆ ಹೊರಸೂಸುವಂತೆ ತೆಳುವಾದ ಬಸಿರಿಂದ ಹೊರಹೊಮ್ಮಿದ ಸುಸ್ವರವು ಬಾಯ್ದೆರೆಯಲ್ಲಿ ಹೊಳೆದು ಮೋಹಿಸುತ್ತಿತ್ತು, ಅದು ಸುಳಿನಾಭಿಯಲ್ಲಿ ಹುಟ್ಟಿ, ಮೃದುಹೃದಯದಲ್ಲಿ ಬೆಳೆದು, ಒಳಕೊರಳಿನಲ್ಲಿ ಪ್ರಾಯ ಪಡೆದು, ಬ್ರಹ್ಮರಂಧ್ರವನ್ನೇರಿ ಬಾಯ್ದೆರೆಗಿಳಿದು ಮೋಹಿಸುತ್ತಿತ್ತು, ಪುಂಖಾನುಪುಂಖವಾಗಿ ಮೇಲೆ ಮೇಲೆ ಹೊಸ ತಾನಗಳನ್ನು ತಂದು ಜೇನಸೋನೆಯನ್ನೇ ಕರೆವಳೋ ಎಂಬಂತಿರುವ ಈ ಆಲಾಪನೆಯ ರೀತಿಯನ್ನು ಎಲ್ಲಿ ಕಲಿತಳೋ, ಹೇಗೆ ಕಂಡಳೋ !

ಕಾಮನ ಕೈಯಲ್ಲಿರುವ ಕಂಠದ ಉಲುಹಿನಂತೆ, ಮುಗ್ಧೆಯ ಕೈಯ್ಯ ಕಂಕಣದ ಉಲುಹೋ ಎಂಬಂತೆ ತಾನಗಳನ್ನು ತೋರಿಸಿದಳು. ಅಂಚೆಯನ್ನು ನಡೆದಾಡಿಸುವಂತೆ ರಾಗದ ಸಂಚನ್ನು ಅರಸನಿಗೆ ತೋರಿಸಿದಳು. ಗಾನವನ್ನು ತಂದು ಅರಸನಿಗೆ ತೋರಿಸುವಂತೆ ಕುಸುಮಾಜಿಯು ಹೊಸ ಹೊಸ ತಾನಗಳನ್ನು ತಂದು ತೋರಿಸುತ್ತಿದ್ದಳು. ಆ ತಾನಗಳಿಗೆ

ರಾಜನು ಮೆಚ್ಚುತ್ತ ಹಿಗ್ಗುತ್ತ ಇದ್ದನು. ಅದನ್ನು ಕಂಡು ಅವಳೂ ಉಬ್ಬಿ ಉಬ್ಬುತ್ತಿದ್ದಳು. ಗಂಧಗಿರಿಯ ಪವಮಾನ ಕಮ್ಮನೆ ಬೀಸುವಂತೆ ಗಾನವು ಮೆರೆಯಿತು, ತರುಣಿಯ ಶಾರೀರದಲ್ಲಿ ! ಅವಳು ಲಾವಣ್ಯವತಿ; ಅದೂ ಏಕಾಂತದಲ್ಲಿ ಅವರಿಬ್ಬರೇ ಇದ್ದಾರೆ. ಎಂದರೆ ಆ ಸಂಗೀತದ ಸವಿಯನ್ನು ಬಣ್ಣಿಸಲು ಸಾಧ್ಯವೆ? ಮನ್ಮಥನನ್ನು ಆರಾಧಿಸುವ ಅಧಿದೇವಿ ಗಾಯಕಿಯಾದಳೋ ಎಂಬಂತೆ ಕುಸುಮಾಜಿಯು ವಿಚಿತ್ರಾಭಿಪ್ರಾಯದ ಪದಗಳನ್ನು ಹಾಡಿದಳು. ಸುಮ್ಮಾನವೇ ಮಿಗಿಲಾಗುವಂತೆ ಅರಸನದನ್ನು ಕೇಳುತಿದ್ದನು. ಕಮ್ಮಕಮ್ಮನೆ ಹೊರಹೊಮ್ಮುವ ತಾನಗಳಿಗೆ ರಾಯನ ಮೈ ಜುಮ್ಮಜುಮ್ಮನೆ ಪುಳಕಗೊಳ್ಳುತ್ತಿತ್ತು

ಅಂಬುಧಿ ಸಾಸಿವೆಯಲ್ಲಡಗಿತು; ಮಣ್ಣಿನಲ್ಲಿ ಅಂಬರವು ಹೂತು ಹೋಯ್ತು— ಎಂದು ಕುಸುಮಾಜಿ ಪರಮಾತ್ಮ ಕಲೆಯನ್ನವಲಂಬಿಸಿ ಹಾಡತೊಡಗಿದಳು. ದೇಹದೊಳಗಿರುವ ಆತ್ಮನನ್ನು ಕಾಣುವುದು ಆಶ್ಚರ್ಯವೇ. ತರುಣಿಯರ ಹೃದಯದ ಸಂಚನ್ನರಿಯುವುದೂ ಆಶ್ಚರ್ಯವಲ್ಲ. ಯೋಗದಲ್ಲಿ ಆತ್ಮತತ್ತ್ವವೆ ಕಡೆ; ಭೋಗಕ್ಕೆ ಅಂಗನೆಯೆ ಕಡೆ—ಎಂದು ಯೋಗಶಾಸ್ತ್ರವನ್ನೂ ಭೋಗಶಾಸ್ತ್ರವನ್ನೂ ಹಾಡಿದಳು. ಹತಸುಖ ಯಾವುದು? ಹಿತಸುಖ ಯಾವುದು? ಮನಕೆಲ್ಲಿ ನಂಬಿಗೆ? ಬಿಸಿನಗೆ ಯಾವುದು? ತಣಿನಗೆ ಯಾವುದು? ಹುಸಿನಗೆ, ಮುಗುಳುನಗೆ, ರಸನಗೆ, ಎಳೆನಗೆಗಳು ಹೇಗಿರುವುವು?— ಎಂಬುದನ್ನೆಲ್ಲ ನಸುನಗುತ್ತ ಹಾಡಿದಳು. ಮರೆನುಡಿ ಯಾವಾಗ, ಮೊರೆಗೆಟ್ಟ ನುಡಿಗಳು ಯಾವಾಗ? ಮರುಕದ ನುಡಿ ಯಾವಾಗ? ಮುದ್ದುನುಡಿಗಾವ ಹೊತ್ತು? ಎಂದು ಕಿರುನುಡಿಯಿಂದಲೇ ಹಾಡಿದಳು. ಮೋಹನ ಜಲಧಿಯಲ್ಲಿ ಓಲಾಡುವಂತೆ, ನಿಯಮದ ಕಲೆ ಸುಖಿಗಳಿಗೆ ಹೂಮಾಲೆಯಿಂದ ಹೊಡೆದಂತೆ ಇರುವುದೆಂದು ಅತಿ ಕೋಮಲವಾಗಿ ಹಾಡಿದಳು.

ಈ ರೀತಿಯಲ್ಲಿ ಹಾಡಿದುದನ್ನು ಭರತೇಶ್ವರನು ಮನಸಾ ಮೆಚ್ಚಿ, 'ಸೊಗಸಾದುದು, ಇನ್ನೊಮ್ಮೆ ಹಾಡು ಕುಸುಮಾಜಿ,' ಎಂದು ಕೇಳಿಕೊಂಡನು. ಅದನ್ನು ಕೇಳಿ ಆಕೆ ಉತ್ಸಾಹಗೊಂಡು ಹಾಡಿದಳು. ಈ ರೀತಿಯಲ್ಲವರು ಮೆಚ್ಚುತ್ತ ಆನಂದಗೋಷ್ಠಿ ಮಾಡಿದರು. ಅಚ್ಚಗಾನವನ್ನಾಕೆ ಹಾಡುತ್ತಿರಲು ಅದನ್ನು ಕೇಳಿ ಮೆಚ್ಚದಿರುವನೆ ಚಕ್ರಧರನು? ಬೆಳಗಿನಲ್ಲಿ ಓಲಾಡುವಂತೆ, ಸಂಗೀತದ ಸುಳಿಯಲ್ಲಿ ತೇಲಾಡಿದಂತೆ, ತೆಳುಗಾಳಿಯನ್ನೇರಿ ವೈಹಾಳಿ ಮಾಡಿದಂತೆ, ಕುಸುಮಾಜಿಯು ಹಾಡಿದಳು. ಕಡೆಗಣ್ಣಿನ, ಕೆಂಬಲ್ಲುಗಳ, ಚೆಂದುಟಿಗಳ, ರಶ್ಮಿಯು ಸಿಡಿದು ಅರಸನ ಮೇಲೆ ಹಾರುತ್ತಿರಲು ಕುಸುಮಾಜಿಯು ಕಾಂತಿ ಪ್ರಜ್ವಲಿಸುವಂತೆ ಹಾಡಿದಳು. ಆ ಸೊಗಸು ಎದೆಮುಟ್ಟಿದಾಗ ಭರತೇಶನು ಕಣ್ಣು ಮುಚ್ಚಿ ನಗುತ್ತ ನಿರಂಜನ ಸಿದ್ಧಾಯ ನಮಃಯೆಂದು ಹೇಳುತ್ತ ಆನಂದಿಸಿದನು.

ಮೆಚ್ಚಿ ಆನಂದಿಸುತ್ತಿರುವ ಭರತೇಶನಾಗ ಹಾಡುತ್ತಿರುವ ಕುಸುಮಾಜಿಗೆ ವೀಳ್ಯದ ಥಳಿಗೆಯ ತಳುಮಾಡಿಕೊಟ್ಟನು. ಆಕೆಯಾಗ ಒಲ್ಲೆನೆಂದು ನಗುನಗುತ್ತ ತಲೆಯಲ್ಲಾಡಿಸಿದಳು. ಈಕೆ ತನ್ನ ಕೈಯಿಂದ ಸೇವೆಯನ್ನು ಕೊಳ್ಳುವುದಿಲ್ಲವೆಂದು ಅರಸನಾಗ ಅರಿತುಕೊಂಡನು.

'ಚಿಂತೆಯಿಲ್ಲ ಕುಸುಮಿ; ಹಿಡಿ. ಕಾಂತನು ಒಲಿದಿತ್ತರೆ ಕೊಳ್ಳಬಹುದು. ನನಗಿದು ಸಂತೋಷವು.'

—ಆದರೂ ಆಕೆ ತೆಗೆದುಕೊಳ್ಳಲಿಲ್ಲ. ಹಾಡುವುದನ್ನು ಬಿಟ್ಟು ಬಾಯಿ ಮುಚ್ಚಿ ತಂತಿಯನ್ನೇ ಮಿಡಿದಳು.

* * * *

ಕೊನೆಗವರು ತಾಂಬೂಲ ಸವಿದರು. ಗಾಳಿಯಿಂದ ಸಂಭಾವಿಸಿ ತಾವರೆ ತಾವರೆಗಳು ಕೂಡುವಾಗ ಒಳಗೊಳಗೆ ಬೀಸಿದ ರಜವು ಅಚೆ ಈಚೆ ಆಗುವಂತೆ ಅವರು ತಾಂಬೂಲ ಸವಿದರು. ಆ ಕರ್ಪೂರ ತಾಂಬೂಲದಿಂದ ಪುಳಕಿತಳಾದ ಕುಸುಮಾಜಿಯು ಮೊದಲಿನ ಸವಿಯೇ ಇಮ್ಮಡಿ ಮುಮ್ಮಡಿಯಾಗುವಂತೆ ಸುಮ್ಮಾನದಿಂದ ಹಾಡಿದಳು. ಪತಿಯು ಪ್ರೀತಿಯಿಂದ ಮನ್ನಿಸುತ್ತಿರಲು ಅವಳಿಗಾದ ಆ ಗೆಲವನ್ನು ಬಣ್ಣಿಸಲು ಬಂದೀತೇ? ಸ್ವರ್ಗದ ಸುಖವೇ ತನ್ನನ್ನು ಓಲೈಸಿದಂತೆ, ಅಪವರ್ಗವೇ ಸಮೀಪವಾದಂತೆ, ನಿರ್ಗಹನದಲ್ಲಿ ಒಲೆದಾಡಿದಂತೆ ಕುಸುಮಾಜಿಯು ವಲ್ಲಭನ ಸಂಸರ್ಗದಲ್ಲಿ ಉಬ್ಬಿ ಉಬ್ಬಿ ಹಾಡಿದಳು. ಭೋಗದ ಸಿರಿಯನ್ನೊಮ್ಮೆ, ಪರಮಾತ್ಮಯೋಗದ ಸಿರಿಯನ್ನೊಮ್ಮೆ ಆಕೆ ಹಾಡಿದಳು. ಕೊನೆಯಲ್ಲಿ ಪುರುಜಿನೇಶನನ್ನು ಸಾನುರಾಗದಿಂದ ಹಾಡಿ, ಸಂತೋಷದಿಂದ ವೀಣೆಯನ್ನು ಕೆಲದಲ್ಲಿರಿಸಿ ಅರಸನೆಡೆಯನ್ನು ಸೇರಿದಳು. ಶ್ರೀ ಗುರು ಹಂಸನಾಥಾ ಎಂದು ಅರಸನು ಆ ಹಾಡಿನ ಸವಿಯನ್ನನುಭವಿಸುತ್ತಿದ್ದನು.

'ಕುಸುಮಾಜಿ, ಚೆನ್ನಾಯ್ತು ಸೊಬಗಾಯ್ತು; ಹಸನಾಯ್ತು' ಎಂದರಸನು ಆಕೆಯನ್ನು ಮನ್ನಿಸಿದನು. ಹಾಡಿ ದಣಿದ ಕೊರಳಿದು; ಮೇಲೆಡೆಯಾಡಿ ದಣಿದ ಬೆರಳಿದು; ವೀಣೆಯ ಸೋಂಕಿನಿಂದ ನೊಂದ ಎದೆಯಿದು; ಮಿಡಿಕಿ ಬಳಲಿದ ಚೆಂದುಟಿಯಿದು; ಎಂದರಸನು ಆಕೆಯನ್ನು ಬರಸೆಳೆದು ಭಾವವರಿತು ಉಪಚರಿಸಿದನು.

ಭರತೇಶನ ಉಪಚಾರ ಸರಸದತ್ತ ತಿರುಗಿತು; ಅದು ಚೆಲ್ಲಾಟವಾಯಿತು. ಕುಸುಮಾಜಿ ಅರಳಿದ ಕುಸುಮವೇ ಆದಳು. ಆಕೆ ರತಿಯಾದಳು; ಅವನು ಮನ್ಮಥನಾದ. ಅವರು ಚೆಲ್ಲಚೆಲ್ಲದಲ್ಲಿ ಒಡಗೂಡಿದರು. ಅವರ ದೇಹಕಾಂತಿ ತೊರೆಯಂತೆ ಹೊರಹೊಮ್ಮಿತು. ಕಡುಚೆಲುವಿನ ಎರಡು ಪುತ್ತಳಿಗಳಂತೆ ಅವರು ಶೋಭಿಸಿದರು. ತಂಗಾಳಿ ಹೂದೋಟದ ಒಳಕ್ಕೆ ತೀಡಿ ಬಂದಂತೆ ರಾಯನು ಒಮ್ಮೊಮ್ಮೆ ಬೆಡಗಿನ ನುಡಿಗಳನ್ನಾಡುವನು. ಚೆನ್ನನೂ ಚೆನ್ನೆಯೂ ಸರಸದಲ್ಲಿ ಬೆರೆತರೆ ಅದು ಚಿನ್ನವನ್ನೂ ರನ್ನನನ್ನು ಕಾಸಿ ಬೆಸೆಸಿ ಕೆಲಸ ಮಾಡಿದಂತೆ! ಈ ಸರಸದಲ್ಲಿ ಅವರ ಪಂಚೇಂದ್ರಿಯಗಳೂ ತೃಪ್ತಿ ಪಡೆದುವು. ಆಮೇಲೆ ಅವರಿಬ್ಬರೂ ಒಂದಿಷ್ಟು ಕಾಲ ಹಂಸತೂಲಿಕಾತಲ್ಪದಲ್ಲೇ ಒರಗಿದರು. ಆಯಾಸದಿಂದ ಒರಗಿದಲ್ಲೇ ನಿದ್ರೆಯಾವರಿಸಿತು. ಕುಸುಮಾಜಿಗೆ ಕನಸಿನಲ್ಲೂ ತನ್ನ ಪತಿಯೇ ಕಾಣುವನು. ಭರತೇಶನಿಗೆ ಕನಸಿನಲ್ಲೂ ಹಂಸನಾಥನೇ ಕಾಣುವನು. ಸುಖದ ಮಡುವಿನಲ್ಲೆ ಮುಳುಗಿದಂತೆ ಅವರಿಬ್ಬರೂ ಕ್ಷಣಹೊತ್ತು ಮಿಶ್ರಮಿಸಿದ್ದರು. ಆಮೇಲೆ ಸುಖವೇ ಕೈಹಿಡಿದು ಎತ್ತಿದಂತೆ ಆ ಸುಖಿಗಳಿಬ್ಬರೂ ಜಿನಸಿದ್ಧಯೆನ್ನುತ್ತ ಎದ್ದರು. ತನುವನ್ನು ತೊಳೆದು ಮಡಿಬಟ್ಟೆಯನ್ನು

ಧರಿಸಿಕೊಂಡು ಶೀತಲೋಪಚಾರಗಳನ್ನು ಅನುಭವಿಸಿದರು. ಅನಂತರ ವೀಳ್ಯವನ್ನು ಸವಿಯುತ್ತ ಆ ಮೋಹನಶೀಲರು ಮೆರೆದರು. ಆಗ ತನುವಿನಿಂದ ಹೊಸ ಕಾಂತಿ ಉಕ್ಕುತ್ತಿತ್ತು ; ರಾಗರಸ ತಳತಳಿಸಿ ತೊಟ್ಟಿಡುತ್ತಿತ್ತು, ಅಸುವಿನಲ್ಲೂ ಆನಂದ ತುಂಬಿ ತುಳುಕಾಡುತ್ತಿತ್ತು, ಈ ರೀತಿಯಲ್ಲವರು ಅಧಿಕ ಲೀಲೆಯಲ್ಲಿ ರಾರಾಜಿಸುತ್ತಿದ್ದರು.

ಶಂಖ ನಿರ್ಘೋಷವಾಗಿ ಮೊಳಗಿತು. ಘಳಿಯಾರದಲ್ಲಿ ಸಮಯದ ಸೂಚನೆಯಾಯಿತು.

'ಹೌಸದ ಆರೋಗಣೆಗೆ ಸನ್ನೆಯಾದುದು ದೇವ. ಇನ್ನು ಭೋಜನ ಗೃಹಕ್ಕೆ ಹೋಗುವ' ಎಂದು ಕುಸುಮಾಜಿ ಬಿನ್ನವಿಸಿದಳು.

'ಅನ್ನ ಪಾನಾರ್ಥವನ್ನು ಇಲ್ಲಿಗೆ ತರಿಸು; ಹೋಗು' ಎಂದರಸನೆಂದನು.

ಆಕೆ ಸುಖಿಯರೊಡಗೂಡಿ ಅನ್ನಪಾನ ವಸ್ತುಗಳನ್ನು ತಂದಳು. ನಾದುನಿ ಎಡೆ ಮಾಡಿದಳು. ಉಪ್ಪರಿಗೆಯ ಬೇರೊಂದು ಕೋಣೆಯಲ್ಲಿ ಆ ನೀರನೀರೆಯರು ಒಂದೇ ಪಂಕ್ತಿಯಲ್ಲಿ ಕುಳಿತು ಆರೋಗಿಸಿದರು. ಭೋಜನವನ್ನು ಆಸ್ವಾದಿಸಿದರು. ಆಮೇಲೆ ಅರಸನು ಮಂಚದ ಮೇಲೊರಗಿ ಕುಸುಮಾಜಿಯಿತ್ತ ಕೈವೀಳ್ಯವನ್ನು ಸ್ವೀಕರಿಸುತ್ತಿದ್ದನು.

ಸರಸಿಗಳೆಡೆಯಲ್ಲಿ ಮೌನವಿದ್ದೀತೆ? ಮಾತಿಗೆ ಮಾತು ಕೂಡಿತು. ಕುಸುಮಾಜಿ ಅನುವರಿತು ನರ್ತನದ ಬಾಲೆಯರು ಬಂದು ಹೋದರೆಂದು ತಿಳಿಸಿದಳು. 'ಅವರೇಕೆ ಬಂದರು? ಬಂದಂತೆ ಏಕೆ ಹೋದರು? ನಿನ್ನೊಂದಿಗೆ ಏನು ಹೇಳಿದರು?'—ಎಂದು ಅರಸನು ವಿಚಾರಿಸಿದನು.

ಅಂದು ರಾತ್ರಿ ಭರತೇಶನು ನೃತ್ಯವನ್ನು ನೋಡಿ ಪಾತ್ರದ ಹೆಂಗಳನ್ನು ಪವಿತ್ರ ಮಾಡಬೇಕೆಂದು ಅವರು ಬೇಡಿಕೊಂಡುದನ್ನು ಕುಸುಮಾಜಿ ನಲ್ಲನೊಡನೆ ವಿನಯದಿಂದ ನುಡಿದಳು.

ಆಗಲಿ—ಎಂದರಸನು ಒಡಂಬಟ್ಟನು. ಆ ಮೇಲೆ ತಾನಿಟ್ಟುಕೊಂಡ ಭೂಷಣಗಳನ್ನು ಕುಸುಮಾಜಿಗೊಲಿದು ಕೊಟ್ಟನು. ಆದರೆ ಆಕೆಯದನ್ನು ಒಲ್ಲಳು.

'ದೇವರು, ಇಲ್ಲಿಗೆ ಬಂದುದೇ ಸ್ವರ್ಗದ ಸಂಪತ್ತು. ಇನ್ನು ನನಗೇಕಿಷ್ಟು ಬಾಹ್ಯೋಪಚಾರ? ನಿಮ್ಮ ಊಳಿಗದಾಳಲ್ಲವೆ ನಾನು ?'

'ಅಲ್ಲಿ ಸಭೆಯಲ್ಲಿ ಕೊಟ್ಟಾಗಲೂ ಬೇಡವೆಂದೆ; ಇಲ್ಲಿ ಏಕಾಂತದಲ್ಲಾದರೂ ಒಲ್ಲೆನೆನ್ನದೆ ನನ್ನರ್ತಿಯನ್ನು ಸಲ್ಲಿಸು.'

''ನನಗೀಗ ತೊಡಿಗೆಗಳಿಗೆ ಕಡಿಮೆಯಿಲ್ಲ.'

'ನೀನಿನ್ನು ನುಡಿಯದಿರು'—ಎಂದರಸನು ಮಾತನ್ನು ಮುಗಿಸಿ ಆಭರಣಗಳನ್ನು ಗಂಟುಕಟ್ಟಿ ಕುಸುಮಾಜಿಗಿತ್ತನು. ನಾದುನಿಯನ್ನು ಉಡುಗೊರೆಯಿಂದ ಸನ್ಮಾನಿಸಿದನು. ಊಳಿಗದವರಿಗೂ ಮನ್ನಣೆಯಿತ್ತನು.

ಆದಿತ್ಯನಸ್ತಾದ್ರಿಗೆ ಸಾರಿದುದನ್ನು ಅರಸನಾಗ ಬಾಂದಳಗಂಡಿಯಿಂದ ಕಂಡನು. ಕೂಡಲೇ ಅವನು ಶುಚಿಯಾಗಿ ಮೇಲ್ನೆಲೆಗೆ ಹೋಗಿ, ಅಚಳಿತಾಸನದಲ್ಲಿ ಕುಳಿತು, ಕಣ್ಣುಗಳನ್ನು ಮುಚ್ಚಿ ಪ್ರಚುರಾತ್ಮಯೋಗದಲ್ಲಿ ಕೂಡಿದನು.

ಅದೇ, ಆಗ ನಲ್ಲಳೊಡನೆ ಕೂಡಿ ಮೆರೆದುದೆಲ್ಲ ಮರೆತುಹೋಯಿತು. ಹಂಸನಾಥನ ಅರಿವಾಗಿ ಅವನ ಕುರುಹುಗಳನ್ನಾಗಲೇ ಕಂಡನು. ಆಗ ಭೋಗದಲ್ಲಿದ್ದವನು ಈಗ ಯೋಗಕ್ಕೆ ಸಲುವಾಗ ಹಿಂದಣ ವಾಸನೆಯಿನಿತಿಲ್ಲ. ಒಂದು ವಸ್ತ್ರವನ್ನು ಬಿಟ್ಟು ಇನ್ನೊಂದನ್ನು ಹೊದೆವಂತೆ ಆ ರಾಜಯೋಗನಿಗೆ ಆ ಭಾವವು ! ಭೂಪತಿಯು ಬಾಹ್ಯ ದೃಷ್ಟಿಗಳನ್ನು ಮುಚ್ಚಿ ಭಾವದೃಷ್ಟಿಯಿಂದ ಒಳಗೆ ನೋಡಿದನು. ಅಷ್ಟಗುಣವೆ ತನುವಾಗಿ ಇಷ್ಟಾತ್ಮನು ತನುವಿನಲ್ಲಿ ಹೊಳೆದನಾಗ ! ತನುವೆ ಜಿನಾಲಯ; ಮನವೆ ಸಿಂಹಾಸನ ; ಅನುಪಮನಾದ ಆತ್ಮನೆ ಜಿನನು, ಎಂದರಸನು ಸರ್ವ ಚಿಂತೆಗಳನ್ನೂ ನೀಗಿ ತನಗಾಗಿ ತನ್ನಲ್ಲೇ ತನ್ನನ್ನು ನೋಡುತಿದ್ದನು. ಆಗ ಜಾರುತ್ತಿತ್ತು ಕರ್ಮ, ಹಾರುತಿತ್ತು ಕಾಂಕ್ಷೆ ; ಮೀರುತ್ತಿತ್ತು ಚಿತ್ಪ್ರಕಾಶ. ಕಂಡು ಕಾಣದಂತೆ ಹಂಸನಾಥನು ಸುಖದೋರುತ್ತಿದ್ದನು. ಆ ರಾಜನು ತನ್ನ ಬುದ್ಧಿಯಲ್ಲಿ ಬೆಳದಿಂಗಳಲ್ಲಿ ಒಂದು ಸಿದ್ಧಬಿಂಬವನ್ನು ರಚಿಸಿದನು. ಅಲ್ಲಿ ಮುಕ್ತಿಯಲ್ಲಿ ಜಿನಸಿದ್ಧರು ಇರುವಂತೆ 'ಸಿದ್ಧೋಹಂ' ಎಂದು ಸುಖದಲ್ಲಿದ್ದನು.

ಅಷ್ಟು ಹೊತ್ತಿಗೆ ಮಾಣಿಕದ ಚೆಂಡಿನಂತೆ ಸೂರ್ಯನು ಹೋದನು. ದೇಗುಲ ಮರೆಯಾಯಿತು. ನಕ್ಷತ್ರಗಳು ಕಾಣಿಸಿದವು.

# ೧೨

# ಪೂರ್ವನಾಟಕ

ಎಲ್ಲವನ್ನು ಮರೆತು ಯೋಗದಲ್ಲಿ ತನ್ಮಯವಾಗಿ ನಾಲ್ಕು ಗಳಿಗೆ ಇದ್ದ ಭರತೇಶ್ವರನು ಕಣ್ಣು ತೆರೆದನು.

'ದೇವ ಸಮಯವಾಯಿತು.' ಎಂದು ಬಳಿಯಲ್ಲಿದ್ದ ಹೆಣ್ಣು ಬಿನ್ನವಿಸಿಕೊಂಡಳು. 'ದಿವ್ಯ ಜಿನಸಿದ್ಧ ಶರಣು ಎಂದೆನುತ ಅರಸನೆದ್ದು ಜಾಣ್ಮೆಯಿಂದ ಸಿಂಗರಿಸಿಕೊಂಡು, ತಾವರೆಯೇರಿದ್ದ ಕಳಹಂಸವು ಮತ್ತೊಂದು ಹೂವಿನ ಬನಕ್ಕೆ ಹೋಗುವಂತೆ, ಹೂವಿನುಪ್ಪರಿಗೆಯಿಂದಿಳಿದು ನಾಟಕ ಶಾಲೆಯತ್ತ ನಡೆದನು.

ನಾಟ್ಯವನ್ನು ನೋಡುವುದಕ್ಕಾಗಿ ಚಂದ್ರನು ನಕ್ಷತ್ರಗಳನ್ನೊಳಗೊಂಡು ಧರೆಗಿಳಿಯುವಂತೆ ಮಣಿಮೊಡಿಗೆಯನ್ನು ತೊಟ್ಟು, ಮಾಡದಿಂದಿಳಿಯುವ ಮಹಾರಾಜನ ಸೌಂದರ್ಯವು ಶೋಭಿಸಿತು. ಆಗ ಚಂದ್ರನುದಯಿಸಿರಲಿಲ್ಲ, ಈ ಚಂದಾಭನೇ ಚಂದ್ರಮುಖಿಯರ ಕೈಹಿಡಿದು, ರೋಹಿಣಿಯೊಡನೆ ನಡೆಯುವ ಚಂದ್ರನಂತೆ ಮುನ್ನಡೆದನು. ಮಾಡದಿಂದಿಳಿದ ಅರಸು ಪೂರ್ವಗೃಹವನ್ನು ಕಂಡಾಗ, ತನ್ನ ನಲ್ಲಳನ್ನು ಇತರ ಅಬಲೆಯರೊಡಗೂಡಿ ಬರುವಂತೆ ನಿಲ್ಲಿಸಿ ತಾನು ಮುಂದಾದನು. ಅರಸನೊಂದಿಗೆ ಹಾವುಗೆ, ಹಡಪ, ಚಾಮರ, ಗಿಂಡಿ ಮೊದಲಾದುವನ್ನು ಹಿಡಿದ ಸೇವಕರು ಹಿಂಬಾಲಿಸಿದರು.

'ನರಲೋಕ ಚಂದ್ರಮ ! ರಾಜಮನ್ಮಥ ! ಚದುರರ ದೇವ ! ಭೋಗ ದೇವೇಂದ್ರ ! ಜೀಯ, ಚರಣಾಬ್ಜ ಜತನ' — ಎಂದು ಕಂಚುಕಿಯರು ಸಾರುತ್ತ ಸಾಗಿದರು.

ಅರಸನು ಆರಿಸಿ ಕೊಟ್ಟ ಮಾಣಿಕಗಳು ದೀವಿಗೆಗಳಂತೆ ಹೊಳೆಯುತ್ತಿದ್ದುವು. ಕೈದೀವಿಗೆ ಮುಂದಿದ್ದರೂ ಅದು ನೆವಮಾತ್ರಕ್ಕೆ. ರಾಯನು ತನ್ನ ದೀವಿಗೆಯಲ್ಲೇ ಮುನ್ನಡೆದನು. ಅರಸನ ಮೈಯ್ಯ ಕಂಪಿನ ಗಾಳಿ, ಅರಸನ ಲೇಪನದ ಕಂಪಿನ ಗಾಳಿ, ಊರನ್ನೇ ಕಮ್ಮನೆ ಮಾಡುತ್ತಿರಲು ಅವನು ನಾಟಕ ಶಾಲೆಯನ್ನು ಸೇರಿ ಉಗ್ಗಡದ ಸಿಂಹಾಸನದಲ್ಲಿ ಕುಳಿತನು.

ಆ ನಾಟಕಶಾಲೆಯು ಕೋಟಿ ರತ್ನಗಳಿಂದ ಸುರರ ವಿಮಾನಕ್ಕೆ ಸರಿಸಾಟಿಯಾಗಿತ್ತು, ಅದು ಬಂಗಾರದ ಕಂಬಗಳಿಂದ, ಬಂಗಾರದ ಗೋಡೆಗಳಿಂದ, ಮಣಿಗಳ ತೊಲೆಗಳಿಂದ, ಹಗಲೂ ಇರುಳೂ ತಂಪಿನ ಬಿಸಿಲನ್ನೇ ಕರೆಯುತ್ತಿತ್ತು, ಅಲ್ಲಿ ಸಿರಿಗಂಪು ಕುಂಕುಮ, ಪನ್ನೀರು, ಸಾದು ಕಸ್ತೂರಿಯ ಸಾರಣೆ ಚಳಯಗಳು ಕಂಗೊಳಿಸುತ್ತಿದ್ದುವು. ಆ ಪರಿಮಳದಿಂದಾಗಿ ಅದು ಸ್ವರ್ಗದ ಕಂಪನ್ನು ತುಂಬಿದ ಹೊನ್ನ ಕರಡಿಗೆಯಂತೆ ಒಪ್ಪುತ್ತಿತ್ತು, ಅಲ್ಲಿ ಪುಷ್ಪಮಾಲೆಗಳು, ಪುಷ್ಪದ ಕುಚ್ಚುಗಳು, ಪುಷ್ಪೋಪಹಾರಗಳು ಇದ್ದುದರಿಂದ ಆ ನಾಟಕಶಾಲೆಯು ಪುಷ್ಪಾಸ್ತ್ರನು ಆಡುವ ನಾಟಕಶಾಲೆಗಿಂತಲೂ ಮಿಗಿಲಾಗಿತ್ತು,

ಮೇಲುಕಟ್ಟಿನ ಝುಲ್ಲಿಗಳು, ನೆಲಕಟ್ಟಿನ ನೀಲರತ್ನದಲ್ಲಿ ಪ್ರತಿಬಿಂಬಿಸಿ ಸಾಲುಸಾಲಾಗಿ ಬಿಳಿನೊರೆಯೆದ್ದ ಮಡುವೆಂಬ ಸಂಶಯವು ನೋಡುವವರಿಗಾಗುತ್ತಿತ್ತು, ಮುತ್ತಿನ ಕುಚ್ಚುಗಳನ್ನೂ ಮಾಣಿಕಗಳ ಮಾಲೆಗಳನ್ನೂ, ಮೇಲುಗಡೆಯಲ್ಲಿ ತೂಗಿಸಿದ್ದುದರಿಂದ ಅವುಗಳ ಪ್ರತಿಬಿಂಬವನ್ನು ನೋಡಿದವರು, ಮುತ್ತು ಮಾಣಿಕಗಳನ್ನೇಕೆ ಈ ಭವನದಲ್ಲಿ ಬಿತ್ತಿರುವರೆಂದು ಕೇಳುವಂತಿತ್ತು

ಭರತೇಶನ ನಾಟಕಶಾಲೆಯು ಅಕಳಂಕ ಚಂದ್ರಲೋಕವೆ ಎನ್ನುವಂತೆ ಮೆರೆವುದು. ಪಟ್ಟೆಪರ್ವತದ ಮೇಲ್ಗಟ್ಟಿನ ಬೊಂಬೆಗಳು ಪ್ರತಿಬಿಂಬಿಸಿ ರಂಗಭೂಮಿಯಲ್ಲಿ ಜನ ತುಂಬಿರುವಂತೆ ಕಾಣುವುದು. ಹೊಸಬರಾರಾದರೂ ಬಂದರೆ ದೂರದಲ್ಲೇ ನಿಂತುಕೊಳ್ಳುವರು. ಕಂಭಗಳಲ್ಲಿ , ಲೋವೆಗಳಲ್ಲಿ ಲಲನಾ ಮಣಿಸ್ತಂಭಿತ ಪ್ರತಿಮೆಗಳು ರಂಭೆ ಮೇನಕೆಯರು ನಿಂತಿರುವರೋ, ಎಂಬಂತೆ ನೋಡುವವರ ಮನಸ್ಸಿಗಾಗುವುದು. ನೋಡುವ, ಮುನಿದು ಅಡ್ಡಮೋರೆದೆಗೆವ ಕಾಲಿಗೆರಗುವ ಹೆಣ್ಣುಗಂಡುಗಳ ರೂಪುಗಳಲ್ಲಿ ರಂಜಿಸಿದುವು. ಗಿಳಿಯನ್ನು ಓದಿಸುವಂತೆ, ವೀಣೆಯನ್ನು ನುಡಿಸುವಂತೆ, ಒಲಿದು ಪಾತ್ರವನ್ನು ಆಡುವಂತೆ, ಸ್ತ್ರೀರೂಪಿನ ಚೆಲುವಿನ ಪುತ್ಥಳಿಗಳಲ್ಲಿದ್ದುವು. ಸುರರೂ ಖೇಚರರೂ ನಾಟ್ಯವನ್ನು ನೋಡಿ ಸುಖಪಟ್ಟು ಪರವಶರಾದಂತೆ ಸುರರ ಖೇಚರರ ರೂಪಗಳನ್ನು ಬರೆದಿದ್ದರು. ಭೂಚಕ್ರೇಶ್ವರನಾದ ಭರತೇಶನ ಬೆನ್ನಿನ ಹೊಂಗೋಡೆಯಲ್ಲಿ ಧರ್ಮಚಕ್ರೇಶ್ವರನಾದ ಪುರುಜಿನನ ವಿಕ್ರಾಂತರೂಪವು ನವರತ್ನಗಳಿಂದ ಸಮಾಕ್ರಾಂತ ವಾಗಿ ಇಡಲ್ಪಟ್ಟಿತ್ತು ಇದರಲ್ಲಿ ಹೊನ್ನತೊಲೆಯಲ್ಲಿ ಛಾಯಾ ಪತ್ರಿಮೆಯೊಂದೂ ಅದರ ಪಕ್ಕದಲ್ಲಿ ಸಿದ್ಧಬಿಂಬಗಳೆರಡೂ ಕಾಣಿಸುತ್ತಿದ್ದುವು.

ಈ ರೀತಿಯಲ್ಲಿ ಧರೆಗೆ ವಿಸ್ಮಯವಾದ ನಾಟಕ ಶಾಲೆಯಲ್ಲಿ ಅರಸನು ಓಲಗವಾಗಲು, ಸೊಗಸಾಗಿ ಸಿಂಗರಿಸಿಕೊಂಡ ಕಲಾವಿದರು ಬಂದರು. ರಾಜಕುಮಾರರು, ರಸಿಕರು, ಬುಧರು, ಅಧಿರಾಜರು,ಕವಿಗಮಕಿಗಳೂ ಬಂದು ಭರತರಾಜನನ್ನು ಕಂಡು ಕುಳಿತುಕೊಂಡರು. ಗಣಿಕೆಯರು, ಎಕ್ಕಡಿಗರು, ನಾಟ್ಯಶಾಸ್ತ್ರ ಲಾಕ್ಷಣಿಕರು, ಭಾವರಂಜಕರು, ಗುಣಿಗಳು ಮಂತ್ರಿಗಳು, ಅರಸನನ್ನು ಕಂಡು ಸಾಲುಸಾಲಾಗಿ ಕುಳಿತರು. ಇವರಲ್ಲದೆ ಅನೇಕ ರೀತಿಯ ನಾಯಕರೂ ರಾಯನೊತ್ತಿನಲ್ಲಿ ಕುಳಿತಿದ್ದರು. ಬುದ್ಧಿಸಾಗರ ನೆಂಬ ಮುಖ್ಯ ಪ್ರಧಾನಿಯೂ ಬಂದು ಕುಳಿತನು. ಅವನು ವೃದ್ಧನು; ವಿವೇಕಿ; ಪತಿ ಕಾರ್ಯಸಿದ್ದನು. ಅರಸನ ಪಕ್ಕದಲ್ಲಿ ಅರಸಿಯರು ತೆರೆಸೀಲೆಯ ಮರೆಯಲ್ಲಿದ್ದು ಬಾಹ್ಯವನ್ನು ಗವಾಕ್ಷದಿಂದಿಣಿಕಿ ನೋಡುತ್ತಿದ್ದರು. ಕಟ್ಟಿಗೆಕಾರರು ಬಂದವರನ್ನೆಲ್ಲ ತರವರಿತು ಮಾತನಾಡಿ ಕುಳ್ಳಿರಿಸುತ್ತಿದ್ದರು. ಪರಿಚಾರಕರು ರಾಯನಾಜ್ಞೆಯಂತೆ ಬಂದವರನ್ನೆಲ್ಲ ಅವರವರ ಮಾನಕ್ಕೆ ತಕ್ಕಂತೆ ಗೌರವಿಸಿ ಮಾತನಾಡಿ ಕುಳ್ಳಿರಿಸುತ್ತಿದ್ದರು. ರಾಯನ ಸಮ್ಮುಖದಲ್ಲಿ ಮೇಳದವರು ಜಾತಿಶೃಂಗಾರದಿಂದ ಸಜ್ಜಾಗಿ ನಿಂತಿದ್ದರು.

ಮೊದಲು ತಾಳಧಾರಿಯು ತನ್ನ ಕಲಾಕೌಶಲ ತೋರಿದನು. ಮಧ್ಯ, ವಿಲಂಬ, ಧ್ರುತದ ನೆಲೆಯರಿತು ಹಲವು ತಾಳಗಳನ್ನು ಬಾರಿಸಿದನು. ಮದ್ದಳೆಯವನು ಎಲ್ಲರ ಚಿತ್ತವು ಜುಮ್ಮೆನ್ನುವಂತೆ ತನ್ನ ಕಲಾವಿಲಾಸವನ್ನು ತೋರಿದನು. ಮೇಳದ ವಾದ್ಯ ರಂಜನೆಯಾಗಲು

ಮಹಾಗಾನವಿದರು 'ಆ' ಎಂದು ರಾಗವನ್ನು ಆಲಾಪಿಸಿದರು. ಹಿಮ್ಮೇಳದ ಶಿತ್ತಿ ದಂಡಿಗೆ ಶ್ರುತ ಮುಂತಾದ ನವೀನ ವಾದ್ಯಗಳ ನಾದ್ಯಹೃದ್ಯವೆನಿಸಿತ್ತು ಮುಖವೀಣೆ ವೇಣುಗಳ ಶ್ರುತಿ ಸುಖಕರವಾಗುವಂತೆ ಗಾಯಕರು, ಸ್ವರ್ಗಸುಖವನ್ನು ಕರೆದು ತೋರಿಸುವಂತೆ, ರಾಗರಸವನ್ನು ತೋರಿಸಿದರು. ಆಹಿರಿ, ತೋಡಿ, ಸಾಳಂಗ ಮುಂತಾದ ರಾಗಗಳಲ್ಲಿ ಹಾಡಿ ಸಭೆಗೆ ಸಮ್ಮೋಹನ ರಸವನ್ನೇ ಸೂಸಿದರು. ಮಂದ್ರಮಧುರಗಳ ಭೇದವನ್ನರಿತು, ರಾಯನ ಮನದಿಚ್ಛೆಯನ್ನೂ ತಿಳಿದು ದೇವೇಂದ್ರನನ್ನೇ ಸಭೆಗೆ ಕರೆವಂತೆ ಹಾಡಿದರು. ಅದರಿಂದ ಚಂದ್ರಿಕೆಯೇ ತಂಪುಗೊಂಡಂತೆ ಆಯಿತು. ತಮ್ಮ ಗಾಯನದಿಂದ ಬ್ರಹ್ಮಾನಂದರಸವನ್ನೇ ಕರೆದರು. ನಾದಬ್ರಹ್ಮವೆಂಬುದು ಬಡ ಕಲೆಯಲ್ಲ. ಎಳೆಮಿಂಚಿನಂತೆ ಉಂಚವೆತ್ತುವರು; ಉಳುಕಿನಂತೆ ಇಳಿಸುವರು; ಮತ್ತೆ ಕೊರಳ ಬಳಿಯಲ್ಲಿ ಬಳೆಯಂತೆ ತಿರುಗಿಸಿ ರಾಯನ ತಲೆದೂಗಿಸಿದರು.

ಆ ಗಾಯಕರು, ಆದಿಜಿನೇಶನನ್ನೂ ಸಿದ್ಧರನ್ನೂ ಮುನಿಗಳನ್ನೂ ಹಂಸನಾಥನನ್ನೂ ನಾದಪೂಜೆಯಿಂದ ಪೂಜಿಸಿ, ಭರತೇಶನಿಗೆ ಆಮೋದವುಂಟು ಮಾಡಿದರು. ವಾದ್ಯಸಂಕುಳ ವನ್ನು ಮೇಳೈಸಿ ತಾವೆಲ್ಲ ಒಳಸರಿದು ತೆರೆಯ ಮರೆಯಲ್ಲಿರುವ ಪಾತ್ರಗಳೊಂದಿಗೆ ದನಿಗೂಡಿಸಿದರು.

ಆ ಮೇಲೆ ನೃತ್ಯವಿದ್ಯಾಧರನು, ನೃತ್ಯೋಪನಯನವನ್ನು ತೆರೆಯ ಮರೆಯಲ್ಲೇ ಸಾಂಗಗೊಳಿಸಿ ಅತ್ಯಂತ ಸುಖಿಯಾದ ಭರತೇಶನಿದ್ದೆಡೆಗೆ ಬಂದು, ಸಾಷ್ಟಾಂಗವೆರಗಿ, ಈ ರೀತಿ ಬಿನ್ನವಿಸಿದನು:

'ವಿವಿಧ ವಿದ್ಯಾಂಗ ಪರೀಕ್ಷಕನೂ, ಹಂಸಾನುಭವಸಿದ್ಧನೂ, ಸ್ವರ್ಗ ಪ್ರಸಿದ್ಧನೂ, ಅವನೀಶರೊಡೆಯನೂ ಆದ ನನ್ನೊಡೆಯನೇ, ಬಿನ್ನಹವನ್ನು ಒಲಿದು ಆವಧರಿಸಬೇಕು. ನಿನ್ನನ್ನು ಮೆಚ್ಚಿಸುವಂತಹ ಸುಮಾರ್ಗ ನಾಟಕವು ಸ್ವರ್ಗದಲ್ಲಿದೆಯೇ ಏನೋ. ನನ್ನ ಪುತ್ರಿಯರಾದ ನೇತ್ರಮೋಹಿನಿ, ಚಿತ್ತ ಮೋಹಿನಿಯರನ್ನು ಮಾರ್ಗದಲ್ಲಿ ತಿದ್ದಿರುವೆನು. ದೇವರು ಕಣ್ಣ ಕೊಗೊನೆಯಿಂದ ನೋಡಬೇಕು.'

ಮತ್ತೆ ಕೈಮುಗಿದು ಪಾತ್ರಗಳೆಡೆಗೆ ಸಾರಿದನು. ಆಗ ಅವರು ಸಾಳಂಗರಾಗವೆನ್ನೆತ್ತಿ ಕೊಂಡು ಮುದ್ದಳೆ ತಾಳಮೇಳ ಶ್ರುತಿಗಳೊಂದುಗೂಡಿ ನಿರಂಜನ ಸಿದ್ಧನನ್ನು ಹಾಡಿದರು. ಇದನ್ನು ಕೇಳಿ ಆಸ್ಥಾನವೇ ಸುಖದಲ್ಲಿ ಓಲಾಡಿತು.

ಸಂಚೆಗೆಂಪು ಒಲೆವಂತೆ ತೆರೆ ತೊಲಗಿತು. ಕಂಜಾಕ್ಷಿಯರು ಕಣ್ಣಿಗೆ ಕಾಣಿಸಿದರು. ಕೂಡಲೇ ಅವರು ರಂಜಿಸುವ ತಳಿತೋಳುಗಳನ್ನೆತ್ತಿ ಸುವರ್ಣ ಪುಷ್ಪಾಂಜಲಿ ಮಾಡಿದರು. ಅವರು ಹಸ್ತಗಳನ್ನು ನಡುವಿನಲ್ಲಿಟ್ಟು, ಮಿಡುಕದೆ ನಿಲುವಿನ ರೇಖೆ ತೋರಿದರು. ಆ ಅಚ್ಚ ಜವ್ವನೆಯರು ತೊಟ್ಟ ಸಿಂಗಾರದಿಂದ ಕೊಂಕುಬಿಂಕಣೆಗಳನ್ನು ಹೊರಸೂಸುತ್ತಿದ್ದರು. ರಸ ತೊಟ್ಟಿಡುವಂತಹ ಲಾವಣ್ಯ ಅವರದಾಗಿತ್ತು

ನೇತ್ರ ಮೋಹಿನಿ ನೇತ್ರಸುಖವ ಸೂಚಿಸಿದರೆ ಚಿತ್ರಮೋಹಿನಿ ಚಿತ್ತವನ್ನು ಸೂತ್ರದಂತೆ ಅಲುಗಾಡಿಸಿದಳು. ಅವರ ಕಾಲಿನ ಹೊಂಗೆಜ್ಜೆ ಝುಲಿರುಝುಲಿರು ಎನ್ನುವಂತೆ ಹೆಜ್ಜೆ ಸರಿಸಿ

ಮೆಲ್ಲನೆ ಒಲೆದರು. ಅವರ ನೋಟ, ನಸುನಗೆ, ಮೈಯ್ಯ ಒಲೆದಾಟಗಳೆಲ್ಲ ನೋಟಕರಿಗೆ ಹಬ್ಬದೂಟಗಳಾದುವು.

ಆಗ ಇಬ್ಬರೊಂದಿಗೆ ಕುಣಿದರೆ, ಈಗ ಒಬ್ಬೊಬ್ಬರೇ ಕುಣಿಯತೊಡಗಿದರು. ನೇತ್ರಮೋಹಿನಿಯು ತಾಳಲಯಗಳನ್ನು ಅರಿತು ಹೊಳೆಹೊಳೆದು ನರ್ತಿಸಿದಳು. ಅವಳು ರಂಗದಲ್ಲಿ ನರ್ತಿಸುತ್ತಿರುವಾಗ ನೆರೆದ ಜನರ ಅಂತರಂಗದಲ್ಲೂ ನರ್ತಿಸುತ್ತಿದ್ದಳು. ಕೈ ನೀಡಿದತ್ತ ಕಣ್ಣ ಕುಡಿನೋಟ ಬೆಳಗಿತು. ದೃಷ್ಟಿ ಬೆಳಗಿದಲ್ಲಿ ಚಿತ್ತವೂ ನೆಲೆಗೊಂಡಿತು. ನೆಲೆಗೊಂಡ ಚಿತ್ತದಲ್ಲಿ ಭಾವ ಮೂಡಿ ರಸವೊಸರಿತು. ಆಕೆ ತನ್ನ ನೃತ್ಯದಲ್ಲಿ ನೂರೆಂಟು ಕರಣ, ನೂರೆಂಟು ನಿಲುವು, ಹದಿಮೂರು ಶಿರೋಭೇದಗಳು, ಅರುವತ್ತನಾಲಕ್ಕು ವಿಧದ ಹಸ್ತವಿನ್ಯಾಸಗಳನ್ನು ತೋರಿಸಿದಳು. ಅಷ್ಟೇ ಅಲ್ಲ, ಮೂವತ್ತೆರಡು ಚಾರಿಗಳನ್ನು ಅನುಸರಿಸಿ ಮೂವತ್ತೆರಡು ಅಂಗಹಾರಗಳನ್ನು ಕೇವಣಿಸಿ, ಮೂವತ್ತಾರು ನೋಟಗಳು ರಂಜಿಸುವಂತೆಸಗಿ ನಾಟ್ಯದ ಸೌರಭವನ್ನೇ ನಟಿಸಿದಳು. ಭಾವ, ವಿಭಾವ, ಅನುಭಾವ ಮುಂತಾದ ಕಲಾವಿರಚನೆಯನ್ನು ರೇಖೆಯಲ್ಲಿ ತೋರಿಸಿ ಭಾವಕರೆಲ್ಲರ ಚಿತ್ತವನ್ನು ರಂಜಿಸುವಂತೆ ಆಡಿ ಹಿಂಗಡೆಗೆ ಸರಿದಳು.

ಚಿತ್ತಮೋಹಿನಿ ಈಗ ನರ್ತಿಸತೊಡಗಿದಳು.ಎಲ್ಲರ ಚಿತ್ತವೂ ಚಿಗುರಿತು. ಮದ್ದಳೆ ತಾಳಗಳ ಅನುಗತಿಯನ್ನನುಸರಿಸಿ ಹಿರಿದಾದ ತೆರೆಯಂತೆ ಮುಂದೊತ್ತಿ ಬಂದು, ಕಡಲಿನ ಭರತವು ಒಳಸರಿದು ಇಳಿವಂತೆ ಮತ್ತೆ ಹಿಂದಕ್ಕೆ ಸರಿದಳು. ನಾಟ್ಯದಲ್ಲಿವಳು ಸುಳಿದು ಸುತ್ತುವಳು. ಅದು ಸಮ್ಮೋಹನ ಜಲಧಿಯ ಸುಳಿಯೋ ಎಂಬಂತಿತ್ತು. ಎಳೆ ಬಿಸಿಲಲ್ಲಿ ಎಳೆನಾಗ ಹರಿವಂತೆ ಎಡಕ್ಕೆ ಬಲಕ್ಕೆ ಮುರಿದು ಮುರಿದು ಹರಿದಳು. ಬೊಗರಿಯಂತೆ ಒಲೆದಾಡಿ ಮಾರನ ಮದದಾನೆ ಧಾರಿಣಿಯಲ್ಲಿ ಚಾರಿವರಿದು ನರ್ತಿಸಿದಂತೆ ನೃತ್ಯವಾಡಿ ಹಿಂದಕ್ಕೆ ಸರಿದಳು.

ಅನಂತರ ಸಂಗೀತಕಾರರು ತಾಳಮೇಳಗಳೊಂದಿಗೆ ಹಾಡತೊಡಗಿದರು. ಆಹಿರಿ ರಾಗವನ್ನೆತ್ತಿಕೊಂಡು,ಸಂಗೀತದ ಲಹರಿ ತಲೆಗೇರಿದವರಂತೆ ಬಾಹ್ಯವನ್ನೇ ಮರೆತು ಅಂತರಂಗವನ್ನು ಅರಿತು, ಶ್ರೀ ಹಂಸನಾಥನ ಲೀಲೆಯನ್ನು ಹಾಡಿದರು.

'ಶ್ರೀ ಭರತೇಶನ ಮನಸ್ಸೆಂಬ ಆಕಾಶದಲ್ಲಿ ಶೋಭಿಸುವ ಅಮೃತವೆಂಬ ಭಾಸ್ಕರನೇ, ಚಿದಂಬರ ಪುರುಷನೆ, ಲಾಭತೋರು— ಎಂದು ಹಾಡಿದರು. ಆಗ ಪಾತ್ರಕಾಂತೆಯರು ಮುಂದೆ ಬಂದು ಆಲಾಪವನ್ನು ಕೇಳುತ್ತ ಸ್ವಲ್ಪ ಹೊತ್ತು ನಿಂತಿದ್ದು ಮತ್ತೆ ನರ್ತಿಸ ತೊಡಗಿದರು. ಎಡಬಲಕ್ಕೆ ಸೀಳಿಹರಿವ, ಆ ಮೇಲೆ ಇದಿರಾಗುವ, ಬೆನ್ನುಗಾಣಿಸಿ ತೇಲುವ, ಅಲ್ಲಿ ಇಲ್ಲಿ, ಅತ್ತ ಇತ್ತ, ಹೊಳೆದು ಹೊಂಚುವ ನೃತ್ಯವೆಸಗಿದರು.

ಭರತೇಶನು, ವೀಳೆಯವನ್ನು ಕೈಕೊಳ್ಳುತ್ತ ಮಾಂಡಲಿಕರೊಡನೆ ನಾಟ್ಯವನ್ನು ನೋಡುತ್ತಿದ್ದನು. ರಾಯನು ಪಾತ್ರಗಳನ್ನು ಮೆಚ್ಚಿದನೆಂಬುದನ್ನರಿತ ಕೋವಿದರು ನರ್ತನವನ್ನು ಪ್ರಶಂಸಿಸ ತೊಡಗಿದರು.

'ಸ್ವಾಮಿ ಸೊಬಗಾಯಿತು. ತಾಂಡವದ ಅಂಗವಿದಹುದು. ಕೊಂಡಾಡತಕ್ಕ ಪಾತ್ರಗಳಿವರು. ಇವರ ರೂಪು ಚೆನ್ನು; ಇವರ ಸಿಂಗಾರ ಚೆನ್ನು. ಇವರ ಮೇಳವೂ ಚೆನ್ನು;

ನಲಿದಾಟವೂ ಚೆನ್ನು; ರಾಯರಿದನ್ನು ಪರೀಕ್ಷಿಸಬೇಕು. ಸುಗುಣ ವಿದ್ಯೆಯನ್ನು ಕಲಿತು ಸುಮುಖರಿಗೆ ತೋರಿಸಿದರೆ ಹಗಲು ಕನ್ನಡಿಯನ್ನು ನೋಡಿದಂತೆ; ಅದನ್ನೇ ದುಗುಡ ಮೋರೆಯವರಿಗೆ ತೋರಿಸಿದರೆ ರಾತ್ರಿ ಕನ್ನಡಿ ನೋಡಿದಂತೆ. ಭರತ ಚಕ್ರೇಶ್ವರನು ಸೊಬಗ; ಆತನು ನೋಡುವ ಸರಸ ವಿದ್ಯೆಗಳೂ ಸೊಗಸು. ಪೂರ್ಣ ಚಂದ್ರನನ್ನು ಕಂಡು ಚೊನ್ನವಕ್ಕಿಗಳ ಇಚ್ಛೆಯು ಪೂರ್ಣವಾಗುವಂತೆ ಪೂರ್ಣ ಚಕ್ರೇಶ್ವರನನ್ನು ಕಂಡು ಆ ನರ್ತಕಿಯರ ನೃತ್ಯ ಪೂರ್ಣವಾಗಿ ಹೆಚ್ಚಿತು' ಎಂದು ಒಬ್ಬೊಬ್ಬರು ಒಂದೊಂದು ಹೇಳಿದರು.

ಇನ್ನು ನೃತ್ಯವು ಸಾಕೆಂದು ರಾಯನು ದಕ್ಷಿಣ ನಾಯಕನಿಗೆ ಕಣ್ಣಿಂದಲೇ ಸೂಚಿಸಿದನು. ಅವನು ಅದನ್ನು ನೃತ್ಯವಿದ್ಯಾಧರಗೆ ತಿಳಿಸಿದನು. ಅದರಂತೆ ನರ್ತಕಿಯರು ಜಿನಸ್ತುತಿಗೈದು ತಮ್ಮ ನೃತ್ಯಕ್ಕೆ ಭರತವಾಕ್ಯ ಮಾಡಿದರು. ಅರಸನು ಮೀಸೆಯನ್ನು ತಿದ್ದುತ್ತ, ನಗೆಯನ್ನು ಬೀರುತ್ತ ಕಣ್ಣುಗಳ ಕಾಂತಿಯನ್ನು ಹೊರಸೂಸುತ್ತ ಅವರ ಕಡೆಗೆ ನೋಡಿದರು. ಅರಸನ ಇಂಗಿತವನ್ನು ದಕ್ಷಿಣ ನಾಯಕನು ನಟ್ಟುವನಿಗೆ ತಿಳಿಸಿದನು. ನೃತ್ಯ ವಿದ್ಯಾಧರನು, ಮುಂದೆ ಮಕ್ಕಳನ್ನು ಹಿಂದೆ ಮೇಳದವರನ್ನು ಕೂಡಿಕೊಂಡು ಬಂದು ಅರಸನ ಮುಂದೆ ಕೈಮುಗಿದು ನಿಂದನು.

'ದೇವ, ಸ್ವಾಮಿಗಳ ಚಿತ್ತಕ್ಕೆ ಬಂದುದೇ ಇಂದಿನ ನರ್ತನ?'

'ಹಾ ! ಅವರ ನಾಟ್ಯ ಚೆನ್ನಾಗಿತ್ತು ; ಚಿತ್ತಮೋಹಿನಿ ನೇತ್ರ ಮೋಹಿನಿಯೆಂದು ನೀನಿವರಿಗಿತ್ತ ಹೆಸರು ಸರಿಯಾಗಿ ಸಲ್ಲುತ್ತದೆ. ರಸಿಕರ ನೇತ್ರವನ್ನೂ ಚಿತ್ತವನ್ನೂ ಇವರು ಸೂರೆಮಾಡಿದ್ದಾರೆ' ಎಂದು ದಕ್ಷಿಣ ನಾಯಕನೆ ಉತ್ತರಿಸಿದನು.

'ಅರಸನು ಇವರ ನೃತ್ಯವನ್ನು ನೋಡಿದ್ದೇ ಹಂಸಗಮನವು.ಈ ಇವರ ಕುಣಿತವು ಬಕ್ಕಪಕ್ಷಿಯ ನಡೆಯು' ಎಂದು ನೃತ್ಯ ವಿದ್ಯಾಧರನು ಮಾತು ಸೇರಿಸಿದನು.

ಅದಕ್ಕೆ ಭರತೇಶನು ನಕ್ಕು, 'ಅಂತೆನ್ನದಿರು, ನೃತ್ಯವಿದ್ಯಾಧರ. ನಿನ್ನ ಪುತ್ರಿಯರ ಸಾಧನೆ ಚೆನ್ನು. ನೀನು ಒಲಿದು ಬರಿಸಿದುದು ಅಂದವಾದುದು; ಮಾಧುರ್ಯವಾದುದು' ಎಂದು ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದನು.

'ಬದುಕಿದೆ ಸ್ವಾಮಿ. ನೀವು ಅಹುದೆಂದ ಮೇಲೆ ನನಗಿದಕ್ಕಿಂತಲೂ ಅಧಿಕ ಭಾಗ್ಯವಿಲ್ಲ' ಎಂದು ನೃತ್ಯಾವಿದ್ಯಾಧರ ಸಾಷ್ಟಾಂಗವೆರಗಿದನು.

ಸಭೆಯೆಲ್ಲ ನೃತ್ಯವನ್ನು ಹೊಗಳಿತು. ತ್ಯಾಗಿಗಳ ದೇವನಾದ ಭರತೇಶನು ನಟ್ಟುವಗೂ ಮೇಳದವರಿಗೂ ಹೊರವಷ್ಟು ಮನ್ನಣೆಯಿತ್ತನು. ನೇತ್ರ ಮೋಹಿನಿಗೂ ಚಿತ್ತಮೋಹಿನಿಗೂ ರತ್ನಾಭರಣಗಳನ್ನಿತ್ತನು. ಅವರದನ್ನು ಸೆರೆಗೊಡ್ಡಿ ಸ್ವೀಕರಿಸಿದರು. ಅನಂತರ ಅರಸನು ಪದ್ಧತಿಯಂತೆ ಸಭಾಜನರಿಗೂ ಉಡುಗೊರೆಯಿತ್ತು ಬೀಳ್ಕೊಟ್ಟನು.

# ೧೩

# ಉತ್ತರ ನಾಟಕ

ಪೂರ್ವನಾಟಕವಾದ ಮೇಲೆ ಉತ್ತರ ನಾಟಕದ ಪೂರ್ವಿಕಾಂಗವನ್ನು ನೋಡುವೆನೆಂದು ಪೂರ್ವ ಚಕ್ರೇಶ್ವರನಾದ ಭರತೇಶನು ನಾಟ್ಯ ಶಾಲೆಯಲ್ಲೇ ಇದ್ದನು. ಆಗ ಅಪೂರ್ವ ನಾಟ್ಯದ ಸುದತಿಯರು ಬಂದರು. ಅವರು ಅವಯವಕ್ಕೆ ಅಳವಡುವ ಶೃಂಗಾರದಿಂದ ನಾಟ್ಯ ಮಂದಿರವನ್ನು ಸೇರಿ, ಅರಸಗೆ ಕಾಣದಂತೆ, ಜವನಿಕೆಯ ಒಳಗಡೆಯನ್ನು ಸೇರಿದರು. ಅವರು ಬರುವಾಗ ಕಂಕಣಗಳ, ಕಟಿಸೂತ್ರದ, ಅಂದುಗೆಗಳ ಮತ್ತು ಹೊಂಗೆಜ್ಜೆಗಳ ಧ್ವನಿಯು ಕೇಳದಿರಲಿಲ್ಲ. ಆ ಜಾಣೆಯರು ಬರುವಾಗ ಮೆಲ್ಲಮೆಲ್ಲನೆ ಕಿರುದನಿಯಲ್ಲಿ ಸರಸವಾಡುತ್ತ ಉಲ್ಲಾಸದಿಂದಿದ್ದರು. ಅವರೆಲ್ಲರೂ ನಾಟ್ಯವಾಸಕ್ಕೆ ಬಂದಾಗ ಅದು ಕಂಪಿನಿಂದ ತುಂಬಿತು. ಆ ಸೊಬಗೆಯರು ತಮ್ಮ ಅಂಗವಿಲಾಸದ ಬೆಡಗು ಹೊರ ಹೊಮ್ಮುವಂತೆ ನಡೆದಾಡಿದರು. ಕಾಂಡಪಟದ ಮರೆಯಲ್ಲಿ ನಿಂತು, ಒಂದು ಕಂಡಿಯಿಂದ ಭರತೇಶನನ್ನು ಕಂಡು ರೋಮಾಂಚಗೊಂಡರು. ಚೆಲುವರ ದೇವನಾದ ಭರತೇಶ ನಾದರೊ, ಗದ್ದುಗೆಯಲ್ಲಿ ತಿದ್ದಿ ಸಿಂಗರಿಸಿದ ಹೊನ್ನ ಪುತ್ಥಳಿಯನ್ನಿರಿಸಿ ದಾಗ ಅದಕ್ಕೆ ಪ್ರಾಣವು ಬಂದು ನೋಡುತ್ತಿರುವುದೋ, ಎಂಬಂತಿದ್ದನು. ಬಳಿಯಲ್ಲೇ ಮಂತ್ರಿಯೂ ಕುಳಿತಿದ್ದನು.

'ಅಕ್ಕ ಸ್ವಾಮಿಯು ಗದ್ದುಗೆಯಲ್ಲಿರುವನು. ಬಳಿಯಲ್ಲೇ ಮಂತ್ರಿಯೂ ಇದ್ದಾನೆ. ಇನ್ನು ಊಳಿಗದ ಹೆಂಗಸರು ಹೊರತು ಮತ್ತಾರೂ ಇಲ್ಲ. ಸಚಿವನೂ ಜಾಣನು; ಸ್ವಾಮಿಯೂ ಜಾಣನು; ಇವರಿಬ್ಬರಿಗೂ ಮೆಚ್ಚಿಗೆಯಾಗುವಂತೆ, ರುಚಿಯಾಗುವಂತೆ, ನಾವಿಂದು ನೃತ್ಯರಚನೆ ತೋರಿಸಬೇಕು' ಎಂದವರು ಉಚಿತವಾಗಿಯೇ ಆಡಿಕೊಂಡರು.

ಅಲ್ಲಿ ಜವನಿಕೆಯ ಹಿಂದೆ ಚಂದ್ರಬಿಂಬದೊಳಡಗಿದ ಹದಿನಾರು . ಕಲೆಗಳೋ ಎಂಬಂತೆ ಹದಿನಾರು ಪಾತ್ರಗಳಿದ್ದುವು. ತೆರೆಯ ಮುಂಗಡೆಯಲ್ಲಿ ನಿಂತು, ಮದ್ದಳೆಯವನು, ಭರತೇಶನಿಗೆ ಕೈಮುಗಿದು, ಮದ್ದಳೆಯನ್ನು ಕೇಳಿಸಿದನು. ಆಗ ತಾಳಧಾರಿಯು ಕಾಲವನ್ನರಿತು, ಕಟ್ಟಳೆಯನ್ನು ತಿಳಿದು, ಲಯವು ಮೇಲೆ ಕೆಳಗೆ ಜಾರಿದಂತೆ ತಾಳಗತಿಯನ್ನು ಕೇಳಿಸಿದನು. ಅವರನ್ನನುಸರಿಸಿ ಇತರರೂ ತಮ್ಮ ತಮ್ಮ ವಾದ್ಯವಿಶೇಷಗಳನ್ನು ಬಾರಿಸಿದರು.

ಕೈಯನ್ನೆತ್ತಿ ಸನ್ನೆಯಿಂದ ವಾದ್ಯರವಗಳನ್ನು ನಿಲ್ಲಿಸಿ ರಂಗಶೇಖರನೆಂಬ ನಯಕಾರನು ರಾಜನೆದುರಿಗೆ ಬಂದನು. ಆವನು ಅರಸನ ಪ್ರಿಯೆಯರಿಗೆ ನಾಟ್ಯವನ್ನು ತೋರಿಸುವ

ನಾಟ್ಯಾಂಗ ಕವಿ. ಅವನು ರಾಜನಡಿಗೆರಗಿದನು. 'ಸಕಲ ಕಲಾಧರ. ಸಾರ್ವಭೌಮೋತ್ತಮ, ಸುಕವಿಜನಾಂಭೋಜ ಭಾನು, ಮಕರಾರಿಕ ನಿರ್ಜಿತರೂಪ, ಷಟ್ಖಂಡ ನಾಯಕನೆ ಬಿನ್ನಹವು.....' ಎಂದು ನುಡಿಯತೊಡಗಿದನು.

'ನಾನೊಂದನ್ನೂ ಅರಿತವನಲ್ಲ. ಸುರಲೋಕದಿಂದ ನಿನ್ನನ್ನೇ ನೋಡಲು ದೇವಕನ್ನಿಕೆಯರು ಬಂದರೋ ಎನ್ನುವಂತೆ ಸತಿಯರು ನಿಂತಿರುವರು. ಹದಿನಾರು ಮನುಗಳ ಸಂಪತ್ತೆಲ್ಲ ಒಟ್ಟುಗೂಡಿ ನಿಂತಂತೆ ಹದಿನಾರು ಪಾತ್ರಗಳಿವೆ. ಹದಿನಾರನೆಯ ಮನು ಮುಖ್ಯನಾದ ನೀನದನ್ನು ತಿಳಿಯಬೇಕು. ನೀನು ದೇವೇಂದ್ರನು; ನಿನ್ನ ಮಂತ್ರಿಯು ಸುರಗುರು. ಪಾತ್ರದ ನಾರಿಯರೇ ದಿವಿಜೆಯರು. ಈ ನಾಟ್ಯವು ಇಂದು ಎಲ್ಲರನ್ನೂ ಮೋಹನಗೊಳಿಸುವುದು' ಎಂದು ಕೈಮುಗಿದು ಒಳಸರಿದನು.

ರಂಗಶೇಖರನು ತೆರೆಯೆದುರು ಗೆರೆ ಹಾಕಿ ಸೂಚಿಸಿದಂತೆ, ನರ್ತನದ ಹೆಣ್ಣುಗಳು ಶಾಖೋಪಶಾಖೆಯಲ್ಲಿ ಆಲಾಪನೆಯ ಚಂದ್ರಕಾಂತಿಯನ್ನು ತೋರಿಸಿದರು. ಶಿಖರಿಣಿ ಸಿಂಜಿನಿಯೆಂಬ ಗಾಯಕಿಯರು ತಿತ್ತಿ ಮತ್ತು ಮುಖವೀಣೆಗಳ ಶ್ರುತಿಗೂಡುವಂತೆ ಹಾಡಿದರು. ಅವರು ಸರಲವಾಗಿ, ಸಪುರವಾಗಿ, ತರಲವಾಗಿ, ವಿರಲವಾಗಿ ಸಂಗೀತದ ಸ್ಥಾಯಿಯನ್ನು ತೋರಿಸಿದರು. ಅಪರಂಜಿ ಸರಿಗೆಯನ್ನು ತೆಗೆದಂತೆ, ತಾವರೆಯ ಕಂಪನ್ನುಂಡ ತುಂಬಿಯ ಗಾನದಂತೆ, ಅವರು ಹಾಡಿದರು. ಅವರು ರಾಗವನ್ನು ಅಳೆಯುವರೊ, ಅದನ್ನು ಸ್ವರ್ಗಕ್ಕೆ ಏರಿಸುವರೊ, ಎಂಬಂತೆ ಹಾಡಿದರು. ಬಂಗಾಳ, ತೋಡಿ, ವಸಂತ, ವರಾಳಿ, ಸಾಳಂಗ ಮುಂತಾದ ರಾಗಗಳನ್ನು ಎಳೆಎಳೆಯಾಗಿ ಹಾಡಿದರು. ಪಾತಕವು ಹರಿದುಹೋಗುವಂತೆ ಪಂಚಗುರುಗಳನ್ನು ಹಾಡಿದರು. ನಿರಂಜನ ಸಿದ್ಧನನ್ನೂ ಹಾಡಿ ಸ್ತುತಿಸಿದರು.

ಆ ಮೇಲೆ ನಯಕಾರನ ಸೂಚನೆಯಂತೆ ಹದಿನಾರು ಪಾತ್ರಗಳು ಸಾಲಾಗಿ ತೆರೆಯ ಹಿಂದೆ ನಿಂತು ಈಗಲೇ ರಾಜನನ್ನು ನೋಡುವೆವೆಂಬ ತವಕದಿಂದಿದ್ದರು. ಆಗ ತೆರೆ ಸರಿಯಿತು. ಮೊದಲು ಹೊಳೆಯುವ ಕನ್ನಡಿಗಳಂತೆ ಕನ್ನೆಯರ ಮುಖಗಳು ಕಂಡವು. ಅವುಗಳು ಕ್ಷೀರಸಾಗರದಿಂದ ಏಳುವ ಚಂದ್ರರ ಸಾಲೋ ಎಂಬಂತೆ ತೋರಿದವು. ಬಳಿಕ ತೆರೆಯು ನಡು ಪರಿಯಂತ ಸರಿಯಿತು. ಅವರು ತೋಳುಗಳನ್ನೆತ್ತಿ, ಕಡೆಗಣ್ಣಿಂದ ಅರಸನನ್ನು ನೋಡಿ ಬೆಡಗಿನಿಂದ ಪುಷ್ಪಾಂಜಲಿ ಮಾಡಿದರು. ಅವರು ಎಸೆದ ಹೂವುಗಳು ಯಂತ್ರಾಯದ ನೂಲಿಗೆ ತಾಗಿ ಛಾಯಪ್ರತಿಮೆಗೆ, ಆದಿ ಜಿನಬಿಂಬಕ್ಕೆ ಮತ್ತು ಅರಸನಿಗೆ ಹೂಮಳೆಗರೆದಂತಾಯಿತು. ಕೂಡಲೆ ತೆರೆಯನ್ನೆತ್ತಿದ್ದರು. ನರ್ತಕಿಯರ ರೂಪು ಮರೆಯಾಯಿತು. ಮತ್ತು ಒಮ್ಮೆಗೇ ಅಗಲವಾದ ಜವನಿಕೆಯು ಸರಿದು ಹೋಯಿತು. ಆಗ ಹದಿನಾರು ಕನ್ನೆಯರೂ ಕಂಗೊಳಿಸಿದರು. ಅವರು ನಡುವಿನಲ್ಲಿ ಹಸ್ತಗಳನ್ನಿಟ್ಟು ರತ್ನದಿಂದ ನಿರ್ಮಿಸಿದ ಪುತ್ಥಳಿಯಂತೆ ಇದ್ದರು. ಮುತ್ತಿನ ಬೊಟ್ಟು, ಮುತ್ತಿನ ಸರ, ತುರುಬಿನಲ್ಲಿ ಮುತ್ತಿನ ಬಲೆ, ಕಿವಿಗಳಲ್ಲಿ ಮುತ್ತಿನೋಲೆ, ಮೂಗಿನಲ್ಲಿ ಮುತ್ತಿನ ಮೂಗುತಿಗಳಿದ್ದು ತಾರೆಗಳು ಮುತ್ತಿದ ಚಂದ್ರನಂತೆ ಅವರ ಮುಖಗಳು ಕಾಣುತ್ತಿದ್ದುವು. ಅವರ ಆ ಯೌವನಕ್ಕೆ ಒಪ್ಪುವ ಅಲಂಕಾರವೂ, ಅಲಂಕಾರಕ್ಕೆ ಒಪ್ಪುವ ಹಾವಭಾವಗಳೂ, ಹಾವಭಾವಗಳಿಂದ

ಹೊರಹೊಮ್ಮಿದ ಕಾಂತಿರಸಗಳೂ ಅರಸನ ಕಣ್ಣನ್ನು ಆಕರ್ಷಿಸತೊಡಗಿದುವು. ಅವರ ಹಿಂಬದಿಯಲ್ಲಿ ದೊಡ್ಡ ದೊಡ್ಡ ಚಾಮರಗಳನ್ನು ಬೀಸುತ್ತಿದ್ದರು; ಎಡಬಲಗಳಲ್ಲಿ ಹಾಡುತ್ತಿದ್ದರು; ಆಗ ನರ್ತಕಿಯರು ತ್ರಿಭಂಗಿಯಲ್ಲಿ ಸಾಲಾಗಿ ನಿಂತರು. ಅದನ್ನು ನೋಡಿದರೆ ಈ ಅರಸನಿಗೆ ಆರು ಖಂಡಗಳೇಕೆ? ಈ ಪಾತ್ರದ ಹದಿನಾರು ಖಂಡವೆ ಸಾಕೆನಿಸುವಂತಿತ್ತು. ತ್ರಿಭಂಗಿಯಲ್ಲಿ ನಿಂತವರು ಮತ್ತೆ ನರ್ತಿಸಗೊಡಗಿದರು. ನಡುವಿನಲ್ಲಿಟ್ಟ ಹಸ್ತಗಳನ್ನೆತ್ತಿ ಎದೆಯಲ್ಲಿರಿಸಿ, ಎಡಬಲಗಳಿಗೆ ನೀಡಿ ಬೆರಳುಗಳನ್ನು ಹೊರಚಿಮ್ಮಿಸಿದರು. ಕಾಲುಗಳನ್ನೆತ್ತಿ, ತಂಗಾಳಿಗೆ ಅಲ್ಲಾಡುವ ಲತೆಯಂತೆ ಮುಂದಕ್ಕೊತ್ತಿ ಬೆಡಗಿಂದ ನಲಿದು ಒಮ್ಮೆ ಸಾಲನ್ನು ಬಿಟ್ಟು ಸಾಲಾಗಿ ಹದಿನೈದು ಪಾತ್ರಗಳೂ ರಾಜನೆಡೆಗೆ ಸಾರಿದವು.

ಮಂಗಲವತಿಯೆಂಬ ಪಾತ್ರದಂಗನೆ ಮಾತ್ರ ಹಿಂದುಳಿದು, ಅರಸನ ಕಣ್ಣುಗಳಿಗೆ ಆಸೆಯಾಗುವಂತೆ ರಂಗದಲ್ಲಿ ನರ್ತಿಸಿದಳು. ಒಮ್ಮೆ ನಿಂತು ಗಾಯನವನ್ನು ಕೇಳುವಳು; ನೋಟಕರಿಗೆ ಆಗ ಧ್ಯಾನಕ್ಕೆ ನಿಂತ ಯೋಗಿಗಳ ನೆನಪಾಗುವುದು; ಕೂಡಲೆ ಮನ್ಮಥನ ಬೀಸುವ ಖಡ್ಗದಂತೆ ಚಳಚಳನೆ ಎಡಬಲಗಳಿಗೆ ಸರಿಸರಿದು ಕುಣಿಯುವಳು. ಮಾರನ ಭಾಗ್ಯವು ಒಂದು ಮಾರು ಎಂಬಂತೆ ಭುಜಗಳ ನೀಡಿ ಕುಣಿದಾಡುವಳು; ಅವಳು ಸಾರಿ ಸುತ್ತುವಳು; ಉರ್ಧ್ವಲೋಕಕ್ಕೆ ಹೋಗುವಂತೆ ಮೇಲಕ್ಕೇ ಹಾರಿ ಕುಣಿವಳು; ದಿವಿಜೆ ಭೂಮಿಗಿಳಿದು ಬರುವಂತೆ ಇಳಿದಿಳಿದು ಬರುವಳು. ದುಃಖಗಳನ್ನು ತುಳಿವಂತೆ ದೊಪ್ಪದೊಪ್ಪನೆ ಹೆಜ್ಜೆಯಿಟ್ಟು ನರ್ತಿಸುವಳು; ಕಿರುನಗೆಗೂಡಿ ಹೊರಚಾರಿಯಾಗಿ ಒಳಚಾರಿಯಾಗಿ ನಡೆನಡೆದು ಕುಣಿವಳು.

ಹೀಗೆ ಮನಸ್ಸಿನಲ್ಲಿ ಭಾವ, ಮುಖದಲ್ಲಿ ಹಾವ, ಹುಬ್ಬುಗಳಲ್ಲಿ ಹುಚ್ಚು, ಬೊಗಸೆಗಣ್ಣುಗಳಲ್ಲಿ ವಿಲಾಸಗಳು, ಮೆರೆದು ಕೈ ಮೈಗಳ ಎಡೆಯಲ್ಲಿ ರಸವೊಸರುವಂತೆ ನಾಟ್ಯವಾಡಿದಳು. ತಾಳ, ಡೌಡೆ, ಆವುಜ, ಮದ್ದಳೆ, ಚಿನುಚಂಪೆಗಳ ಧ್ವನಿಗೆ ನರ್ತಿಸುವ ಸೋಗೆ ನವಿಲಿನಂತೆ ಕಿನ್ನರಿ, ದಂಡಿಗೆ ತಿತ್ತಿ, ಕೊಳಲು, ನಾಗಸ್ವರಗಳ ಗಾನಕ್ಕೆ ನರ್ತಿಸುವ ನಾಗಕನ್ನಿಕೆಯಂತೆ ನೃತ್ಯವಾಡಿದಳು. ಜಂಗಮಲತೆಯಿಂದ ಜಾತಿರೀತಿಯ ನಾಟ್ಯಾಂಗದ ನಟನೆಯನ್ನು ತೋರಿಸಿ ಮಂಗಲವತಿ ಸರಿದು ನಿಂತಳು.

ಆ ಮೇಲೆ ಪದ್ಮನಿ, ಚಂದನವತಿ, ಕುರುವಿಂದಾನಿ, ಮಕರಾಣಿ, ಚೂಡಾಣಿ, ಮುಕರಾಣಿ, ಚಂದ್ರಾಣಿ, ಪುಷ್ಪಾಣಿ, ರೂಪಾಣಿ, ಹಂಸಿನಿ, ಮಿಂಚಿನಿ, ಸುಪ್ಪಾಣಿ, ಕಟ್ಟಾಣಿ, ಮುದ್ರಾಣಿ, ಮಧುರಾಣಿಯರು ಒಬ್ಬೊಬ್ಬರಾಗಿ ಕುಣಿದರು. ಆ ಅವರ ನರ್ತನ ಒಬ್ಬೊಬ್ಬರದೂ ನವನವೀನವಾಗಿಯೇ ಇತ್ತು. ಒಬ್ಬಳು ಕೊಂಡುದನ್ನು ಇನ್ನೊಬ್ಬಳು ಬೆರಸದ ರೀತಿಯಲ್ಲಿ ಆ ಚಂದ್ರನ ಹದಿನಾರು ಕಲೆಗಳಂತಿರುವ ಷೋಡಶ ಕನ್ನೆಯರು ಪೂರ್ವನಾಟಕವಾಡಿ ತೋರಿಸಿದರು.

ಆ ಮೇಲೆ ದಿಕ್ಕನ್ನಿಕಾ ನಾಟ್ಯಕ್ಕಾಗಿ ಆ ಚೊಕ್ಕ ಹೆಣ್ಣುಗಳಲ್ಲಿ ಎಂಟು ಮಂದಿ ತಮ್ಮನ್ನು ತಾವೇ ಲೆಕ್ಕಿಸಿಕೊಂಡು ರಂಗಕ್ಕೆ ಬಂದರು. ಇಂದ್ರನೇ ಮುಂತಾದ ದಿಕ್ಪಾಲಕರ ಭಾಗ್ಯವು ಭರತೇಶನನ್ನೇ ಸೇರಿದಂತೆ ಅವರೆಂಟು ಮಂದಿ ರಂಗದ ಎಂಟು ದಿಕ್ಕುಗಳಲ್ಲಿ ನಿಂತರು. ಎಂಟು ದಿಕ್ಕಿನಲ್ಲಿದ್ದ ಆ ಮೃಗೇಂದ್ರ ಮಧ್ಯೆಯರು ಒಬ್ಬರನ್ನೊಬ್ಬರು ದಿಟ್ಟಿಸಿ ನೋಡಿ,

ನರ್ತಿಸತೊಡಗಿದರು. ಸುತ್ತು ಸುತ್ತಾಗಿ ನಲಿಯುತ್ತ, ಮೊತ್ತವಾಗಿ ಒಂದಾಗುತ್ತ ಅವರ ಚಿತ್ತರದ ನರ್ತನವನ್ನೇ ತೋರಿದರು. ಮುಂದೆ ಭರತೇಶನು ದಿಗ್ವಿಜಯಕ್ಕಾಗಿ ಮುನ್ನಡೆವಂತೆ, ರಾಜ್ಯಗಳನ್ನು ಗೆದ್ದು ಪುರಪ್ರವೇಶ ಮಾಡುವುದನ್ನು ಕನ್ನಡಿಸುವಂತೆ ಕುಣಿದರು. ಒಂದೊಂದು ದಿಕ್ಕಿಗೆ ಸಾರುವ, ಒಂದೊಂದು ದಿಕ್ಕಿನಲ್ಲಿ ತಿರುಗುವ, ಅವರ ನಾಟ್ಯವು ಭರತ ಚಕ್ರೇಶನು ಮಾಗಧೇಂದ್ರನ ಮೇಲೇರಿ ಹೋಗುವ, ಅಂತೆಯೇ ವಿಜಯೋನ್ಮುಖನಾಗಿ ಮರಳಿ ಬರುವ ರೀತಿಯನ್ನು ಸೂಚಿಸುವಂತಿತ್ತು. ಅವರು ಲಂಘಿಸಿದ ಭಂಗಿಯು ರಾಯನ ವಾಹನರತ್ನ ಲಂಘಿಸುವುದನ್ನು ಸೂಚಿಸುವುದೋ, ಅವರು ಮೈಯೊಲೆದು ಕಾಲುಗಳನ್ನೊತ್ತಿ ನಿಲುವ ನಲಿಕೆ ಚಕ್ರೇಶ್ವರನು ವಜ್ರಕವಾಟವನ್ನು ಅೀವಿಯಿಂದೊಡೆಯುವುದನ್ನು ಸೂಚಿಸುವುದೊ ಎಂಬಂತಿತ್ತು.

ಅಷ್ಟೆ ಅಲ್ಲ, ಮುಂದೆ ಅವರು ನಲಿನಲಿದು ದೊರೆಗೆ ಪನ್ನೀರು ಹನಿಯುವಂತೆ ಮಾಡಿದರು. ಅರಸಗೆ ನಗೆಯ ಬೆಳ್ದಿಂಗಳಿಂದ ಅಭಿಷೇಕ ಮಾಡಿದರು. ಅವರೆಂಟು ಮಂದಿ ನಲಿವಾಗ ಮೊದಲು ದಿಗ್ಗಜಗಳಂತೆ ಗಮಿಸುವರು. ಸೊಗಸಾಗಿ ರಾಯನನ್ನು ನೋಡುತ್ತ ನಗೆಯೆಸಳ ಅರಳಿಸುತ್ತ ಆಡುತ್ತ ಸುತ್ತುವರು. ಈ ಭಾಗ್ಯ ದಿಗ್ವನಿತೆಯರಿಗುಂಟೆ? ಎಂಬಂತೆ ನಗುವರು. ಮೊದಲೊಬ್ಬಳು ನರ್ತಿಸಿದಳು. ಅನಂತರ ಇಬ್ಬರು ನರ್ತಿಸಿದರು. ಮೂವರು ಕುಣಿದ ಮೇಲೆ ನಾಲ್ವರ ನರ್ತನವಾಯಿತು. ಈ ರೀತಿ ಹೊಸಪರಿಯ ಎಂಟು ನರ್ತನಗಳಾದುವು. ಅಷ್ಟದಿಗ್ವನಿತೆಯರು ಬಿನ್ನಾಣದಿಂದ ದಿಕ್ಕನ್ನಿಕಾ ನಾಟ್ಯವನ್ನು ನಟಿಸುವಂತೆ ನಲಿದು ಸರಿದರು.

ಕೂಡಲೆ ಉಳಿದೆಂಟುಮಂದಿ ಜಲಕನ್ನಿಕಾ ನೃತ್ಯಕ್ಕಾಗಿ ದಳದಳನೆ ಓಡಿ ಬಂದರು. ಆ ಬರುವಿಕೆಯ ಚೆಲುವೇನು! ಆ ಪಟ್ಟವರ್ಧನನೆದುರು ಅವರೆಂಟು ಮಂದಿ ಅರ್ಧ ಚಂದ್ರಾಕೃತಿಯಲ್ಲಿ ನಿಂತುದು ಅರ್ಧಚಂದ್ರಾಕಾರದ ಉಪಸಮುದ್ರವೋ ಎನ್ನುವಂತೆ ಸೊಗಸಾಗಿತ್ತು. ಆಕಾರವು ಚಂದ್ರನಂತಾದ ಮೇಲೆ ನೀರು ಇಂಪಾಗದೆ ಉಪ್ಪಾದುದು ಏಕೆಂದು ಆ ಕಡಲನ್ನೇ ತೊಲಗಿಸಿ ಚಂದ್ರನಂತೆ ನಿಂತು ದೇವಗಂಗೆಯಂತೆ ಅವರಿದ್ದರು. ಅವರ ಲಾವಣ್ಯವೇ ಜಲ; ತೋಳುಗಳೇ ತೆರೆಗಳು; ನಾಭಿಗಳೇ ಸುಳಿಗಳು; ಚಂಚಲವಾದ ಅವಲೋಕನಗಳೇ ಎಳೆಮೀನುಗಳು; ಇದರಿಂದವರು ಜಲದೇವಿಯರೆನಲು ತಕ್ಕವರಾಗಿದ್ದರು. ಅರ್ಧಚಂದ್ರಾಕಾರವು ತಪ್ಪದಂತೆಯೇ ನರಪತಿಗಿದಿರಾಗಿ ನಡೆನಡೆದು ನಲಿನಲಿದರು. ಒಡನೆಯೆ ನೇರವಾಗಿ ಗಂಗೆ ಹರಿವಂತೆ ಸರಿದರು– ಸಡಗರದಿಂದ. ಮೊತ್ತವಾಗಿ ನಿಂತಿದ್ದ ಅವರು ಮತ್ತೆಂಟು ದಿಕ್ಕುಗಳಿಗೆ ಚಿಗುರೊಡೆವಂತೆ ಹರಿದುದು ಶೃಂಗಾರ ಗಂಗೆ ಹರಿದಂತೆ ಇತ್ತು ! ತೆರೆಯನಟ್ಟುವರು; ತೆರೆಯಂತೆ ಒಬ್ಬರನ್ನೊಬ್ಬರು ಬೆರಸಿ, ಬೆನ್ನಟ್ಟಿ, ಹರಿವರು. ಅವರೆಂಟು ಮಂದಿಯೂ ಮುರಿ ಮುರಿದು ಸುಳಿಯಂತೆ ಸುತ್ತುವರು !

ಅವರು ತಮ್ಮ ಮೈಯ ಹೊಳಪಿಂದ ಆ ರಂಗದಲ್ಲಿ ತಂಪಿನ ಹೊಳೆ ಹೊಳೆವಂತೆ ಹೊಳೆದರು. ಅಂತು ಹೊಳೆದ ಅವರನ್ನು ಚಕ್ರೇಶ್ವರನು ದಿಟ್ಟಿಸಿ ನೋಡಿದನು. ಆಗ ಅರಸನ ಲಾವಣ್ಯಜಲದಲ್ಲಿ ನರ್ತಕಿಯರ ಕಣ್ಣು ಮೀನುಗಳಾಡಿದವು; ತರುಣಿಯರ ಅಂಗಕಾಂತಿಯ

ಹೊಳೆಯಲ್ಲಿ ಭೂವರನ ಕಣ್ಣು ಮಚ್ಛಗಳಾಡಿದವು. ಶೃಂಗಾರ ಶರಧಿಯೇ ಮೇಲೆ ಕವಿದುದೋ ಎಂಬಂತೆ ಅವರು ಭರತೇಶನಿದಿರಾಗಿ ನಡೆವರು; ಒಡನೆಯೇ ದೊರೆಯ ಗಂಭೀರವನ್ನು ಕಂಡು ಕಡಲು ನಾಚಿ ಹಿಂತಿರುಗುವಂತೆ ಸರಿಯುವರು. ತಾವರೆಯಂತಿರುವ ಕೈಕಾಲು ಮೋರೆಗಳಿಂದ ತಾವರೆಕೆರೆಯೆದ್ದು ನರ್ತಿಸುವಂತೆ ಅವರು ನರ್ತಿಸಿದರು. ಜಲದೇವಿಯರಂತೆ, ಕಾಂಚನರತ್ನದಾಭರಣದ ಕಿರಣವು ಅವರ ಅಂಗಕಾಂತಿಯಲ್ಲಿ ಹೊಳೆವಾಗ, ಮಿಂಚಿನ ಬಳ್ಳಿಯಂತೆ ಮಿಣಿಮಿಣಿಸುತ್ತ ಕಂಚು ಮಿಂಚಾಗಿ ಹೊಳೆದರು. ಮೊಗರಸದಿಂದ, ಕಣ್ಣಬೆಳಕಿನ ಹೊಳೆಯಿಂದ, ನಗೆಯ ಒಂದು ಅಮೃತಧಾರೆಯನ್ನೆ ಮೊಗೆಮೊಗೆದು ರಾಯನಿಗೆ ಅಭಿಷೇಕ ಮಾಡಿದರು.

ಜಲಕನ್ನಿಕಾ ನಾಟ್ಯವೆಸಗಿ ಅವರು ಸರಿಯುವಾಗ ಅವರ ಅಂಗಾಂಗಗಳಲ್ಲೆಲ್ಲ ತೊಟ್ಟಿಕ್ಕುತ್ತಿದ್ದ ಜಲದಿಂದವರು ಜಲಕನ್ನಿಕೆಯರೇ ಆಗಿದ್ದರು.

ಆ ಮೇಲೆ ತಾಳಮೇಳವನ್ನು ಅನುಗೊಳಿಸಿ ಬಾಲೆಯರು ಕಾಂಬೋದಿ ರಾಗವನ್ನು ಆಲಾಪಿಸಿದರು. ರಾಯನದನ್ನು ಆಲಿಸಿ ತಲೆದೂಗಿದನು. ಅವರು ನರ್ತಿಸಿದ ಸತಿಯರಿಗೆ ತಂಪಾಗುವಂತೆ, ಭರತೇಶನಿಗೆ ಇಂಪಾಗುವಂತೆ, ರಾಗವನ್ನೆತ್ತಿ ಪವಿತ್ರವಾದ ಆತ್ಮಕಲೆಯ ಕುರಿತು ಹಾಡಿದರು. ಆತ್ಮಕಲೆಯನ್ನವರು ಬೆಳಗಿನ ಬೊಂಬೆ, ಬೆಳ್ದಿಂಗಳಿನ ಬೊಂಬೆ, ತಿಂಗಳಬೊಂಬೆ, ತಿಳಿವಿನ ಬೊಂಬೆ, ಬೋಧದ ಬೊಂಬೆ ಎಂದು ಕನ್ನಡಿಸಿ ಹಾಡಿದರು. ದೇವತೆಗಳನ್ನು ಸೋಲಿಸುವ ಸೊಬಗಿನಿಂದ ತಮ್ಮ ಭರತ ಭೂವರನ ಚಿತ್ತವನ್ನು ಸೋಲಿಸಿದ ಹಂಸಗುರುನಾಥ, ತಮ್ಮನ್ನುದ್ಧರಿಸೆಂದು ಹಾಡಿದರು. ಭರತೇಶನ ಮನಸ್ಸಿನಲ್ಲಿ ತೋರುತ್ತಲೂ ತೋರದೆಯೂ ಕೂರುಗೊಂಡಿರುವ ಹಂಸನಾಥನೇ, ಸನ್ಮತಿದೋರೆಂದು ಹಾಡುವಾಗ ನರ್ತನದ ಹದಿನಾರು ಪಾತ್ರಗಳೂ ಒಂದಾಗಿ ಬಂದು ರಂಗದಲ್ಲಿ ನೆರೆದರು.

ಕಾಲಾಂಭೋಜ ಹಂಸನೆನಿಸುವ ರಾಜಹಂಸನ ಸಮ್ಮುಖದಲ್ಲಿ ಹಂಸಮಂಡಳಿಯೆಂಬ ನಾಟ್ಯವನ್ನವರು ತೊಡಗಿದರು. ಹದಿನಾರು ಪಾತ್ರಗಳು ಹದಿನಾರು ದಿಕ್ಕಿನಲ್ಲಿ ನಿಂತು ಆ ರಂಗವೆಂಬ ಪದ್ಮದ ಹದಿನಾರು ಎಸಳುಗಳಂತೆ ಕಂಗೊಳಿಸಿದರು. ಕೊಳದಲ್ಲೆಸೆವ ಹದಿನಾರು ಜಲಜಗಳಂತೆ ಆ ಜಲಜಮುಖಿಯರು ಗಾಡಿಯಿಂದಿದ್ದರು. ಮಂಟಪವೇ ಕೆರೆ, ಸತಿಯರೇ ಕಮಲಗಳು. ಅವುಗಳನ್ನೆಣಿಸುವ ರಾಜನೇ ರಾಜಹಂಸನು; ಸಂಧ್ಯಾವಂದನೆಗೆ ಬಂದು ಕುಳಿತೊಬ್ಬ ಬ್ರಾಹ್ಮಣನೆ ಆ ಮಂತ್ರಿ ಎಂಬಂತಿತ್ತು ಆ ನೋಟ ! ಹೆಣ್ಣು ಹಂಸಗಳು ಕೊಳದಲ್ಲಿ ಸುಳಿವಂತೆ ಹೆಣ್ಣುಗಳು ಪಣ್ಣೆಪಣ್ಣೆಯಾಗಿ ಸುತ್ತಿಸುಳಿದು ಭರತೇಶಗೆ ಕಣ್ಣಹಬ್ಬವನ್ನುಂಟುಮಾಡಿದರು.

ಅಂಚೆಗಳಿಗೆ ನಡೆಕಲಿಸುವುದು ಆ ಸತಿಯರ ಕೆಲಸವೆಂಬಂತೆ ಅವರೆಲ್ಲ ಹಂಸಮಂಡಳಿ ನಾಟ್ಯವಾಡಿದರು. ಸಾಲಾಗಿ ಸರಿವರೊಮ್ಮೆ, ಹರಿಹಂಚಾಗಿ ಅಗಲುವರೊಮ್ಮೆ, ಒಮ್ಮೆ ಭುಜಗಳಿಂದ ಪಕ್ಕದಾಟವನ್ನು ತೋರಿಸುವರು. ಒಮ್ಮೆ ಮುಕುಳಿತ ಹಸ್ತದಿಂದ ಕೊಕ್ಕಿನಾಟವಾಡುವರು. ಅಂಚೆಗಳು ಕೊಳದಿಂದ ಕೊಳಗಳಿಗೆ ಹಾರುವಂತೆ ಛಳಿಲ್ಲನೆ ಮೇಲಕ್ಕೆ ನೆಗೆದು ತೋಳನ್ನಲುಗಿಸಿ, ಕಾಲನ್ನು ನೀಡಿ, ಹಾರಿಬರುವರು. ಅದನ್ನು ಕಂಡ ರಾಜನು ತಲೆದೂಗುವನು; ಮಂತ್ರಿ ವಿಸ್ಮಯ ತಾಳುವನು. ಕೆಲವರು ಕೈಮುಗಿದಿಳಿದರು.

ಕೆಲವರು ಸೂತ್ರವನ್ನು ಅಲುಗಿಸಿ ರಾಜನ ತಲೆಗೆ ಆದಿಜಿನನ ಬಿಂಬಕ್ಕೆ ಹೂಮಳೆಯನ್ನು ಸುರಿಸಿದರು. ಮತ್ತೆ ದೇವಲೋಕದಿಂದ ದೇವಕನ್ನೆಯರಿಳಿದು ಬರುವಂತೆ ಅರಸನೆಡೆಯಲ್ಲಿ ನಿಂತರು.

ಎದೆಯಲ್ಲುಕ್ಕಿದ ಹರ್ಷದಿಂದರಸನು ನಾಟ್ಯ ಸಾಕೆನ್ನೆಂದು ಸನ್ನೆ ಮಾಡಿದನು. ಪುರುಷಾರ್ಥಗೀತೆಯೊಡನೆ ಎಲ್ಲರೂ ನಮಿಸಿದರು. ರಂಗಶೇಖರನೇ ಮೊದಲಾದವರಿಗೆ ಅರಸನು ಉಡುಗೊರೆಯಿತ್ತು ಮನ್ನಿಸಿದನು. ಮಂತ್ರಿಯೆಡೆಗೆ ನೋಡಿ—

'ಮಂತ್ರಿಗಳು ಬಳಲಿದರು.' ಎಂದು ಮನ್ನಣೆಯ ಮಾತನಾಡಿದನು.

'ನಿನ್ನ ಓಲಗದಲ್ಲಿ ಬಳಲಿಕೆಯೇ ಬಯಲಾಯಿತು ಸ್ವಾಮಿ.' ಎಂದು ಮಂತ್ರಿ ಮರುಮಾತುಗೊಟ್ಟನು. 'ಇದು ಪುಣ್ಯ ನಾಟಕ. ವಿವೇಕಶರಣ್ಯ ನಾಟಕ. ಗಣ್ಯವಾಗಿ ವಿಚಿತ್ರ ಲಾವಣ್ಯ ಪೂರ್ಣವಾಗಿತ್ತು ಹೊರಗೆ ಭೋಗದ ಅಂಗವನ್ನು ತೋರುವುದು. ಒಳಗೆ ಯೋಗದ ಅಂತರ್ಯವನ್ನು ತೋರುವುದು. ರಾಗದ ಅಂಗವನ್ನು ತೋರಿದಂತೆಯೇ ಭಾವದಲ್ಲಿನ ವೀತರಾಗತ್ವವನ್ನೂ ತೋರುವುದು. ಇದರಲ್ಲಿ ಲೋಕದವರಿಗೆ ತಾಂಡವವಿದ್ದರೆ ಹಂಸಾವಲೋಕದವರಿಗೆ ತತ್ತ್ವವಿದೆ. ಇದನ್ನು ನೋಡಿದವರಿಗೆ ಸ್ವರ್ಗಲೋಕದ ಸುಖದನುಭವವೂ ಸಿದ್ಧಲೋಕದ ಸುಖಾನುಭವವೂ ಉಂಟಾಗುವುದು. ಸ್ವಾಮಿ, ನೀನಿದನ್ನು ಎಲ್ಲಿ ಕಲಿತೆ? ಎಲ್ಲಿ ಕಂಡೆ? ನಿನ್ನನುಭವವಿದು ವಿಚಿತ್ರತರವಾಗಿದೆ. ಈ ನಿನ್ನ ಮನುಜೇಂದ್ರಪದದಲ್ಲಿ ದಿವಿಜೇಂದ್ರಪದವಿದೆ; ಮುನಿಯಂತೆ ಮೋಕ್ಷಮಾರ್ಗವೂ ಇದೆ. ನೀನೆಷ್ಟು ಜಾಣನೋ, ನಿನ್ನ ಪಾತ್ರದ ಮೀನಾಕ್ಷಿಯರೂ ಅಷ್ಟೇ ಜಾಣೆಯರು. ಈ ನಯನೇವಣೆಯ, ರೂಪುರೇಖೆಯ ಲಾಗನ್ನು ಹೇಗೆ ಸಾಧಿಸಿದರೊ? ಮಿಂಚಿನೊಡನೆ ಸಾಧಿಸಿದರೊ. ತಂಗಾಳಿಯ ಅಂಚಿನಲ್ಲಿ ನಿಂತು ಕಲಿತರೋ. ಪಂಚಬಾಣನೊಡನೆ ಸರಿಮಿಗಿಲೆನಿಸಿ ಸೆಣಸಾಡಿದ ಅಭ್ಯಾಸದಿಂದಾಯಿತೊ! ಇವರು ನೆಲದ ಮೇಲೆ ನರ್ತಿಸಿದ ನೃತ್ಯ ಭೂತಳಕ್ಕೊಂದು ಸಿಂಗಾರ. ಆ ಮೇಲೆ ಅಂಚೆಗಳಂತೆ ಗಲಗಲನೆ ಅಂಬರಕ್ಕೆ ನೆಗೆದ ಸೊಬಗನ್ನು ನಾ ಬಣ್ಣಿಸಲಾರೆ. ನೀನೇ ಆತ್ಮವೆಂಬಂತೆ ಅಗಸದಲ್ಲಾಡುವೆ. ಈ ನಿನ್ನ ಮಾನಿನಿಯರೂ ಕೂಡ ಆಕಾಶದಲ್ಲಿ ಚಲಿಸುವುದೆಂದರೆ ಅದು ಸಹಜಾನುಚರಿತವಲ್ಲದೆ ಮತ್ತೇನು? ಗಿಳಿ ಬಿಳಿದಾದರೆ ಅದೊಂದು ಚೋದ್ಯವು. ಆದರೆ ಹಂಸೆ ಬಿಳಿದಾದರೆ ಚೋದ್ಯವಿಲ್ಲ; ಬೇರೆ ರಾಯರಿಗಿದೆಲ್ಲ ಚೋದ್ಯವು. ನಿನಗೆ ಮಾತ್ರವಿದು ಚೋದ್ಯವಲ್ಲ ಸಹಜವು.

'ದಿಕ್ಕನ್ನಿಕಾನಾಟ್ಯ, ಜಲಕ್ಕಿನಕಾನಾಟ್ಯ, ಹಂಸಮಂಡಳಿಯ ನೃತ್ಯಗಳಿವು ತಕ್ಕವಾಗಿದ್ದುವು. ಅಮರಕಾಂತಾನೃತ್ಯ, ನಾಗಕನ್ಯಾನೃತ್ಯ, ತಾರಾಂಗನಾನೃತ್ಯ, ದ್ಯುಮಣಿ ತಾಂಡವ, ಚಂದ್ರತಾಂಡವಗಳನ್ನು ನಿನ್ನ ರಮಣಿಯರು ನರ್ತಿಸಿದರೆ ಅದು ಇನ್ನೆಂತಿರುವುದೊ, ಪುಷ್ಪಲತಾನೃತ್ಯ, ಕಲ್ಪಲತಾನೃತ್ಯ, ಬಾಷ್ಪವಿದ್ಯುಲ್ಲತಾ ನೃತ್ಯ, ಪುಷ್ಪಕನೃತ್ಯಗಳನ್ನು ತೋರಿಸುವಾಗ ಬಾಷ್ಪಾಂಬುಗಳು ಬಾರದಿಹವೆ? ದಶಪದ್ಮವಿಂಶತಿಪದ್ಮ ಷೋಡಶಪದ್ಮಲಾಸ್ಯಗಳೆಲ್ಲ ತೋರುವ ಕೌಶಲ್ಯಗಳನ್ನು ಭೋಗ ಕುಶಲನಾದ ನೀನೇ ಬಲ್ಲೆ.'

ಎಂದು ಮಾತಾಡಿ ರಾಯನ ಮೊಗ ನೋಡಿದನು. ಆಗ ರಾಯನಿಂತು ನುಡಿದನು:

'ಬುದ್ಧಿಸಾಗರ, ಇದೇನು ದೊಡ್ಡದು? ಸ್ವಾನುಭವ ಸುಖಕ್ಕಿಂತಲೂ ಅಧಿಕವೇ ಪಾತ್ರಗಾನ ಸುಖಗಳು? ಮುಕ್ತಿಯೇ ಸುಖವು; ಅದರ ಅಂತರದಲ್ಲಿ ವಿರಕ್ತಿಯೇ ಸುಖವು; ಅದರಲ್ಲಿ ವ್ಯಕ್ತಾತ್ಮ ಭಾವನೆಯೇ ಸುಖ; ಮತ್ತೆ ವಿಷಯ ಸಂಯುಕ್ತಿಯಿಂದಾವ ಸುಖವಿದೆ? ನಮ್ಮ ನಮ್ಮ ಪುಣ್ಯವು ನಮಗೆ ತಂದತ್ತ ಸುಖವನ್ನು ಓಸರಿಸದೆ ಉದಾಸೀನದಿಂದ ಉಂಡುಬಿಡುವುದಾದರೂ ಭಾಸುರವಾದ ಆತ್ಮಾನುಭವದಲ್ಲೇ ಇರುತ್ತಿರುವೆನು. ನೀನಿದನ್ನು ಅರಿಯದವನೇ? ನೀ ಚೆನ್ನಾಗಿ ಬಲ್ಲೆ, ಲೋಕಾನುರಂಜನೆಗಾಗಿ ನೀನಿಷ್ಟು ಹೊಗಳಿದೆ; ಅಷ್ಟೆ. ಅದಿನ್ನು ಸಾಕು; ಇದೊ, ಈ ಉಡುಗೊರೆಯನ್ನು ಸ್ವೀಕರಿಸು, ಎಂದನು. ಮಂತ್ರಿಯದನ್ನು ಸ್ವೀಕರಿಸಿಕೊಂಡನು.

ಯಾರಿಗೂ ತೋರಿಸದ ಅಂತಃಪುರ ನಾಟ್ಯವನ್ನರಸು ತನಗೆ ತೋರಿಸಿದ್ದರಿಂದ ತನ್ನ ಮೇಲವಗೆ ಕರುಣೆಯುಂಟೆಂದು ಮಂತ್ರಿಯು ಮನದಲ್ಲೇ ನಲಿದನು.

ಅರಸನು ತಾನು ತೊಟ್ಟ ಕಬಾಯಿ ಹಚ್ಚಡವನ್ನು ಮೇಳದ ಜನರಿಗಿತ್ತನು. ದೋತ್ರದ ಉಡಿಯಲ್ಲಿ ಆಳವಟ್ಟಿದ್ದ ನೇವಳವನ್ನು ನಯಕಾರನಿಗೆ ಕೊಟ್ಟನು. ತನ್ನ ಕಡಗಗಳನ್ನೇ ಸಡಿಲಿಸಿ ಸಿಂಜಿನಿ ಶಿಖರಿಣಿಯರಿಗೆಂದು ಉರುಳಿಸಿಬಿಟ್ಟನು. ಅವು ಗಾಲಿಗಳಂತೆ ಉರುಳಿ ಅವರನ್ನು ಸೇರಿದವು. ಪದಕವನ್ನು ತೆಗೆದು ತನ್ನನ್ನು ಸೇವಿಸುತ್ತಿದ್ದ ಸುದತಿಯರಿಗೆ ನೀಡಿದನು. ರಾಯನು ಕಂಠಮಾಲೆಯನ್ನು ಹರಿದು, ಹದಿನಾರು ಮಣಿಗಳನ್ನು ಪಾತ್ರದ ಹದಿನಾರು ಕನ್ನೆಯರಿಗೆ ಕೊಟ್ಟನು. ಉಳಿದ ಮಣಿಗಳನ್ನು ತೆರೆಯ ಒತ್ತಿನಲ್ಲಿದ್ದ ಅರಸಿಯರಿಗಿತ್ತನು.

ಮಂತ್ರಿ ಅರಸನಿತ್ತ ವಸ್ತ್ರಾಭರಣಗಳನ್ನು ಧರಿಸಿ, ಜಿನಬಿಂಬಗಳಿಗೆ ಶಿರಬಾಗಿ, ಅರಸನಿಗೆ ಕೈಮುಗಿದು ಹೊರಟುಹೋದನು. ಸಭೆಯೆಲ್ಲ ಹೊಗಳುತಿತ್ತು. ಆಮೇಲೆ ನಯಕಾರನು ತನ್ನ ಮೇಳದೊಂದಿಗೆ ನಡೆದನು.

ಅಷ್ಟು ಹೊತ್ತಿಗೆ ರಾತ್ರೆ ಹನ್ನೆರಡು ಘಳಿಗೆ ಸಂದಿತು. ಜಯಘಂಟೆ ಠೊಣ್ಣೆಂದು ಅದನ್ನು ಸಾರಿ ತಿಳಿಸಿತು.

# ೧೪

# ತಾಂಡವವಿನಯ

ಅನ್ಯರು ಹೊರಟು ಹೋದೊಡನೆ ತೆರೆಯ ಸೂತ್ರವನ್ನೆಳೆದರು. ಆಗ ರಾಣಿಯರೆಲ್ಲ ಅರಸನೆದುರು ಪ್ರತ್ಯಕ್ಷರಾದರು. ಈ ಮೊದಲು ನರ್ತನದ ಹದಿನಾರು ಕನ್ನೆಯರು ತೋರಿದ ಮೋಹನಕ್ಕಿಂತಲೂ ಮಿಗಿಲೆನಿಸಿತು ಇವರ ಬೆಡಗು. ಬಗೆಯರಿತು ಸಿಂಗರಿಸಿದ ಸಿಂಗಾರದಿಂದಲೂ, ಮಘಮಘಿಸುವ ಪರಿಮಳದಿಂದಲೂ ನಗೆಮೊಗದಲ್ಲಿ ಅರಸಿಯರು ಕಂಗೊಳಿಸಿದರು. ಭರತೇಶನು, ಎಡಬಲಕ್ಕೆ, ಹಿಂದುಮುಂದಕ್ಕೆ ದಿಟ್ಟಿಸಿ ಅರಸಿಯರನ್ನು ನೋಡಿದನು.

'ನಿಮಗೆಲ್ಲ ಇಷ್ಟು ಹೊತ್ತು ತೆರೆಯೊಳಗೆ ಉಪಸರ್ಗವಾಗಿತ್ತಲ್ಲವೆ' ಎಂದರಸನು ಅವರನ್ನು ಉಪಚರಿಸಿದನು.

'ನಮಗೆಲ್ಲ ಸ್ವರ್ಗವೇ ಆಗಿತ್ತು. ಉಪಸರ್ಗವೆಂಬುದು ಕನಸಿನಲ್ಲಿ. ನಿನ್ನ ಸಂಸರ್ಗದ ಈ ಓಲಗವು ಯಾರಿಗೆ ತಾನೆ ಸುಖವೀಯಲಾರದು?' ಎಂದು ಅರಸಿಯರು ಅರಸನನ್ನೇ ಪ್ರಶ್ನಿಸಿದರು.

'ಪಾತ್ರಾಂಗನೆಯರಿಗೆ ಆಡಿ ಸಂತೋಷವಾಯಿತು. ನಮಗೆ ನೋಡಿ ಸಂತೋಷವಾಯಿತು. ಇದು ಸ್ವರ್ಗದ ಸಮೀಪವಲ್ಲವೇ? ಈ ಪಾತ್ರಸತಿಯರು ಬಳಲಿರುವರು. ಅವರನ್ನು ಕರೆದು ಮನ್ನಣೆ ಮಾಡು' ಎಂದು ಕಳಕಂಠವಾಣಿಯರು ತಿಳಿಸಲು ನಿರ್ಮಲಚಿತ್ತನಾದ ದೊರೆಯು ಒಡಂಬಟ್ಟನು.

ದೊರೆಯು ತಾನೇ ನರ್ತನದ ಕನ್ನೆಯರನ್ನು ಕರೆದನು. ಅವರೆಲ್ಲ ಅರಸನ ಮುಂದೆ ಬಂದು ನಿಂತರು. ಕಿರುಬೆವರ ಹನಿಯ ಮೈ. ನಸುಕಲಕಿದ ಬೊಟ್ಟು. ಮಿರುಗುವ ಮುಖಕಾಂತಿ; ಕಿಡಿಗೆದರುವ ಬಾಯಿ; ಮಿಂಚು ಹೊರಸೂಸುವ ಕಣ್ಣು; ಮಿಡಿವ ಅಳ್ಳೆ; ನಸು ಹೆಚ್ಚಾದ ಉಸಿರು. ಇಂತಿರುವ ಕನ್ನೆಯರು ಸೆರಗಿಂದ ಬೆವರನ್ನೊರಸುತ್ತಲ್ಲಿ ನಿಂತಿದ್ದರು. ದೇಸಿಯ ಚೆಲುವನ್ನು ಸೂಸುತ್ತ ನಿಂತಿರುವ ಅವರನ್ನು ಮೊಗದಿಂದ ಪಾದದವರೆಗೊಮ್ಮೆ ನೋಡಿ, ಗಂಡು ಕೋಗಿಲೆಯು ನುಡಿವಂತೆ, ಅರಸನು ಮಾತಾಡಿದನು.

'ಪ್ರಚಂಡೆಯರೆ, ಭಾಪು. ಇಂದು ನೀವು ಮಹಾಪಟುಗಳಂತೆ ನರ್ತಿಸಿದಿರಿ. ಇದು ಚೆನ್ನಾಯಿತು. ನನ್ನಲ್ಲೂ ಮಹಾಪರಿಣಾಮವನ್ನುಂಟುಮಾಡಿತು. ಇಂದು ಬುದ್ಧಿಸಾಗರ ನಿದ್ದುದರಿಂದ ನರ್ತನನ್ನು ಒಂದಿಷ್ಟು ಲಂಬಿಸಿದುದು ಸೊಗಸಾಯಿತು.'

'ಬುದ್ಧಿ ಸಾಗರನಿದ್ದರೆ ನಮಗೇನು? ಬುದ್ಧಿಸಾಗರನ ಒಡೆಯನಿದ್ದಾನೆಂದು ತಾಂಡವ ಪದ್ಧತಿಯನ್ನು ತೋರಿಸಿದೆವು.'

'ಹಂಸಮಂಡಳಿಯನ್ನು ತೋರಿಸುವಾಗ ಅವನಿಗೊಬ್ಬಳನ್ನು ಮರೆಮಾಡಿ, ನೀವೆಲ್ಲ ನೋಡಲಿಲ್ಲವೆ? ಈ ಹುಸಿಮಾತೇಕೆ ನನ್ನಲ್ಲಿ?'

'ಇದರಿಂದೇನು ಕೊರತೆಯಾಯಿತು?'

'ಅವನಿದ್ದನೆಂದು ನಿಮಗಿಷ್ಟಾದರೂ ಯೋಚನೆ ಬರಲಿಲ್ಲವೆ? ಸಹಜವನ್ನೇ ಹೇಳಿರಿ.'

'ದೇವರ ಒತ್ತಿನಲ್ಲಿ ಆತ ನಾಟಿರುವಾಗ ಕುಲಸತಿಯರಿಗೆ ಯೋಚನೆ ಇಲ್ಲದೇ ಉಂಟೇ? ನಾಟಕವೆಂಬುದು ಗಂಭೀರ ಕಲೆಯಲ್ಲ. ಆದ್ದರಿಂದ ಅನ್ಯರೆದುರಿಗೆ ತೋರಿಸುವಾಗ ಯೋಚನೆಯಿಲ್ಲದೆ ಇದ್ದೀತೆ ಕುಲವಧುಗಳಿಗೆ? ಆದ್ದರಿಂದ ಎಂದಿನಂತೆ ನಿಷ್ಕಂಟಕದಲ್ಲಿ ನಟಿಸಲು ಆಗಲಿಲ್ಲ. ಆದರಲ್ಲೂ ನೀನತಿ ಜಾಣ, ನಿನ್ನ ಮೋಹದ ಮಂತ್ರಿಯೂ ವಿವೇಕಿ. ಅಷ್ಟು ಎಚ್ಚರದಿಂದಲೇ ನರ್ತಿಸಿದೆವು. ಹೀಗಾಗಿ ದೇವರಿಗೆ ಕಂಡ ತಪ್ಪನ್ನು ಒಪ್ಪಿಕೊಳ್ಳುವೆವು.'

'ಲೇಸನ್ನೇ ನುಡಿದಿರಿ. ನಿಮ್ಮ ಲಾಸಿಕೆಗೆ ಮೆಚ್ಚಿದೆನು. ಬೇಸರವಿಲ್ಲದೆ ಬೇಡಿರಿ. ನಿಮ್ಮ ಇಚ್ಛೆಯನ್ನು ಸಲ್ಲಿಸುವೆನು.'

'ನಮಗೊಂದು ವಸ್ತು ಬೇಕೆಂಬ ಆಶೆಯಿಲ್ಲ. ಸರ್ವ ಭಾಗ್ಯವೂ ನಮ್ಮಲ್ಲಿಯೇ ಇದೆ. ಯಾವಾಗಲೂ ಲವಲವಿಕೆಯಿಂದ ಕುಣಿವ ಅನುಭವವೇ ನಮಗೆ ಸಾಕು.'

ಅರಸನು ಪ್ರತಿಯೊಬ್ಬಳನ್ನೂ ಕುರಿತು, ಆಕೆಗೇನು ಬೇಕು, ಈಕೆಗೇನು ಬೇಕು ಎಂದು ತಾನೇ ವಿಚಾರಿಸಿದನು. ಅವರಲ್ಲಿ ಇಬ್ಬರಿರಲಿಲ್ಲ. ಆಶ್ಚರ್ಯದಿಂದ ಎಲ್ಲರೂ ಅತ್ತಿತ್ತ ನೋಡಿ, ಕಂಬದ ಮರೆಯಲ್ಲಿರುವ ಅವರನ್ನು ಕಂಡರು. ರೂಪಾಣಿ, ಪದ್ಮಿನಿ ಎಂಬ ಇಬ್ಬರು ಅರಸನೊಡನೆ ಕೋಪಗೊಂಡು, ಅವನ ಸನ್ನಿಧಿಗೆ ಬಾರದೆ ದೂರ ಸರಿದು ನಿಂತಿದ್ದರು. ನರ್ತನವಾಗುವಾಗ ಅರಸನು ಒಮ್ಮೆ ಮುಖವನ್ನು ಅಡ್ಡಮಾಡಿದನೆಂಬ ಸಿಟ್ಟಿನಿಂದ ಇವರು ದೂರವಾಗಿದ್ದರು. ಅಲ್ಲದೆ ಅರಸನು ವೀಳ್ಯವನ್ನು ಕೊಳ್ಳುವ ಹೆಮ್ಮಕ್ಕಳನ್ನು ನೋಡುವ, ಮಂತ್ರಿಯತ್ತ ನೋಡುವ ಕಾರ್ಯವೆಸಗಿದವನಲ್ಲದೆ ತಮ್ಮನ್ನು ನೋಡಲಿಲ್ಲವೆಂದವರು ಉಮ್ಮಳಗೊಂಡಿದ್ದರು.

ಕಂಬದ ಹಿಂದೆ ಪುತ್ಥಳಿಯಂತೆ ನಿಂತಿದ್ದ ಅವರಿಗೇನಾಯಿತೆಂದು ವಿಚಾರಿಸಲು ಅರಸನು ಸೇವಕಿಯರನ್ನು ಕಳುಹಿಸಿದನು.

'ನಿಮ್ಮ ಸ್ವಾಮಿಯ ದೃಷ್ಟಿಗಳಿಗೆ ನಮ್ಮ ನರ್ತನ ಬಂದುದಿಲ್ಲ. ಆಗು ಗೆಟ್ಟವರನ್ನೇಕೆ ಕರೆಯಬೇಕು; ಹೋಗಿ. ನಮ್ಮ ಆಟವು ನಿಮ್ಮರಸನಿಗೆ ಒಳಿತಾಗಲಿಲ್ಲ. ಅದಕ್ಕಾಗಿ ಅಡ್ಡ ಮೋರೆ ಮಾಡಿ ಮಂತ್ರಿಯ ಗಡ್ಡದ ಮೋರೆಯನ್ನೇ ನೋಡುತ್ತಿದ್ದ. ನಮ್ಮನ್ನು ಜಡಪಾತ್ರ ವೆಂದೇ ಬಗೆದು ಹಡಪದವರನ್ನೇ ನೋಡುತ್ತಿದ್ದ. ಕಡೆಗೀಗ ಬಣ್ಣಗಾರಿಕೆಗಾಗಿ ಕರೆಯಲು ಕಳುಹಿಸಿದ್ದಾನೆ, ನಿಮ್ಮನ್ನು. ನಾವೆಂತು ಬರಲಿ? ಊಳಿಗದವರಾದ ನಿಮ್ಮಲ್ಲಿ ನಮ್ಮ ದುಃಖವನ್ನು ಹೇಳಿ ಫಲವಿಲ್ಲ' ಎಂದು ಅರಸನೂ ಕೇಳುವಂತೆ ಹೇಳಿದರು.

ಇವರಿಬ್ಬರಿಗೆ ನನ್ನಿಂದ ನೋವಾಯಿತೆಂದು ಭರತೇಶನು ಮನದಲ್ಲೇ ನೆನೆದು ಕೊಂಡನು. ಇನ್ನವರಿಗೆ ಹೇಗೆ ತಿಳಿಸುವುದೆಂದು ಭಾವಿಸಿ, ಮತ್ತೆ ಮಾತಾಡಿದನು.

'ರೂಪಾಣಿ ಬಾ. ಪದ್ಮಿನಿ ಬಾ. ಸಮೀಪಕ್ಕೆ ಬನ್ನಿ. ನಿಮ್ಮ ಮನಸ್ಸಿನ ತಾಪವನ್ನು ಕೆಡಿಸುವೆನು.'

'ದೇವ, ನೀನೇಕೆ ನಮ್ಮನ್ನು ಕರೆವುದು? ನಾವೇನು ನಿನ್ನ ಭಾವಕ್ಕೆ ಬರುವ ಪಾತ್ರಗಳೇ? ಯಾವ ಮೋರೆಯಲ್ಲಿ ನಿನ್ನೊತ್ತಿಗೆ ಬರಲಿ. ಕಣ್ಣೆಚ್ಚೆಯಾದಲ್ಲಿ ಮನದಿಚ್ಚೆಯಾಗುವುದು. ಕಣ್ಣೆಚ್ಚೆಯಿಲ್ಲದ ನಮ್ಮನ್ನು ಬಣ್ಣದ ಮಾತಿಗೆಂದು ಕರೆವುದೇಕೆ?'

'ನೀವು ನೃತ್ಯಮಾಡುವಾಗ ನಾನು ಆಲಸ್ಯಪಡಲಿಲ್ಲ. ವೀಳ್ಯಕೊಳ್ಳಲೆಂದು ಅತ್ತಿತ್ತ ನೋಡಿದರೆ ನೀವು ಹೀಗೆ ನೋವನ್ನು ತಾಳಬಹುದೆ? ಸಮ್ಮುಖದಲ್ಲಿದ್ದ ಮಂತ್ರಿಯನ್ನು ನೋಡದೆ ನಿಮ್ಮನ್ನೇ ನೋಡುತ್ತಿದ್ದರೆ ಅವನೆನ್ನ ಅಧಿಕ ಕಾಮಿಯೆಂದು ಹೇಳನೆ? ನನಗೆ ನಿಮ್ಮಲ್ಲಿ ಲೇಸುಂಟೆಂಬ ಕಲೆಯನ್ನು ಎಲ್ಲರ ಮುಂದೆಯೂ ತೋರಿಸಬೇಕೆ?'

'ನುಡಿಯಿಂದ ನಮ್ಮನ್ನು ಛಾಳಿಸಬೇಡ, ಸ್ವಾಮಿ. ನಾವೇನು ನಿನ್ನ ಎದುರಿನಲ್ಲಿ ಕೊರವಂಜಿ, ಕಟ್ಟಿಣೆಯ, ತಿರುಕವೇಷ ಕಟ್ಟಿದೆವೆ? ಹರಿಗೆ ಕತ್ತಿಗಳ ಹಿಡಿದು ಪುರುಷವೇಷವ ತೊಟ್ಟೆವೆ? ಕೊರಮ ವೇಷಕಟ್ಟಿ, ಆಳ್ಳೆ ಬಾಯಿ ಬಡಿದುಕೊಂಡೆವೆ? ನಮ್ಮ ದರ್ಶನದಲ್ಲಿ ನೀನಾವ ಕೊರತೆಯನ್ನು ಕಂಡೆ? ಆಗಲೇ ನಾವು ಹೋಗುತ್ತಿದ್ದೆವು. ಬುದ್ಧಿ ಸಾಗರನಿರುವನೆಂದು ಹೋಗಲಿಲ್ಲ.'

'ನಾನು ನಿಮಗೇನೂ ದೋಷಮಾಡಿಲ್ಲ. ಸುಮ್ಮನೆ ನನ್ನ ಮೇಲೆ ಕೋಪಿಸಬೇಡಿ.'

'ಎದೆಯಲ್ಲಿ ಕಠಿಣವಾಗಿ ನುಡಿಯಲ್ಲಿ ನಯತೋರಲು ನೀನೆಲ್ಲಿ ಕಲಿತೆ? ನೀನು ನುಡಿಯಿಂದ ಕಲ್ಲನ್ನೇ ಕರಗಿಸುವೆ. ಅದೆಲ್ಲ ಬಲ್ಲೆವು. ಕುಣಿವಾಗ ಕಡೆಗಣಿಸಿ ಈಗ ಕರೆವುದೇ?'

'ಹೌದು. ನೀವು ನೊಂದಿರಿ. ನಾನೇ ನೋಯಿಸಿದೆನೆಂದು ಹೇಳುವೆ. ಈಗ ಬನ್ನಿ ನಿಮ್ಮ ನೋವನ್ನು ಹೋಗಲಾಡಿಸುವೆ; ಬೇಡಿದುದನ್ನು ಕೊಡುವೆ.'

'ಅಯ್ಯಯ್ಯೊ. ನಮ್ಮನ್ನು ಯಾರೆಂದು ಭಾವಿಸಿದರಿ ಅರಸಾ, ನಮಗೆ ಕೈಯ್ಯಾಸೆಯೂ ಇಲ್ಲ; ಮೈಯ್ಯಾಸೆಯೂ ಇಲ್ಲ. ನೀವೇನು ಕೊಡುವುದು? ವಸ್ತ್ರಭೂಷಣಗಳು ಅಭಿಮಾನ ತಪ್ಪಿದ ಮೇಲೇಕೆ? ಗುಣವೇ ಭೂಷಣ; ಅಭಿಮಾನವೇ ವಸ್ತ್ರವೆಂದು ಕೈಹಿಡಿದ ನಮಗೆ ತೊಡಿಗೆಯ ಆಸೆ ತೋರುವುದೆ?'

ಅಲ್ಲಿಗರಸ ಮಾತು ನಿಲ್ಲಿಸಿ ಚಂದನವತಿಯನ್ನೂ, ಮಂಗಲವತಿಯನ್ನೂ ಕರೆದು ಅವರಿಬ್ಬರನ್ನೂ ಸಮಾಧಾನಪಡಿಸಲು ಕಳುಹಿಸಿದನು. ಆದರೂ ಅವರು ಇಬ್ಬರೂ ಬರಲಿಲ್ಲ. ಆಮೇಲೆ ಪುಷ್ಪಾಣಿ ಮುಂತಾಗಿ ಮೂವರನ್ನು ಕಳುಹಿಸಿದನು; ಪ್ರಯೋಜನ ವಾಗಲಿಲ್ಲ. ಮಧುರಾಣಿ ಮುಂತಾದ ಹಲವರು ಹೋಗಿ ಮಾಡಿದ ಪ್ರಯತ್ನಗಳು ವಿಫಲವಾದುವು. ಇದನ್ನು ನೋಡಿದ ರಾಣಿಯರೆಲ್ಲ ಸಿಟ್ಟಿಗೆದ್ದರು.

'ಪಾತ್ರಕಾಂತೆಯರಿಗೆ ಮದಮುಖವಿಷ್ಟೇಕೆ? ಸ್ವಾಮಿ ವಿನಯತೋರಿ ಕರೆದರೆ ಇವರು ಮುನಿಸಿನಿಂದ ಕಾಡುವುದೆ? ಕೋಮಲೆಯರಿಗಿದು ಒಪ್ಪುವುದೇ? ಇವರ ಹೆಮ್ಮೆಯನ್ನು ನೋಡಿ ನಾವಾದರೂ ಹೇಗೆ ಸುಮ್ಮನಿರುವುದು?'

—ಎಂದು ಮಾತಿನ ಮಾನೆಯಿಂದ ಚುಚ್ಚಿಯೇ ಬಿಟ್ಟರು. ಇದನ್ನು ಕೇಳಿದ ರೂಪಾಣಿಯು ರಾಣಿಯರ ಮಾತಿಗೆ ಮೊದಲು ಅಂಜಿದಳು. ಅನಂತರ ಯೋಚಿಸಿ ಸಮಾಧಾನಗೊಂಡು, ತನ್ನ ಅಭೀಷ್ಟಾರ್ಥದ ಅರಸನ ಬಳಿಗೆ ಬಂದಳು. ಚಂದ್ರಾಣಿಯೇ

ಮೊದಲಾದವರು ಆಕೆಯನ್ನು ಕರೆತಂದು ರಾಜೇಂದ್ರನಿಗೆ ನಮಿಸೆಂದರು. ಪಾದಕ್ಕೆರಗಿದ ನಲ್ಲಳನ್ನು ಅರಸನು ಹಿಡಿದೆತ್ತಿ ನೋವನ್ನು ಮಾಣಿಸಿದನು.

'ಅಹುದಾ ನಾ ನಿನ್ನ ನೋಯಿಸಿದೆನು, ಮರೆತುಬಿಡು.'

ಈ ಮಾತಿನಿಂದ ರೂಪಾಣಿ ಎದೆಯುಬ್ಬುವಂತೆ ಸಂತೋಷಗೊಂಡಳು. ಮುಖದ ಮುನಿಸು ಮಾಯವಾಗಿ ಮನದ ಮೋಹಮುಕುಲ ಅವಳ ಮೋರೆಯಲ್ಲರಳಿತು.

ಆದರೆ ಪದ್ಮಿನಿ ಬರಲಿಲ್ಲ.

ಈ ಹೆಣ್ಣನ್ನು ಹೇಗೆ ಬರಿಸುವುದೆಂದು ಭರತೇಶನು ಯೋಚಿಸುತ್ತಿದ್ದನು. ಆಗಲೇ ರಾಣಿಯರು, ಆಕೆಯನ್ನೂ ಕರೆದು ನೀತಿಯೊರೆದರು. ಆದರೂ ಪದ್ಮಿನಿ ತನ್ನ ಛಲವನ್ನು ಬಿಡಲಿಲ್ಲ.

'ನಾನೇ ಬೇಡದ ಗುಣದವಳಾದೆ.ನಲ್ಲಗೆ ಹಿತದವರಾಗಬೇಕೆಂದು ನೀವೆಲ್ಲರೂ ಒಂದಾಗಿ ಒಬ್ಬಳನ್ನು ಜಡಿವಿರಿ. ಅರಸನು ಉದಾಸೀನನಾದರೇನು? ಒತ್ತಿನ ತರುಣಿಯರು ನನ್ನವರೆಂದು ನಂಬಿದ್ದೆನು. ಅಕ್ಕ, ನೀವು ನಿಮ್ಮರಸನಂತೆಯೇ ಆದಿರಿ. ಎಳೆಯೆಂಬ ರಾಯನಿಗೆ ತುಳಿಯೆಂಬ ಮಂತ್ರಿಯೆನ್ನುವ ಗಾದೆ ಫಲಿಸಿತು. ಕಡಲನ್ನು ಒತ್ತದೆ ನೀರು ತುಂಬುವ ಕೊಡವನ್ನು ಒತ್ತುವಂತೆ, ನೀವೂ ನಿಮ್ಮ ಮಹಾರಾಜನನ್ನು ಒತ್ತದೆ ನನ್ನನ್ನು ಒತ್ತುವುದೂ ಒಂದು ರೀತಿಯ ಬೆಡಗೆ ಸರಿ.'

'ತಾಯಿ, ಕೇಳು. ಸುಖಿಗಳಿಗೆ ಮುನಿಸು ಹೆಚ್ಚಾದರೆ ಸೊಗಸಲ್ಲ, ನಾಯಕಗೆ ಚಿಂತೆಯನ್ನುಂಟು ಮಾಡಬಾರದೆಂದೇ ನಿನಗೆ ಸಹಾಯವಾದೆವು. ಬಡಮುನಿಸು ಹದವಾಗಿ ಕಾಸಿದ ಹಾಲನ್ನು ಕುಡಿದಂತೆ. ಆ ಮುನಿಸು ಹೆಚ್ಚಾದರೆ ಸುಡುಸುಡು ಹಾಲನ್ನೇ ಕುಡಿದಂತೆ. ಅತಿಯಾಗಿ ಮಥಿಸಿದರೆ ಶ್ರೀಗಂಧದಲ್ಲೂ ಕಿಚ್ಚು ಹುಟ್ಟುವುದು, ಪತಿಯೊಡನೆ ಅತಿ ವಾದ ಬೇಡವೆಂದ ನಮ್ಮ ಮಾತು ನಿನಗೆ ಹಿತವಲ್ಲವೆ?'

'ಅಕ್ಕ, ನೀವೆಲ್ಲ ನನಗೆ ಹಿತವಂತರೆ. ನಿಮ್ಮ ಅರಸನು ಮಾತ್ರ ಅಹಿತನಾದನು' ಎಂದು ಪದ್ಮಿನಿಯು ಪಟ್ಟು ಹಿಡಿದೇ ನುಡಿದಳು.

ಆಗ ಭರತೇಶನು ಪದ್ಮಿನಿಯ ಇಂಗಿತವನ್ನರಿತುಕೊಂಡು ಅರಸಿಯರನ್ನು ತಾನೇ ಸಮಾಧಾನಪಡಿಸಿದನು.

'ಇರಲಿ. ನಾನೇ ಅವಳನ್ನು ಶಾಂತ ಮಾಡುವೆನು.'

'ಅವಳಿಗೆ ಅರಸನೊಡನೆ ಮಾತಾಡುವ ಇಚ್ಛೆ. ನಮಗೇನಂತೆ? ನಾವೂ ಇದನ್ನು ನೋಡೋಣ.' ಎಂದು ಅರಸಿಯರು ಅವರೊಳಗೇ ಆಡಿಕೊಂಡು ಸುಮ್ಮನಾದರು.

ರಾಜನು ತನ್ನೆದುರು ಸಿಡಿದಂತೆ ನಿಂತಿರುವ ನಟಕಾಮಿನಿಯ ಮನೋಧರ್ಮವನ್ನು ತಿಳಿಯತೊಡಗಿದನು. ಬಾಲೆಯಲ್ಲದ, ವಿದಗ್ಧೆಯಲ್ಲದ, ಮುಗ್ಧೆಯಲ್ಲದ, ಆ ಪದ್ಮಿನಿಯ ಕಾತರವನ್ನೂ ಆತುರವನ್ನೂ ಅರಸು ಅರಿತುಕೊಂಡು ಅವಳನ್ನೇ ಕಾಲಿಗೆರಗಿಸಿಕೊಳ್ಳ ಬೇಕೆಂದು ಬಗೆದನು.

'ಪದ್ಮಿನಿ. ರೂಪಾಣಿ ಬಂದ ಮೇಲೆ ನೀನಿಷ್ಟು ಛಲಮಾಡುವುದು ಒಳಿತಲ್ಲ. ನಿನ್ನಲ್ಲಿ ಪಂಥನಿಲ್ಲದು.'

'ಅಳ್ಕೆದೆಯ ರೂಪಾಣಿ, ಲಜ್ಜೆಯಿಲ್ಲದೆ ನಿನಗೆರಗಿದಳೆಂದು ಈ ಪದ್ಮಿನಿಯೂ ಹಾಗೆ ಮಾಡುವಳೆಂದು ಬಗೆದೆಯಾ? ಲೇಸಿಗಾಗಿ ಕಾಲಿಗೆ ಎರಗಬಹುದು ದೊರೆ. ಉದಾಸೀನ ತೋರಿದಾಗ ಯಾರು ಎರಗುವರು?'

'ಅಷ್ಟುಂಟೆ ಮನೋಧೈರ್ಯ ನಿನ್ನಲ್ಲಿ?'

'ಉಂಟುಂಟು.'

'ದೃಷ್ಟಿಸಿ ನೋಡಿ ಮಾತನಾಡು. ಭ್ರಷ್ಟರಂತೆ ಅಡ್ಡ ಮೋರೆಯಲ್ಲೇಕೆ ನುಡಿವೆ?'

'ಮುಖವನ್ನು ನೋಡಿದರೇನಂತೆ?'

—ಎಂದು ಪದ್ಮಿನಿ ಅರಸನನ್ನೆ ದಿಟ್ಟಿಸಿ ನೋಡಿದಳು. ಅವಳ ಮುಖದ ಮುನಿಸು ಮಾಯವಾಗಿ ಮನದ ಮೋಹವೇ ಮೋರೆಯಲ್ಲಿ ಕರಗಿದ ಗೆರೆಯಲ್ಲಿ ಎಳೆಯಿತು. ಒಡನೆಯೇ ಆ ದುಗುಡ ಓಡಿಹೋಗಿ ನಗುವಿನ ಎಸಳು ಅರಳಿತು. ಅವಳಿಗರಿಯದಂತೆ ತಲೆ ಬಾಗಿತು.

ನಿಂತಲ್ಲಿ ತಲೆಬಾಗಿದರೆ ತನಗೊಪ್ಪದೆಂದು ಅರಸನಾಕೆಯ ಸೋಲಿನ ಮೇಲೆ ಮತ್ತೊಂದು ಬರೆಯೆಳೆದನು. ಆಕೆ ತನ್ನ ಸೋಲನ್ನು ಒಪ್ಪಲಾರದೆ ದುಗುಡವನ್ನು ಎತ್ತಿಕೊಂಡು ಅರಸನನ್ನು ನೋಡಿದಳು. ಆದರಾಗ ದುಗುಡವು ಜಾರಿತು. ನಗೆಯನ್ನವಳು ದೂಡಲು ಯತ್ನಿಸಿದರೂ ಅದು ನೆಗೆನೆಗೆದು ಬಂತು. ಧೈರ್ಯವನ್ನವಳು ನಿಲ್ಲೆಂದು ಎಳೆದು ಹಿಡಿದರೂ ಅದು ಜಾರಿಹೋಯಿತು. ಕಾತರವನ್ನು ಒಲ್ಲನೆಂದು ನೂಕಿದರೂ ಅದು ಅವಳ ಮೈಗಂಟಿ ಕಾಡತೊಡಗಿತು.

'ಇನ್ನೂ ಪಂಥವೇ ಪದ್ಮಿನಿ?'

—ಎಂದರಸನು ತನ್ನ ಗೆಲುವನ್ನು ಸೂಚಿಸಿಯೇ ನಗೆಯಾಡಿದನು. ಛಲವಂತೆಯಾದ ಪದ್ಮಿನಿಯನ್ನು ಆಣೆಯ ಮೇಲಾಣೆಯಿಟ್ಟು ಎಡದಿಂದ ಬಲಕ್ಕೆ ಬಲದಿಂದ ಎಡಕ್ಕೆ, ಹಾಗೆ ಹೀಗೆ ಒಂದೊಂದೇ ಹೆಜ್ಜೆ ಮುಂದಿಡುವಂತೆ ಮಾಡಿ, ತನ್ನೆಡೆಗೆ ಕರೆಸಿಕೊಂಡನು. ಕೊನೆಯಲ್ಲಿ ನಗುನಗುತ್ತ ತನ್ನ ಬಳಿಗೆ ಬಂದು ನಿಂದಾಕೆಯನ್ನು ನೋಡಿ 'ನಿನ್ನ ಇಂದಿನ ಲಾಸ್ಯವು ಸೊಬಗಾದುದು' ಎಂದಷ್ಟೆ ನುಡಿದನು. ಆಕೆ ಅದರಿಂದಲೇ ಉಬ್ಬಿದಳು.

ಆಗ ಅರಸಿಯರು ಒಬ್ಬೊಬ್ಬರಾಗಿ ಪದ್ಮಿನಿಯ ಬಳಿ ಸೇರಿದರು. ಈಗ ಆಕೆ ಪರಿಪಕ್ವಮಾನಸೆಯಾದಳೆಂದವರು ಅರಿತುಕೊಂಡರು. 'ಪದ್ಮಿನಿ ನೀನಿನ್ನು ಗರ್ವವನ್ನು ಬಿಟ್ಟುಬಿಡು' ಎಂದಾಕೆಗೆ ನಯ ಹೇಳಿದರು. ಆಕೆಯೂ ಅವರ ಸಂಧಾನಕ್ಕೊಡಂಬಟ್ಟು ರಾಯನಡಿಗೆರಗಿದಳು. ಆದರೆ ಅರಸನವಳ ಮೋರೆ ನೋಡಲಿಲ್ಲ, ಮುಸುಕಿಕ್ಕಿಕೊಂಡನು. ಚಾರುಚಂದ್ರಮನ ಮೇಲೆ ಕವಿದ ಧವಳಾಕಾರದ ಮುಗಿಲೋ ಎಂಬಂತೆ ಆ ರಾಯನ ಅಂಗವನ್ನು ಮುಸುಕಿ ಕ್ಷೀರೋದಕವೆಂಬ ಪಟ್ಟೆಯೂ ಕಂಗೊಳಿಸಿತು. ಇದನ್ನು ನೋಡಿ ನಾರಿಯರೆಲ್ಲ ತಳಮಳಗೊಂಡರು. ಮುಖ ಮುಖ ನೋಡುತ್ತ ಚಿಂತೆಯಲ್ಲೆ ಅವನನ್ನು ಬಳಸಿ ನಿಂದರು.

'ಅಡಿಗೆರಗಿದವಳ ನುಡಿಸಬಾರದೆ?' ಎಂದವರು ದೊರೆಯನ್ನು ನುಡಿಸಿದರು.

'ನಾನಿಂದು ಅವಳನ್ನು ಕಾಣಿಸಿಕೊಳ್ಳಲಾರೆ' ಎಂದು ಭುವನೇಶ ಮುಸುಕಿನೊಳ

ಗಿಂದಲೇ ನುಡಿದ. ಆಣೆಯನ್ನು ಮೀರಿದವಳೊಡನೆ ಮಾತನಾಡಿದರೆ ನಮಗೆ ಕುಂದು ಎಂದಾಗಲೂ ಅವರು ಪದ್ಮಿನಿಯ ಪಕ್ಷವಹಿಸಿಯೇ ದೊರೆಯನ್ನು ಸಂತೈಸಿದರು. ಆದರೆ ದೊರೆಗದರಿಂದ ಸಮಾಧಾನವಾಗಲಿಲ್ಲ. ಕೈಸಾಗದ ಅರಸಿಯರು ಮತ್ತೆ ಪದ್ಮಿನಿಯನ್ನೇ ಚುಚ್ಚಿದರು. 'ಅತಿವಾದ ಬೇಡವೆಂದು ನಾವು ಮೊದಲೇ ಹೇಳಲಿಲ್ಲವೇ? ನೀನದನ್ನು ಮೀರಿ ಹಾರಿದ್ದರಿಂದ ಹೀಗಾಯಿತು' ಎಂದು ಸುಮ್ಮನಾದರು.

ಪದ್ಮಿನಿ ಮಾತನಾಡಲಿಲ್ಲ; ದೈನ್ಯಬಡೆದು ಕಾಲಿಗೆರಗಿದರೂ ದೊರೆ ಮುನಿದನೆಂದರೆ ಮುಂದೇನು? ಪಗಡೆಯಾಡಿ ಸೋತವಳಂತೆ ಪದ್ಮಿನಿಯು ಸುಮ್ಮನಿದ್ದಳು.

ಇದನ್ನು ಕಂಡ ಅರಸಿಯರು ಬೇರೊಂದು ಉಪಾಯ ಮಾಡಿದರು. ಪದ್ಮಿನಿಯನ್ನೇ ಕೆಡೆನುಡಿದರು.

'ಅರಸಾ. ಈ ಧೂರ್ತೆಗಾಗಿ ನೀನು ಮುಸುಕಿಕ್ಕಿಕೊಂಡಿರುವುದೇ? ಅವಳನ್ನೇ ನಿನಗೊಪ್ಪಿಸಿಬಿಡುತ್ತೇವೆ. ನಿನ್ನ ಮನಸ್ಸಿಗೆ ಬಂದಂತೆ ಮಾಡಿಬಿಡು' ಎಂದರು. ಅರಸನ ಎಲ್ಲ ಪ್ರಶ್ನೆಗಳಿಗೂ ಒಪ್ಪಿಕೊಂಡರು. ಪುರುಷಗೆ ತಪ್ಪು ಮಾಡಿದ ಕಾಂತೆ ತನ್ನ ಅರಸಿತನದ ಹಮ್ಮನ್ನೂ ಬಿಡುವಂತೆ ಆಯಿತು. ಆಗ ಮಾತ್ರ ದೊರೆಯು ಮುಸುಕು ತೆಗೆದನು. ಮುಸುಕು ತೆಗೆದು ಕಂಗೊಳಿಸಿದ ಅರಸನಿಗೆ ವನಿತೆಯರು ಮುತ್ತಿನ ಅಕ್ಷತೆಯನ್ನಿಕ್ಕಿ ನೀರಾಜನ ಉತ್ಸವ ಮಾಡಿದರು. ಮುಂದರಸನು ಮಾನಿನಿಯರಿಗೆ ಮಾತನಾಡಲು ಬಿಡದೆ, ತಾಂಡವ ಸತಿಯರಿಗೆ ಉಡುಗೊರೆಯನ್ನು 'ಹಿಡಿಯಿರಿ' ಎಂದು ಕೈ ನೀಡಿದನು. ಅವರು ಉಡುಗೊರೆಯನ್ನು ಸ್ವೀಕರಿಸದೆ ಒಬ್ಬರ ಮೋರೆಯನ್ನೊಬ್ಬರು ನೋಡತೊಡಗಿದರು. ಕೂಡಲೇ ಅರಸನು ಉಡಗೊರೆಯನ್ನು ನೆಲಕ್ಕೆ ಬಿಸುಟು ಮುಸುಕಿಕ್ಕಿಕೊಂಡನು.

'ನುಡಿದಂತೆ ಕೇಳುವೆವೆಂದವರ ವರ್ತನವೆ ಇದು? ನಿಮ್ಮ ನುಡಿ ನಿಮಗೇ ಇರಲಿ' ಎಂದರಸು ಮೌನ ತಳೆದನು.

'ಉಡುಗೊರೆಯನ್ನೇನೂ ನಾವು ಬೇಡವೆಂದಿಲ್ಲ, ನಮ್ಮ ನಮ್ಮ ಮುಖ ನೋಡಿಕೊಂಡೆವು; ಅಷ್ಟೆ. ನೀಡಿದರೆ ಹಿಡಿಯುದಿಲ್ಲವೇ ನಾನು' ಎಂದವರೇ ಬೇಡಿಕೊಳ್ಳ ಬೇಕಾಯಿತು. ಅರಸನವರನ್ನು ಹದಗೊಳಿಸಿದ ಮೇಲೆ ಮುಸುಕು ತೆಗೆದು ಕಾಣಿಸಿ ಕೊಂಡನು. ಕಾಲು ಹಿಡಿದು ನಿಂದ ಸತಿಯರನ್ನು ನೋಡಿ, ಭರತೇಶನೊಂದು ವಿಸ್ಮಯವೆಸಗಬೇಕೆಂದು ಭಾವಿಸಿದನು. ಹಲವು ರೂಪಾಗುವೆನೆಂದು ನೆನೆದು ಕಣ್ಣುಚ್ಚಿ, ಹಂಸನಾಥನನ್ನು ನೋಡಿ ಪ್ರಗುಣ ಚಿನ್ಮಂತ್ರವನ್ನು ಜಪಿಸಿ, ಮತ್ತೊಮ್ಮೆ ಹಾಕಿಕೊಂಡ ಮುಸುಕನ್ನು ಬಿಸಾಡಿದನು. ಭರತೇಶರು ಮನೆತುಂಬಿ ನೆರೆದರಾಗ ! ಎಲ್ಲೆಲ್ಲೂ ಮುದ್ದು ಮೋಹನ ರೂಪದ ಭರತೇಶರೆ ! ಭರತೇಶನಿಲ್ಲದೆ ಏಕಾಕಿಯಾಗಿರುವ ಸತಿಯರೇ ಅಲ್ಲಿರಲಿಲ್ಲ. ಭರತೇಶನ ಮೂಲ ಶರೀರವು ಗದ್ದುಗೆಯಲ್ಲಿತ್ತು. ಶಾಖಾ ಶರೀರಗಳನ್ನು ತುಂಬಿಕೊಂಡು ಪರಿಪೂರ್ಣವಾಗಿಯೇ ಇದ್ದುದು ಅವನ ಆತ್ಮ. ಹಲವು ತನುಗಳಲ್ಲಿ ಆ ಆತ್ಮನು ಒಂದಾಗಿದ್ದನು ; ಸ್ಯಾತೆಂಬ ನುಡಿಗೆ ವಿಮುಖನಾದ ಬ್ರಹ್ಮನು ದ್ವೈತ ನಾಟ್ಯವಾಡಿದಂತೆ, ಹಲವು ಶರೀರಗಳಲ್ಲಿ ಆ ಆತ್ಮನು ಮೈದೋರಿದನು. ಮೂಲವನ್ನೂ ಮುಟ್ಟಿ ಶಾಖೆಗಳನ್ನೂ ಮುಟ್ಟಿ ಸ್ಪರ್ಶಶೀಲವರಿವ ವೃಕ್ಷದಂತೆ ಮೂಲ ದೇಹದಲ್ಲೂ

ಶಾಖಾದೇಹದಲ್ಲೂ ಸುಖಗೊಳ್ಳುತ್ತಿದ್ದನು, ಆ ವಿಕ್ರಿಯಾಂಗನು. ಎಲ್ಲ ಸತಿಯರಿಗೂ ಉತ್ತಮಾಭರಣಗಳ ಉಡುಗೊರೆಯಿತ್ತು ಅವರೊಂದಿಗೆ ಸರಸವಾಡಿದನು. ಎಲ್ಲರೊಂದಿಗೂ ಅವರವರಿಗೆ ತೃಪ್ತಿಯಾಗುವಂತೆ ಸರಸದಲ್ಲಿ ಕೂಡಿದನು. ಪದ್ಮಿನಿಯನ್ನು ಕಂಡಾಗ ಮೌನವಿದ್ದಾಕೆಯನ್ನು ಮಾತನಾಡಿಸಿ ಮನ್ನಿಸುತ್ತಾ ಆಕೆಯ ಇಚ್ಛೆಯನ್ನು ಪೂರೈಸಿದನು. ಈ ಪರಾಭವದಲ್ಲೂ ಗೆದ್ದವಳು ತಾನೇ ಎಂದು ಆಕೆ ಭಾವಿಸಿ ಸಂತಸಗೊಂಡಳು.

ಅಷ್ಟು ಹೊತ್ತಿಗೆ ಸಮರಾತ್ರಿಯ ಘಂಟೆ 'ಠೊಣ್' ಎಂದು ಕೇಳಿಸಿತು. ಹಿಂದಿರುವ ಆದಿಜಿನನ ಬಿಂಬಕ್ಕೂ ಮುಂದಿರುವ ಛಾಯಾಬಿಂಬಕ್ಕೂ ವಂದಿಸಿ, ಗದ್ದುಗೆಯಿಂದ ಭರತೇಶನೆದ್ದು ಹೊರಟನು.

## ೧೫

# ಪರ್ವಾಭಿಷೇಕ

ಭರತೇಶನಿಗೆ ಭೋಗಮಜ್ಜನ ಯೋಗಮಜ್ಜನವೆಂಬ ಎರಡು ರೀತಿಯ ಜಳಕಗಳಿವೆ. ಭೋಗಾರ್ಥ ಮಜ್ಜನಕ್ಕೆ ಮರ್ದನವಾಗಬೇಕು; ಹೆಚ್ಚು ನೀರೂ ಬೇಕು. ಯೋಗಾರ್ಥಮಜ್ಜನಕ್ಕೆ ಅಲ್ಪ ನೀರು ಸಾಕು. ಭೋಗಮಜ್ಜನದಷ್ಟು ವೇಳೆಯೂ ಯೋಗಮಜ್ಜನಕ್ಕೆ ಬೇಡ. ಒಂದು ದಿನ ಭೋಗಮಜ್ಜನವಾದರೆ ಮರುದಿನ ಯೋಜಮಜ್ಜನ. ಹೀಗೆ ಚಕ್ರಿಗೆ ಜಳಕವೆಂಬುದು ತಪ್ಪದು.

ಮಂಗಲಾಂಗನಾದ ಭರತೇಶನು ಯೋಗಮಜ್ಜನ ಮಾಡಿ ಶೃಂಗಾರ ಶಾಲೆಯನ್ನು ಹೊಕ್ಕನು. ಆ ಹೇಮವರ್ಣನಿಗೆ ಮೋಹನಶೃಂಗಾರ, ಮೋಕ್ಷ ಶೃಂಗಾರವೆಂದು ಎರಡು ರೀತಿಯ ಶೃಂಗಾರಗಳಿವೆ. ಮೋಹನಶೃಂಗಾರವೆಂಬುದು ಸತಿಯರ ಮೆಚ್ಚು. ನಿರ್ಮೋಹಾಂಗವೇ ಮೋಕ್ಷಶೃಂಗಾರ.

ಅಂದು ಯೋಗಮಜ್ಜನ ತೀರಿಸಿದ ಚಕ್ರಿಯು ಧೂಪದಿಂದ ಕೇಶರಾಶಿಯನ್ನು ಒಣಗಿಸಿಕೊಂಡನು. ಅವನು ಧರಿಸಿದ್ದ ಚೀನಾಂಬರವು ಕೇಶವೆಂಬ ರಾಹುವನ್ನು ಮುಸುಕಿದ ಹೆರೆಯೊ, ಕಾಳಿಂದಿಯ ನೊರೆಯೊ ಎನ್ನುವಂತಿತ್ತು, ಈಗ ಕಿರಿದಾದ ತಿಲಕವಿಲ್ಲ, ಧರ್ಮಚಕ್ರವು ಹಣೆತುಂಬಿ ಮೆರೆಯುತ್ತಿತ್ತು, ಅದು ಕರ್ಮಕಾಂಡವನ್ನೇ ತರಿಯುವ ಚಕ್ರವೊ ಎಂಬಂತಿತ್ತು, ಅರಸನಂದು ಕೋಮಲವಾದ ದಟ್ಟಿಯನ್ನೂ ಸುತ್ತಿರಲಿಲ್ಲ, ಅಗಲ ಸೆರಗಿನ ವಲ್ಲಿಯನ್ನೂ ಧರಿಸಿರಲಿಲ್ಲ; ಹೆಗಲಲ್ಲಿ ಬರೇ ಬಹಿರ್ವಾಸವಿತ್ತು, ಆಗ ಎದೆಯಲ್ಲಾಗಲೀ, ಕೊರಳಲ್ಲಾಗಲೀ ಶ್ರೀಗಂಧದ ರೇಖೆಗಳನ್ನು ಚದುರಿಸಿ ತಿದ್ದಿರಲಿಲ್ಲ, ಎದೆ ಕೊರಳು ತೋಳುಗಳಲ್ಲಿ ಶ್ರೀಗಂಧವನ್ನು ಸಾರಿಸಿದ್ದರು. ಹಲ್ಲಿನ ಕೆಂಪಳಿದುದರಿಂದ ಅವು ಮಲ್ಲಿಗೆಯಂತಿದ್ದುವು. ಆ ಸಂಯುಮಿ ಅಂದು ವೀಳ್ಯವನ್ನು ವರ್ಜಿಸಿದ್ದನು. ಭೂಮಂಡಲೇಶ್ವರನೆಂದು ಕುಂಡಲಹಾರ, ಹೀರಾವಳಿ, ಪದಕ, ಮುತ್ತಿನ ಸರ,ಕಡಗ, ಪೆಂಡೆಯ, ಕಟಿಸೂತ್ರಗಳನ್ನು ಧರಿಸಿದ್ದನು. ಉಂಗುರ, ಬಳೆ, ಎತ್ತಿದ ಭುಜಕೀರ್ತಿಗಳು ಶೋಭಿಸಿದುವು.

ಯೋಗ ಶೃಂಗಾರವಾಗಿ ಭರತೇಶನು ಜಿನಾಲಯಕ್ಕೆ ಹೊರಟನು. ದೀರ್ಘ ದೇಹಿಯೂ ಕನಕವರ್ಣನೂ ಆದ ಭರತೇಶನು ನಾನಾ ರತ್ನಜನಿತ ಭೂಷಣಗಳನ್ನು ತೊಟ್ಟು ಕನಕ ಕೀಲಿಸಿದ ಹಾವುಗೆಗಳನ್ನು ಮೆಟ್ಟಿಕೊಂಡು ಓಜೆಯಿಂದಲೂ

ಶಾಂತಿಯಿಂದಲೂ ಬಸದಿಗಾಗಿ ಬರುತ್ತಿದ್ದನು. ಆಗ ಭರತೇಶನನ್ನು ಯಾರೂ ಹೊಗಳಬಾರದು. ಕಂಡವರು ಕೈಮುಗಿಯಬಾರದು. ಅವನೊಡನಾಗ ಶ್ವೇತಛತ್ರವೂ ಇಲ್ಲ. ಅವನಿಂದು ಹೆಮ್ಮೆಯನ್ನು ತೆಗೆದಿಟ್ಟು ಭಯಭಕ್ತಿಗಳನ್ನು ಕೂಡಿಕೊಂಡು ಸುಗತನಾಲಯಕ್ಕೆ ನಡೆದನು. ಹೆಜ್ಜೆ ಹೆಜ್ಜೆಗೂ ಚಕ್ರಿಯ ಹೆಂಗಳೆಯರೂ ಬಂದು ಸೇರಿಕೊಳ್ಳುತ್ತಿದ್ದರು.

'ಇಂದು ನಮ್ಮ ಪತಿಗೆ ಸಂಯಮ. ನಾವೂ ಸಂಯಮದಿಂದ ಹೋಗಬೇಕು.' ಎಂದವರು ಮಿಂದು ಪುರುಷನಂತೆ ಮೋಕ್ಷಶೃಂಗಾರವಾಗಿ ಬಂದರು. ಹಲ್ಲುಗಳು ಬಣ್ಣಗಳ ಬೆಳಕನ್ನು ಕಳೆದುಕಂಡಿದ್ದುವು. ಬಿಳಿ ಬಟ್ಟೆಯನ್ನೇ ಬಿಗಿದುಟ್ಟು ದುಗುಲದ ರವಕೆಯನ್ನೇ ಧರಿಸಿದ್ದರು. ಓಲೆ, ಮೂಗುತಿ, ಬಳೆ ಕಂಕಣ, ಹೊನ್ನ ಇರ್ದಾಳಿ, ನೇವಳ, ಇಷ್ಟನ್ನೇ ಧರಿಸಿಕೊಂಡು ಆ ಪತಿಶೀಲೆಯರು ಬಂದರು. ಅಂದವರು ಅಲರು, ಬೈತಲೆ ಮಣಿ, ಮುತ್ತಿನ ಬಳೆಗಳನ್ನು ಧರಿಸದೆ ಬರಿಮುಡಿಯಿಂದಲೇ ಬಂದಿದ್ದರು. ಹೊರೆ ಹೊರೆ ಫಲವಸ್ತುಗಳು ಬರಬಹುದೆಂದು ಭಾವಿಸಿ ಯಾರೂ ಬರಿಗೈಯಲ್ಲಿ ಬಂದಿರಲಿಲ್ಲ. ಪ್ರತಿಯೊಬ್ಬಳೂ ಕಿರು ಫಲಪುಷ್ಪಗಳನ್ನು ಹಿಡಿದುಕೊಂಡೇ ಬಂದಿದ್ದರು. ಭರತ ರಾಜನೂ ವನಿತೆಯರೂ ಅನ್ಯೋನ್ಯ ನೋಡಿ, ವಿನಯವನ್ನೇ ಆಡಿ ವಿಕಾರವಿಲ್ಲದೆ ಜಿನಾಲಯಕ್ಕೆ ಬಂದರು. ಹಾ ! ಅವರೆಂತಹ ಸತ್ಸುಮಾರ್ಗಿಗಳೊ !

ಅರಸಿಯರಂತೆ ಭರತೇಶನೂ ಹೊಳೆವ ಮಾದಲವನ್ನು ಹಿಡಿದುಕೊಂಡಿದ್ದನು. ಅವನೊಡನಿದ್ದ ಸುದತಿಯರು ಮಲಹರಿ ಲಲಿತ ರಾಗಗಳಲ್ಲಿ ಆಧ್ಯಾತ್ಮ ಗೀತಗಳನ್ನು ಹಾಡುತ್ತಿದ್ದರು. ಅರ್ಚನಾ ದ್ರವ್ಯಗಳನ್ನು ಹಿಡಿದ ಪರಿವಾರ ಸತಿಯರೂ ಅರಸನೊಂದಿಗೇ ಬಂದರು. ಅರಮನೆಯೊತ್ತಿನ ಸಿರಿವನದಲ್ಲಿ ಪುರು ಜಿನಾಲಯವಿತ್ತು. ಭರತೇಶನು ಪರಿವೃತಕೋಟೆಯ ಒತ್ತಿನಲ್ಲೇ ಹಾವುಗೆಗಳನ್ನಿಟ್ಟು ಒಳಹೊಕ್ಕನು. ಮಾನಸ್ತಂಭವನ್ನು ಬಲಕ್ಕಿಕ್ಕಿ ಶುಚಿವೆತ್ತ ಮಾನಿನಿಯರೊಡನೆ ಬಾನು ಮುಟ್ಟುವ ಕೋಟೆಗಳನ್ನು ದಾಟಿ, ಜೈನೇಂದ್ರವಾಸನನ್ನು ನೋಡಿದನು.

ತನ್ನ ಅರಮನೆಯನ್ನು ರತ್ನಮಯವಾಗಿಯೂ ಹೇಮಮಯವಾಗಿಯೂ ನಿರ್ಮಿಸಿದ ಭರತೇಶನು ದೇವನಿವಾಸವನ್ನು ರತ್ನದಿಂದ ಚಿನ್ನದಿಂದ ಮಾಡಿಸಿದನೆಂದು ಬೇರೆ ಹೇಳಬೇಕೆ? ರಾಜಗೃಹವನ್ನು ನಿರ್ಮಿಸಿದ ಸುರಶಿಲ್ಪಿಯೇ ಶ್ರೀಜಿನ ಗೃಹವನ್ನು ರಚಿಸಿದನೆಂದ ಮೇಲೆ ಅದನ್ನು ಬಣ್ಣಿಸಲು ಸಾಧ್ಯವೇ? ಅದು ಕಲ್ಪಭೂಜದಂತೆ, ಮಂದರಾಚಲದಂತೆ, ಸುಮವಸರಣದಂತೆ, ಕುಂದಣದಿಂದ, ನಾನಾ ರತ್ನಗಳಿಂದ ಉಬ್ಬಿದ ಒಂದು ಬೆಟ್ಟವೋ ಎಂದು ಹೇಳಬಹುದು. ಮೂಡು ಪಡು ತೆಂಕು ಬಡಗುಗಳಲ್ಲಿ ಗಗನಾಂಕಿತ ಮಾಡಗಳಿಂದ ಆ ಜಿಲಾಲಯವೆಸೆಯುವುದು. ಶ್ರೀ ಚೈತ್ಯವಾಸವು ಜಿನನ ಪಂಚಕಲ್ಯಾಣ ಸೂಚನೆಯಂತೆ ಒಪ್ಪುತ್ತಿರುವುದು. ಉಪ್ಪರಿಗೆಗಳ ಎಡೆಯಲ್ಲಿ ಒಪ್ಪುವ ದೇವ ಕೂಟಗಳ ಸಾಲಿಂದ, ಕೋಟೆಯ ಪಂಚರತ್ನದ ತೆನೆಯಿಂದ, ಆ ಜಿನವಾಸವು ಕಣ್ಣಾಟಿಕ್ಕೆ ಒಪ್ಪವಾಗಿರುವುದು. ಮುತ್ತು ಮಾಣಿಕಗಳ ಕಲಶಗಳು ಸುತ್ತು ಮುತ್ತು ಪ್ರಕಾಶವನ್ನು ಬಿಂಬಿಸುವುದರಿಂದ

ಸೂರ್ಯ ಚಂದ್ರರ ಕಿರಣಗಳ ಅಗತ್ಯವಲ್ಲಿಲ್ಲ. ಆಕಾಶದ ದೇವತೆಗಳನ್ನು ಕೈಯೆತ್ತಿ ಕರೆವಂತೆ ಹಲವು ಪತಾಕೆಗಳು ಬೀಸುತ್ತಿದ್ದುವು. ಅಲ್ಲಿನ ಮಣಿಗಂಟೆಗಳೆಲ್ಲ ಡಂಢಣರೆನ್ನುತ್ತಿದ್ದುವು. ಅಲ್ಲಿ ನಗುವಂತೆ, ನೋಡುವಂತೆ, ನುಡಿವಂತೆ ಪುತ್ಥಳಿಗಳನ್ನು ಇಟ್ಟಿದ್ದರು. ಧಗಧಗಿಸುವ ಜಿನಮೂರ್ತಿಗಳು ದೃಷ್ಟಿಗೆ ಶಾಂತಿಯನ್ನೇ ಕರೆಯುತಿದ್ದುವು. ಸಮವಸರಣದಲ್ಲಿ ಆದಿನಾಥನು ನಿಂತ ರೀತಿಯಲ್ಲೇ ಈ ಜಿನಾಲಯವೂ ಚತುರ್ಮುಖದಿಂದ ಕಂಗೊಳಿಸುವುದು.

ಸಕಲ ಸಂಪದದ ಬೀಡೆನಿಸುವ ಬಸದಿಗೆ ಭರತೇಶನು ತ್ರಿಕರಣಶುದ್ಧಿಯಿಂದ ಸತಿಯರೊಡಗೂಡಿ ಮೂರು ಸುತ್ತು ಬಂದನು. ಕಾಲುಗಳನ್ನು ತೊಳೆದು ಒಳಹೊಕ್ಕು ಪುರು ಜಿನ ಬಿಂಬವನ್ನು ಕಂಡನು. ದರ್ಶನಾಂಜಲಿಯೆಂದು ಹೇಮ ಪುಷ್ಪವನ್ನು ಸೂಸಿ ಕರಗಳನ್ನು ಜೋಡಿಸಿ ಆದಿ ಜಿನನನ್ನು ಕೀರ್ತಿಸಿದನು.

'ಕೈವಲ್ಯಬೋಧಮಹಾರಾಜ್ಯದ ಒಡೆಯನ, ದೇವಾದಿದೇವನ, ಜಿನನ ಪಾವನ ಬಿಂಬವೆ ಜಯ ಜಯ ! ಶ್ರೀ ಮುಕ್ತಿಯೊಡೆಯನ, ಸಿದ್ಧಾಂತವಾಕ್ಯನ ಕಾಮಿತಸಿದ್ಧಿ ದಾಯಕನ, ಶ್ರೀಮಯ ಪ್ರತಿಮೆಯೆ ಜಯ ಜಯ ! ರಾಜಾರ್ಕ ಕೋಟಿ ಪ್ರಕಾಶನ ತ್ರಿಭುವನ ರಾಜರೊಡೆಯನ, ಚಿನ್ಮಯನ, ರಾಜಿತ ಪ್ರತಿರೂಪ ಜಯ ಜಯ!'

— ಎಂದು ಕೀರ್ತಿಸಿ ಕೈಲಾಸಗಿರಿಗೆ ಚಿತ್ತವನ್ನು ನೀಡಿ, ಮೈಯನ್ನು ಮಂದಿರದಲ್ಲಿ ನೀಡಿ ಮೂರು ಸಾರಿ ಎರಗಿದನು. ಭರತೇಶನ ಈ ಭಕ್ತಿ ಆದಿಜಿನನಿಗೆ ಸಂದಿತು. ಆ ಮೇಲೆ ದರ್ಭಾಸನದಲ್ಲಿ ಕುಳಿತು, ಸಂದರ್ಭಕ್ಕೆ ಸರಿಯಾದ ಸಕಲ ಕ್ರಿಯೆಗಳಿಂದ ಜೈನ ದೇವತೆಗೆ ಅರ್ಘ್ಯವನ್ನು ಕೊಟ್ಟನು. ಆ ಬಳಿಕ ಸ್ತೋತ್ರ ಮಾಡಿ, ಜಪಮಾಡಿ, ಕಣ್ಣುಗಳನ್ನು ಮುಚ್ಚಿ ಒಳಗೆ ಚಿತ್ರಿಸಿದಂತೆ ಆದಿಜಿನನನ್ನು ಕಂಡನು.

ವೀಣೆಯು ಮಿಡಿದಂತೆ ರಾಣಿಯರೆಲ್ಲರೂ ಸ್ತುತಿಸಿದರು. ವೀಣೆಗೆ ಪ್ರತಿ ವೀಣೆಯಂತೆ ಮಾಣಿಕ ಬಸದಿಯು ಆಗ ಮಾತನಾಡಿದಂತೆ ಆಯಿತು. ಆ ವಿಶಾಲವಾದ ಬಸದಿಯಲ್ಲಿ ಅವರೆಲ್ಲರೂ ಸರಿಸರಿಕೆಯಲ್ಲಿ ಕುಳಿತು ಸ್ವರದೋರಿ ಸ್ತುತಿಸಿದರು. ತುಂಬಿಯ ನೆರವಿ ಗಲಭೆ ಮಾಡಿದಂತೆ. ಪ್ರಾಕೃತದಲ್ಲಿ, ಸಂಸ್ಕೃತದಲ್ಲಿ, ಕನ್ನಡದಲ್ಲಿ, ಆದಿಜಿನನ ಆಕಾರ ವಸ್ತುಗುಣಗಳ ಸ್ತುತಿಯನ್ನು ಮಾಡಿದರು —ಮಾಕಂದದ ಅರಗಿಳಿಯಂತೆ ! ಪೈಶಾಚಿಕ, ಮಾಗಧಿ, ಶೂರಸೇನ ಭಾಷೆಗಳಲ್ಲಿ ಅರುಹಂತನನ್ನು ಸ್ತುತಿಸಿದರು—ವೈಶಾಖ ಮಾಸದ ಕೋಗಿಲೆ ಗಳಂತೆ !

'ದೇವದೇವೋತ್ತಮ, ದೇದೀಪ್ಯಮಾನದೇಹಾವಲಂಬನ, ದೇವರತ್ನಾ, ಮಾವಾಜಿ ಜಯಜಯ ! ಸ್ವಾಮಿ, ಸಾವು ಹುಟ್ಟಿಗೆ ಸಿಕ್ಕಿ ಸಂಕಟಪಡುವ ನಮ್ಮ ನೋವನ್ನೆಲ್ಲ ಒತ್ತಿ ನಮ್ಮನ್ನು ಕಾಪಾಡಿರಿ. ಸ್ವಾಮಿ, ನಿನ್ನ ಮಗನಂತೆ ನಮಗೆ ಶುದ್ಧಾತ್ಮ ಯೋಗದ ಉನ್ನತಿಯು ಬಾರದು. ನಿನ್ನನ್ನೇ ನಂಬಿರುವೆವು. ಭೇದವಿಲ್ಲದ ಭಕ್ತಿಯ ಅಭ್ಯಾಸವೆಂದರೆ ನಮಗೊಂದು ಬೇಸರ. ನಮ್ಮ ಧ್ಯಾನದಲ್ಲಿ ಆ ಸಿರಿಯು ತೋರುವುದಿಲ್ಲ. ಆದ್ದರಿಂದ ನೀನೇ ಕರುಣಿಸು ಸ್ವಾಮಿ. ಈ ಸ್ತ್ರೀ ದೇಹವೇ ಕಷ್ಟವು. ನಾವೇನು ಮುಕ್ತಿಯಿಲ್ಲದವರೇ? ಶಿಷ್ಟಾತ್ಮ ಯೋಗವನ್ನು ತೋರಿಸಿದರೆ ಈ ಹೆಣ್ಣು ಜನ್ಮವನ್ನು ನಷ್ಟಮಾಡಿಕೊಳ್ಳುವೆವು.'

—ಎಂದು ಆದಿದೇವನ ಸೊಸೆಯರಾಗಿ, ತ್ರಿಭುವನದೇವನ ಮಗನ ರಾಣಿಯರಾಗಿ ಸಮ್ಯಕ್ತ್ವಶೀಲ ಸಂಪನ್ನೆಯರಾದ ಆ ಸದ್ದೃಷ್ಟಿಯ ಸತಿಯರು ಪ್ರಾರ್ಥಿಸಿದರು.

ಅಷ್ಟರಲ್ಲಿ ಭರತೇಶನು ಕಣ್ಣುಗಳನ್ನು ತೆರೆದು ಎದ್ದನು. ಸತಿಯರೂ ಅವನೊಡನೆ ನಡೆದರು. ಮುನಿವಾಸವನ್ನು ಸೇರಿ, ಮುನಿಗಳಿಗೆಲ್ಲ ವಂದಿಸಿದರು. ದಿನವ್ರತ, ದಿಗ್ವ್ರತ, ಮಿತಪರಿಗ್ರಹ ಮತ್ತು ಅನಶನ ವ್ರತಗಳನ್ನು ಮುನಿಗಳ ಸಮಕ್ಷಮದಲ್ಲಿ ಕೈಕೊಂಡರು. ಭರತೇಶನಂದು ಬ್ರಹ್ಮಚರ್ಯವ ಕೈಗೊಂಡು ತನ್ನ ಸತಿಯರೊಂದಿಗೆ ಕಂಕಣ ಧರಿಸಿಕೊಂಡನು. ಆ ಮೇಲೆ ಪೂಜೆಯನ್ನು ಚಿತ್ತೈಸಿ ನೋಡಬೇಕೆಂದು ಮುನಿಗಳನ್ನು ಬೇಡಿಕೊಂಡು ತಾನು ಅಭಿಷೇಕ ಮಾಡತೊಡಗಿದನು.

ನಾಲ್ಕು ಮುಖವಾದ ದೇಹಾರದ ಪೂಜೆಗಾಗಿ ತಾನು ನಾಲ್ಕು ಮೈಗಳನ್ನು ಕೈಕೊಂಡು ನಲ್ಮೆಯಿಂದ ನಾಲ್ಕು ದಿಕ್ಕುಗಳಲ್ಲೂ ನಿಂತುಕೊಂಡನು. ಮೊದಲು ಹಿರಿಮೆವೆತ್ತ ಅಪರಂಜಿ ಕಳಸಗಳನ್ನು ಅಷ್ಟವಿಧಾರ್ಚನೆಯಿಂದ ಸತ್ಕರಿಸಿದನು. ಆ ಮೇಲೆ ಅವುಗಳನ್ನು ಕೈಗಳಲ್ಲಿ ಬಾಚಿ ಹಿಡಿದುಕೊಂಡನು. ಅರಸನ ಆ ಭಾವವು ಮಾವಿನ ತಳಿರಿಗೆ ಹಣ್ಣು ಸಾರಿಸಿದಂತೆ ತೋರುತ್ತಿತ್ತು, ಹೊರಗೆ ಶಂಖಭೇರಿ ಕಹಳೆಗಳ ನಿರ್ಘೋಷವು ಹೆಚ್ಚುತ್ತಿರಲು ಭರತೇಶ್ವರನು ತನ್ನ ದೀರ್ಘಬಾಹುಗಳಿಂದ ದೇಹಾರಕ್ಕೆ ಅಭಿಷೇಕ ಮಾಡಿದನು. ಯೋಗಿಗಳು ಅಜ್ಜಿಗಳು ಅರಸಿಯರು, ನಾಲ್ಕು ಬಾಗಿಲಲ್ಲಿ ನಿಂತುಕೊಂಡು ಕೈಮುಗಿದು ಸಾಗರವು ಮೊಳಗುವಂತೆ ಜಯಜಯವೆನ್ನುತ್ತಿರುವಾಗ ಆ ರಾಜಯೋಗಿಯು ಉತ್ಸವವನ್ನು ತೊಡಗಿದನು.

ಐನೂರು ಮಾರುದ್ದದ ಆ ಜಿನಬಿಂಬವು ಸುಖಾಸನದಲ್ಲಿ ಅಡಕವಾಗಿರುವುದು. ದೀರ್ಘವಾಗಿ ಆ ಬಿಂಬವೇನೂ ಬೇತಾಳರೂಪದಂತಿರಲಿಲ್ಲ. ಹಿರಿದಾದ ಉದ್ದಕ್ಕೆ ಒಪ್ಪುವ ತೋರವೂ, ಕರಗಳ ಚರಣಗಳ ಶೋಭೆಗೆ ಹೊಂದಿಯೂ ಆ ಪಾವನ ಬಿಂಬವು ಪುರುಷ ಪ್ರಮಾಣದಂತಿದೆ. ದೀರ್ಘ ದೇಹಿಯಾದ ಭರತನು, ಆ ದೀರ್ಘ ದೇಹಾರಕ್ಕೆ ಆದರದಿಂದ ಮಜ್ಜನ ಮಾಡತೊಡಗಿದನು. ಅದರ ಘನತೆಯನ್ನು ಆದಿ ಜಿನೇಂದ್ರನೇ ಬಲ್ಲನು. ಭರತ ಚಕ್ರವರ್ತಿಯು, ಮುಗಿಲುಗಳ ಕನಕಾದ್ರಿಗೆ ಸ್ವಚ್ಛಾಂಬುಗಳನ್ನು ಸುರಿಯುವಂತೆ ಜಿನೇಂದ್ರನೇ ಇಚ್ಛೆಪಟ್ಟ ಕುಂಭಗಳಿಂದ ಸ್ವಚ್ಛವಾದ ಜಲಾಭಿಷೇಕ ಮಾಡಿದನು. ಆಕಾಶಗಂಗೆಯ ನೀರನ್ನು ಪಚ್ಚೆಯ ಕೊಡದಿಂದ ಮೊಗೆದು ಎರೆವಂತೆ ಆಕಾಶದವರೆಗೆ ಬೆಳೆದಿರುವ ತೆಂಗುಗಳಿಂದ ಸೀಯಾಳಗಳನ್ನು ತೆಗೆತೆಗೆದು ಅಭಿಷೇಕ ಮಾಡಿದನು. ತೆಂಗಿನಕಾಯ ತೊರೆಗಳಿಂದ ಮಾಡಿದಭಿಷೇಕವು ಕ್ಷೀರಸಾಗರದಲ್ಲಿ ತೇಲುವ ನೊರೆಯಲ್ಲಿ ತೆರೆಯಾಗಿ ಅಂಗೈಗೆ ಬರುವಂತೆ ತೋರಿತು. ತಾಳೆಯ ಹೂವಿನ ಎಸಳೋ ಎಂಬಂತೆ ತೋರುವ ಸುಲಿದ ಬಾಳೆಹಣ್ಣುಗಳನ್ನು ಪ್ರತಿಮೆಯ ಭುಜಮುಟ್ಟ ಮೆದೆಗಟ್ಟಿ ಪ್ರಕಾಶಿಸು ವಂತೆ ಚಕ್ರಿಯು ಅಭಿಷೇಕ ಮಾಡಿದನು. ಆ ಮೇಲೆ ಸಕ್ಕರೆ ಅಭಿಷೇಕ ಮಾಡಿದನು. ಕಾಮನು ನಾಚಿ, ತನ್ನ ಸಿಹಿಬಿಲ್ಲನ್ನು ಬೀಸಾಡಿ ಸರಿದಂತೆ ರಸದಾಳಿ ಕಬ್ಬಿನ ರಸದಲ್ಲಿ ಆ ಮೂರ್ತಿಯನ್ನು ಮೀಯಿಸಿದಂತೆ ತೋರಿತು. ಅರಸನು ಕಾಕಂಬಿ ರಸವನ್ನು ಸುರಿದಾಗ ಅಪರಂಜಿಯ ಪ್ರತಿಮೆಯು ಪಚ್ಚೆಯ ಪ್ರತಿಮೆಯಂತಾಯಿತು. ಅನಂತರ ಚಕ್ರಿಯು

ಅಪರಂಜಿಯ ರಸವನ್ನೇ ಸುರಿವಂತೆ ಹಸನಾದ ತುಪ್ಪದಿಂದ ಅಭಿಷೇಕ ಮಾಡಿದನು. ತಿಳಿಯಾದ ತುಪ್ಪವನ್ನು ಸುರಿಯುತ್ತಿದ್ದಾಗ, ಚಿನ್ನದ ರಸದ ಒಂದು ಹೊಳೆ ಇಳಿವಂತೆ ಶೋಭಿಸಿತು. ಬಳಿಕ ಅರಸನು ಹಾಲು, ಮೊಸರು, ಮುಂತಾದ ದ್ರವ್ಯಗಳಿಂದ ಅಭಿಷೇಕ ಮಾಡಿದನು. ಭರತೇಶನು ಎರೆಯುತ್ತಿದ್ದ ಹಾಲು ಜಿನಬಿಂಬದ ತಲೆಯಿಂದ ಎಡೆಬಿಡದೆ ಇಳಿಯುತ್ತಿರುವುದನ್ನು ನೋಡಿದರೆ ವ್ಯೋಮದಲ್ಲಿ ಅಮೃತ ಸಮುದ್ರವುಂಟೇ ಎಂಬ ಸಂದೇಹಕ್ಕೆಡೆಯಾಯಿತು. ಹಾಗೆ ಕರೆಯುತ್ತಿದ್ದ ಕಡೆಯಿಲ್ಲದ ಅಮೃತದ ಮಳೆಗೆ ಬಸದಿಯು ವಜ್ರಪಂಚಾಂಗವಿದ್ದುದರಿಂದ ಗಟ್ಟಿಯಾಗಿ ನಿಂತಿತ್ತು, ಇಲ್ಲದಿದ್ದರೆ ನೆರೆಗೆ ಕೊಚ್ಚಿ ಹೋಗುತ್ತಿತ್ತು. ಅಂತಹ ಕ್ಷೀರಧಾರೆ!

ರಾಯನ ಊಳಿಗದ ಹೆಣ್ಣುಗಳು ಕಣ್ಣವೆ ಹಳಚುವಷ್ಟರೊಳಗೆ ಹಣ್ಣು, ಹಾಲು, ಮೊಸರು ತುಪ್ಪಗಳ ತೆಗೆದು ಒಪ್ಪಮಾಡುವರು. ರಾಯನ ಪೂಜೆಗೆ ಬೇಕಾದುದನ್ನು ಅಳವಡಿಸಿ ನೀಡುವರು. ಕೂಡಲೆ ನಿಲ್ಲುವ ಆಲಯಗಳನ್ನು ರೂಢಿಸಿ ತೆಗೆಯುವರು. ಆ ಹುಡುಗೆಯರ ಗಾಡಿಯನ್ನು ಏನೆಂದು ಹೇಳಲಿ ! ಪೂಜಾವಸ್ತುಗಳ ನೀಡುವಲ್ಲಿ, ನೀರಾಜನೋತ್ಸವ ಮಾಡುವಲ್ಲಿ, ನಿವಾಳಿಯನ್ನು ಇಡುವಲ್ಲಿ, ಆ ಜಾಣನರಸಿಯರು ಚಳಚಳನೆ ಮಾಡುತ್ತಿದ್ದರು. ಅಭಿಷೇಕದ ಕುಂಭಗಳನ್ನು ತರುವಾಗ ತರುಣಿಯರಿಗೆ ಉಬ್ಬಸವಾಗುವುದನ್ನು ಕಂಡ ಅರಸನು, ತಾನೆ ಹಲವು ರೂಪಾಗಿ ಅವರಿಗೆ ನೆರವಾದನು.

ಆ ಮೇಲೆ ಅರಸನು ತನ್ನ ಅರಸಿಯರಿಗೆ 'ಸಾಕು, ನಿಂದಿರಿ, ಸ್ವಾಮಿಯ ಸ್ತುತಿ ಮಾಡಿರಿ' ಎಂದು ಒಳನುಡಿನುಡಿದು ತಾನೇ ಅಭಿಷೇಕ ಮಾಡಿದನು. ಬೆಳ್ಳಿ, ಮಾಣಿಕ, ಕುಂದಣಗಳ ಕುಂಭಗಳನ್ನೆತ್ತಿ ಅಭಿಷೇಕ ಮಾಡುವಾಗ, ಭರತೇಶನು ಬಣ್ಣ ಬಣ್ಣದ ಚೆಂಡುಗಳನ್ನೆತ್ತಿ ಆಡುತ್ತಿರುವನೋ ಎಂಬಂತಿತ್ತು ಆ ನೋಟ ! ಮೂರು ಕೋಟಿ ಗೋವುಗಳನ್ನು ಊಟಕ್ಕಾಗಿಯೇ ಕರೆಯಿಸುತ್ತಿದ್ದ ಅರಸನಿಗೆ ಕೋಟಿ ಕುಂಭಗಳ ಹಾಲುಮೊಸರಿನ ಅಭಿಷೇಕ ಮಾಡುವುದು ಅಸಾಧ್ಯವೇ? ಅರ್ತಿಯಲ್ಲಿ, ಓಜೆಯಲ್ಲಿ, ಆಚಾರದಲ್ಲಿ ಮಂತ್ರಾರ್ಥದಲ್ಲಿ ತೀರ್ಥಾಂಬು ಮೊದಲಾಗಿ ದಧಿ ಕಡೆಯಾಗಿ ಚಕ್ರಿಯು ಅಭಿಷೇಕ ಮಾಡಿದನು. ಲಾಜಾಂಗ ಚೂರ್ಣವನ್ನೂ ಕುಂಕುಮಾಂಗ ಚೂರ್ಣವನ್ನು ಸೂಸಿದನು. ಇದರಿಂದ ಶ್ರೀಜಿನ ಬಿಂಬವು ಅಮೃತಸತಿಯಿಟ್ಟ ನಿರೋಜ ಧೂಳಿನಲ್ಲಿ ಅದ್ದಿದಂತೆ ಕಂಗೊಳಿಸಿತು. ಆ ಮೇಲೆ ಪಂಚವಿಧ ಪೀಯೂಷಧಾರೆ ಮಾಡಿ, ಘಮ ಘಮಿಸುವ ಸರ್ವೌಷಧಿರಸವನ್ನು ಎರೆದು, ಕೋಟಿಕುಂಭಗಳ ಗಂಧದ ರಸವನ್ನು ಸುರಿದು, ಸಾವಿರ ಕೋಟಿ ಕೊಪ್ಪರಿಗೆಗಳ ಪನ್ನೀರನ್ನೆರೆದು, ಕೊನೆಯಲ್ಲಿ ಪೂರ್ಣ ಕುಂಭವನ್ನೆತ್ತಿ ಲೋಕದ ಸಂತಾಪ ನಿರ್ನಾಮವಾಗುವಂತೆ ವರ್ಣಶುದ್ಧದಲ್ಲಿ ಶಾಂತಿ ಮಂತ್ರವನ್ನೋದುತ್ತ ಅಭಿಷೇಕ ಮಾಡಿದನು. ಬಳಿಕ ಪುಷ್ಪಗಳ ಸುರಿದು ನವರತ್ನ ವೃಷ್ಟಿಯನ್ನು ಮಾಡಲು ಜನರೆಲ್ಲ ಜಯಜಯವೆಂದರು. ಅನಂತರ ಭರತೇಶನು ಶ್ರೀಜಿನಬಿಂಬಕ್ಕೆ ಅಷ್ಟವಿಧಾರ್ಚನೆಯನ್ನು ಮಾಡಿ, ನೂರೆಂಟು ತಾವರೆಗಳ ಮಂತ್ರಪುಷ್ಪಗಳನ್ನೊಪ್ಪಿಸಿ, ಕೈಮುಗಿದನು. ಆಗ ವಾದ್ಯತತಿ ಸುಮ್ಮನಾಯಿತು.

ಅಮೇಲೆ ಅತಿವೃದ್ಧನಾದ ಪೂಜೇಂದ್ರನು ಜಿನಪತಿಯ ಶಾಸನದೇವತೆಗಳನ್ನು

ಮಂತ್ರವಿಧಿಯಿಂದ ಪೂಜಿಸಿದನು. ಅದನ್ನು ಅರಸನು ಅರಸಿಯರೊಂದಿಗೆ ನಿಂದು ನೋಡಿದನು. ಹಲವು ರೂಪಳಿವದು ಒಂದೇ ರೂಪದಲ್ಲಿಳಿದು ನಿಂದ ದೊರೆಯು ತನ್ನ ಅರಸಿಯರುವೆರಸಿ ಮುನಿಗಳ ಶ್ರೀಪಾದಪೂಜೆ ಮಾಡಿದನು.

ರಾಯನು, 'ನಮೋಸ್ತು' ಎಂದು ಎದ್ದನು. ಆಚಾರ್ಯರು 'ಧರ್ಮವೃದ್ಧಿರಸ್ತು' ಎನಲು, ದೊರೆಯು 'ಪರಮಾತ್ಮ ಸಿದ್ಧಿರಸ್ತು' ಎಂದು ಹರಕೆ ಹೊತ್ತುಕೊಂಡು, ನೆರೆದಿದ್ದ ಜನರನ್ನು ನೋಡಿದನು.

ಅರಮನೆಯ ಒತ್ತಿನ ಬಸದಿಯದು. ಅನ್ಯರು ಬರುವಂತಿಲ್ಲ ಅದು ಏಕಾಂತ ಪೂಜೆ. ಪರಿಸೆ ಬಹಳವಿಲ್ಲ ಕಿರಿದಾಗಿ ಕೂಡಿತ್ತು, ಲೆಕ್ಕಕ್ಕೆ ಹನ್ನೆರಡು ಲಕ್ಷ ಮಾತ್ರ. ನಾಲ್ಕು ಲಕ್ಷ ಹೆಂಡತಿಯರೂ, ಅವರ ಒಬ್ಬರಿಗೆ ಐವರಂತಿರುವ, ಸೇವಕಿಯರೂ ಕೂಡಿದರೆ ಲೆಕ್ಕಕ್ಕೆ ಇಪ್ಪತ್ತು ಲಕ್ಷಕ್ಕೆ ಹತ್ತಿರವಾಯಿತು. ಆಮೇಲೆ ಊಳಿಗ ಆಲಾಪದ ಸತಿಯರು, ಗುರುಗಳು, ಅಜ್ಜಿಗಳು, ವ್ರತಿಕರು– ಎಂದು ಮುಂತಾದವರೂ ಲಕ್ಷಕ್ಕೆ ಸ್ವಲ್ಪ ಕಡಿಮೆಯಾಗಿದ್ದರು.

ಎಪ್ಪತ್ತೆರಡು ಬಸದಿಗಳಲ್ಲಿ ನೂರು ಮೂರು ಉಪ್ಪರದ ಅರ್ಹಂತನ ಬಿಂಬಗಳನ್ನು ಪೂಜಿಸುವವನಿಗೆ ಇದೇನು ಘನವೆ? ಆದಿ ಜಿನೇಶನು ಸಿದ್ಧಲೋಕಕ್ಕೆ ಪ್ರಯಾಣ ಮಾಡುವಾಗ ಹದಿನಾಲ್ಕು ದಿವಸಗಳೂ ಭೇದವಿಲ್ಲದೆ ಭರತೇಶನು ಮಾಡಿದ ಪೂಜೆಯನ್ನು ನೋಡಬೇಕು. ಸುರಲೋಕ ನರಲೋಕ ಫಣಿಲೋಕದವರೆಲ್ಲ ಶಿರದೂಗುವಂತೆ ಭರತೇಶನು ರಜತಾದ್ರಿಯಲ್ಲಿ ಮಾಡಿದ ಪೂಜೆಯನ್ನು ನೋಡಬೇಕು. ಅದನ್ನು ನೋಡಲು ಎರಡು ಕಣ್ಣುಗಳು ಸಾಲವು. ಚಕ್ರಿಯು, ಪರ್ವದಿನದಲ್ಲಿ ಈ ಸಂಕಲ್ಪಾಭಿಷೇಕವನ್ನು ಮಾಡಿ, ಸರ್ವರಿಗೂ ಪ್ರೀತಿಯಿಂದ ಗಂಗಾಂಬುವನ್ನು ಕೊಡಿಸಿದನು.

ಆಗ ನಡುಹಗಲಿನ ಸನ್ನೆಯಾಯಿತು. ವಾದಕರು ಎಡಬಲಗಳಿಗೆ ಸರಿದು ಸಾಗಿದರು. ವ್ರತಿಕರು ಭರತೇಶನ ಅಡಿಗಳಿಗೆರಗಿ ಸರಿದರು. ಇಂದು ಧರಣೀಶನು ತನ್ನ ನಾರಿಯರೊಂದಿಗೆ ಇಲ್ಲಿ ಜಾಗರವಿರುವನೆಂದು ಯೋಗಿಗಳು ಪುರಮಧ್ಯದ ಜಿನವಾಸಕ್ಕೆ ಹೊರಟರು. ಹಾಗೆ ಹೊರಡುವಾಗ 'ಸುಖಿವಿರು ಭವ್ಯ' ಎಂದು ಅರಸನನ್ನು ಹರಸಿದರು. ಅಜ್ಜಿಕೆಯರು, ಸತಿಯರು ಹೊರತಾಗಿ ಎಲ್ಲರನ್ನೂ ಅರಸನು ಬೀಳ್ಕೊಟ್ಟನು. ಆಗ ಲೋಕಾಂತ ಹೋಯಿತು. ಅರಸಗೆ ಏಕಾಂತವಾಯಿತು. ಅವನು ಸತಿಯರೊಂದಿಗೆ ಧರ್ಮವಾಕ್ಯಗಳನ್ನಾಡುತ್ತಿದ್ದನು.

## ೧೭

# ತತ್ತ್ವೋಪದೇಶ

ಅಭಿಷೇಕವಾಯಿತು.

ಚಕ್ರಿಯು ಚತುರ್ಮುಖವಾಸದ ಅಭವನಿಗೆ ಕೈಗಳನ್ನು ಮುಗಿದು ತನ್ನ ಅಭಿಮತ ಸಿದ್ಧಿಯ ಅಧ್ಯಯನ ಮಂಟಪಕ್ಕೆ ನಡೆದನು. ಆ ಅಧ್ಯಯನ ಮಂಟಪವು ಮಧ್ಯದ ಪೌಳಿಯಲ್ಲಿ ನೃಪನಿಗೆ ತಕ್ಕಂತೆ ಮೆರೆದಿರುವುದು. ಭರತೇಶನು ಅಲ್ಲಿಗೆ ಅಧ್ಯಾತ್ಮ ಸೂರ್ಯನಂತೆ ಹೋದನು. ಸಿಂಹಮಧ್ಯೆಯರು ಕೂಡ ಅವನನ್ನೇ ಅನುಸರಿಸಿ ನಡೆದರು.

ಆ ಅಧ್ಯಯನ ಮಂಟಪದಲ್ಲಿ ಝಲ್ಲಿನಂತೆ ಶೋಭಿಸುವ ದರ್ಬೆಯ ಹೂವನ್ನು ಮೊಳದುದ್ದಕ್ಕೆ ಹರಡಿ, ಅದರ ಮೇಲೆ ಬಿಳಿಯ ಪುಲ್ಲಿಪಟ್ಟೆಯನ್ನು ಹಾಸಿದ್ದರು. ಇಂತಹ ಸಂಯಮಾಸನಗಳು, ಮಂಟಪದಲ್ಲಿ ತುಂಬಿದ್ದುವು. ನಟ್ಟನಡುವೆ ಹೊನ್ನ ಕಾಲುಮಣೆಯ ಮೇಲೆ ದಟ್ಟವಾಗಿ ದರ್ಬೆಯ ಹೂಗಳನ್ನು ಹಾಕಿ, ಅದರ ಮೇಲೆ ಪಟ್ಟೆಯನ್ನು ಹಾಸಿ, ದರ್ಬೆಯ ಕುಸುಮಗಳಿಂದಲೇ ಒರಗುವ ಮೂಡೆಯನ್ನು ಅಳವಿಸಲಾಗಿತ್ತು. ರಾಜಯೋಗಿ ನಡೆದುತಂದವನೇ ಆ ಕಾಲುಮಣೆಯ ಮೇಲೆ ಶಾಂತನಾಗಿ ಕುಳಿತನು. ಇದು ಯೋಗಿ ಸಾಧಿಸಿದ ವಿದ್ಯಾವಳಿಯೆನ್ನುವಂತೆ ಹೆಣ್ಣುಗಳು ಮಂಟಪದಲ್ಲಿ ತುಂಬಿ ಕುಳಿತರು.

ಆಗ ಅಲ್ಲಿ ಸೂಸುವ ಪರಿಮಳವಿಲ್ಲ; ತಳಪನ್ನೀರೂ ಇಲ್ಲ; ಬೀಸುವ ಚಾಮರವಿಲ್ಲ, ಬೀಸಣಿಗೆಯ ಗಾಳಿಯೂ ಇಲ್ಲ. ಬಾಯಿಗಿಂಬಾದ ವೀಳಯವೂ ಇಲ್ಲ. ಆದರೂ ಆ ಉಪವಾಸಿಗಳೆಲ್ಲ ಒಪ್ಪಾಗಿ ಕುಳಿತಿದ್ದರು. ಆ ಹೊತ್ತಿನಲ್ಲಿ ಕಾಮತಂತ್ರದ ನುಡಿಯಾಗಲೀ ಭೋಗದೊಂದು ಹೆಸರಿನ ನೆನಪಾಗಲೀ ಇರಲಿಲ್ಲ. ಆ ಮೋಕ್ಷಗಾಮಿಗಳು ಕ್ಷೇಮ ಭಾವನೆಯಲ್ಲೇ ಮನದಣಿದು ಪ್ರೀತಿಯಿಂದಿರುತ್ತಿದ್ದರು. ಅವರು ನುಡಿದರೆ, ಅದು ಧರ್ಮದ ಮಾತು. ನೋಡಿದರೆ ಸೊಕ್ಕು ಅಡಗಿದ ಶಾಂತಿಯ ನೋಟ. ಮಧ್ಯೆ ಎಲ್ಲಾದರೂ ನಕ್ಕರೆ ಅದು ಧರ್ಮ ಸೋಂಕಿನ ನಗೆಯಾಗಿತ್ತು.

ಜಿನ ! ಜಿನ ! ಅವರ ಎಂದೆಂದಿನ ಭೋಗವೆತ್ತ? ಇಂದಿನ ಮುನಿಗಳಂತೆ ಮಾಡಿದ ಉಪವಾಸವೆತ್ತ ? ಸುಖಾನುಭವಿಸಬೇಕಾದ ಗಂಡ–ಹೆಂಡಿರು ಮನವು ಮಿಸುಕದಂತೆ ನಡೆಯುವುವೆಂದರೆ ಸಾಮಾನ್ಯವೇ? ಸ್ತ್ರೀ ಪುರುಷರು ಅಗಲಿದ್ದು ಬ್ರಹ್ಮಚರ್ಯೆಯ ಸಾಧಿಸಬಹುದು. ಆದರೆ ಒಂದೆಡೆ ಸೇರಿದ್ದು ಮನಸ್ಸನ್ನು ತಡೆದು ಹಿಡಿವುದೆಂದರೆ ಖಡ್ಗದ ಧಾರೆಯ ಮೇಲೆ ನಡೆದಂತಲ್ಲವೇ? ಹಿಡಿವ ವ್ರತದಲ್ಲಿ ಡಂಭಕತನವಿರಬಾರದು. ವ್ರತವನ್ನು

ಹಿಡಿದರೆ ಸರ್ಪವನ್ನು ಹಿಡಿದಂತೆ ದೃಢವಾಗಿ ಹಿಡಿಯಬೇಕು. ವ್ರತ ಹಿಡಿದ ಮೇಲೆ ಆಳಿಮನಸ್ಸು ಮಾಡಿದರೆ ಆ ವ್ರತವೇ ಕಡಿಯುವುದು ಸರ್ಪದಂತೆ. ವ್ರತ ತೊಟ್ಟಾಗ, ಅದರಲ್ಲಿ ಭೇದ ಹುಟ್ಟಿದಂತೆ, ಏಕವಾದಂತೆ ತೊಡಬೇಕು. ಮನಸ್ಸನ್ನು ಮಿಡುಕಿಸದಂತೆ ತಡೆದು ಹಿಡಿದು, ಅಭಿಲಾಷೆಯಡಗಿರುವ ಭಾವಶುದ್ಧರು ಒಮ್ಮೆ ನೋಡಿದರೇನು? ನುಡಿದರೇನು? ನಕ್ಕರೇನು? ಜೊತೆಗೊಮ್ಮೆ ಮುಟ್ಟಿದರೇನು? ನೀರು ಸೋಂಕಿದರೆ ಬಾಳೆಯೆಲೆಗಳು ಒದ್ದೆಯಾದಂತೆ ತಾವರೆಯೆಲೆಗಳು ಒದ್ದೆಯಾದಾವೆ? ಧೀರರ ಚಿತ್ತವೂ ಹೀಗೆಯೇ. ಆ ರಾಜ ಸ್ತ್ರೀ ಪುರುಷರೆಲ್ಲ ವ್ರತಶೂರರು. ಚಿತ್ತನಿರ್ಜಿತರು. ಜಿನನೇ ಮೆಚ್ಚುವಂತೆ ಆ ಧರ್ಮವೀರರು ಘೋರ ವ್ರತವನ್ನು ಕೈಗೊಂಡು ಮನಸಡಿಲಿಸದೆ ಇದ್ದರು. ಅವರು ನಿರ್ಮಲ ಜಲದಲ್ಲಿರುವ ತಾವರೆಯು ಬಿಸಿಲಿನ ಬೇಗೆಗೆ ಕೊರಗದಿರುವಂತೆ ಧರ್ಮಕಥಾಸಾರದಲ್ಲೂ ಉಪವಾಸದಲ್ಲೂ ಕೊರಗದೆ ಒಪ್ಪಿದ್ದರು. ದರ್ಭಾಸನದಲ್ಲಿ ಕುಳಿತ ಭರತೇಶನು ತನ್ನೊಡನಿರುವವರು ತನ್ನ ಹೆಂಡತಿಯರೆಂದು ಎಣಿಸದೆ, ತಪಸಿವೆಣ್ಣುಗಳ ತಂಡವೆಂದು ಭಾವಿಸಿ ನೋಡುವನು. ಆ ಪುಂಡರೀಕಾಕ್ಷಿಯರು ಕೂಡ ಅರಸನನ್ನು ಗಂಡನೆಂದೆಣಿಸದೆ, ಮಂಡಲಾಚಾರ್ಯ ತಪೋಧನನು ಎಂದೇ ಎದೆಗೊಂಡು ನೋಡುವರು; ನುಡಿವರು.

ಜ್ಞಾನ ಭಾಸ್ಕರನಂತಿರುವ ಭರತೇಶನೇ ಧರ್ಮಕಥನಕ್ಕಾರಂಭಿಸಿದನು.

'ವ್ರತಸತಿಯರೇ, ನಮ್ಮ ಸಂಸರ್ಗದಿಂದ ನಿಮಗಿಂದು ಉಪವಾಸದ ಗ್ಲಾನಿಯಾಯಿತು.'

'ನಿನ್ನುಪದೇಶ ಕೇಳುವಾಗ ಉಪವಾಸದ ಗ್ಲಾನಿಯಿಲ್ಲ ನಮಗೆ; ಸ್ವರ್ಗಿಗಳು. ಉಣ್ಣದೆ ಸುಖಪಡುವಂತಾಯಿತು. ಉದರ ಪೋಷಣೆಗಾಗಿ ಬಹುಜನ್ಮಗಳಾದುವು. ಈಗ ಸದಮಲ ಚರಿತನಾದ ನಿನ್ನ ಸಂಸರ್ಗದಿಂದ ಆತ್ಮ ಪೋಷಣೆಯ ಸಂದರ್ಭವು ದೊರಕೊಂಡುದು. ಇಷ್ಟು ದಿನ ಒಳಗನ್ನು ತಿಳಿಯದೆ, ಹೊರಗನ್ನೆ ಮೆಚ್ಚಿ ಅಖಿಲಯೋನಿಗಳಲ್ಲಿ ತೊಳಲಿದೆವು. ರಾಜಯೋಗಿಯಾದ ನಿನ್ನ ಸಂಸರ್ಗದಿಂದ ನಮಗೀಗ ಆ ಸನ್ಮಾರ್ಗವು ಫಲಿಸಿತು. ನಮಗಾದರೋ ಮಕ್ಕಳನ್ನು ಪಡೆಯಬೇಕು, ಉಡಬೇಕು, ತೊಡಬೇಕು ಎಂಬ ಕಕ್ಕುಲತೆ. ಮೋಕ್ಷ ರಸಿಕನಾದ ನೀನು ಈ ಕಕ್ಕುಲತೆಯನ್ನು ಬಿಡಿಸದೆ; ನಿತ್ಯಸುಖದ ದಾರಿಯನ್ನು ತೋರಿಸಿದೆ. ಉಪವಾಸವೇನು ಪ್ರಯಾಸವು? ಅದು ಹಾಗಿರಲಿ; ಪಾವನವಾದ ಧರ್ಮಸಾರವನ್ನು ಇನ್ನು ವಿವರಿಸು. ನೀನಿಂದು ಪರ್ವದಿವಸದ ಆಚಾರ್ಯನಾಗಿರುವೆ' ಎಂದು ಚಕ್ರಿಯ ಮಾತಿಗೆ ಮಾನಿನಿಯರು ಉತ್ತರವಿತ್ತರು. ಮಾನಿನಿಯರು ವಿದ್ಯಾಮಣಿ ಮತ್ತು ವಿನಯಾವತಿಯರನ್ನು ಮುಂದಿರಿಸಿಕೊಂಡು ಸದ್ಯೋ ಜಾತ ತಾಪಸನಾದ ಭರತೇಶನ ಧರ್ಮಕಥನವನ್ನು ಭಕ್ತಿಯಿಂದ ಕೇಳುತ್ತಿದ್ದರು.

'ವಿದ್ಯಾಮಣಿ, ವೀತರಾಗನ ಮತದ ಆದ್ಯಂತವನ್ನು ಕಿರಿದಾಗಿ, ಹೃದ್ಯವಾಗಿ ಹೇಳುವೆನು, ಕೇಳಿರಿ : ಕಡೆಯಿಲ್ಲದ ಆಕಾಶವಿರುವುದು, ಅದರ ನಟ್ಟ ನಡುವೆ ಮೂರು ಗಾಳಿಗಳಿವೆ. ಕಡು ದೀರ್ಘವಾಗಿಯೂ ದಟ್ಟವಾಗಿಯೂ ಹಬ್ಬಿರುವ ಈ ಗಾಳಿಗಳು

ಮೂರು ಸವಡಿಯ ಹಸುಬೆ ಚೀಲದಂತಿದೆ.ಅವುಗಳಲ್ಲಿ ಮೂರು ಲೋಕಗಳೂ ಅಡಗಿರುವುವು.

'ಅವುಗಳಲ್ಲಿ ಮೇಲೆ ತೋರುವುದೇ ಸುರಲೋಕ. ಆ ಸುರಲೋಕದ ತುದಿಯಲ್ಲಿ ಮುಕ್ತಿನಿವಾಸವಿರುವುದು. ಘಾಸಿಯಾಗದ, ಸೊಬಗು ಅಳಿಯದ, ಸುಖದ ಮಹಾ ಸಿದ್ಧರು ಅಲ್ಲಿ ಯಾವಾಗಲೂ ಇರುವರು. ನಾವಿರುವುದು ಮಧ್ಯಲೋಕ. ಕೆಳಗಿನದು ಅಧೋಲೋಕ. ಈ ಮೂರು ಲೋಕಗಳನ್ನು ತುಂಬಿ ಜೀವಿಗಳು ಸುಖ ದುಃಖಗಳ ಸೇವನೆಯಲ್ಲಿವೆ. ಸುರರು ಮೊದಲಾಗಿ ಕೆಳಗೆ ಇರುವವರೆಲ್ಲರೂ ಮರಣ ಜನನಗಳಿಗೆ ಒಳಗಾಗಿರುವರು. ಆದರೆ ಆ ಮರಣ ಜನನಗಳು ಸಿದ್ಧರಿಗಿಲ್ಲ. ನರರು ಒಮ್ಮೊಮ್ಮೆ ಸುರರಾಗುವರು. ಅಮರರು ಒಮ್ಮೊಮ್ಮೆ ನರರಾಗುವರು. ಮತ್ತೊಮ್ಮೆ ನಾರಕರೂ ಆಗುವರು. ಕರ್ಮವಶದಿಂದ ಇವರು ಕರಿ, ಪಶು ಫಣಿಮರವಾಗಿ ಯೋನಿಗಳಲ್ಲಿ ತಿರುಗುವರು. ಸಂಸಾರದಲ್ಲಿರುವ ಜೀವಗಳು ಒಮ್ಮೆ ದರಿದ್ರರಾಗಿ, ಇನ್ನೊಮ್ಮೆ ಧನಿಕರಾಗಿ, ಮತ್ತೊಮ್ಮೆ ಸ್ತ್ರೀರೂಪ ಧರಿಸಿ, ಮೇಲೊಮ್ಮೆ ಪುರುಷ ರೂಪ ಧರಿಸಿ, ಬಾರದ ಬವಣೆ ಪಡುತ್ತಿರುವರು.'

'ಸಿದ್ಧರಂತೆ ಎಲ್ಲರೂ ಸುಖಿಯಾಗಿರಲು ತಕ್ಕ ಬುದ್ಧಿ ಯಾವುದು? ಅದನ್ನೇ ನಮಗೂ ತಿಳಿಸಿರಿ, ಸ್ವಾಮಿ' ಶುದ್ಧ ಚಿತ್ತದಿಂದ ವಿದ್ಯಾಮಣಿ ಕೇಳಿಕೊಂಡಳು.'

'ಕರ್ಮವನ್ನು ಕೆಡಿಸಿದವರೆಲ್ಲರೂ ಸಿದ್ಧರಂತೆ ಮೊದಲಲ್ಲೇ ಒಳಗೆ ಇರುತ್ತಾರೆ.'

'ಕರ್ಮವನ್ನು ಕೆಡಿಸುವ ಉಪಾಯದ ಮರ್ಮ ಯಾವುದು?'

'ಜನಸಿದ್ಧ ಭಕ್ತಿಯಿಂದ ಕರ್ಮವು ಕೆಡುವುದು. ಜಿನಸಿದ್ಧ ಭಕ್ತಿಯು ಭೇದಾಭೇಧ ಭಕ್ತಿಯೆಂದು ಎರಡು ತೆರನಾಗಿರುವುದು.ಜಿನಸಿದ್ಧರನ್ನು ಇದಿರಿಟ್ಟು ಪೂಜಿಸುವುದು, ಜಿನಸಿದ್ಧರನ್ನು ನೋಡುವುದು. ಹೊಗಳುವುದು ಭೇದ ಭಕ್ತಿ ಎನಿಸುವುದು. ಜಿನರನ್ನು ತನ್ನ ಆತ್ಮ ರೂಪನಲ್ಲಿಟ್ಟು ನೋಡಿದರೆ ಅದು ಅಭೇದ ಭಕ್ತಿ. ಮೊದಲು ಭೇದ ಭಕ್ತಿಯನ್ನು ಮಾಡಿ, ಅನಂತರ ಆರು ರೀತಿಯ ಅಭೇದ ಭಕ್ತಿಯಿಂದ ಆರಾಧನೆ ಮಾಡಿದರೆ ಕರ್ಮ ಕೆಡುವುದು. ನಮಗೆ ಭೇದ ಭಕ್ತಿಯ ನೆಲೆ ತಿಳಿಯುವುದು. ಆದರೆ ಅಭೇದ ಭಕ್ತಿಯ ಬಗೆಯು ತಿಳಿಯದು.'

ಎಂದು ಭರತೇಶನು ಮಾತು ನಿಲ್ಲಿಸಿದನು. ಆದರೆ ವಿದ್ಯಾಮಣಿಯು, ಆ ದಿವ್ಯ ಭಕ್ತಿಯ ಬಗೆಯನ್ನು ತಿಳಿಸಬೇಕೆಂದು ಭಿನ್ನವಿಸಿದಳು. ಹಾಗೆಂದು ದೊರೆಯು ಬಿತ್ತರಿಸತೊಡಗಿದನು.

'ಜಿನೇಂದ್ರನನ್ನು ಜನವಾಸದೊಳಗೆ ಇದಿರಿಟ್ಟು ಮನವೊಲಿಸಿ ಪೂಜಿಸುವಂತೆ ತನುವಾಸದೊಳಗೆ ಆತ್ಮರೂಪನನ್ನು ನೋಡಿದರೆ, ಅದೇ ಅಭೇದ ಭಕ್ತಿಯು'. ದೇಹವನ್ನು ಧರಿಸಿದ ಆತ್ಮನು ಈ ಮೈಯಲ್ಲಿ ಬೆರೆತೂ ಬೆರೆಯದಿರುವನು. ಪುರುಷಾಕಾರನು, ಚಿನ್ಮಯನು, ಎಂದು ಒಳವರಿದು ನೋಡಿದರೆ ಕಾಣುವನು. ಧೂಳಿನ ರಾಶಿಯಲ್ಲಿ ಒಮ್ಮೆ ಸ್ಫಟಿಕದ ಪ್ರತಿಮೆಯು ಅಡಗಿರುವಂತೆ, ಈ ದೇಹದೊಳಗಿರುವುದು ನನ್ನ ಆತ್ಮನೆಂದು ನೋಡಿದರೆ ಅಲ್ಲೇ ಪ್ರಕಾಶಮಾನವಾಗಿ ಶೋಭಿಸುವ ಆತ್ಮನು ತೋರುವನು. ಸ್ಫಟಿಕದ ಪ್ರತಿಮೆಯು ಚರ್ಮ ದೃಷ್ಟಿಗೆ ತೋರುವುದು. ಹಸ್ತಪುಟಕ್ಕೆ ಸಂದಿಸುವುದು. ಆತ್ಮನ ರೂಪು

ಅಂತಲ್ಲ; ಅದನ್ನು ಬಯಲ ರೂಪಿನ ಒಂದು ಸ್ಫಟಿಕದ ಪ್ರತಿಮೆಯೆಂದೆಣಿಸಬೇಕು. ಆಸೆಯನ್ನೆಲ್ಲ ಬಿಟ್ಟು, ಏಕಾಂತದಲ್ಲಿ ಕಣ್ಮುಚ್ಚಿ, ಒಳಗೆ ನೋಡಿದರೆ ಮಾಸದ ಮೈಯಾಗಿ ಬೆಳಗುತ್ತ, ಸುಜ್ಞಾನವನ್ನು ಸೂಸುತ್ತ ಆತ್ಮನು ತೋರುವನು. ಆತ್ಮವನ್ನು ನೋಡಲು, ಅಧ್ಯಾತ್ಮವನ್ನು ಕ್ರಮದಿಂದ ಅಭ್ಯಾಸಮಾಡುತ್ತಾ ಮುನ್ನಡೆದಂತೆ ಆತ್ಮನು ತೋರುವನು. ಆಗ ಕರ್ಮವೆಲ್ಲವೂ ಜಾರುವುದು. ಮುಕ್ತಿ ದೊರೆಯುವುದು. ಅದು ಧರ್ಮದಲ್ಲಿ ಉತ್ಕೃಷ್ಟವಾದುದು. ಇದನ್ನು ದುರ್ಮುಖರು ಒಪ್ಪುವುದಿಲ್ಲ. ಸುಮುಖರು ಒಪ್ಪುತ್ತಾರೆ.'

'ಈ ಧ್ಯಾನವೆಂಬುದು ಪುರುಷರಿಗೆ ಮಾತ್ರವೋ? ಸತಿಯರಿಗೂ ಬರುವುದೋ? ಸ್ವಾಮಿ ಇದರ ಪರಿಯನ್ನು ನಿರೂಪಿಸಬೇಕೆಂದು' ಸೌಂದರಿಯು ಭಕ್ತಿಯಿಂದ ಕೇಳಿದಳು.

'ಹಾಗಾದರೆ ಕೇಳಿರಿ. 'ಧ್ಯಾನ' 'ಧರ್ಮ'ವೆಂದೂ, ವಿಶಾಲವಾದ 'ಶುಕ್ಲ'ವೆಂದೂ ಎರಡು ರೀತಿಯುಂಟು. ಇದು ಹೇಳುವಾಗ ಎರಡಾದರೂ ನೋಡುವಾಗ ಒಂದೇ. ಬೆಳಕು ಅಲ್ಪವಾದರೆ ಧರ್ಮವೆಂದಾಗುವುದು. ಬೆಳಕು ವೆಗ್ಗಳಿಸಿದರೆ ಅದು ಶುಕ್ಲಯೋಗವು. ಮೊದಲಿನದು ಮಳೆಗಾಲದಲ್ಲಿ ತೋರುವ ಬಿಸಿಲಂತಾದರೆ ಮತ್ತಿನದು ಬೇಸಿಗೆಯಲ್ಲಿ ತೋರುವ ಬಿಸಿಲಿನಂತೆ. ಆ ಭವದಲ್ಲಿ ಮುಕ್ತಿಮಾಡಿದವರಿಗೆ ಶುಕ್ಲವು ಶೋಭಿಸುವುದು. ಆ ಮೇಲೆ ಕ್ರಮವಾಗಿ ಕ್ಷೋಭೆಯಳಿದು ಮುಕ್ತಿ ಸೇರುವವರೆಗೆ ಧರ್ಮವು ಪ್ರಭವಿಸುವುದು. ಹೆಂಗಸರಿಗೆ ಈ ಜನ್ಮದಲ್ಲಿ ಮುಕ್ತಿಯಿಲ್ಲವಾದ್ದರಿಂದ ಅವರಿಗೆ ಶುಕ್ಲಯೋಗವು ದೊರೆಯದು. ಆದರೆ ಹೆಂಗಸು ಧರ್ಮ ಯೋಗವನ್ನಾಚರಿಸಬಹುದು, ಸಮವಸರಣದಲ್ಲಿ ಆದೀಶನ ಅಮೃತೋಪದೇಶದಿಂದ, ಅಜ್ಜಿಗಳು ಕೆಲವರು, ಸಂಯಮದ ಶ್ರಾವಕಿಯರು ಕೆಲವರು, ವಿಮಲವಾದ ಆತ್ಮಧ್ಯಾನವನ್ನು ಮಾಡುವರು. ಆತ್ಮಧ್ಯಾನದಿಂದ ಸ್ತ್ರೀ ಜನ್ಮ ಕೆಡುವುದು; ಅಮರತ್ವವೊದಗಿ ಬರುವುದು. ಮತ್ತೆ ಮುಕ್ತಿ ದೊರೆಯುವುದು. ಈಗ ಕ್ರಮದಿಂದ ಹೇಳಿದುದೇ ಶ್ರೀ ಜಿನವಾಕ್ಯ, ನಂಬಿರಿ'.

ಎಂದು ಚಕ್ರಿಯು ಅಂಗನಾಲೋಕವನ್ನೊಮ್ಮೆ ನೋಡಿದನು. ವಿದ್ಯಾಮಣಿಯು ಆ ವಾಕ್ಯಕ್ಕೆ ಒಡಂಬಟ್ಟು ಭಕ್ತಿಯಿಂದ ತಲೆವಾಗಿದಳು.

ವಿದ್ಯಾಮಣಿಯು ಕೇಳಿದ ಪ್ರಶ್ನೆಗುತ್ತರವಾಗಿ ಭರತೇಶನು ಶ್ರೀಜಿನವಾಣಿಯನ್ನೇ ಬಿತ್ತರಿಸಿದನು. ಆ ವಾಕ್ಯಕ್ಕೆ ಅವಳು ಒಡಂಬಟ್ಟು ನಿಂತಳು. ಆಗ ವಿನಯವಾವತಿ ಕೈಮುಗಿದು ತನ್ನ ಮನಸ್ಸಿನಲ್ಲಿ ಮೂಡಿದ ಪ್ರಶ್ನೆಯನ್ನು ಕೇಳಿದಳು.

'ದೇವತೆಗಳು ಯಾವುದರಿಂದಾಗುತ್ತಾರೆ? ಯಾವ ಭಾವದಿಂದ ಮನುಷ್ಯ ರಾಗುತ್ತಾರೆ?'

'ಸುಕೃತದಿಂದ ಅಮರರಾಗುತ್ತಾರೆ. ಪಾಪದಿಂದ ಪಶುನಾರಕ ವಿಕೃತಿಯಾಗುತ್ತದೆ. ಸುಕೃತಪಾಪಗಳು ಜೊತೆಗೂಡಲು ಜೀವನಿಗೆ ಮಾನವ ಪ್ರಕೃತಿಯುಂಟಾಗುತ್ತದೆ' ರಾಜಋಷಿ ಉತ್ತರವಿತ್ತನು.

'ಜೀವಗೆ ಆ ಪುಣ್ಯವು ಯಾವುದರಿಂದ ಉಂಟಾಗುವುದು? ಮತ್ತೆ ಪಾಪವು ಯಾವುದರಿಂದ ಉಂಟಾಗುವುದು? ಇದನ್ನು ನೀವೆಮಗೆ ರೂಪಿಸಬೇಕು.'

'ದಾನ ಪೂಜೆಗಳಿಂದಲೂ, ವ್ರತ ಜಪಗಳಿಂದಲೂ ಶಾಸ್ತ್ರದ ಚಿಂತನೆಯ

ಆನಂದದಿಂದಲೂ, ಪುಣ್ಯವುಂಟಾಗುವುದು. ಮಾನ, ಮಾಯೆ, ಲೋಭ, ಕೋಪ, ಭೋಗಾಸಕ್ತಿಗಳು ಪಾಪವನ್ನುಂಟುಮಾಡುತ್ತವೆ.'

'ಕುಲ ಜಾತಿಗೆ ಯೋಗ್ಯವಾದ ನಡೆ, ಜೀವದಯೆ, ತೀರ್ಥಸ್ಥಳ ಯಾತ್ರೆ— ಇವುಗಳಿಂದ ಪುಣ್ಯ; ಸುಳ್ಳು,ಕಳವು, ಕೊಲೆ, ಹಾದರಗಳಿಂದ, ಬಹುಕಾಂಕ್ಷೆಯಿಂದ ಬಲು ಪಾಪ ಕಟ್ಟುವುದು. ಪಾಪಪುಣ್ಯಗಳ ಸೋಂಕಿನಿಂದ ಆತ್ಮನು ನಾನಾ ಪರಿಯಾಗಿ ಜನ್ಮಾಂತರಗಳನ್ನು ಹೊಂದುವನು. ಪಾಪಪುಣ್ಯಗಳನ್ನು ಸರಿಯಾಗಿ ಕಂಡು ತನ್ನಲ್ಲೇ ನಿಂತರೆ ಮುಕ್ತಿಗೆ ಸೇರುವನು.'

'ಸ್ವರ್ಗಸುಖವನ್ನು ಮಾಡುವ ಪುಣ್ಯಕ್ಕೆ ಬಾಧಿಸುವ, ದುರ್ಗತಿಗೆ ಕೊಂಡು ಹೋಗುವ, ಪಾಪವನ್ನು ಪರಿಹರಿಸಿ ಸರಿಕಾಣುವುದೆಂತು? ನೀನೇ ದಾರಿ ತೋರು' ಎಂದು ಆಕೆ ಆಸಕ್ತಿಯಿಂದ ಕೇಳಿದಳು.

'ದೇವತೆಗಳ ಸುಖವೂ ನಿತ್ಯವಲ್ಲ; ನರಕದ ವೇದನೆಯೂ ನಿತ್ಯವಲ್ಲ; ಅವೆರಡೂ ಕನಸು ಕಾಣುವಂತೆ; ಕನಸು ಮರೆವಂತೆ; ಜೀವನ ಭ್ರಾಂತಿಯಲ್ಲದೆ ಹೆಚ್ಚೇನು? ಮರವನ್ನೇರಿ ನಕ್ಕು ಅಡಿ ಕೆಳಕ್ಕೆ ಬೀಳುವಂತೆ ಸುರರು ಭೂಮಿಗೆ ಬೀಳುವರು. ಭೂಮಿಯಲ್ಲಿ ಬಿದ್ದು ಅಳುತ್ತಿದ್ದು ಮೇಲಕ್ಕೆ ಬರುವಂತೆ ನಾರಕರು ಬರುವರು. ಜನನಮರಣವೆಂಬುದು, ತನುಭಾರ ವೆಂಬುದು ನರಕದಲ್ಲೂ ಸ್ವರ್ಗದಲ್ಲೂ ಉಂಟು. ಸ್ವರ್ಗ ಶರೀರವು ನಾಲ್ಕುದಿನ ರಮ್ಯವಾಗಿರುವುದು. ನಾರಕ ಶರೀರವು ಕಷ್ಟಕರವಾಗಿರುವುದು. ಇವುಗಳಲ್ಲಿ ಇದಿಷ್ಟೆ ಭೇದ. ಒಂದು ಮಸಿಯ ಹೊರೆ ; ಒಂದು ಶ್ರೀಗಂಧದ ಹೊರೆ. ಹೊರೆ ಯಾವುದಾದರೂ ಹೊತ್ತವರಿಗೆ ಭಾರವಷ್ಟೇ? ನಾರಕರ ಮತ್ತು ಸುರರ ಶರೀರಗಳೂ ಹಾಗೆಯೇ ಎಂದು ತಿಳಿ.'

ವಿನಯಾವತಿ ಮೌನವಾಗಿ ಆಲಿಸುತ್ತಿದ್ದಳು.

'ಜ್ಞಾನವೇ ದೇಹವಾಗಿ, ದೇಹದ ಭಾರವು ಅಳಿದು ಸ್ವಾಧೀನದಲ್ಲಿದ್ದರೆ ಅದೇ ಮುಕ್ತಿ, ಪುಣ್ಯವು ಹೀನದ ಮೈಯನ್ನೂ ಪಾಪವು ಉತ್ತಮದ ಮೈಯನ್ನೂ ಕತ್ತರಿಸುವುದರಿಂದ ಅವೆರಡೂ ಸಮಾನವಲ್ಲವೇ? ಕೆಸರನ್ನು ಲೇಪಿಸಿದರೂ ಗಂಧವನ್ನು ಲೇಪಿಸಿದರೂ ಕನ್ನಡಿ ಕುರುಡಲ್ಲವೆ? ಪಾಪ ಪುಣ್ಯಗಳೂ ಅಂತೆಯೇ ಲೇಪವಾಗಿ ಆತ್ಮನನ್ನು ಮುಸುಳಿಸಿ ಕೊಂಡಿರುವುವು; ಅಷ್ಟೆ. ಕೆಸರನ್ನೂ ಗಂಧವನ್ನೂ ತೊರೆದರೆ ಕನ್ನಡಿಯ ಪ್ರಭೆಯು ವ್ಯಾಪಿಸಿ ತೋರುವ ಹಾಗೆ ಪಾಪಪುಣ್ಯಗಳನ್ನು ಆತ್ಮಯೋಗದಿಂದ ತೊಳೆಯಲು ಆತ್ಮನು ಮುಕ್ತಿಯಲ್ಲಿ ಮೆರೆಯುವನು. ಒಮ್ಮೆ ಪಾಪದ ಚರಿತವನ್ನು ಬಿಟ್ಟು, ಪುಣ್ಯದ ಸೊಮ್ಮಿನಲ್ಲಿ ನಿಲ್ಲಬೇಕು. ಹಾಗೆ ನಿಂತು ತಮ್ಮ ಆತ್ಮರತಿಯನ್ನು ಸಾಧಿಸಬೇಕು. ಆ ಮೇಲೆ ಅದರಲ್ಲೇ ನೆಮ್ಮದಿಗೊಂಡು ಪುಣ್ಯವನ್ನೂ ಬಿಡಬೇಕು. ಸೀರೆಯ ಮೈಲಿಗೆಯು ಹೋಗುವುದಕ್ಕಾಗಿ ರಜಕನು ಖಾರದ ಮಸಿಯಲ್ಲಿ ಅದ್ದಿ, ನೀರಿನಲ್ಲಿ ಆ ಮಸಿಯನ್ನು ತೊಳೆಯದಿದ್ದರೆ ಸೀರೆಯು ಶುಚಿಯಾಗುವುದೆ? ಪಾಪ ವಾಸನೆಯನ್ನು ಪುಣ್ಯವಾಸನೆಯಿಂದ ಹೋಗಲಾಡಿಸಿ, ತನ್ನಲ್ಲೇ ನಿಂತು, ಆ ಪುಣ್ಯವನ್ನೂ ತೊಳೆಯದಿದ್ದರೆ ಆತ್ಮನು ಮೂರು ಲೋಕಗಳನ್ನೂ ಬೆಳಗುವ ದೀಪವಾಗಲಾರನು. ವ್ರತಿಯೆಂದರೆ ಹಾಗೆ. ಮೊದಲು ಒಂದಿಷ್ಟು ಪುಣ್ಯವೇ

ಲೇಸಾಗುವುದು. ಶುದ್ಧಾತ್ಮಯೋಗದಲ್ಲಿ ನಿಂತವನಿಗೆ ಅದು ಲೇಸಲ್ಲ. ಆದ್ದರಿಂದ ಪುಣ್ಯವನ್ನೂ ಪಾಪವನ್ನೂ ಸರಿಕಾಣು ಎಂದು ಹೇಳಿದೆ. ಇದು ಜಿನವಾಕ್ಯ; ನಂಬು.'

ವಿನಯಾವತಿ ಅದಕ್ಕೆ ಒಡಂಬಟ್ಟು ನಿಂತಳು. ಅಷ್ಟು ಹೊತ್ತಿಗೆ ಚಂದ್ರಿಕಾದೇವಿಯು ತನ್ನ ಮನಸ್ಸಿನ ಅನುಮಾನವನ್ನು ಜನನಾಥನೊಡನೆ ನಿವೇದಿಸಿಕೊಂಡಳು.

'ದೇವರು, ನಮಗೆ ಪಾಪಪುಣ್ಯವನ್ನು ಸರಿಕಾಣಬೇಕೆಂಬ ಭಾವವನ್ನು ತೋರಿಸಿ ಮಾತನಾಡಿದಿರಿ. ಆದರೆ ತಾವೀಗ ಪುಣ್ಯಕೃತ್ಯವನ್ನೇಕೆ ಮಾಡುವುದು? ಜಿನಪೂಜೆ, ಮುನಿಭುಕ್ತಿ ಶಾಸ್ತ್ರ ಚಿಂತನೆ, ಸಾಧು ಜನರಕ್ಷಣೆ, ದುರ್ಜನ ಶಿಕ್ಷೆ, ಅನಶನ ಮೊದಲಾದ ಇವು ಪುಣ್ಯಕರ್ಮವರ್ತನೆಯಲ್ಲವೇ?'

ಕುಶಲೆಯಾದ ಚಂದ್ರಿಕೆಯು ಭಕ್ತಿಯಿಂದ ಕೇಳಿದ ಮಾತಿಗೆ ರಸಜ್ಞನಾದ ಭರತೇಶನು ತಕ್ಕ ಉತ್ತರವನ್ನಿತ್ತನು.

'ಚಂದ್ರಿಕಾದೇವಿ, ನೀನು ವ್ರತಧಾರಿಣಿ. ಆದ್ದರಿಂದ ನಿನಗೆ ಅನುಮಾನವುಂಟಾಯಿತು. ಅದನ್ನೂ ನೀನು ಭೇದಿಸಿ ಭೇದಿಸಿ ಕೇಳಿದೆ. ಅದನ್ನೇ ಬಿಡಿಸಿ ಬಿಡಿಸಿ ಹೇಳುವೆನೀಗ : ಕೇಳು...ಹೌದು, ನಮಗೆ ಪುಣ್ಯವರ್ತನೆಯುಂಟು. ನಾನು ಗೃಹದಲ್ಲಿರುವೆನು. ಆದ್ದರಿಂದ ಗೃಹಿಗಳ ಓಜೆಯನ್ನು ಮೀರಬಾರದು. ಆದ್ದರಿಂದ ಷಟ್ಕರ್ಮ ನಿಹಿತನಾಗಿರುವೆನು. ದೀಕ್ಷೆ ಪಡೆದ ಮೇಲೆ ಪುಣ್ಯಕರ್ಮವನ್ನು ನೋಡದೇ ಬಿಟ್ಟುಬಿಡಬೇಕು. ಈಗ ಈ ಧರಣಿಯ ಒಡೆತನವಿರುವಾಗ ಬಿಡುವುದು ಸರಿಯಾದ ಲಕ್ಷಣವಲ್ಲ. ನಾನು ಆತ್ಮಯೋಗವನ್ನು ನೋಡಿ, ಲೌಕಿಕವನ್ನು ಬಿಟ್ಟರೆ, ಲೋಕವು ಪುಣ್ಯವನ್ನೇ ಬಿಟ್ಟು ಬಡತನದಿಂದ ನೊಂದುಕೊಳ್ಳುವುದು. ಅದಕ್ಕಾಗಿ ಪುಣ್ಯಾನುವೃತ್ತಿಯನ್ನು ತೋರಿಸುತ್ತಿದ್ದೇನೆ.'

'ಪರಹಿತಕ್ಕಾಗಿ ಬಳಲಿದರೆ ಮುಪ್ಪು ಉಂಟೆ? ಅದೂ ಒಂದು ಬಂಧನವಷ್ಟೆ? ಇದನ್ನು ನಮಗೆ ಚೆನ್ನಾಗಿ ವಿವರಿಸಬೇಕು' ತಿಳಿಯಬೇಕೆಂಬ ಕುತೂಹಲದಿಂದ ಆಕೆ ಕೇಳಿದಳು.

'ಜ್ಞಾನಿಯಾದವನು ಮನಸ್ಸನ್ನು ಹಂಸನಲ್ಲಿಟ್ಟು, ಹೊರಗೆ ಉದಾಸೀನನಾಗಿ ಉಳಿದ ಕರ್ಮಗಳನ್ನು ಮಾಡುವನು. ಹೀಗೆ ಮಾಡಿದರೂ ಅವನಿಗೆ ಬಂಧನವಿಲ್ಲ. ಇದೇ ಧ್ಯಾನದ ಶಕ್ತಿ. ಆಸೆಯಿಂದ ಇರಲು ಹೇಳಿದರೆ ಸವತಿಯು ಇರುವಂತೆ ಉದಾಸೀನದಿಂದ ಹೇಳಿದರೆ ಇರುವಳೆ? ಒಳ್ಳೆಯದೆಂದೇ ಮಾಡುವವರಿಗೆ ಕರ್ಮವಿರುವುದು. ಇಚ್ಛೆಯಿಲ್ಲದೆ ಮಾಡುವವರಿಗೆ ಕರ್ಮವು ಜಾರಿಹೋಗುವುದು. ಶುದ್ಧಾತ್ಮನನ್ನು ಕಾಣದವರಿಗಾದ ಬಂಧನವು ಬಸಿವ ಎಣ್ಣೆಯ ಕೊಡಕ್ಕೆ ಅಂಟಿದ ಧೂಳಿನಂತೆ. ಆತ್ಮರಸಿಕರಿಗಾದರೆ ಅದು ಹೊಸ ಮಡಕೆಯ ಮೇಲೆ ಕವಿದ ಧೂಳಿನಂತೆ. ಅವರಿಗದು ಬಂಧನವೇ ಅಲ್ಲ. ಅನುರಾಗವನ್ನು ಬಿಟ್ಟಿರುವ ಆತ್ಮವಿಜ್ಞಾನಿಯು ಭೋಗಿಸಿದರೂ ಅವನಿಗೆ ಬಂಧನವಿಲ್ಲ. ಸಾಗರ ಧರ್ಮದಲ್ಲಿರುವ ದೇವೇಂದ್ರನಂತೆ ಆ ಗುಣಿಯು ಇರುವನು.'

'ಎಂದರೆ, ದೇವರಿಗೆ ಉಪವಾಸ ಮೊದಲಾದ ಕಷ್ಟಗಳೇಕೆ? ಭೋಗಿಸುತ್ತ ಎಂದಿನಂತಿರಬಾರದೆ?' ಎಂದಾಕೆ ಮಂದಹಾಸದಲ್ಲೇ ಮತ್ತೊಂದು ಪ್ರಶ್ನೆ ಕೇಳಿದಳು.

'ಅಲ್ಲ; ಅದು ಹಾಗಲ್ಲ. ಭೋಗದಲ್ಲಿ ಆಸಕ್ತಿ ಸಲ್ಲದೆಂದು ನಾನು ಹೇಳಿದುದನ್ನು ನೀ ಮರೆತೆ; ಭೋಗದಲ್ಲಿ ತಲ್ಲೀನನಾಗಬಾರದೆಂದು ನಾನು ಇಷ್ಟನ್ನು ತೊರೆಯುತಿದ್ದೇನೆ. ಈಗ ತಿಳಿಯಿತೇ ?'

'ದೇವರಿಗೆ ಆ ನಡತೆ ಸಲ್ಲುವುದು. ಅದು ಹಾಗಿರಲಿ. ನಮಗೆ ಆತ್ಮಭಾವನೆ ಬಾರದು. ಹಾಗಾದರೆ ನಮಗಿನ್ನು ಗತಿಯೆಂದು?'

'ಎಲ್ಲರಿಗೆ ಬಾರದೆಂದು ಹೇಳಬೇಡ. ಕೆಲವರ ಎದೆಯಲ್ಲಿ ಆತ್ಮಯೋಗವು ಹೊಳೆಯುವುದು. ಬಲ್ಲವರು ಆತ್ಮಯೋಗವನ್ನು ಮಾಡಿರಿ. ಅರಿಯದವರೆಲ್ಲ ಅವರನ್ನು ಮೆಚ್ಚಿರಿ. ಪರಮಾತ್ಮಯೋಗವೇ ಮುಕ್ತಿಗೆ ಬೀಜವೆಂದು ಎರಡಿಲ್ಲದೆ ಹೃದಯದಲ್ಲಿ ನಂಬಿ ಹಾಗೇ ಆಚರಿಸಿರಿ. ಆಗ ಪುಣ್ಯಕಾರ್ಯಗಳಲ್ಲಿ ಅದು ಮುಕ್ತಿಯ ದಾರಿಯನ್ನು ತೋರಿಸುವುದು.'

ಭರತೇಶನಿತ್ತ ಈ ವಿವರಣೆಯಿಂದ ಚಂದ್ರಿಕಾದೇವಿಯ ಅನುಮಾನ ಪರಿಹಾರ ವಾಯಿತು. ಆಕೆ ಅರಸನೊಂದಿಗೆ ಸಂತುಷ್ಟಳಾದಳು. ಆಗ ಜ್ಯೋತಿರ್ಮಾಲೆಯೆದ್ದಳು. ಈ ವರೆಗೆ ಚಕ್ರಿಯಾಡಿದ ತತ್ವದ ತಿಳಿಮಾತನ್ನು ತಿಳಿದ ಆಕೆ ಆ ರಾಜಋಷಿಯೊಡನೆ ತನ್ನ ಮನಸ್ಸಿನ ಅನುಮಾನವನ್ನು ಹೇಳಿಕೊಂಡಳು.

'ಆಗಮದಲ್ಲಿ ಮುಕ್ತಿಯೆಂಬುದು ಮೂರು ರತ್ನಗಳಿಂದಾಗಿದೆಯೆಂಬ ಉಕ್ತಿಯುಂಟು. ದೇವರು, ನಮಗೀಗ ವ್ಯಕ್ತವಾಗಿರುವ ಆತ್ಮನ ಒಂದು ರೂಪವನ್ನೇ ವಿವರಿಸಿದುದೇಕೆ?'

'ಮರ್ಮವನ್ನು ತಿಳಿದುಕೊಂಡು ನೀನೀಗ ಕೇಳಿದೆ. ನಿನ್ನ ವಿವೇಕವು ಲೇಸಾದುದು ಜ್ಯೋತಿರ್ಮಾಲೆ. ಮೂರು ರತ್ನಗಳೆಂದರೆ ಆತ್ಮನ ಧರ್ಮ; ಅವುಗಳನ್ನು ಬೇರೆ ಬೇರೆಯೆಂದು ವಿಂಗಡಿಸಬೇಡ, ದರ್ಶನ ಬೋಧವೆಂಬುದು ಆತ್ಮನ ರೂಪು ಮನಸ್ಸಿನಲ್ಲಿ ಚರಿಸುವುದಕ್ಕಾಗಿದೆ. ಅದೇ ಸುಚರಿತ್ರ. ಈ ರತ್ನತ್ರಯಗಳು ಆತ್ಮನಲ್ಲಿ ಎರವಿಟ್ಟ ಒಡವೆಗಳಲ್ಲ; ಅವು ಆತ್ಮನಲ್ಲಿ ಎರಕಹೊಯ್ದ ವಸ್ತುಗಳೆಂದು ಮತಿವಂತೆಯಾದ ನೀನು ತಿಳಿಯಬೇಕು. ಆಪ್ತರಾದ ತಾಪಸರನ್ನೂ ಹಾಗೂ ಶಾಸ್ತ್ರಗಳನ್ನೂ ನಂಬಿ, ತಿಳಿದು ಚಿತ್ರಗುಪ್ತಿಯೆಲ್ಲಿದ್ದರೆ ಅದು ನಿಶ್ಚಯಾರ್ಥ. ವ್ಯವಹಾರದ ರೀತಿಯಲ್ಲಿ ಸಾಧನೆ ಮಾಡಿ ನಿಶ್ಚಯವೆಂಬ ಭವನದಲ್ಲಿ ನಿಲ್ಲಬೇಕು. ಆಗ ಆತ್ಮನಿಗೆ ಭವ ದುಃಖ ಬಯಲಾಗಿ ಹೋಗುವುದು. ಮುಕ್ತಿಯು ಸಂಭವಿಸುವುದು. ದೇವನ ನಂಬಿಕೆಯು ವ್ಯವಹಾರ; ಹಂಸನಲ್ಲಿ ದೃಢವಾಗಿ ಹೊಂದಿಕೊಂಡಿರುವುದು ನಿಶ್ಚಯವು.'

'ಹಾಗಾದರೆ ದೇವನಿಂದಲೂ ಹಂಸನು ಅಧಿಕನೇ?' ಜ್ಯೋತಿರ್ಮಾಲೆಯು ಥಟ್ಟನೆ ಕೇಳಿದ ಪ್ರಶ್ನೆ.

'ಹಂಸಯೋಗದ ಶಕ್ತಿಯನ್ನು ನುಡಿಯಬಾರದು. ಈಗ ನುಡಿಯದಿದ್ದರೆ ಮುಕ್ತಿಯಿಲ್ಲ. ಅದಕ್ಕಾಗಿ 'ಇವರನ್ನು ಒಂದು ಪರ್ಯಾಯದಲ್ಲಿ ದೃಢವಾಗಿರಿಸುವೆನು.' ಹೀಗೆಂದು ಚಕ್ರಿ ಒಂದರೆ ಕ್ಷಣದಲ್ಲೇ ಯೋಚಿಸಿ ನಿರ್ಣಯಕ್ಕೆ ಬಂದನು. ಹಂಸಾನುಭವವೇ ಸಾಕೆಂದು ಅನುಭವಿಸುತಿದ್ದುದನ್ನೇ ಆಕೆಗೆ ವಿವರಿಸಿದನು.

'ಜ್ಯೋತಿ, ಈಗ ಆ ಮಾತನ್ನಾಡಬಾರದು. ಶುದ್ಧಾತ್ಮನ ಯೋಗವೆಂಬುದು ದೊಡ್ಡದಲ್ಲ. ಶ್ರೀ ಗುರುಪಂಚಕವೆಂಬುದು ಒಂದುಂಟು. ಅದನ್ನು ಮುಂದೆ ನೀನೆ ಚೆನ್ನಾಗಿ ಕಾಣುವೆ. ದೇವರು ಅಧಿಕನು ಹೌದಾದರೂ ಆತ್ಮನನ್ನು ಬೇರೆಯಾಗಿಟ್ಟು ಭಾವಿಸುವುದು

ಉತ್ಕೃಷ್ಟವಲ್ಲ. ದೇವನು ನನ್ನೊಳಗಿದ್ದನೆಂದು ಹಂಸನಲ್ಲಿಟ್ಟು ಭಾವಿಸುವುದು ಉತ್ಕೃಷ್ಟವು. ಅದರ ಬದಲು ದೇವನನ್ನು ತನ್ನೊಳಗಿಟ್ಟು ನೋಡಿದರೆ ಕರ್ಮವೆಲ್ಲಹರಿದುಹೋಗಿ ಕೈವಲ್ಯ ದೊರೆಯುವುದು.ಕಂಚಿನೊಳಗೆ ಶಿಲೆಯೊಳಗೆ ದೇವನನ್ನು ನೋಡುವುದು ಮಿಂಚುಗಾರಿಕೆಯ ಭಕ್ತಿ. ಆತ್ಮನಲ್ಲಿಟ್ಟು ನೋಡಿದರೆ ಅದು ಶಾಸ್ತ್ರದಿಂದ ಸ್ಪಷ್ಟವಾದ ನಿಗಮಾಂಚಿತ ಭಕ್ತಿಯೆನಿಸುವುದು.

'ವ್ಯವಹಾರವೆಂಬುದು ಭೇದಭಕ್ತಿಯಿಂದ ಕೂಡಿದೆ. ನಿಶ್ಚಯವೆಂಬುದು ಭೇದವಿಲ್ಲದ ಭಕ್ತಿಯು. ನೀವುಗಳು ಭೇದವನ್ನರಿತುಕೊಳ್ಳಬೇಕು. ನಿರ್ಭೇದ ಭಕ್ತಿಯೆಂಬುದೇ ದೊಡ್ಡದು. ಅದು ಕರ್ಮವೆಂಬ ಸೂರ್ಯನ ಮಹಾಗರುಡ ! ಮೋಕ್ಷ ಸುಖಕ್ಕಾಗಿ ದುರ್ಭಾವವನ್ನು ಬಿಟ್ಟು ಸದ್ಭಾವದಲ್ಲಿ ಅದನ್ನು ಸಂದರ್ಭಿಸು; ಎಂದಿಷ್ಟೆ ಹೇಳಿದೆವು.'

'ದೇವ ನಿಮಗೆ ಆ ಭಕ್ತಿಯುಂಟಾಗುತ್ತದೆ. ಆದರೆ ಈ ದೇಹವು, ನಮಗೆ ಸ್ತ್ರೀ ವೇಷವಾಗಿದೆ. ಆ ದೇವರು ಪುರುಷಾಕಾರನು. ಇದು ಹೇಗೆ ಹೊಂದಿಕೊಳ್ಳುವುದು?'

'ಭಾವಿಸುವಾಗ ಹೆಣ್ಣೆನಬೇಡ; ಗಂಡೆಂದು ಭಾವಿಸು. ಭಾವಿಸಿದಂತೆ ತೋರುವನು. ಭಾವ ಹೇಗಿರುವುದೋ ಹಾಗೆ ಆತ್ಮನು ತೋರುವನು. ಯದ್ಭಾವಂ ತದ್ಭವತಿ ಎಂದು ತಿಳಿದುಕೊ. ಮೊದಲು ದೇವರ ರೂಪವು ರೂಪಾತೀತವೆಂದರಿತು ನಾಲ್ಕೂ ರೀತಿಯಲ್ಲಿ ಉದ್ಯೋಗಿಸಿ ಕದಲದೆ ತನ್ನಾತ್ಮದಲ್ಲಿ ನಿಲ್ಲಬೇಕು. ಆಗ ಅವನು ಸೌಲಭ್ಯನಾಗುವನು. ಮೂವತ್ತೈದು ಮೂಲ ಮಂತ್ರಾಕ್ಷರಗಳನ್ನು ಮುತ್ತಿನ ಪಂಚಸರದಂತೆ ಹಣೆಯಲ್ಲಿ ಐದೈದು ಸಾಲಾಗಿ ಕಾಣಬೇಕು. ಇದೇ ಪದಸ್ಥಧ್ಯಾನ. ಬಿಳುಪಾಗಿ ಹೊಳೆಯುವ ಚಂದ್ರಕಾಂತ ಪ್ರತಿಮೆಯು ಸ್ಫಟಿಕದ ಭಾಂಡದೊಳಿರುವಂತೆ ನಮ್ಮ ದೇಹದಲ್ಲೇ ಇರುವ ಹಂಸನನ್ನು ಕಂಡರೆ ಅದು ಪಿಂಡಸ್ಥಧ್ಯಾನವು. ದೇವನು ಪೂರ್ಣಚಂದ್ರಾರ್ಕಕೋಟಿ ಪ್ರಕಾಶ ಸ್ವರೂಪದಲ್ಲಿ ಒಪ್ಪುತಿದ್ದಾನೆಂದು ಶ್ರೀ ಪುರುದೇವನನ್ನು ಧ್ಯಾನಿಸಿದರೆ ಅದು ರೂಪಸ್ಥಧ್ಯಾನ. ಹೊರ ಲೇಪವೇ ಅಳಿದಿರುವ ನಿರುಪಮರನ್ನೂ ನಿಶ್ಚಲರನ್ನೂ ಚಿದ್ರೂಪರನ್ನೂ ಸುಖಮಯರೆಂದು ಸ್ಥಾಪಿಸಿ ಆ ಸಿದ್ಧರ ರೂಪವನ್ನು ಧ್ಯಾನಿಸುವುದೇ ರೂಪಾತೀತ ಧ್ಯಾನ. ಜ್ಞಾನಿಗಳು ಈ ನಾಲ್ಕು ರೀತಿಯಲ್ಲಿ ಅಭ್ಯಾಸ ಮಾಡಿ ಮತ್ತೆ ಆ ನಾಲ್ಕರಲ್ಲಿ ಮೂರನ್ನು ಬಿಟ್ಟು ಪಿಂಡಸ್ಥ ಧ್ಯಾನದಲ್ಲೇ ನಿಲ್ಲುವರು. ಕಾರಣ ಪಿಂಡಸ್ಥವೊಂದರಲ್ಲಿ ಉಳಿದ ಧ್ಯಾನಗಳೆಲ್ಲವೂ ಸೇರಿರುತ್ತವೆ. ಆದ್ದರಿಂದ ಕರ್ಮಗಳೆಲ್ಲ ತುಂಡಾಗಿ ಹೋಗಿ, ಆತ್ಮನಿಗೆ ಅಖಂಡವಾದ ಸುಖವುಂಟಾಗುವುದು. ಜಪ, ದೀಕ್ಷೆ, ವ್ರತ, ಶಾಸ್ತ್ರಚಿಂತನೆ, ಮೊದಲಾದ ತಪಗಳೆಲ್ಲ ಇದಕ್ಕೆ ಸಹಾಯವಾಗುತ್ತದೆ. ಜಿನನಾಥನಿಗೊಪ್ಪುವ ಮೋಕ್ಷ ಪದವಿಗೆ ನಿರ್ಭೇದ ಭಕ್ತಿಯು ಅತ್ಯಂತ ಪವಿತ್ರವಾಗಿದೆ.

'ಎಂದಿಗೂ ಮೋಕ್ಷ ಪಡೆಯದೆ ಭವದಲ್ಲಿ ಹುಟ್ಟನ್ನು ಪಡೆಯುವ ನಿರ್ಭವ್ಯರೂ ಇದ್ದಾರೆ. ಅವರು ಹಂಸಯೋಗವನ್ನು ನಿಂದಿಸುವರು. ಆದರೆ ಹಂಸಯೋಗವನ್ನು ತಿಳಿದ ಭವ್ಯರು ಅದನ್ನೊಂದನ್ನೇ ಒಪ್ಪುವರು. ಅವರು ಎಲ್ಲಾ ಶಾಸ್ತ್ರಗಳನ್ನೂ ಪಠಿಸುವರು. ಉಪವಾಸದಿಂದಿರುವರು.ಕಠಿಣ ಹೃದಯದ ನಿರ್ಭವ್ಯರೂ ಧ್ಯಾನವನ್ನೇ ಸುಳ್ಳೆಂದು ಹೇಳುವ ಪಾಪಿಗಳು. ತಮಗೆ ಆತ್ಮಯೋಗವು ಬಾರದೆಂದು ಆತ್ಮಯೋಗಬಂದು ಅದನ್ನೇ

ಆರಾಧಿಸುವವರನ್ನು ಜರೆಯುವರು. ಈ ಯೋಗವು ನಾರಿಗಳಿಗಿಲ್ಲ, ಗೃಹಸ್ಥರಿಗಿಲ್ಲವೆಂದು ಈ ಮೂರ್ಖರು ಜಗಳಾಡುವರು. ಸತಿಗೆ ಗೃಹಿಗೆ ಶುಕ್ಲಯೋಗವಿಲ್ಲವೆಂದರೆ ಧರ್ಮವೇ ಇಲ್ಲವೆಂದು ಹೇಳುವರು. ನಾಲ್ಕು ರೀತಿಯ ವ್ಯವಹಾರ ಧರ್ಮವನ್ನು ಒಪ್ಪುವವರು ನಿಶ್ಚಿತವಾದ ಆತ್ಮಧರ್ಮವನ್ನು ಒಪ್ಪುವುದಿಲ್ಲ. ಧ್ಯಾನ ವಿಹರಣೆಗಾಗಿ ಬಹಳ ಶಾಸ್ತ್ರಬೇಕು, ನಿರ್ವಾಣಬೇಕು— ಎಂದು ಮುಂತಾಗಿ ಕಾಡಿದವರೇ ಶಾಸ್ತ್ರಿಗಳಾಗಿ, ನಿರ್ವಾಣಿಗಳಾಗಿ, ಧ್ಯಾನರಹಿತರಾಗಿರುತ್ತಾರೆ. ಬಂದರೆ ಧ್ಯಾನಿಸಬೇಕು; ಬಾರದಿದ್ದರೆ ಧ್ಯಾನವನ್ನು ಪ್ರೀತಿಯಿಂದ ನಂಬಬೇಕು. ನಿಂದಿಸುತ್ತಿರುವುದು ನಿರ್ಭವ್ಯರ ಗುಣ. ಧ್ಯಾನವು ಕುಂದಿದರೆ ಸಮ್ಯಕ್ತ್ವವಿಲ್ಲ.'

ಜ್ಯೋತಿರ್ಮಾಲೆಯ ಮುಖ ಈ ತಿಳಿಮಾತಿನಿಂದ ಹೊಳೆಯಿತು. ಗಂಭೀರಗಳಾಗಿಯೇ ಕೇಳುತಿದ್ದಳು.

'ಆದ್ದರಿಂದ ನೀವಿದನ್ನು ನಂಬಿ. ನಿಮಗೆ ಧ್ಯಾನವು ಉದಯಿಸದಿದ್ದರೆ ಏನಾಯ್ತು? ಸಂತೋಷದಿಂದ ಭೇದಭಕ್ತಿಯನ್ನು ಮಾಡಿ, ಮೋಕ್ಷವು ಮುಂದೆ ದೊರೆಯುವುದು. ದೇವತಾವಂದನೆ, ಮುನಿಭುಕ್ತಿ, ಜಿನಪೂಜೆ, ಜೀವರಕ್ಷೆಗಳನ್ನು ಮಾಡಿ, ಜೀವಸಿದ್ಧಿಗಾಗಿ ಹಂಸಕಲೆಯಲ್ಲಿ ನಂಬಿಕೆಯಿಡಿ. ಅದರಿಂದ ನಿಮಗೆ ಮೋಕ್ಷವುಂಟಾದೀತು. ಅಶುಭವೆನಿಸುವ ಸೂತಕ ಕಾಲದಲ್ಲಿ ಧ್ಯಾನ ವಂದನೆಗಳು ಸಲ್ಲದು. ಅಶುಚಿತ್ವದ ರೀತಿಯರಿತು ಮೌನದಲ್ಲಿರಬೇಕು. ಮನದಲ್ಲಿ ಆತ್ಮಚಿಂತನೆಯಿದ್ದರೆ ದೋಷವಿಲ್ಲ. ಈ ರೀತಿ ನೀವೆಲ್ಲ ಆಚರಿಸಿದರೆ, ಕಾಂತೆಯರೆನಿಸುವ ಈ ನಿಮ್ಮ ರೂಪವು ಅಳಿದು ಮುಂದೆ ಸ್ವರ್ಗ ಸೇರಿ ಮುಕ್ತಿ ಹೊಂದುವಿರಿ. ಇದನ್ನು ಸಿದ್ಧಾಂತವೆಂದು ನಂಬಿ.'

ರಾಜಋಷಿ ಭರತೇಶನು ಈ ರೀತಿಯಲ್ಲಿ ಶಾಂತತತ್ವವನ್ನು ತಿಳಿಸಿದಾಗ ಅಲ್ಲಿ ನೆರೆದಿದ್ದ ನಾರಿಯರೆಲ್ಲ ಸಂತೋಷದಿಂದ ಕೈಮುಗಿದರು. ಮೋಕ್ಷವೇ ಕೈಸೇರಿದಂತೆ ನಲಿದಾಡಿದರು.

'ದೇವ ಯಾವ ಜನ್ಮದಲ್ಲೂ ಪಡೆಯಲಾರದ ಸಮ್ಯಕ್ತ್ವವನ್ನು ನಿನ್ನಿಂದ ಪಡೆದೆವು. ನಮಗಿನ್ನು ಮುಕ್ತಿಯೇ ದೊಡ್ಡದಲ್ಲ. ನಿನ್ನ ಸಂಗತಿಯಿಂದ ನಾವೆಲ್ಲ ಕೃತಕೃತ್ಯರಾದೆವು.'

— ಎಂದು ಆ ಪತಿಭಕ್ತೆಯರೆಲ್ಲ ಭೂಪತಿಗೆ ಸಾಷ್ಟಾಂಗವೆರಗಿದರು. ಚಕ್ರಿ ಏಳಿರೆಂದು ಹೇಳಿದ ಮೇಲೆ ಭಕ್ತಿಯಿಂದ ಎದ್ದು ಸರಿದು ನಿಂತರು. ಆ ಹೊತ್ತಿಗಾಗಲೆ ಸೂರ್ಯನು ಅಸ್ತಾದ್ರಿಯನ್ನು ಸೇರಿದ್ದನು. ಆದ್ದರಿಂದ ದೇವಸ್ತೋತ್ರದ ಕಾಲವಾಯಿತೆಂದು ನಾರಿಯರೆಲ್ಲ ಜಿನವಾಸಕ್ಕೆ ತೆರಳಿದರು. ದೇಶಾಧಿಪತಿ ಮಾತ್ರ ಅಧ್ಯಯನ ಶಾಲೆಯಲ್ಲೆ ಇದ್ದನು.

## ೧೮

# ಪರ್ವಯೋಗ

ಕಾಮಿನಿಯರು ಜಿನಗೃಹಕ್ಕೆ ನಡೆದರು. ಭರತಚಕ್ರವರ್ತಿಯು ಅದೇ ಗೃಹದೊಳಗಿದ್ದು ನೇಮದ ಅರ್ಘ್ಯವನ್ನಿತ್ತು ಧ್ಯಾನಕ್ಕೆ ತೊಡಗಿದನು. ಅದೂ ಒಂದು ಮಹಿಮೆಯೆ. ಚಕ್ರವರ್ತಿ ಒಂದೊಂದು ದಿನ ಒಂದೊಂದು ರೀತಿಯಲ್ಲಿ ಯೋಗದಲ್ಲಿ ನಿಲ್ಲುವನು. ಒಂದು ದಿನ ಕಾಯೋತ್ಸರ್ಗದಲ್ಲಿ ನಿಲ್ಲುವನು. ಇನ್ನೊಂದು ದಿವಸ ಕುಳಿತಿರುವನು. ಇಚ್ಛೆ ಬಂದಂತೆ ಯೋಗ ಮಾಡುವನು. ಇಂದು ಮಾತ್ರ ಆ ನೃಪತಿಯು ಕುಳಿತಿದ್ದನು. ವಜ್ರದೇಹಿಯಾದ ಭರತನಿಗೆ ವಜ್ರವೀರಾಸನ ಕುಕ್ಕುಟಾಸನಗಳು ತೋರಲಿಲ್ಲ. ಅಂದು ಆ ವಜ್ರಸನ್ನಿಭನು ಪದ್ಮಾಸನದಲ್ಲಿ ವಜ್ರದಂತೆ ಅಲುಗದೆ ಕುಳಿತಿದ್ದನು.

ಧ್ಯಾನಸಾಧನದ ಪ್ರಾಣಪಾನಪೂರ್ವಿಯನ್ನು ಜೈನಮುನಿಗಳು ಓದುವಾಗ ಚಕ್ರವರ್ತಿಯು ಒಂದಿಷ್ಟು ಕೇಳಿದ್ದನು. ಆದರಿಂದಲೇ ಪವಮಾನಸಂಚಾರವನ್ನು ಬಗೆದನು. ಪತ್ತುವಾಯುಗಳು ನಿಂತಿರುವ ನೆಲೆಯನ್ನು ತನ್ನ ಕಾಯದಲ್ಲೇ ಅರಿತುಕೊಂಡು ಅವುಗಳನ್ನು ಒಂದೊಂದರಲ್ಲಿ ಒಂದೊಂದನ್ನು ಕೂಡಿಸಿದನು. ಮೂಲಾಧಾರದಿಂದ ಒಡ್ಯಾಣ ಬಂಧವನ್ನೂ ಜಾಲಂದ್ರಬಂಧವನ್ನೂ ಮಾಡಿ, ನೂಲನ್ನೇರಿಸುವಂತೆ, ಬ್ರಹ್ಮರಂಧ್ರಕ್ಕೆ ಗಾಳಿಯನ್ನೇರಿಸಿ ನಿಲ್ಲಿಸಿದನು. ಕುಂಡಲಿಯನ್ನು ವಾಯುವಿನಿಂದ ಇರಿದಾಗ ಪುಷ್ಪಕಾಂಡನ ಶಕ್ತಿ ತಗ್ಗುವುದು. ಗಾಳಿಯನ್ನು ಎದೆಗುಂಡಿಗೆಯಲ್ಲಿ ನಿಲ್ಲಿಸಿದಾಗ ಕಂಡ ಕಡೆಗೆ ನಡೆವ ಚಿತ್ತವು ಸ್ಥಿರವಾಗಿ ನಿಲ್ಲುವುದು. ಕೊರಳಿಗೆ ಗಾಳಿಯೇರಿ ನಿಂತಾಗ ನಿದ್ರೆಯು ನಿಲ್ಲದೆ ಓಡುವುದು. ಅದೇ ಗಾಳಿಯು ಹಣೆಯ ಮಧ್ಯದಲ್ಲಿ ನಿಂತಾಗ ಜಡವು ಜಾರಿಹೋಗುವುದು. ಗಾಳಿಯನ್ನು ನೆತ್ತಿಗೇರಿಸಿದಾಗ ಮೈಯೊಳಗಿನ ಕತ್ತಲೆಯಲ್ಲ ನಾಶವಾಗಿ ಪ್ರಕಾಶವು ತೋರುವುದು.

ಪವನಾಭ್ಯಾಸದ ಉತ್ತುಂಗಗುಣಗಳು ಅಷ್ಟಿಷ್ಟಲ್ಲ. ಹಿರಿದಾದ ಹಸಿವು ತೃಷೆಗಳು ಅಲ್ಪವಾಗಿ ಪರಿಣಮಿಸುವುವು. ರೋಗವೆಲ್ಲ ಸರಿದು ಹೋಗುವುದು. ವಿಷವನ್ನು ಉಂಡು ದಕ್ಕಿಸಿಕೊಳ್ಳಬಹುದು. ಆ ರಾಜಯೋಗಿಯು ಪವನ ಸಂಚಾರವನ್ನು ತಡೆದು ಕಣ್ಣುಗಳನ್ನು ಅರೆಮುಚ್ಚಿ ; ನಾಸಿಕಾಗ್ರದಲ್ಲಿ ಧವಲ ಬಿಂದುವನ್ನು ಕಂಡನು. ಆಗಲೇ ವಿಶೋಧವು ಸಂಭವಿಸಿತು. ಆ ಮೇಲೆ ಆ ಕುಲರತ್ನನಾದ ಭರತೇಶನು ಕಣ್ಣುಗಳನ್ನು ಚೆನ್ನಾಗಿ ಮುಚ್ಚಿಕೊಂಡು ತನ್ನ ಮೈಯಲ್ಲಿ ದಳಗಳನ್ನು ಹಬ್ಬಿಸಿ ಸಾಲಾಗಿರುವ ಆರು ಕಮಲಗಳನ್ನು

ಕಂಡನು. ಹಣೆಯಲ್ಲಿ, ಕೊರಳಲ್ಲಿ, ಎದೆಯಲ್ಲಿ, ನಾಭಿಯಲ್ಲಿ, ಲಿಂಗದಲ್ಲಿ, ಮೂಲಾಧಾರದಲ್ಲಿ; ಹೀಗೆ ಆರು ಎಡೆಗಳಲ್ಲಿ ಆರು ತಾವರೆಗಳು. ಈ ಆರು ಕಮಲಗಳಿಗೆ ಕ್ರಮವಾಗಿ ಎರಡು, ಹದಿನಾರು, ಹನ್ನೆರಡು,ಹತ್ತು, ಆರು ಮತ್ತು ನಾಲ್ಕು ಎಸಳುಗಳಿವೆ. ಈ ಆರು ಪದ್ಮಗಳ ಎಸಳುಗಳು ಐವತ್ತರಲ್ಲಿ ಕ್ರಮವಾಗಿ ಐವತ್ತು ಅಕ್ಷರಗಳು ತೋರಿದವು. ಆ ಅಕ್ಷರಗಳನ್ನು ರಾಜಯೋಗಿಯು, ಬೇರೆ ಬೇರೆಯಾಗಿ ಅಲ್ಲಲ್ಲಿ ಸ್ಥಾಪಿಸಿ ಕಣ್ಣಿಟ್ಟು ಧ್ಯಾನಿಸಿದನು. ಹೇಮವರ್ಣನಾದ ಆ ರಾಜಯೋಗಿಯು ಕಮಲಷಟ್ಕದ ಕರ್ಣಿಕೆಗಳಲ್ಲಿ 'ಅರ್ಹಂ' ಕಾರ 'ಓಂ' ಕಾರಗಳನ್ನು ನಿರ್ಣಯವಾಗಿ ನೆಲೆಗೊಳಿಸಿ ಪೂರ್ಣವಸ್ತುಗಳನ್ನು ಧ್ಯಾನಿಸಿದನು. ಭರತನೃಪನು ಭುಜ, ಪಾದ, ಮಸ್ತಕ ಮೊದಲಾದ ಮೈಯೆಂಬ ಭುಜಪತ್ರ ಯಂತ್ರದಲ್ಲಿ ಅಚಿತ ಮಂತ್ರಗಳನ್ನು ಬರೆದು ತುಂಬಿಸಿ, ಆತ್ಮದೃಷ್ಟಿಯಿಂದ ಭಜಿಸಿದನು. ತಾವರೆಗಳಲ್ಲಿ ನಿಂತಿರುವ ಅಮೃತದ ಹನಿಗಳೋ ಮುತ್ತುಗಳೋ ತನಿಬೆಳಕಿನ ಬೀಜರಾಶಿಯೋ ಎಂಬಂತೆ ಭರತೇಶನಿಗೆ ಅಕ್ಷರಗಳು ತೋರುತ್ತಿದ್ದವು. ಹಾಗೆ ತೋರುತ್ತಿದ್ದ ಅಕ್ಷರಾವಳಿಯ ಅಭ್ಯಾಸವನ್ನು ನಿಲ್ಲಿಸಿ ಪುರುಜಿನನನ್ನು ನೋಡಿದನು. ಆಗ ಅವನಿಗೆ ಸಮವಸರಣಾಭೂಮಿ ಸನ್ನಿಧಿಯಾಗಿ ಪುರುಜಿನ ದೇವನ ಸಾಕ್ಷಾತ್ಕಾರವಾಯಿತು. ಪರಮ ಔದಾರ್ಯದ ದಿವ್ಯದೇಹ ಪ್ರಭೆ! ಸುರರ ಸಮೂಹ! ದಿವ್ಯವಾದ ಗಾನ! ಇವೆಲ್ಲವುಗಳಿಂದ ಕೂಡಿ ಕೈಲಾಸದಲ್ಲಿ ಶೋಭಿಸುವ ಆದಿ ಜಿನನನ್ನು ಭರತೇಶ್ವರನು ಆತ್ಮ ದೃಷ್ಟಿಯಿಂದ ಕಂಡನು. ಕಂಡವನೇ ಪೂಜೆಯನ್ನು ಮಾಡಿ ಜಿನದೇವನನ್ನು ಬೀಳ್ಕೊಂಡನು. ಅನಂತರ ತನ್ನ ನೆನಪನ್ನು ಸಿದ್ಧರ ಭೂಮಿಯಲ್ಲಿಟ್ಟನು. ಅಲ್ಲಿನ ಗಾಳಿಯೂ ಸೋಂಕದೆ ನಿಂತಿರುವ ಆ ಸಿದ್ಧರನ್ನು ಶುದ್ಧಭಾವದಿಂದ ಒಲಿದು ಭಾವಿಸಿದನು. ಬಚ್ಚಬರಿಯ ಜ್ಞಾನದರ್ಶನವೇ ಮೈಯಾಗಿ, ಯಾವ ರೀತಿಯ ಮೋಹವೂ ಇಲ್ಲದೆ, ನಿತ್ಯವೂ ಸುಖದಲ್ಲೇ ಓಲಾಡುತ್ತಿರುವ ಸಿದ್ಧರನ್ನು ಮೆಚ್ಚಿ ಮೆಚ್ಚಿ ಧ್ಯಾನಿಸಿದನು.

ಆ ಸುಕೃತಾತ್ಮನು ಸಿದ್ಧರನ್ನೂ ಬೀಳ್ಕೊಂಡು, ಧ್ಯಾನದ ಅಭ್ಯಾಸಗಳನ್ನು ನಿಲ್ಲಿಸಿ, ಭಾಸುರವಾದ ಭಕ್ತಿಗೆ ಮನಸ್ಸಿಟ್ಟನು. ವಾಯು ಇಂದ್ರಿಯ ಮನಸ್ಸುಗಳನ್ನು ಅಡಗಿಸಿ, ಮೈಯೆಂಬ ಜಿನಗೃಹದಲ್ಲಿ ಕೂಡಲೆ ಪರಮಾತ್ಮನನ್ನು ಕಂಡನು. ಅದೂ ಕೈಯೊಳಗಿನ ಕನ್ನಡಿಯಲ್ಲಿ ಕಾಣುವಂತೆ. ಆಗ ಬೆಳಕೇ ರೂಪವಾಗಿರುವ, ಸುಜ್ಞಾನವೇ ರೂಪವಾಗಿರುವ, ದರ್ಶನಶಕ್ತಿಯೇ ರೂಪವಾಗಿರುವ ಸುಖವಾದ ತ್ರಿಭುವನ ಶೃಂಗಾರ ರೂಪನನ್ನು ಸೊಬಗನಾದ ಭರತ ಚಕ್ರೇಶ್ವರನು ಕಂಡನು.

ಒಳಗಿದ್ದು ಹೊರಗನ್ನು ಅರಿತು ನೋಡದವರ ಕಣ್ಣುಗಳಿಗೆ ಒಳಗಾಗದ ಅಧಿಕ ದೈವವನ್ನು ಅಳತೆಗೆ, ತೂಕಕ್ಕೆ, ಲೆಕ್ಕಕ್ಕೆ ಬಾರದಂತಹ ಮಹತ್ವದ ವಸ್ತುವನ್ನು ಕಂಡನು. ಕೊಡದೊಳಗೆ ಆಕಾಶವಿರುವಂತೆ, ಮೈಯೊಳಗೆ ಅಡಗಿರುವ ಬಯಲ ರೂಪವನ್ನು ನಡುನೆತ್ತಿಯಿಂದ ಅಡಿಯವರೆಗೂ ನೋಡಿದನು. ಆ ನೋಟ, ತತ್ವಗಳ ಕೊನೆಯನ್ನು ಕಂಡಂತಿತ್ತು! ಧ್ಯಾನಿಸುವಾತನೂ ಧ್ಯಾನಕ್ಕೆ ಗುರಿಯಾದ ವಸ್ತುವೂ ಒಂದೆಂಬ ಹರಿಹಂಚಿನ ಆಟವನ್ನು ಮರೆತು, ರಾಜನು ತನ್ನೊಳಗೆ ತಾನೇ ಏಕಕವಾಗಿದ್ದನು. ಆಗ ಅವನ ತನುಮಿಸುಕದು; ಮನವೂ ಮಿಸುಕದು. ಅವನಿಗೆ ಬೇರೆ ಯಾವುದರ ನೆನಪೂ ಇರಲಿಲ್ಲ.

ಸಿದ್ಧರ ತನುವನ್ನು ಗಾಳಿ ಸೋಂಕದಿರುವಂತೆ ರಾಜನು ತನ್ನನ್ನೇ ಕೂಡಿ ದೇಹವನ್ನು ಸೋಂಕಿಯೂ ಸೋಂಕದಂತೆ ಇದ್ದನು. ಒಮ್ಮೊಮ್ಮೆ ಕಾರ್ಮುಗಿಲು ಚಂದ್ರನನ್ನು ಕವಿದಂತೆ, ಅಂಧಕಾರವು ಒಮ್ಮೊಮ್ಮೆ ಕವಿದು ಬರುವುದು; ಮತ್ತೆ ಸರಿದು ಹೋಗುವುದು. ಕೂಡಲೇ ಹಂಸನ ಪ್ರತಿಭೆಯು ಕಾಣುವುದು. ಅದೂ ಕೂಡ ಮಾಸಿ ಹೋಗುವುದು; ಮತ್ತೆ ಹೊಳೆಯುವುದು. ಇದೆಲ್ಲ ಕನಸಿನಂತೆ ; ಅರೆನಿದ್ರೆಯಂತೆ ; ಪ್ರಭೆ ತೋರಿದಾಗ ಬ್ರಹ್ಮಾನಂದವಾಗುವುದು. ಆ ಪ್ರಭೆ ಮಾಸಿದೊಡನೆ ನೋವಾಗುವುದು. ಭರತೇಶನಾಗ ಅಭಯವಾದ ಮುಕ್ತಿಯ ಸುಖವನ್ನೂ ಸಭಯವಾದ ಸಂಸಾರ ದುಃಖವನ್ನೂ ಪರಿಕ್ಷೀಸುತ್ತಿದ್ದನು. ಆತ್ಮನು ಸುತ್ತಲೂ ಪ್ರಭೆಯಾಗಿ, ಸುಖವಾಗಿ, ಸುಜ್ಞಾನವಾಗಿ, ಜ್ಯೋತಿಯ ಗೊಂಬೆಯಂತೆ ಚಿತ್ತದಲ್ಲಿ ಮೈತುಂಬಿ ತೋರುವನು. ಬಯಲನ್ನು ನೋಡುವಂತೆ ಭಾವದಲ್ಲೇ ರಾಜಯೋಗಿಯು ನೋಡುತಿದ್ದನು. ಬಯಲನ್ನು ಅಪ್ಪುವಂತೆ ಅಪ್ಪಿಕೊಳ್ಳುವನು. ಬಯಲಲ್ಲಿ ಚಿತ್ರವನ್ನು ಬರೆಯುವಂತೆ ಬರೆದು ಚಿನ್ಮಯಗೆ ಅವಯವ ಶೋಭೆಯನ್ನು ಮಾಡುತಿದ್ದನು. ಬಯಲಲ್ಲಿ ಮುಳುಗುವಂತೆ ಮುಳುಗಿ ನಿಲ್ಲುವಂತೆ ನಿಂತು, ಬಯಲಿನ ಹಾಲ ತೊರೆಯನ್ನು ಹೀರುವಂತೆ ಹೀರಿ, ಯಾವ ಬಯಕೆಯೂ ಇಲ್ಲದೆ ತಣಿದಿರುವನು. ಆತ್ಮನಿಗೆ ಪ್ರಥಮ ಪ್ರಕಾಶವುಂಟು; ಆದರೆ ಉಷ್ಣವಿಲ್ಲ. ಆಗ ಕರ್ಮವು ಜಾರಿ ಹೋಗುತ್ತಿತ್ತು, ಉರಿಯಿಲ್ಲದ ಅಗ್ನಿಯು ಕರ್ಮವನ್ನು ಸುಡುತ್ತಿತ್ತು, ಇದೇನು ಆಶ್ಚರ್ಯವು ಎಂದು ಒಳಗೊಳಗೇ ನೋಡುವನು.

ಆಕಾಶದಲ್ಲಿ ಬಹುವರ್ಣದ ಮುಗಿಲ ಜೊಲ್ಲೆಗಳು ಜೋಲಾಡುವಂತೆ ಬೆನ್ನಬಿಟ್ಟು ಕರ್ಮವು ಕದಲುತಿತ್ತು, ಹೊಗೆಯಂತೆ, ಮಸಿಯನ್ನು ಕದಡಿ ಮೀಯಲು ಎರೆವಂತೆ ಪಾಪರಜಸ್ಸು ಜಾರುತ್ತಿದೆ. ರಕ್ತವನ್ನು ಮೊಗೆದು ಎರೆದಂತೆ, ಅರಸಿನದಂತೆ ಪುಣ್ಯವು ಇಳಿದು ಬರುವುದು.ನೀರು ಬೆಟ್ಟವನ್ನು ಕೊರೆಯುವಂತೆ ಭರತೇಶ್ವರನ ಧ್ಯಾನವಾರಿಯು ಕರ್ಮಗಿರಿಯನ್ನು ಕೊರೆಕೊರೆದು ಹರಿಯುತ್ತಿತ್ತು ಹಂಸತತ್ವಾರಾಧನೆಗೆ ಎಣೆಯುಂಟೆ?

ಆತ್ಮನನ್ನು ತನ್ನೊಳಗೇ ನೋಡುತ್ತಿದ್ದಾಗ ಗರುಡನನ್ನು ಕಂಡಾಗ ಸರ್ಪದ ವಿಷವಳಿದಂತೆ, ಕರ್ಮವು ಇಳಿಯುವುದು. ಸುಖಸುಜ್ಞಾನ ಕಾಂತಿಗಳು ಬೆಳೆಯುವುದು. ಎಷ್ಟೆಷ್ಟು ನೋಡಿದರೆ ಅಷ್ಟಷ್ಟು ಕರ್ಮ ನಷ್ಟವಾಗುವುದು. ಹೀಗೆ ನೋಡುತ್ತಿರುವಾಗ ಒಮ್ಮೊಮ್ಮೆ ಮಾಸಿದಂತಾಗುವುದು. ಗಾಳಿಯಿಂದಲೇ ಜಲದಲ್ಲಿ ತೆರೆಗಳೇಳುವಂತೆ, ಚಿತ್ತದಲ್ಲಿ ಒಮ್ಮೊಮ್ಮೆ ವಿಕಲ್ಪ ಮೂಡುವುದುಂಟು.

ಭರತ ಚಕ್ರೇಶ್ವರನು 'ನಾನು, ಶರೀರ, ಕರ್ಮ'ಗಳೆಂದು ಬೇರೆ ಬೇರೆಯಾಗಿ ನೆನೆಯುವನು. ಒಮ್ಮೆ ನಾನೆಂಬುದನ್ನು ಮರೆತು, ಪರಮಾನಂದದಲ್ಲಿ ಸಿದ್ಧರಂತೆ ನಿಲ್ಲುವನು. ಧ್ಯಾನದಲ್ಲಿ ಆತ್ಮನನ್ನು ನೋಡುವಾಗಲೇ ಕರ್ಮವು ನಾಶವಾಗುವುದನ್ನೂ ಕಾಣುವನು. ಈ ಅದ್ಭುತ ವಿದ್ಯೆಯನ್ನು ತನ್ನಲ್ಲಿಯೇ ಮೆಚ್ಚುವನು.

'ಪರಮ ಗುರುವೆ ! ಪರಮಾರಾಧ್ಯ !ಜಯಜಯ ಗುರುಹಂಸನಾಥ' ಎಂದೊಮ್ಮೆ ಸ್ಮರಿಸಿದರೆ, ಮತ್ತವನೆ ಎಲ್ಲವನ್ನೂ ಮರೆತು ವೈರಾಗ್ಯಕ್ಕೆ ನಿಲ್ಲುವನು. 'ಶ್ರೀ ನಿರಂಜನ ಸಿದ್ಧ, ಸಿದ್ಧಾಂತಸಾರ, ನಿತ್ಯಾನಂದ ಜಯ ಜಯ' ಎಂದು ತಾನಲ್ಲದೆ ಅನ್ಯರು ಅರಿಯದಂತೆ

ನುತಿಸಿ, ಮತ್ತೆ ಆ ನೆನಪಿನಲ್ಲೇ ಇರುವನು. ಬೆಳಕಿನ ಒಂದು ಪುರುಷರೂಪವನ್ನು ತಿದ್ದಿ, ನುಣ್ಬೆಳಕಿನಲ್ಲಿ ಅದಕ್ಕೆ ಒಪ್ಪವಿಟ್ಟು' ಬೆಳಕಿನಲ್ಲಿ ಹೊಳೆದಂತೆ ಪರಮಾತ್ಮನು ಎದೆಯೊಳಗೆ ಆಗಾಗ ಬೆಳಗುತ್ತಿದ್ದನು. ಕಂಡು ಕೇಳಿ ತಿಳಿಯದ ಒಂದು ಅಚ್ಚ ಬೆಳ್ದಿಂಗಳ ಮುದ್ದೆಯೊಳಗೆ ಹುಡುಕಿ ತಿಳಿದ ಒಂದು ಬೊಂಬೆಯಂತೆ ರಾಯನು ತನ್ನಲ್ಲೇ ತನ್ನನ್ನು ಕಂಡನು. ಸೂರ್ಯ–ಚಂದ್ರರ ಗೋಷ್ಠಿಯಲ್ಲಿ ಕುಳಿತಂತೆ, ಜಿನೇಂದ್ರ ಸಂಪದ ಸಾರಿದಂತೆ, ಸಿದ್ಧರಲ್ಲಿ ಐಕ್ಯವಾದಂತೆ; ರಾಜಯೋಗಿಯಾದ ಭರತೇಶ್ವರನು ಧ್ಯಾನದಲ್ಲಿದ್ದನು. ಆಗ ಪಂಚೇಂದ್ರಿಯಗಳ ಸೋಂಕಿಲ್ಲದೆ ಅವನು ಅತೀಂದ್ರಿಯ ಸುಖದಲ್ಲಿದ್ದನು.

ರಾಜನು ಆಗಾಗ್ಗೆ ಆನಂದವೆಂಬ ಸಾಗರವನ್ನೇ ಒಂದು ಕುಡ್ತೆಯಾಗಿ ಮಾಡಿ ಸೇವಿಸುತ್ತಿದ್ದನು. ಅವನು ಕುಡಿದಂತೆ ಆ ಕಡಲು ಹೆಚ್ಚಿ ಹೆಚ್ಚಿ ಬಲ್ಗಡಲಾಗುತ್ತಿದೆ. ಆನಂದವೆಂಬುದು ತೆರೆಗಳಿಲ್ಲದ ಕಡಲು. ಅದು ನೊರೆನೀರುಗಳೂ ಇಲ್ಲದ ಕಡಲು. ಅದು ಧರೆಯ ಸಮುದ್ರದಂತೆ ಅಲ್ಲ. ಶುದ್ಧಾತ್ಮನಲ್ಲಿ ಎರವಿಲ್ಲದೆ ಇರುವುದು. ಆ ಆನಂದ ವಾರ್ಧಿಯು ಧ್ಯಾನಿಗಲ್ಲದೆ ಮತ್ತಾರ್ಗಿಗೂ ತೋರದು. ಆತ್ಮಸುಖವನ್ನೂ ಭೋಗಿಸಬಹುದು; ಇಂತಿರುವುದೆಂದು ಲೋಕದ ಜನರಿಗೆ ತಿಳಿಸುವುದು ಮಾತ್ರ ಅಸಾಧ್ಯ.

ಭರತ ಚಕ್ರಿಯು, ತನ್ನಲ್ಲಿ ತನ್ನನ್ನೇ ತಾನಾಗಿ ನಿಲ್ಲಿಸಿ ತಾನೇ ತನ್ನನ್ನು ನೋಡುತ್ತಿದ್ದನು. ಆಗ ತನ್ನಲ್ಲಿಯೇ ಹುಟ್ಟಿದ ಸುಖವನ್ನು ಅನುಭವಿಸುತ್ತಿದ್ದ ವೈಭವದಲ್ಲಿದ್ದನು ! ಅವನು ಕುದುರೆಯಿಲ್ಲದೆ ವಿಹಾರ ಮಾಡುವನು; ಹಗ್ಗವಿಲ್ಲದೆ ಉಯ್ಯಾಲೆಯಲ್ಲಾಡುವನು. ನಲ್ಲಳಿಲ್ಲದೇ ರತಿಸುಖವನ್ನು ಸುಖಿಸುವನು. ಬಾಯಿಯ ಹಂಗಿಲ್ಲದೆ ಚಿದ್ಘನ್ನಾನ್ನವನ್ನು ಉಣ್ಣುವನು. ಕಾಯವಿಲ್ಲದೆ ರೂಪು ತೋರುವನು. ಶ್ರೀಯಿಲ್ಲದೆ ಅತಿ ಸಿರಿವಂತನಾಗಿ ರುವನು. ಇವನೆಂಥ ಮಾಯಗಾರನೊ! ಹೊರಗೆ ನೋಡುವವರ ಕಣ್ಣಿಗೆ ರಾಜನಂತಿರುವನು ; ಒಳಗೆ ಮಾತ್ರ ಮಹಾ ರಾಜಯೋಗಿಯಾಗಿರುವನು. ಸುರಿವ ನಿಜಾನಂದ ರಸದಿಂದ ಸುಖಗೊಂಡು ಜಿನನ ಅರಿಕೆಯ ಭೋಗಿಯಾಗಿರುವನು.

ಭರತನು ತನುವನ್ನು ಸಗ್ರಂಥದಲ್ಲಿರಿಸಿ ನಿರ್ವಾಣವನ್ನು ಆತ್ಮನೊಡನೆ ಕೂಡಿನೋಡಿ, ಅದರಿಂದುಂಟಾದ ಸುಖದಿಂದ ಬಿಮ್ಮನೆ ಇರುವನು. ಒಳಗುಂಟಾದ ಆನಂದ ಹೊರಸೂಸುವಂತೆ ಕಣ್ಣುಗಳಿಂದ ಆನಂದಭಾಷ್ಪವಿಳಿಯುತ್ತಿತ್ತು, ಆ ಹಂಸಕಳೆಯಲ್ಲಿ ತಲ್ಲೀನನಾಗಿದ್ದ ಭರತನ ಸರ್ವಾಂಗವೂ ಪುಳಕಗೊಂಡಿತ್ತು

ಭಿನ್ನ ಭಕ್ತಿಗಳಲ್ಲಿ ಸಾಧನೆ ಮಾಡಿದ ರಾಜನು ಅದನ್ನು ಬಿಟ್ಟು ನಿರ್ಭಿನ್ನ ಭಕ್ತಿಯನ್ನನುಸರಿಸಿ ಮೊದಲಿನ ಸುಖಗಳನ್ನೆಲ್ಲ ಮರೆತು, ಚಿದಂಗದಲ್ಲಿ ತನ್ಮಯನಾದನು. ಭೇದವಿಜ್ಞಾನವೆಂಬ ಉಳಿಯಿಂದ ದೇಹವನ್ನು ಭೇದಿಸಿ, ಆ ದೇಹಗೃಹದಲ್ಲಿ ಆತ್ಮನನ್ನು ನಿಲ್ಲಿಸಿ, ರಾಜಯೋಗಿಯು ಭಜಿಸುತ್ತಿದ್ದನು.

ಅತ್ತ ಚತುರ್ಮುಖ ಬಸದಿಗೆ ಹೆಣ್ಣುಗಳು ಉತ್ತಮ ಸ್ಥಿತಿಯಿಂದ ಜಿನನನ್ನು ಸ್ಮರಿಸುವುದಕ್ಕೆ ಅಣಿಯಾಗುವುದರೊಳಗೆ ಸೂರ್ಯನು ಉತ್ತರ ಕ್ಷಿತಿಗೆ ಲಂಘಿಸಿದನು. ಆ ಸಂಧ್ಯಾರಾಗವು ಇಂದುವದನೆಯರು ಹಾಡಿದ ಜಿನಭಕ್ತಿರಾಗದಂತೆ ಶೋಭಿಸಿತು. ಗಗನವೇ ಹೂವಾದಂತೆ ಮಿನುಗುವ ತಾವರೆಗಳು ಅಲ್ಲಲ್ಲಿ ತೋರಿದುವು.

ಸಮವಸರಣದಲ್ಲಿ ದಿವ್ಯನಾದವು ಸಂಭ್ರಮಿಸುವ ಕಾಲವು ಅದೆಂದು ನೆನೆದು ಕಮಲಮುಖಿಯರು ಪುರುಜಿನನ ಪಾದಕಮಲಗಳನ್ನು ನುತಿಸಿದರು. ವರ್ಣವನ್ನೂ ಸ್ವರವನ್ನೂ ಪ್ರಸಾರ ಮಾಡಿದಂತೆ ಅವರು ವರ್ಣವರ್ಣಿಕೆಗಳಲ್ಲಿ ಕುಳಿತು ಸಣ್ಣ ದನಿಯು ಶೋಭಿಸುವಂತೆ ಪ್ರೀತಿಯಿಂದ ಪುರುಜಿನನನ್ನು ವರ್ಣಿಸಿದರು. ಅದು ಆ ಬಸದಿಯನ್ನೇ ತುಂಬಿತು. ನೆಲಕ್ಕೆ ದಣಿಬವನ್ನು ಹಾಸಿ, ಅದರ ಮೇಲಿಟ್ಟ ಪಲ್ಯಂಕಾಸನದಲ್ಲಿ ಕುಳಿತು, ಮಾಸದ ಮನಸ್ಸಿನಿಂದ, ಮುಗಿದ ಕೈಗಳಿಂದ ಪ್ರಕಾಶವಾದ ಸ್ತುತಿಯನ್ನು ಮಾಡಿದರು. ಆಗ ಅವರು ಶಾಂತಭಾವದಲ್ಲಿ ಆಲಸ್ಯವಿಲ್ಲದೆ ಪರಿಸಂತೋಷದಲ್ಲಿದ್ದರು.

ಆ ವಂದನಾಷ್ಟಕವು ಹೇಗಿದೆ :

ಜನ್ಮ ಜರಾಮೃತ ಜಯ ಜಯ
ಸನ್ಮತಿ ಸರಸಿಜ ಭಾನು ।
ಮನ್ಮಥಪಿತ ಜಯ ಮನ್ಮಥ ಜಿತ ಜಯ
ಜಿನ್ಮಯ ಪ್ರಥಮ ಜಿನೇಶಾ ॥

ವಾಗ್ವನಿತಾಧೀಶ ಜಯಜಯ ದಶವಿಧ
ದಿಗ್ವರಾರ್ಚಿತ ಪಾದಪದ್ಮಾ ।
ಪ್ರಾಗ್ವಿರಂಚಿಯೆ ಜಯ ಪರಮಸುಜ್ಞಾನ ಸು
ದೃಗ್ವಪುವಾದಿ ಜಿನೇಶಾ ॥

ಸತ್ಯಪತಾಕ ಸದಾನಂದ ಸಂಗಾರಾ
ಹಿತ್ಯ ಸದ್ಬೋಧ ಸಾಹಿತ್ಯಾ ।
ನಿತ್ಯನಿರಾಲಂಬ ಜಯ ತ್ರಿಭುವನ ಜನ
ಸುತ್ತ್ಯ ತ್ರಿಲೋಕ್ಯೈಕದೀಪಾ

ಡಿಂಡೀರ ಪಿಂಡ ಪಾಂಡುರನಾಭ ಕೀರ್ತಿಕ
ರಂಡಾಯಮಾನ ತ್ರಿಭುವನಾ
ಚಂಡಾಂಶು ಪುಂಡರೀಕಾರಾಶಿಕೋಟಿರು
ಜ್ಞಾ ಮಂಡನ ರೂಪ ನಿಷ್ಪಾಪಾ

ದುಂದುಭಿ ಮಂಡಲೋದ್ದಂಡ ಜಿಹ್ವಾಸ್ತುತಿ
ಡಿಂಡಿಮ ಮಂಡಿತಾಸ್ಥಾನಾ
ದಂಡುಮಿ ಕೃತ ಸುರಪದಪ ಕಂಕೇಲಿ ಭೂ
ಮಂಡಲ ವಿಭವ ಸನಾಥಾ

ತುಂಗ ತರಂಗ ಗಂಗಾಂಗಸಂಗಶ್ಯೈತ್ಯ
ಭಂಗುರೀಕೃತವಾಕ್ಯ ಸಂಗಾ
ಅಂಗಾಂಗ ಬಾಹ್ಯಕೃತೇಂಗಿತ ಶಾಸ್ತ್ರಜ್ಞ
ಸಾಂಗಿಕ ಸ್ತುತಿನ್ಯೈಭವಾಢ್ಯಾ

ನಿರ್ಲೇಪ ನಿರ್ಜರೇಶ್ವರ ಶಿರೋರತ್ನ ರೋ
ಚಿರ್ಲಾಲ ತಾಂಘ್ರಿಪಯೋಜಾ
ಅರ್ಲೇಸುಮಾಳ್ವರ ನುತಿಸರು ಸ್ವಾಮಿ ವ
ಪುರ್ಲೋಪದಮೃತ ದಾತಾರಾ

ವೃಷಭಲಾಂಛನ ವೃಷಭಾಂಕ ವೃಷಭಕೇತು
ವೃಷಭ ಮುಖಾಖ್ಯಯಕ್ಷೇಶಾ
ವೃಷಭ ತೀರ್ಥಂಕರ ವೃಷಭ ಜಿನೇಶ್ವರ
ವೃಷಭ ನಾಯಕ ವೃಷಭೇಶಾ

ಹೀಗೆ ಕಮಲಮುಖಿಯರು ಅರುಹನ ಆಲಯದಲ್ಲಿ ಹಾಡುತ್ತಿದ್ದರು.

ಅತ್ತ ಹೆಣ್ಣುಗಳು ಬಸದಿಗೆ ಹೋದಾಗ ನೃಪತಿಯು ಏಕಾಂಗಿಯಾಗಿ ಆ ಗೇಹದಲ್ಲೇ ಕಣ್ಣುಮುಚ್ಚಿ ಧ್ಯಾನದಲ್ಲಿದ್ದನು. ಆಗ ಹೊರಗಡೆಯಲ್ಲಿ ವನದೇವಿ, ಪುರದೇವಿ, ಜಲದೇವಿ ಜೈನಶಾಸನದೇವಿ– ಎಂದು ಮುಂತಾದ ದೈವ ವರ್ಗವು ಮನುವಂಶ ತಿಲಕನಾದ ಭರತೇಶ್ವರನ ಯೋಗವನ್ನು ಕಂಡು ಆಶ್ಚರ್ಯದಿಂದ ಮೂಗಿನ ಮೇಲೆ ಬೆರಳಿಟ್ಟು ನೋಡುತಿದ್ದವು. ಅಲ್ಲಿದ್ದ ವ್ಯಂತರ ದೇವತೆಗಳು ಅರಸನನ್ನು ತಲೆಯಿಂದ ಪಾದದವರೆಗೆ ನೋಡುವುವು. ಚಲಿಸದ ಅವನ ಧ್ಯಾನವನ್ನು ಕಂಡು ತಲೆದೂಗುವುವು; ಕೈಮುಗಿಯುವುವು; ಅವನನ್ನು ಪೂಜಿಸುವುವು. ಅಲ್ಲಿದ್ದ ಉತ್ತಮ ದೇವತೆಗಳೆಲ್ಲ ಆತ್ಮಾರಾಮನಾದ ಅರಸನಿಗೆ ಚಾಮರ ಬೀಸಿ, ಹೂಮಳೆಗರೆದು ಪ್ರೇಮದಾರತಿಯೆತ್ತುವುವು. ಅವುಗಳೆಲ್ಲ ನೃಪತಿಯನ್ನು ಮೆಲ್ಲಮೆಲ್ಲನೆ ಸ್ತುತಿಸುವುವು. ರಾಣಿಯರು ಬರುವ ದಾರಿಯಲ್ಲೆ ನಿಂತಿರುವುವು. ಅವನ ಮೈಮುಟ್ಟದೆ ನಿಂತುಕೊಂಡು ಓಲೈಸುವುವು. ಈ ರೀತಿಯಲ್ಲಿ ನವರತ್ನವೆಂಬ ದೇಗುಲದಲ್ಲಿ ಮಾನವ ಪತಿಯು ದೇವನಂತೆ ಇದ್ದನು. ಅವನನ್ನು ವಿವಿಧ ದೇವತೆಗಳು ಓಲೈಸುತಿದ್ದುವು.

ಅತ್ತ ಬಸದಿಯಲ್ಲಿ ಒಂದು ಜಾವದ ವರೆಗಿದ್ದ ರಾಣಿಯರು ವೃದ್ಧನಾದ ಇಂದ್ರನು ಪೂಜಿಸಿದ ಪೂಜೆಯನ್ನು ನೋಡಿ ಸೇಸೆಯನ್ನು ತಳೆದು ಬದ್ಧಾಂಜಲಿ ಮಾಡಿ ಹೊರಟರು. ಅವರು ಜಿನನನ್ನು ಬೀಳ್ಕೊಂಡು ಲೋಕೋದ್ಧಾರಕನಾದ ಭರತೇಶನಲ್ಲಿಗೆ ನಡೆದರು. ಅವರಿಗೀಗ ಅಂದುಗೆಯ ಭೂಷಣವಿಲ್ಲ; ಸೇವಕಿಯರ ವೃಂದವೂ ಇಲ್ಲ. ಈ ಸತಿಯರು ಬರುವುದನ್ನು ಕಂಡ ದೇವತೆಗಳೆಲ್ಲ ಬಯಲಾದುವು. ದೇವತೆಗಳಿಂದ ಪೂಜೆಗೊಂಡ ಅರಸನೀಗ ಮರ್ತ್ಯಸತಿಯರ ಪೂಜೆಗೆ ಇಂಬಾಗಿದ್ದನು. ಆ ಸತಿಯರು ಅರಸನನ್ನು ದೂರದಿಂದಲೆ ನೋಡಿದರು. ಅರಸನಾದರೋ, ಮೇರುಪುರುಷನಾಗಿ ಒಂದಿಷ್ಟೂ ಚಲಿಸದೆ ನಿಜಾತ್ಮನಲ್ಲಿ ನೆಲೆಸಿದ್ದನು. ರಾಜನು ಕುಳಿತಿದ್ದ ಬಂಗಾರದ ಕಾಲ್ಮಣೆಯ ಬಳಿಯಲ್ಲಿ ರತ್ನದ ಜಿನಸಿದ್ಧರ ಪ್ರತಿಮೆಗಳು ಸಾಲಾಗಿದ್ದುವು. ಭೃಂಗಾರ ಕಲಶ, ಕನ್ನಡಿ, ಚಾಮರ, ರತ್ನಾಂಗ ತೋರಣ ಮುಂತಾದ ಮಂಗಲವಸ್ತುಗಳು ಆ ಗೃಹದಲ್ಲಿದ್ದುವು. ನಿರ್ಮಲವಾದ ರತ್ನಗಳ ದೀಪ ಮಾಲೆಗಳು ರಾಜನ ಎಡಬಲಗಳಲ್ಲಿ ಸಾಲುಸಾಲಾಗಿ.ತೂಗಿಸಲ್ಪಟ್ಟಿದ್ದುವು. ಇಂತಹ ಭವ್ಯ ಮಂದಿರದಲ್ಲಿ ಭರತೇಶನಿರುವುದನ್ನು ಆ ಸತಿಯರು ದೂರದಿಂದಲೆ ನೋಡಿದರು; ಅವರು ಬೆಳಗಿನ ಲೋಕವನ್ನು ಹೊಗುವಂತೆ ಮಂಟಪದ ಒಳಗೆ ಹೋದರು. ಅಲ್ಲಿ ರತ್ನಯೋಗಿಯಾದ ಭರತೇಶನಿಗೆ ಮೂರು ಸುತ್ತು ಬಂದು ಕುಳಿತುಕೊಂಡರು.

'ಪ್ರಾರಬ್ಧಧ್ಯಾನಿಯಾದ ಈ ರಾಯನ ಹತ್ತಿರ ಗಲಭೆ ಸಲ್ಲದು; ಅದಲ್ಲದೆ ಇವನು ನಿಷ್ಪನ್ನಧ್ಯಾನಿ. ಅದ್ದರಿಂದ ಅಧ್ಯಾತ್ಮಗೋಷ್ಠಿಯನ್ನು ಮಾಡುವೆವು'—ಎಂದು ಆ ರಮಣಿಯರು ಎಣಿಸಿದರು.

ಅವರು ಮೊದಲು ಪರಮಾತ್ಮ ರತ್ನವರ್ಣನೆಯ ಶಾಸ್ತ್ರವನ್ನು ಓದಿದರು. ಅದು ಜಾರರ ಚೋರರ ಕಥೆಯಲ್ಲ. ಹಂಸತತ್ವದ ನೆಲೆಯನ್ನು ಕಂಡುಕಂಡು ಅವರು ಓದಿದರು. ಭರತೇಶ್ವರನು ಈ ಮೊದಲು ಅಧೀಶನ ಆಸ್ಥಾನದಲ್ಲಿ ಅರಿತ ಆತ್ಮ ಪ್ರಭಾವವನ್ನು ಲೋಕವೇ ತಿಳಿವಂತೆ ತಿಳಿಸಿದ್ದನು. ಅದನ್ನೇ ಅವರು ತಮಗಾಗಿಯೇ ಓದಿದಂತೆ ಓದಿದರು. ಕಲಿಯುಗದಲ್ಲಿ ಕುಂದಕುಂದಾಚಾರ್ಯರು ಹೇಳಿದ ಪ್ರಾಭೃತದಂತೆ ಭರತೇಶ್ವರನು ಕೃತಯುಗದಲ್ಲಿ ಹೇಳಿದ ಆತ್ಮಕಾಂಡವನ್ನೋದಿದರು. ಕಲಿಕಾಲದಲ್ಲಿ ಅಮೃತಚಂದ್ರಮ ಸೂರಿಯು ಹೇಳಿದ ಸಮಯ ಸಾರಾಂಶ ನಾಟಕದಂತೆ ಭೂರಮಣನು ಹೇಳಿದ ಪರಮಚಿತ್ಕಲೆಯನ್ನು ಓದಿದರು. ಯೋಗೀಂದ್ರಸ್ವಾಮಿ ಪ್ರಭಾಕರ ಭಟ್ಟಗಿಯು ಹೇಳಿದ ಕಥೆಯಂತೆ ಭರತೇಶ್ವರನು ಹೇಳಿದ ಅಗಮರಸವನ್ನೋದಿದರು. ಶ್ರೀ ಪದ್ಮನಂದಿಯ ನುಡಿಯಂತೆ ಸ್ವರೂಪ ಬೋಧನೆಯಂತೆ ಶ್ರೀ ಪೂಜ್ಯಪಾದ ಸಮಾಧಿ ಶತಕದಂತೆ ರೂಪಿತಾರ್ಥಗಳನ್ನೂ ಜ್ಞಾನಸಾಗರದಂತಿರುವ ಯೋಗರತ್ನಾಕರವನ್ನೂ ಆರಾಧನಾ ಸಾರಸಿದ್ಧಾಂತವನ್ನೂ ಅವರು ಓದಿದರು. ನೆಲೆಯನ್ನು ಕಾಣದ ಹಲವು ಶಾಸ್ತ್ರಗಳನ್ನೋದಿ ಕಂಠತ್ತ ತೊಳಲಬಾರದೆಂದು ರಾಜೇಂದ್ರನು ಕಲಿಸಿಕೊಟ್ಟ ಅಧ್ಯಾತ್ಮಸಾರವನ್ನೇ ಅವರು ಓದಿದರು.

ಈರೀತಿಯಲ್ಲಿ ಹಲವರು ಪುಸ್ತಕ ಹಿಡಿದು ಓದುತಿದ್ದರು. ಕೆಲವರು ವೀಣೆಗಳನ್ನು ಹಿಡಿದು ಸುಸ್ವರದಲ್ಲಿ ಪ್ರಾಭೃತಾರ್ಥವನ್ನು ಮೆಲ್ಲಮೆಲ್ಲನೆ ಹಾಡುತ್ತಿದ್ದರು. ಆಗ ಸಮರಾತ್ರಿಯಾಯಿತು. ದೇಸಿ, ರಾಮಶ್ರೀ, ಭೈರವಿ, ಕುರುಜಿಗೆ ಮುಂತಾದ ರಾಗಗಳಲ್ಲವರು ಹಾಡಿದರು. ಅವರೆಲ್ಲ ಉಪವಾಸ ಮಾಡಿದರಾದರೂ ಉಂಡವರಿ ಗಿಂತಲೂ ಚೆನ್ನಾಗಿ ಆಲಾಪ ಮಾಡಿದರು. ಒಂಟಿದಂಡಿಗೆಯಲ್ಲಿ ಹಲವು ದಂಡಿಗೆಯಲ್ಲಿ ಶ್ರುತಿ ಮುಟ್ಟಿ ಆ ಮಂಟಪವೆಲ್ಲ ನಾದ ಭರಿತವಾಗುವಂತೆ ಹಾಡಿದರು. ಚೆಂಡಿನಂತಿರುವ ಲಘು ಕಿನ್ನರಿಯ ಸ್ವರಮಂಡಲದಲ್ಲಿ ಶ್ರುತಿಗೂಡಿಸಿ ಗಂಡು ಕೋಗಿಲೆಯಂತೆಯೂ ಹೆಣ್ಣು ತುಂಬಿಯಂತೆಯೂ ಆತ್ಮರಾಗವನ್ನು ಹಿಂಡಿದರು. ರಾಯನು ಆನಂದಿಸುವಂತೆ, ಉಪವಾಸದ ಸ್ತ್ರೀಯರಿಗೆ ತಂಪಾಗುವಂತೆ ಅವರಲ್ಲಿ ಕೆಲವರು 'ಕಾಯ ಬೇರೆ ಆತ್ಮ ಬೇರೆ' ಎಂಬ ಕಲೆಯನ್ನು ನಿರಾಯಾಸವಾಗಿ ಹಾಡಿದರು. ಹಾಲಿನಂತೆ ಸಂಗೀತ. ಸಕ್ಕರೆಯಂತೆ ಅಧ್ಯಾತ್ಮ ಹಾಲು ಸಕ್ಕರೆ ಕೊಟ್ಟರೆ ಯಾರನ್ನು ಸೋಲಿಸಲಿಕ್ಕಿಲ್ಲ. ಹಾಗೆ ಹಾಡಿದರು ಅವರು.

ಹೀಗೆ ಕೆಲವರು ಸಾಹಿತ್ಯ ಸಂಗೀತದಲ್ಲಿ ಶ್ರೀ ಹಂಸನಾಥನನ್ನು ನುಡಿಸಿದರೆ ಮತ್ತೆ ಕೆಲವರು ಜಪದಲ್ಲಿ ಉತ್ಸಾಹಗೊಂಡಿದ್ದರು. ಕೆಲವರು ಇದಿರಲ್ಲಿ ಒಪ್ಪುವ ಜಿನಸಿದ್ಧ ಬಿಂಬವನ್ನು ನೋಡುತ್ತ , ಎಡೆವರೆಗೆ ಬಲಗೈಯನ್ನೆತ್ತಿ ತುದಿಬೆರಳಿಂದ ಜಪಸರವನ್ನು ನೂಂಕುತ್ತ ಪಂಚಪದವನ್ನು ಜಪಿಸಿದರು. ಕಣ್ಣಾಲಿಗಳನ್ನು ಅರೆಮುಚ್ಚಿ ನವರತ್ನ ಮಾಲೆಯನ್ನು ತಿರುಗಿಸುತ್ತ ಕೆಲವರು ಜಪಮಾಡಿದರು. ಕೆಲವರು ಪಂಚಮಂತ್ರವನ್ನು ಜಪಿಸಿದರೆ ಕೆಲವರು ಪ್ರಪಂಚವನ್ನೇ ಮರೆತಿದ್ದರು. ಇನ್ನೂ ಕೆಲವರು ಚಂಚಲಚಿತ್ತವನ್ನು ತಡೆದು ಧ್ಯಾನದ ಹಿಂದುಮುಂದಿನಲ್ಲಿ ಉದ್ಯುಕ್ತರಾದರು. ಕಣ್ಣುಮುಚ್ಚಿ ಮಿಸುಕದೆ ಕುಳಿತಿರುವ ಅವರು ಭಾವದಲ್ಲಿ ತಮ್ಮ ಹಣೆಯಲ್ಲಿರುವ ಅಕ್ಷರಗಳನ್ನು ಕಾಣುತಿದ್ದರು.

ಮತ್ತೊಮ್ಮೆ ತಮ್ಮ ಮೈಯೊಳಗೇ ತಮ್ಮ ಆತ್ಮನನ್ನು ನಸುಬೆಳಕಾಗಿ ಕಾಣುತಿದ್ದರು. ನೀರಜ ಸೋಂಕದ ಪುರುಜಿನನ ತೇಜೋರೂಪವನ್ನೂ ಮಾರುತ ಸೋಂಕದ ಸಿದ್ಧಗುಣವನ್ನೂ ಮನವಾರೆ ಧ್ಯಾನಿಸಿ ಕಾಣುತಿದ್ದರು. ಒಮ್ಮೆ ತೋರಿ ಮಾಯವಾಗುವ ಮಿಂಚಿನಂತೆ, ಅವರ ಧ್ಯಾನವೂ ಒಮ್ಮೆ ತೋರುವುದು ಮತ್ತೊಮ್ಮೆ ಮಾಯವಾಗುವುದು. ಕೆಲವರು ಓದಿ ಶಬ್ದಬ್ರಹ್ಮದಲ್ಲೂ ಗೀತವನ್ನು ಹಾಡಿ ಕೆಲವರು ನಾದ ಬ್ರಹ್ಮದಲ್ಲೂ ಇನ್ನೂ ಕೆಲವರು ಭೇದಭಾವನೆಯ ಯೋಗಬ್ರಹ್ಮದಲ್ಲೂ, ಆ ದಿವ್ಯ ರಾತ್ರಿಯನ್ನು ಕಳೆದರು.

ಈ ರೀತಿಯಲ್ಲಿ ನಾರಿಯರೆಲ್ಲ ಭರತೇಶನನ್ನು ಬಳಸಿ ಬ್ರಹ್ಮತ್ರಯ ಪೂಜೆ ಯಲ್ಲಿರುವಾಗ ಅವನು ಮಾತ್ರ ತನ್ನಾತ್ಮನಲ್ಲೇ ಅಡಗಿ ನಿಶ್ಚಲವಾದ ಪರಬ್ರಹ್ಮದಲ್ಲಿದ್ದನು. ಶುದ್ಧಾತ್ಮನಲ್ಲಿ ನಿಲ್ಲುವುದು ಶುದ್ಧೋಪಯೋಗ; ವಿಶುದ್ಧಿಗಾಗಿ ಹಲವನ್ನು ಚಿಂತಿಸುವುದು ವೃದ್ಧಿಪುಣ್ಯದ ಶುಭಯೋಗ. ಅವರೆಲ್ಲರಲ್ಲೂ ಈ ಎರಡು ರೀತಿಯ ಯೋಗಗಳೂ ಸಮೃದ್ಧವಾಗಿದ್ದುವು. ಇದರಿಂದ ಭೀಷಣವಾದ ಕರ್ಮವನ್ನು ಕೆಡಿಸುತ್ತ ಸಿದ್ಧಾಂತ ಘೋಷದಲ್ಲಿದ್ದರು.

ಈ ರೀತಿಯಲ್ಲಿ ರಾತ್ರಿ ಸಾಗಿತು. ಭರತೇಶ್ವರನು ಯೋಗದಲ್ಲೇ ಇದ್ದನು.

೧೯

# ಪಾರಣೆ

ತಂಗಾಳಿ ತೀಡಿತು. ತಾರಗೆಗಳು ಮಸುಳಿದುವು. ಜಗದ ಅಂಧಕಾರವು ಹಿಂಗಿತು. ಜಿನಗೃಹದೊಳಗೆ ಮುಂಗಾರು ಮೊಳಗಿದಂತೆ ವಾದ್ಯಗಳು ಮೊಳಗಿದುವು. 'ಆತ್ಮ ಯೋಗಿಯನ್ನು ನೋಡುವೆನು. ಪಾರಣೆಯನ್ನು ಮಾಡಿಸುವೆನು' ಎಂದು ರಥವನ್ನು ಓಡಿಸಿಕೊಂಡು ಬಂದನೋ ಎಂಬಂತೆ ರವಿಯು ಮೂಡಣ ಗಿರಿಯನ್ನೇರಿದನು. ಅವನ ಎಳೆ ಬಿಸಿಲು ಜಿನನಿಲಯದ ರತ್ನಕಳಸದೊಂದಿಗೆ ಮಾತಾಡುವುದನ್ನು ಕಂಡು ವನಿತೆಯರು ಭರತೇಶನಲ್ಲಿಗೆ ಹೋಗಿ 'ಬೆಳಗಾಯ್ತುದೇವ. ಕಣ್ಣುತೆರೆ' ಎಂದು ಬಿನ್ನವಿಸಿದರು.

ಶಾಂತಿ ಭಕ್ತಿಯನ್ನು ಅಂತರಂಗದಲ್ಲಿ ಮಾಡಿ ನಿಶ್ಚಿಂತ ಆತ್ಮಗುರುವನ್ನು ಬೀಳ್ಕೊಂಡು ಲೋಕದ ಸಂತೋಷವೇ ಕಣ್ಣು ತೆರೆಯುವಂತೆ ಭರತಚಕ್ರಿಯು ಶಾಂತ ದೃಷ್ಟಿಯಿಂದ ಕಣ್ಣುತೆರೆದನು. ಪಾದಕ್ಕೆರಗಿದ ಅಬಲೆಯರನ್ನು ಒಲಿದು ಆದರಿಸುತ್ತ ಎದ್ದು ಆ ದೇವಿಯರೊಂದಿಗೆ ಮೋರೆ ತೊಳೆದು ಕೂಡಲೆ ಜಿನಾಲಯಕ್ಕೆ ಹೋದನು. ಕ್ಷತ್ರಿಯ ಕರ್ಮದಂತೆ ದೇವತಾರ್ಘ್ಯವನ್ನಿತ್ತುಸ್ತೋತ್ರ, ಜಪಾದಿಗಳನ್ನು ಪ್ರೀತಿಯಿಂದ ಮಾಡಿ, ತನ್ನ ಚಾರಿತ್ರ ಶುದ್ಧಾಂಗಿಯರನ್ನೂ ಕೂಡಿಕೊಂಡು ಸುತ್ರಾಮನಂತೆ ಶ್ರೀಜಿನನನ್ನು ಪೂಜಿಸಿದನು. ಜಲಗಂಧ, ಅಕ್ಷತೆ, ಪುಷ್ಪ, ನೈವೇದ್ಯಗಳಿಂದಲೂ, ಪ್ರಜ್ವಲಿಸುವ ದೀಪ–ಧೂಪಾದಿಗಳಿಂದಲೂ, ಸತ್ಫಲಾದಿಗಳಿಂದಲೂ ಅರ್ಚನೆ ಮಾಡಿದನು. ಆಗ ಹೊರಗಡೆಯಲ್ಲಿ ಮಂಗಲವಾದ್ಯಗಳು ಮೊಳಗುತ್ತಿದ್ದುವು. ಸುರುಚಿತರವಾದ ಅರ್ಘ್ಯವನ್ನೆತ್ತಿ ಶಾಂತಿಧಾರೆಯನ್ನು ಮಾಡಿ, ಪುಷ್ಪವೃಷ್ಟಿಯನ್ನೂ, ರತ್ನವೃಷ್ಟಿಯನ್ನೂ ಮಾಡಿದನು. ಅಗ ಅಲ್ಲಿದ್ದವರೆಲ್ಲ ಜಯ ಜಯವೆನ್ನುತ್ತಿದ್ದರು. ಸುಂದರಿಯರೊಡನೆ ಸಿದ್ದಸೇಸೆಯನ್ನು ಪಡೆದನು. ಆಗ ಹೊರಗಿನ ವಾದ್ಯಘೋಷಗಳೂ ನಿಂತುವು. 'ನಿನ್ನೆಯ ವ್ರತವು ಸಂದುದು' ಎಂದು ಕಟ್ಟಿದ ಕಂಕಣವನ್ನು ಸಡಿಲಿಸಿ ದೇವನ ಮುಂದಿಟ್ಟನು. ಅನಂತರ ಸತಿಯರ ಕೈಯ ಕಂಕಣಗಳನ್ನೂ ಸಡಿಲಿಸಿ ಮತ್ತೆರಾಣಿಯರನ್ನೊಮ್ಮೆನೋಡಿದನು.

ರಾಣಿಯರಲ್ಲಿ ಹಲವರ ಮುಖ ತಳತಳಿಸುತ್ತಿದ್ದವು. ಕೆಲವರ ವದನ ಬಾಡಿದ್ದುವು. ಅವರನ್ನು ನೋಡಿದಾಗ ಇವರು ಪ್ರಥಮೋಪವಾಸದ ಹೆಣ್ಣುಗಳು ; ಮೊದಲು ಉಪವಾಸದ ಅಭ್ಯಾಸವುಳ್ಳವರು ಕಂದಲಿಲ್ಲ; ಇವರಿಂದು ಉಪವಾಸ ವ್ರತವನ್ನು ಕೈಕೊಂಡು ಕಂದಿದರು, ಎಂದು ಮನಸ್ಸಿನಲ್ಲಿಯೇ ನೆನೆದು ನೊಂದನು ಭರತೇಶ.

'ವನಿತೆಯರೇ, ಹೋಗಿ ಪಾರಣೆಗೆ; ಈಗ ಹೊತ್ತಾಯಿತು. ನೀವು ಅಮ್ಮಾಜಿಯರ ಅರಮನೆಗೆ ಹೋಗುವಾಗ ಹೆಚ್ಚು ಹೊತ್ತಾಗದೆ? ಹೊಸ ವ್ರತಿಕೆಯರೊಡನೆ ಕೂಡಿಕೊಂಡು ಪಾರಣೆಮಾಡಿರಿ. ಮೊತ್ತಮೊದಲು ಒಬ್ಬರು ಉಪವಾಸವನ್ನು ಮಾಡಿ ತುತ್ತಿಡುವಾಗ ಬಲ್ಲವರು ಬಳಿಯಲ್ಲಿದ್ದು ಪಾರಣೆ ಮಾಡಿಸಬೇಕು' ಎಂಬ ಮಾತಿನಲ್ಲಿ ಭರತೇಶನ ನೋವು ಹೊರಹೊಮ್ಮಿತ್ತು.

'ಆಗಲಿ, ಹಾಗೇ ಮಾಡುತ್ತೇವೆ. ಈ ಹೊಸ ವ್ರತಿಕೆಯರೊಂದಿಗೇ ಪಾರಣೆ ಮಾಡುವೆವು. ಅದಕ್ಕಾಗಿ ಬೇಗನೆ ಹೋಗಿ ಅತ್ತೆಮ್ಮನವರ ಪಾದಗಳಿಗೆ ಬಾಗಿ ವಂದಿಸಿ ಬರುವೆವು' ಎಂದವರು ತಮ್ಮ ನಿಯಮವನ್ನು ಸಡಲಿಸುವ ಇಚ್ಛೆ ಇಲ್ಲದೆ ಉತ್ತರವಿತ್ತರು. 'ನಮಗೀ ಯೋಚನೆ ಏತಕ್ಕೆ? ಹೊಸ ವ್ರತದ ಆತಂಕ ಯಾರಿಗಿದೆ? ಅತ್ತೆಮ್ಮನವರನ್ನು ಕಂಡೇ ಬರುವೆವು. ಏಳಿ' ಎಂದು ಅವರು ತಮ್ಮ ನಿರ್ಧಾರವನ್ನು ತಿಳಿಸಿದರು.

'ಧೈರ್ಯವಂತರು ನೀವು ಅಹುದು. ಆದರೆ ಸೂರ್ಯನ ಬಿಸಿಲುಬ್ಬಿ ಪಿತ್ತ ಕೆರಳದೆ? ಆದ್ದರಿಂದ ಚಾತುರ್ಯದಿಂದ ಅನ್ನವನ್ನು ಕೊಳ್ಳಿರಿ' ಎಂದು ಭರತೇಶನು ಸೂಚನೆ ಕೊಟ್ಟನು.

'ಸರ್ವದಿನಗಳಲ್ಲೂ ನಾವವರನ್ನು ಕಾಣುವುದಿಲ್ಲ. ಪರ್ವ ಕಾಲದಲ್ಲಾದರೂ ಅವರನ್ನು ಕಾಣದೆ ಇರುವುದು ಹೇಗೆ?'

'ಸರ್ವಮತದೋಜೆ. ಸರ್ವದಿವಸಗಳಲ್ಲೂ ಹೋಗಿ ನೋಡಿರಿ. ಆದರೆ ಇಂದು ಬೇಡ.'

'ಎಂದಿನಂತೆ ನಾವಿಂದು ಹೋಗದಿದ್ದರೆ ಅತ್ತೆಮ್ಮನವರಿಗೆ ನೋವಾಗದೆ?'

'ನಿಮ್ಮ ಅತ್ತೆಯ ಕಂದನಿಗೆ ನೋವಾಗದೇ?'

'ಯಶಸ್ವತೀ ದೇವಿಯರಿಗೆ ನಾವಿಂದು ದೂರವಾದೆವು.'

'ಮಗನ ಮಾತನ್ನು ಕೇಳಿದರೆ ಆ ಯಶಸ್ವತೀದೇವಿ ನಿಮ್ಮನ್ನು ಮೆಚ್ಚುವಳು. ಹೋಗಿ ಹೊಸ ವ್ರತಿಕೆಯರೊಡನೆ ಕೆಲವರು ಭೋಜಿಸಿ; ಕೆಲವರು ಅಮ್ಮನೆಡೆಗೆ ಹೋಗಿ. ಇಂದು ನಮ್ಮ ಮನೆಯಲ್ಲೇ ಅಮ್ಮನೂ ಭೋಜಿಸುವಂತೆ ಮಾಡುವೆನು.'

ಭರತೇಶನ ಈ ಮಾತಿಗೆ ಅವರು ಒಪ್ಪಿದರು. ಅದರಂತೆ ಕೆಲವರು ಪಾರಣೆಗಾಗಿ ಪಯಣಮಾಡಿದರು. ಉಳಿದವರನ್ನು ಭರತೇಶನು ತನ್ನೊತ್ತಿಗೆ ಕರೆದುಕಂಡು ಅವರೊಡನೆ ಮಾತನಾಡಿದ.

'ಇಲ್ಲಿ ಕೇಳಿರೆ. ಮೊದಲು ಉಪವಾಸವೆಂಬುದು ಮಹಾ ಜ್ವಾಲೆಯನ್ನೇ ತೋಡುವುದು; ಸುಡುವುದು. ಅದನ್ನು ತಾಳಿಕೊಂಡರೆ ಆ ಮೇಲೆ ಅದು ಸದರವಾಗುವುದು. ಅದರಿಂದ ಕರ್ಮಧೂಳಿ ಭಸ್ಮವಾಗುವುದು. ಒಂದೊಂದು ದಿನದ ಉಪವಾಸವೂ ಕರ್ಮಗಳನ್ನು ಕೊಂದು ಕೂಗುವುದು. ಮುಕ್ತಿಗೆ ಕೈವಲ್ಯ ಉಂಟಾಗುವುದು. ಸಾವು ಹುಟ್ಟಿನ ದಂದುಗವಳಿದು ಹೋಗುವುದು. ಮುಕ್ತಿಗೆ ನಿರ್ಭೇದ ಭಕ್ತಿ ಬೇಕು; ಅದಕ್ಕೆ ವಿರಕ್ತಿ ಬೇಕು; ಆ ವಿರಕ್ತತೆಗೆ, ಶಕ್ತಿಗೆ ತಕ್ಕ ತಪಸ್ಸು ಬೇಕು; ತಪಸ್ಸಿಗೆ ಯುಕ್ತಿಯೂ ಬೇಕು' ಭರತೇಶನು ಮತ್ತೂ ವಿವರಿಸಿದನು.

'ಉಪವಾಸವಿದ್ದ ಮೈ ಉರಿ ತಟ್ಟಿದಂತಿರುವುದು. ಆಗ ತಾಳ್ಮೆಯಿಂದ ಉಣ್ಣಬೇಕು.

ಎರಡೆಂಟು ತುತ್ತು ಕೊಳ್ಳುವಷ್ಟರಲ್ಲಿ ತಲೆತಿರುಗುವುದು. ಆಗ ಎಚ್ಚರಿಕೆ ಬೇಕು. ಅನ್ನವಿಳಿಯುವುದಿಲ್ಲ, ಪಾನದ ಮೇಲೆಯೇ ರುಚಿ. ಆದರೂ ಅನ್ನವನ್ನೇ ಕಿರಿಕಿರಿದಾಗಿ ಉಂಡು ಮತ್ತೆ ನೀರು ಕೊಳ್ಳಬೇಕು. ಮೊದಲು ನೀರು ಕೊಳ್ಳುವುದು ಸಲ್ಲದು. ಹೊಸ ಮಡಕೆಗೆ ನೀರು ಮುಟ್ಟಿದಾಗ ಚುಯ್ಯೆಂಬಂತೆ ಹೊಸ ತುತ್ತನ್ನು ಉಣ್ಣುವಾಗ ತಲೆ ತಿರುಗಿ ಚುಯ್ಯೆನ್ನುವುದು. ನೋಡಿದಲ್ಲೆಲ್ಲ ಅರಸಿನದ ವರ್ಣವೇ ಕಾಣುವುದು. ಪ್ರಥಮದಲ್ಲಿ ಉಪವಾಸ ನೋಯಿಸಿದರೂ ಮತ್ತೆ ಅಧಿಕವಾದ ಸುಖ ನೀಡುವುದು.ಆಗ ಕರ್ಮವು ಶಿಥಿಲವಾಗುವುದು; ಶಿವವಾಗುವುದು. ತತ್ತರಿಸದೆ ಕಂಗೆಡದ ಭುಕ್ತಿಯ ಕಿರಿ ಕಿರಿ ತುತ್ತುಗಳನ್ನುಂಡು ತುತ್ತಿಗೆ ತಕ್ಕ ಪಾನವನ್ನು ಕುಡಿದು ಸುಖದಿಂದಿರಿ.'

ಎಂದು ಭರತೇಶನು ಕೆಲವರನ್ನು ಬೀಳ್ಕೊಟ್ಟನು. ಹೋಗುವವರು ಇರುವವರನ್ನು ಕರೆದು ಏಕಾಂತದಲ್ಲಿ ಏನನ್ನೋ ನುಡಿದರು. ಅದಕ್ಕಿವರು 'ಆಗಲಿ, ಆಗಲಿ, ಹೋಗಿರಿ, ಆರು ಸರ್ತಿ' ಎಂದರು. ಅದನ್ನು ರಾಯನು ಆಗಲೇ ತಿಳಿದನು. 'ನೀವು, ಅತ್ತೆಯವರಿಗೆ ಪತಿಗೆ ಮೂರು ಸರ್ತಿ ಎರಗಿರಿ. ಎಂದಿವರು ನುಡಿದರೆ 'ಆರು ಸರ್ತಿ ಎರಗುವೆವು' ಎಂದವರು ಹೇಳಿದರು ನಗುತ್ತ ಅದನ್ನು ತಿಳಿದೂ ಭರತೇಶನು ಸುಮ್ಮನಿದ್ದನು.

ಭರತೇಶನು ಉಳಿದವರನ್ನು ಎರಡು ಒಡ್ಡು ಮಾಡಿದನು. ಕೆಲವರು ತನ್ನ ಬಳಿ ಇರಿ ಎಂದನು. ಕೆಲವರಿಗೆ ಅಮ್ಮಾಜಿಯ ಮನೆಗೆ ಹೋಗಲು ಹೇಳಿದನು. 'ಮುನಿ ಭುಕ್ತಿಯಾದ ಮೇಲೆ ನಾನು ಬಂದು ಅಮ್ಮಾಜಿಯನ್ನು ಕರೆದುಕೊಂಡು ಬರುವೆನು. ಅಷ್ಟು ಹೊತ್ತಿಗೆ ನೀವಲ್ಲಿಗೆ ಹೋಗಿ' ಎಂದು ಕಳುಹಿಸಿದನು. ಮಿಕ್ಕವರನ್ನು ಕರೆದು, 'ನೀವು ನಮ್ಮ ಗೃಹಕ್ಕೆ ಹೋಗಿರಿ' ನಾನು ಮುನಿಗಳನ್ನು ಚಕ್ಕನೆ ಕರೆದು ತರುವೆನು' ಎಂದು ಪ್ರೀತಿಯನ್ನು ಸೂಸಿ ಅವರನ್ನೂ ಕಳುಹಿಸಿದನು. ಆ ಮೇಲೆ ಜಿನಬಿಂಬಕ್ಕೆರಗಿ ಮುನೀಂದ್ರರ ಕರೆ ತರಲೆಂದು ಜನನಾಥನು ಓಜೆಯಿಂದ ನಡೆದನು. ಹೆಣ್ಣುಗಳೂ ಅನುರಾಗದಿಂದ ತಮ್ಮ ಅತ್ತೆಯ ಮನೆಗೆ ನಡೆದರು.

ಅತ್ತ ಭರತೇಶನ ಜನನಿಯಾದ ಯಶಸ್ವತೀ ದೇವಿಯು ಉಪವಾಸವನ್ನು ತನ್ನ ಅರಮನೆಯಲ್ಲಿದ್ದ ಜಿನಮಂದಿರದಲ್ಲೇ ಮಾಡಿ ಸುಖಾಸನದಲ್ಲಿ ಒರಗಿದಳು. ಆಕೆ ಆರ್ಜಿಕೆಯರೊಂದಿಗೆ ಇರುಳನ್ನೂ ಕಳೆದು ಮುಖಮಜ್ಜನಾದಿಗಳನ್ನು ಮಾಡಿ ಸಜ್ಜಿನಾರ್ಚನೆಗೈದು ಬಂದು ಮುಖ ಮಂಟಪದಲ್ಲಿ ಕುಳಿತಳು.

ಅಮ್ಮಾಜಿಗೆ ಇಂದು ಪಾರಣೆಯೆಂದು ಯಶಸ್ವತೀ ದೇವಿಯ ಕುಮಾರರು ದಿಕ್ಕುದಿಕ್ಕುಗಳಿಂದ ಸಾರವಸ್ತುಗಳ ಉಲುಪೆಗಳನ್ನು ಕಳುಹಿಸಿದ್ದರು. ಮಕ್ಕಳು ಕಳುಹಿಸಿದ್ದ ಆ ಉಲುಪೆಗಳನ್ನು ತಾಯಿಯು ನೋಡುತ್ತಿದ್ದಳು. ಸೌಂದರಾಂಗದ ನೂರು ಮಂದಿ ಮಕ್ಕಳಲ್ಲಿ ಆರು ಮಂದಿ ಈ ಮೊದಲೇ ದೀಕ್ಷೆಗೊಂಡಿದ್ದರು. ಉಳಿದವರು ರಾಜ್ಯದೊಳಗೇ ಇದ್ದರು. ಅವರಿಂದ ಸುವಸ್ತುಗಳೆಲ್ಲ ಬಂದುವು. ಬಿಳಿ ಬಟ್ಟೆ, ಗಂಧ, ಕರ್ಪೂರ ಮುಂತಾದ ಪಾರಣೆಗೆ ಉಚಿತವಾದ ಮಂಗಲ ವಸ್ತುಗಳನ್ನೆಲ್ಲ ಅವರು ಕಳುಹಿಸಿದ್ದರು.

ಪಟ್ಟದರಸು ಭರತೇಶ್ವರನು. ಮುಂದೆ ಪಟ್ಟಕ್ಕೆ ಬರುವವನು ಭುಜಬಲಿ. ಅವನೀಗ ಪೌದನಪುರದಲ್ಲಿರುತ್ತಿದ್ದನು. ಯಶಸ್ವತಿ ದೇವಿಯ ತಂಗಿಯ ಮಗನಾದ ಭುಜಬಲಿಯು ಆ

ಕೃತಯುಗಕ್ಕೆ ಮನ್ಮಥನಾಗಿದ್ದನು. ಅವನೂ ದೊಡ್ಡಮ್ಮನ ಪಾರಣೆಗಾಗಿ ಉಚಿತವಾದ ವಸ್ತುಗಳನ್ನೇ ಕಳುಹಿಸಿದ್ದನು. ಮಣಿಖಚಿತವಾದ ತೂಗು ಮಂಚ, ಮುತ್ತಿನ ಬೀಸಣಿಗೆ, ಮಾಣಿಕ್ಯದ ನೀರ್ಗಿಂಡಿ, ಕರ್ಪೂರ ಮುಂತಾದವು ಅವುಗಳಲ್ಲಿ ಕೆಲವು. ಭುಜಬಲಿ ರಾಜನು ಕಳುಹಿಸಿದ ಉಲುಪೆಗಳೊಂದಿಗೆ ಅರಮನೆಯ ಹೆಗ್ಗಡತಿಯೂ ಬಂದಿದ್ದಳು. ಆಕೆ ಉಲುಪೆಗಳನ್ನೊಪ್ಪಿಸಿದ ಮೇಲೆ ಯಶಸ್ವತೀ ದೇವಿಗೆರಗಿ ನಿಂತುಕೊಂಡಳು. ಆಗ ದೇವಿಯು ಮಗನ ಸ್ಥಿತಿಯನ್ನು ಕೇಳಿದಳು.

'ಯಾವ ಲೀಲೆಯಲ್ಲಿ ಚಿಕ್ಕಣ್ಣನಿದ್ದಾನೆ? ಅವನ ಮೀನಾಕ್ಷಿಯರು ಹೇಗಿದ್ದಾರೆ? ಅವನು ದೊಡ್ಡಣ್ಣನ ಹಾಗೆ ಉಪವಾಸ ಮಾಡುವನೋ?

'ಹಿರಿಯ ಸ್ವಾಮಿಯಷ್ಟು ಹೆಚ್ಚಾಗಿಲ್ಲಮ್ಮ. ಆದರೂ ಭೂವರನು ಏಕಭುಕ್ತ ಮುಂತಾದ ಚರಿತೆಯಲ್ಲಿರುವನು. ಅವನಂತೆ ಹೆಂಡತಿಯರೂ ಮೃದುಚರಿತೆಯಲ್ಲಿದ್ದಾರೆ.'

'ಅವನ ತಾಯಿ ಸುನಂದಾದೇವಿಯ ವರ್ತನದ ರೀತಿಯು ಹೇಗಿದೆ ಹೆಗ್ಗಡತಿ?''

'ಕಾಯದಂಡನೆ ಮತ್ತು ವ್ರತಜಪದಲ್ಲಿ ಅವರು ನಿಮ್ಮ ಒಯ್ಯಾರವನ್ನೇ ಹಿಡಿದಿದ್ದಾರಮ್ಮ?''

'ಒಳ್ಳೇದಾಯ್ತು' ಎಂದು ಯಶಸ್ವತಿ ದೇವಿಯು ಸೇವಕಿಯರನ್ನು ಕರೆದು, 'ಅರ್ಜಿಕೆಯರಿಗೆ ಚರಿಗೆಯಾದ ಕೂಡಲೇ ಇವಳಿಗೂ ಉಣಬಡಿಸಿರಿ' ಎಂದು ಹೇಳಿದಳು.

ದೂರದಲ್ಲಿ ಬರುತ್ತಿರುವ ಸೊಸೆಯರ ತಂಡವನ್ನು ದೇವಿಯು ಆಗಲೇ ಕಂಡಳು. ಸೊಸೆಯರೂ ಆಗಲೇ ಅತ್ತೆಯನ್ನು ಕಂಡರು. ಅವಳ ರೂಪವನ್ನು ಕಂಡಾಗ ಅವರಿಗೆ ಉಂಡಷ್ಟು ತಣಿವಾಯಿತು. ಅತ್ತೆಯನ್ನು ಕಂಡೊಡನೆ ಆ ಸೊಸೆಯರು ನಗುನಗುತ್ತ ಒತ್ತೊತ್ತಾಗಿ ಸಾಗಿದರು. ಹಾಗೆ ಬರುತ್ತಿರುವ ಸೊಸೆಯರನ್ನು ಕಂಡು ಕಂಡು ಅತ್ತೆಯೂ ಮನಸ್ಸಿನಲ್ಲೇ ಹಿಗ್ಗಿ ನಗುತ್ತಿದ್ದಳು. ಹತ್ತಿರ ಬಂದವರೇ ಅವರು ಜಿನಪಾದ ಪುಷ್ಪದ ಬಟ್ಟಲನ್ನು ನೀಡಿದರು. ದೇವಿಯು ಪ್ರಸಾದವನ್ನು ತೆಗೆದುಕೊಂಡು ಭಕ್ತಿಯಿಂದ ಮುಡಿಗಿಟ್ಟುಕೊಂಡಳು.

'ನಾವು ಕಂಡ ಅಭಿಷೇಕ ಪೂಜೆಗೆ ನೀವು ಒಡಂಬಡಿ ಅತ್ತೆಮ್ಮಾಜಿ.' ಎಂದು ಸೊಸೆಯರು ಬೇಡಿಕೊಂಡರು. 'ಇಚ್ಛಾಮಿ' ಎಂದು ಅತ್ತೆಯು ನಗುತ್ತ ತನ್ನ ಸೊಸೆಯರನ್ನು ಹರಸಿದಳು. ಆಗ ಅವರೆಲ್ಲರೂ ತಮ್ಮ ಅತ್ತೆಯ ಪಾದದಲ್ಲಿ ತಮ್ಮ ಹಣೆಗಳನ್ನಿಟ್ಟು ಎರಗಿದರು. 'ಸುಸುಖ ಸುಶೀಲರಾಗಿ ನೀವೆಲ್ಲ ಬಾಳಿರಿ' ಎಂದು ಅತ್ತೆಯು ಆಶೀರ್ವಾದ ಮಾಡಿದಳು.

ಆ ಮೇಲೆ ಅವರೆಲ್ಲರೂ ಅತ್ತೆಯ ಸುತ್ತಮುತ್ತನ್ನು ಬಳಸಿಕೊಂಡು ಕುಳಿತರು. ಅನಂತರ ಅವರು ಧರ್ಮಚಿಂತನೆ ಮಾಡಿದರು. ಅದೇ ವಿಚಾರವಾಗಿ ಮಾತನಾಡಿದರು. ಸೊಸೆಯರ ಅಂತರ್ಯವನ್ನು ಅರಿಯಬೇಕೆಂದು ಯಶಸ್ವತೀದೇವಿ ನಸುನಗುತ್ತ ಕೇಳಿದಳು.

'ಹೊಸ ಹರೆಯದಲ್ಲಿ ನೀವೇಕೆ ಈ ರೀತಿ ತನುವನ್ನು ದಂಡಿಸುವಿರಿ? ನಿಮಗೂ ಕೆಲಸವಿಲ್ಲ ನಿಮ್ಮ ಅಣ್ಣನಿಗೂ ಸುವಿವೇಕವು ಒಂದಿಷ್ಟೂ ಇಲ್ಲ. ರಾಜ್ಯವನ್ನಾಳುವವ ಮುನಿಯಂತೆ ನಡೆಯುವುದು ಇದು ಶುದ್ಧ ಅವಿವೇಕವಲ್ಲವೆ? ತನಗೆ ಭೋಗದಲ್ಲಿ ಇಚ್ಛೆಯಿಲ್ಲದಿದ್ದರೆ ಇರಲಿ; ಮಾನಿನಿಯರನ್ನು ಹಸಿಯಿಸಿ ಇಷ್ಟು ಪ್ರಯಾಸ ಮಾಡುವುದು ಉಚಿತವೇ? ಜಿನ! ಜಿನ!'

'ನಮಗೇನು ಪ್ರಯಾಸ ಅತ್ತೆಮ್ಮ? ತಿಂಗಳಿಗೆ ಒಂದೊಂದು ದಿನ ಮಾತ್ರ ನಿರ್ಭುಕ್ತಿ. ನವಪ್ರಾಯ ಶಕ್ತಿಯಲ್ಲಿ ಆತ್ಮಾರ್ಥವಾಗಿ ಸುವ್ರತಗಳನ್ನು ಮಾಡುವುದು ಒಳ್ಳಿತಲ್ಲವೆ? ನೃಪನು ನಿಮ್ಮ ಮಗನಾದ್ದರಿಂದ ನೀವು ಅವರನ್ನು ಸುವಿವೇಕಿಯಲ್ಲವೆಂದು ಹೇಳಬಹುದು. ನಿಮ್ಮ ಕುಮಾರನು ಮಹಾ ಪ್ರೌಢನೆಂದು ದೇವತೆಗಳಲ್ಲೂ ಹೊಗಳದವರು ಯಾರಿದ್ದಾರೆ ಅತ್ತೆಮ್ಮ? ವ್ರತದಿಂದ ನಮಗೊಂದಿಷ್ಟೂ ಪ್ರಯಾಸವಿಲ್ಲ, ನಿಮ್ಮಮಗನು ಮದಮುಖನಲ್ಲ, ಇದು ನಮಗೆ ಮಹಾ ಸುಖವೇ ಆಗಿದೆ.'

ಎಂದು ಸೊಸೆಯರ ಮಾತನ್ನು ಕೇಳಿ ಆಕೆಗೆ ಮಹಾ ಸಂತೋಷವಾಯಿತು. 'ಒಳ್ಳಿದಾಯಿತು ಹೆಣ್ಣುಗಳೆ. ನಿಮ್ಮರಸನ ಗೆಲವಿಗೆ ನೀವು ಬೀಗುವಿರಿ. ಸಲ್ಲೀಲೆಯಿಂದಲೂ ವ್ರತದಿಂದಲೂ ಸುಖವಾಗಿರಿ.' ಈ ಮಾತು ಅವರೆಲ್ಲರಿಗೂ ಹರಕೆಯಾಯಿತು.

'ನಮ್ಮ ಮನೆಯಲ್ಲಿ ಪಾರಣೆಮಾಡಿರೆಂದು ನಾನು ಹೇಳಲೇ? ನಿಮಗೆ ನಿಮ್ಮ ಮನೆಯ ಪಾರಣೆಯೇ ಬಹಳ ಸಮ್ಮಾನವು. ಆದ್ದರಿಂದ ನಿಮ್ಮ ಮಂದಿರಕ್ಕೆ ಹೋಗಿ'— ಎಂದುಅತ್ತೆ ಹೇಳಲು ಸೊಸೆಯರು ನಿಜ ಸಂಗತಿಯನ್ನು ತಿಳಿಸಿದರು.

'ಇಂದು ಭೂಪತಿಯು ತಮ್ಮ ಮಂದಿರದಲ್ಲಿ ನಿಮ್ಮ ಪಂತಿಯಲ್ಲೇ ಪಾರಣೆಮಾಡುವೆನೆಂದು ಹೇಳಿದರು. ಭೂಪತಿ ಇಲ್ಲಿಗೀಗ ಬರುವರು. ಆರ್ಯರಿಗೆ ಅನ್ನವನ್ನಿತ್ತುತಾನು ಬರುವವರೆಗೆ ಅಲ್ಲಿರಿ ಎಂದು ನಮ್ಮನ್ನು ಕಳುಹಿಸಿದರು.'

ಮಗನು ಉಪವಾಸದಲ್ಲಿಯೇಇಲ್ಲಿಗೆ ಬರುವನು; ನಡೆದು ನೊಂದು ಕೊಳ್ಳುವನು; ಎಂದು ಆ ತಾಯಿ ಸುತಮೋಹದಿಂದ ತಾನೇ ಎದ್ದಳು. 'ಭರತಣ್ಣನು ನಮ್ಮ ಮನೆಯಲ್ಲಿ ಉಣ್ಣುವನಾದರೆ ಇಲ್ಲಿತನಕ ಬರಬೇಕು.' ಎಂದು ಹೇಳುತ್ತ ಸೊಸೆಯರನ್ನು ಕರೆದುಕೊಂಡು ತಾನೇ ಹೊರಟಳು. ಆಪ್ತಳೊಬ್ಬಳನ್ನು ಕರೆದು ಅರ್ಜಿಕೆಯರನ್ನು ನೋಡಿ ತೃಪ್ತಿಪಡಿಸೆಂದು ಹೇಳಿ, ಸೊಸೆಯರೊಂದಿಗೆ ಮಗನ ಮಂದಿರಕ್ಕೆ ನಡೆದಳು. ಹೋಗುವಾಗ ಒಬ್ಬೊಬ್ಬ ಸೊಸೆಯರ ಕೈಹಿಡಿದುಕೊಂಡು ಹಲವು ಸೊಸೆಯರ ನಡುವೆ ಷಟ್ಖಂಡದ ಒಡೆಯನ ತಾಯಿ ಮೆಲ್ಲನೆ ನಡೆದಳು.

ಭರತಚಕ್ರಿಯ ಜನನಿಯು ಮಗನ ಮೇಲಿನ ಮಮತೆಯಿಂದ ತಾನೇ ಇತ್ತ ಬರುತ್ತಿದ್ದರೆ ಅತ್ತ ಭರತಚಕ್ರಿಯು ಮುನಿಭುಕ್ತಿ ಮಾಡಿಸಿ ತಾಯಿಯ ಮೇಲಿನ ಭಕ್ತಿಯಿಂದ ತಾನು ತಾಯ .ಅರಮನೆಗಾಗಿ ತನ್ನ ವನಿತೆಯರೊಡನೆ ಬರುತ್ತಿದ್ದನು. ಅಷ್ಟರಲ್ಲಿ ಅವನು,ದೂರದಿಂದ ಬರುತ್ತಿರುವ ಅಮ್ಮನನ್ನು ಕಂಡನು.

'ನೋಡಿ, ನೋಡಿ, ಅಮ್ಮಾಜಿ ನನಗಿದಿರಾಗಿ ಬರುತಿದ್ದಾರೆ. ಜಿನ ! ಜಿನ ! ಹೀಗೂ ಉಂಟೆ ? ನೀವು ಹೋಗಿ ತಡೆಯದೇ ಬರುವೆನೆಂದು ಹೇಳಿ ಕಳುಹಿಸಿದರೆ ಆ ಕಾಂತೆಯರು ಹೀಗೆ ಮಾಡುವುದೇ? ಕಾಂತೆಯರು ಕಡು ಭ್ರಾಂತೆಯರು,' ಎಂದು ಭರತೇಶನು ನೊಂದು ನುಡಿದನು.

ಅವನ ಮಾತು ಈ ವನಿತೆಯರಿಗೂ ಕೇಳಿತು. 'ನಾವು ಭಿನ್ನವಿಸಿದರೂ ಅವರೇ ತನ್ನ ಪುತ್ರಗೆ ಬಿಸಿಲಾದೀತೆಂದು ಎದ್ದೇ ಬಿಟ್ಟರು. ಸಮುದ್ರವು ಚಂದ್ರನತ್ತ ಏಳುವಾಗ ತಡೆಯುವವರು ಯಾರು?' ಎಂದು ವನಿತೆಯರು ತಮ್ಮ ತಪ್ಪಿಲ್ಲವೆಂದು ಸಮಾಧಾನ ಹೇಳಿದರು.

'ನೊಂದುಕೊಳ್ಳದಿರು ಅಣ್ಣ, ನನ್ನ ಮನಸ್ಸಿಗೆ ಇಚ್ಛೆ ಬಂತು; ನಾನೇ ಬಂದೆ. ಇದಕ್ಕೇನು ಕುಂದು? ನಿನ್ನ ನಾರಿಯರು ಬಂದಾಗ ನೀ ಬಂದುದಲ್ಲವೆ?' ಎಂದು ಯಶಸ್ವತೀದೇವಿ ತನ್ನ ಮಗನೊಡನೆ ಮಾತನಾಡಿದಳು.

ಭರತೇಶನು ತಾಯಿಗೆ ನಿವಾಳಿಯಿಟ್ಟು, ಪಾದಾರವಿಂದಗಳಿಗೆ ಎರಗಲೆಂದು ತಲೆಬಾಗಿಸಲು, ತಾಯಿಯು ಅವನನ್ನು ತಡೆದು ತಕ್ಕೈಸಿದಳು. 'ಇಂದ್ರೋಭವ ಇಂದ್ರಪೂಜ್ಯೋಭವ. ಸಾಂದ್ರಸುಖೀಭವ' ಎಂದು ಆ ಜಿತೇಂದ್ರಿಯನ ಜನನಿಯು ಮಗನನ್ನು ಹರಸಿದಳು. ಅವನೊಡನೆ ಬಂದು ಎರಗಿದ ಸೊಸೆಯರನ್ನೂ ಹರಸಿ ಮಗನ ಕೈಹಿಡಿದು ಮಾತನಾಡುತ್ತ ಯಶಸ್ವತೀದೇವಿ ಮುಂದೆ ನಡೆದಳು.

ಭರತನನ್ನು ದೊಡ್ಡಣ್ಣನೆಂದೂ ಬಾಹುಬಲಿಯನ್ನು ಚಿಕ್ಕಣ್ಣನೆಂದೂ ಯಶಸ್ವತೀದೇವಿ ಕರೆಯುವುದು ವಾಡಿಕೆ.

'ದೊಡ್ಡಣ್ಣ ಕೇಳಿರುವೆಯಾ. ಚಿಕ್ಕಣ್ಣ ಜಾಣ್ಮೆಯಿಂದ ಮಾಡುವ ತಪಸ್ಸಿನ ಕ್ರಮವನ್ನು?'

'ಅಮ್ಮಾ, ನಾ ಕೇಳಿಲ್ಲ, ನೀವು ಕೇಳಿದ್ದರೆ ನಮಗೂ ಹೇಳಿ ಬುದ್ಧಿ ಕಲಿಸಿರಿ.'

'ವಸ್ತುಗಟ್ಟಳೆ ಏಕಭುಕ್ತಿ; ಒಮ್ಮೆಗೆ ಮಾತ್ರ ರಸವಸ್ತುಗಳನ್ನು ಬಿಡುವನು. ದುಸ್ತರವಾದ ಉಪವಾಸವಿಲ್ಲ, ಆತನ ಪ್ರಸ್ತಲೇಸಲ್ಲವೆ?'

'ಅಹುದಮ್ಮ ನಿಮ್ಮ ನಿರೂಪದ ಬಗೆಯನ್ನು ಅರಿತೆನು. ಆತನಂತೆ ನಾನೂ ವಿಹರಿಸಬೇಕೆಂದು ಹೇಳುವುದಲ್ಲವೆ? ನಾನೀಗ ಹೆಚ್ಚಾಗಿ ಏನನ್ನು ಮಾಡಿದೆನು?'

ತಾಯಿ ಉತ್ತರಿಸಲಿಲ್ಲ, ಮಗನೇ ಮಾತು ಮುಂದುವರಿಸಿದನು.

'ನಾಲ್ಕು ಪರ್ವಗಳಲ್ಲಿ ಒಂದನ್ನು ಅಪೂರ್ವವಾದ ರೀತಿಯಲ್ಲಿ ಉಪವಾಸವಿದ್ದು ಆಚರಿಸುತ್ತೇನೆ. ಇದು ಸರ್ವಥಾ ಯಮವಲ್ಲ; ಬರೇ ನಿಯಮ. ಮತ್ತು ಅದಕ್ಕೆ ಪೂರೈಕೆಯಾಗಿ ತಿಂಗಳಿಗೊಂದು ಉಪವಾಸ ಮಾಡುತ್ತೇನೆ. ಯಮವೆಂದರೆ ಅದು ಜನ್ಮವನ್ನು ಮುಟ್ಟುವಂತೆ ಆಚರಿಸುವ ಸಂಯಮ. ಅದರಿಂದ ಅದು ಬಿರುಸಾಗಿದೆ. ಮಮತೆಯುಂಟಾದಾಗ ಮಾಡುವ, ಮತ್ತೆ ಬಿಡುವ ಈ ಸಂಯಮವು ಕಷ್ಟದ್ದಲ್ಲ. ಇದಕ್ಕೆ ನಿಮಗಿಷ್ಟು ಯೋಚನೆಯೆ? ಅಮ್ಮಾಜಿ ನಮಗಿದು ಸದರವಾಗಿದೆ. ನನ್ನಆಣೆ ಅಹುದಮ್ಮ! ಮದನನು ಒಲಿದು ಏಕಭುಕ್ತಿಯಲ್ಲಿದ್ದಾನೆ. ರಾಜ್ಯ ಪದವಿಗೆ ಇಷ್ಟಾದರೂ ಬೇಡವೇ?'

'ನಿನಗಿದು ಸದರವಾದರೆ ನೀನು ಆಚರಿಸು. ನನ್ನ ತಮ್ಮಂದಿರ ಈ ಮಕ್ಕಳನ್ನೇಕೆ ನೋಯಿಸುವುದು?' ಎಂದು ತಾಯಿ ವಿನೋದವಾಗಿ ನುಡಿದಳು. ರಾಯನ ಮುಖದಲ್ಲಾಗ ನಗೆ ಮಿನುಗಿತು. 'ಅಮ್ಮಾ ನಿನ್ನನುಜರ ಸುತೆಯರು ನಿನ್ನ ತನುಜನಿಂದಲೂ ಅಧಿಕರೇ? ಎಂದು ವಿನೋದಾರ್ಥಕೋಪಿದನಾದ ಭರತೇಶನು ನಗೆಯಾಡಿದನು. 'ಅಕ್ಕನ ಮಗ ಹಸಿವಾಗ ತಮ್ಮಂದಿರ ಮಕ್ಕಳೂ ಹಸಿದಿರಬೇಡವೆ? ಅಕ್ಕನಿಂದ ಅಧಿಕರೆ ತಮ್ಮಂದಿರು? ಅಮ್ಮಾ ನಾನು ಸುಮ್ಮನೆ ಉಪವಾಸ ಮಾಡುತ್ತಿದ್ದೇನೆ. ನಿಮ್ಮ ತಮ್ಮಗಿಮ್ಮದಿರು ಪುತ್ರಿಯರನ್ನು ಒಮ್ಮೆಯಾದರೂ ಒಂದು ವ್ರತ ಮಾಡಿರಿ ಎಂದು ಹೇಳಲಿಲ್ಲ, ತಮ್ಮಷ್ಟಕ್ಕೆ ತಾವಾಗಿಯೆ ವ್ರತವೆಸಗುತ್ತಿದ್ದಾರೆ. ತಿಂಗಳಿಗೆ ಒಂದು ಉಪವಾಸ ಮಾಡುವ ಈ ಹೆಣ್ಣುಗಳಿಗೆ ಏನಾಗಿದೆ ಅಮ್ಮಾ? ಅಂಗಭೋಗಕ್ಕೆ ಬಹುಕಾಲ ಸಲ್ಲದ ಧರ್ಮಾಂಗವು ಒಂದೆರಡು ಸಲವಾದರೂ

ಇರಬೇಡವೆ. ತನುಭೋಗದಲ್ಲೇ ಅತಿಯಾಗಿ ಮಗ್ನರಾದರೆ ಪಾಪ ಜನಿಸುವುದು. ಅದರಿಂದ ನರಕ ಪ್ರಾಪ್ತವಾಗುವುದು ಅಮ್ಮಾಜಿ. ಜಿನವ್ರತಕ್ಕಾಗಿ ಇಷ್ಟಾದರೂ ಬಳಲಬೇಕು. ಅಂಥವರಿಗೆ ಘನವಾದ ಮುಕ್ತಿ ದೊರೆಯುವುದು. ನರಜನ್ಮ ಪಡೆದಾಗ ಎಲ್ಲರೂ ಸಾಧ್ಯವಾದಷ್ಟು ವ್ರತವಾಚರಿಸಬೇಕು. ಭೋಗಕ್ಕೆ ಮರುಳಾಗಬಾರದು ಅಮ್ಮಾಜಿ. ಬಲ್ಲವರ ನಡತೆಯೂ ಹೀಗಷ್ಟೆ?'

'ಅದು ಹಾಗಿರಲಿ ಅಣ್ಣ; ಇನ್ನು ಮುನಿಭಕ್ತಿವ್ರತವನ್ನು ತಾಳಿದ ರೀತಿಯನ್ನು ಹೇಳು.'

'ಅಮ್ಮಾ. ಅದುಕೂಡ ಯಮವಲ್ಲ ; ನಿಯಮವು. ದಂಡುಧಾಳಿಗಳಲ್ಲಿ ಚಿಂತೆ ಸೂತಕಗಳಲ್ಲಿ ಪೀಡಿತ ಉತ್ಸಾಹದಲ್ಲಿ ಇಂತಹ ವ್ರತಗಳಿಲ್ಲ. ಉಂಡುಟ್ಟು ಮನೆಯಲ್ಲಿರುವಾಗ ಇಂತಹ ವ್ರತಗಳನ್ನಾಚರಿಸಬೇಕೆಂದು ಅವುಗಳನ್ನು ಕೈಗೊಂಡೆನು. ಹಾಗೆ ನಿರ್ಭೇದ ಭಕ್ತಿಯನ್ನೂ ಬಿಡಲಿಲ್ಲ, ಹೊರಗೆ ತೋರುವ ಆಚರಣೆಗಳ ಸಂಭ್ರಮವೊಮ್ಮೊಮ್ಮೆ ಉಂಟು. ಒಮ್ಮೊಮ್ಮೆ ಇಲ್ಲ. ಧರೆಯದಂದುಗವಿದ್ದು ನಡೆವ ವ್ರತವನ್ನು ನೋಡಿಕೊಂಡು ಮಾಡಬೇಕಲ್ಲದೆ ಹಿರಿದು ವ್ರತವನ್ನು ಹೊತ್ತು ನಡುವೆ ಚಿಂತಿಸುವುದು ಅದು ಮರುಳರ ನಡತೆ. ದೇವಾಧಿದೇವನ ರಾಣಿ ಯಶಸ್ವತೀದೇವಿಯ ಬಸುರಲ್ಲಿ ಬಂದವನು ಶ್ರೀ ವೀರ ಭರತನು ಹೆಡ್ಡನಲ್ಲ — ಅಮ್ಮಾಜಿ. ನೀವು ಚಿಂತಿಸಬಾರದು.'

'ಮೇರೆಯಿಲ್ಲದೆ ರಾಜ್ಯದ ಭಾರವು ನಿನಗಿದೆ ಮಗನೆ. ಅದರ ಮೇಲೆ ಈ ವ್ರತಗಳ ಭಾರವು ನಿನಗೆ ಹೆಚ್ಚೆಂಬುದೇ ನನ್ನ ಚಿಂತೆ. ಅದನ್ನು ನಿನಗೆ ಹೇಳಬೇಕೆಂದು ಒಮ್ಮೆ ಭಾವಿಸುವೆನು. ಒಡನೆ ನನ್ನ ಮಗನ ಈ ಚರಿತಕ್ಕೆ ಸುರರೂ ಮೆಚ್ಚುವರು. ಆದ್ದರಿಂದ ಹೇಗೆ ಹೇಳಲೆಂದು ನಾನೇ ನಾಚುತಿದ್ದೆ. ಈ ಚಿಕ್ಕ ಹರೆಯದಲ್ಲಿ ಲೆಕ್ಕವಿಲ್ಲದ ಹೆಣ್ಣುಗಳ ತೆಕ್ಕೆಯಲ್ಲಿರುವಾಗ ಅದರಲ್ಲಿ ಸಿಕ್ಕಿ ಬೀಳದೆ ಎಚ್ಚೆತ್ತು ನೀನಿರುವ ಚರಿತಕ್ಕೆ ನನ್ನ ಮನಸ್ಸು ಮೆಚ್ಚುವುದು ಮಗನೆ. ಇದರಿಂದ ನನ್ನ ಮಗನಿಗೆ ಬಹಳ ಕಷ್ಟವಾಗುವುದಲ್ಲಾ ವೆಂದೊಮ್ಮೆ ಚಿಂತೆಯಾಗುವುದು. ಆದರೆ ಒಂದು ಭಾರವನ್ನೂ ಹೊರದವರಂತೆ ನೀನಿರುವ ಚೆಂದವನ್ನು ಕಂಡು ಹೆಚ್ಚುವೆನು. ಭರತಣ್ಣ, ನಿನ್ನಾಣೆ ನಿನ್ನ ರಾಜ್ಯವನ್ನು, ನಿನ್ನ ಅರಸಿಯರನ್ನು ನಿನ್ನ ವ್ರತವನ್ನು ಪರೀಕ್ಷಿಸುವಾಗ ಒಮ್ಮೊಮ್ಮೆ ಚಿಂತೆ ತಲೆದೋರುತಿತ್ತು, ಇಂದು ಅದರ ಪರಿಹಾರವಾಯಿತು.'

ಎಂದು ತಾಯಿ ತನ್ನ ಹೃದಯವನ್ನು ಬಿಚ್ಚಿ ಮಾತಾಡಿದಳು.

'ಒಳಿತು ಅಮ್ಮಾಜಿ, ನೀವು ಹಾಗೆ ಚಿಂತಿಸಿದರೆ ಎಳ್ಳಷ್ಟೂ ಭಯವಿಲ್ಲ ನನಗೆ. ನಿಮ್ಮಿಂದಲೇ ಈ ಎಲ್ಲ ಸಿರಿಸಂಪತ್ತು, ಅಮ್ಮಾಜಿ. ಇದೆಲ್ಲ ನಿಮ್ಮ ಪ್ರಸಾದವೇ.'

ಹೀಗೆ ಮಾತನಾಡುತ್ತಾ ಅವರು ಬಾಗಿಲ ಬಳಿಗೆ ಬಂದರು. ರಾಯನು ಕಾಂತೆಯರೊಡನೆ ತಾಯಿಯ ಕಾಲು ತೊಳೆದು ಗೃಹದೊಳಗೆ ಪ್ರವೇಶಿದನು. ಸವಿತ್ರಿಯನ್ನು ಮಂಗಳಾಸನದಲ್ಲಿ ಕುಳ್ಳಿರಿಸಿ ತನ್ನ ಸತಿಯರೊಂದಿಗೆ ಸಾಂಗಿಕವಾಗಿ ಪೂಜಿಸತೊಡಗಿದನು.

'ಮುನಿಗಳನ್ನು ಪೂಜಿಸಬಹುದು, ನಮಗೆ ಪೂಜೆ ಸಲ್ಲದಣ್ಣ.'

'ಮುನಿಗಳ ತಾಯಿಯಷ್ಟೆ ನೀನು. ವೃಷಭಸೇನ ಮುನಿಯ ಜನನಿ ಕುಳ್ಳಿರು.

ಮಾರನನ್ನು ಗೆದ್ದಿರುವ ವೀರಮುನಿ, ಸುವೀರಮುನಿ, ಅನಂತ ವಿಜಯ, ಅನಂತವೀರ್ಯ ಮತ್ತು ಅಚ್ಯುತ—ಮುಂತಾದ ಮುನಿಗಳ ಜನ್ಮಧಾರಣ ಮಾಡಿದವಳು ನೀನಲ್ಲವೇ? ಜಿತಾಕ್ಷರೂ ಇಂದ್ರಿಯರತರೂ ಯಕ್ಷ ಯಕ್ಷಿಣಿಯರ ಪೂಜಿಸುವರು. ಆದ್ದರಿಂದ ಸಾಕ್ಷಾತ್ ಬ್ರಹ್ಮಚಾರಿಣಿಯಾದ ನಿನ್ನ ಪೂಜೆ ಸಲ್ಲಕ್ಷಣವು.

'ಚಕ್ರದಣ್ಣ. ಲೌಕಿಕ ಜನರು ಇದನ್ನು ಒಪ್ಪಲಾರರು! ನಿಷ್ಠುರ ನುಡಿವರು. ಭರತ ನನಗೆ ಯಾಕೀ ಪೂಜೆ? ಜಗದ ದುರ್ವಾಕ್ಯಕ್ಕೆ ಅಳುಕ ಬೇಕಣ್ಣ'

'ಭೂತಳವೇ ನನ್ನನ್ನು ಪೂಜಿಸುವುದು. ನನ್ನ ತಾಯಿಯನ್ನು ನಾನು ಪ್ರೀತಿಸಿ ಪೂಜಿಸಿದರೇನು ಕೊರತೆ?'

ಪೂಜೆಯವಸ್ತುಗಳ ತನ್ನಿರೆಂದು ಹೇಳುವ ಮೊದಲೇ ಅವನ ಅರಸಿಯರು ನಲಿನಲಿದು ವಸ್ತುಗಳನ್ನು ತಂದುಕೊಟ್ಟರು. ಭರತೇಶನು ಅಂಬಿಕೆಯನ್ನು ಪೂಜಿಸಿದನು. ವಾರಿಧಾರೆಯನ್ನೆರೆದನು. ಅನಂತರ ಪನ್ನೀರ ಧಾರೆಯೆರೆದನು. ಗೋರೋಜನ ಗಂಧಚಂದನಗಳ ಸಾರದಿಂದ ಪೂಜಿಸಿದನು. ಅಕ್ಷತೆಗಳ ಅರ್ಚನೆಯಾದ ಮೇಲೆ ಮುತ್ತಿನ ಅರ್ಚನೆಯಾಯಿತು. ತಳಿರು, ತಾವರೆ, ಮೊಲ್ಲೆ ಮುಂತಾದ ಹೂಗಳಿಂದಲೂ ಬೆಳ್ಳಿಬಂಗಾರಗಳ ಹೂಗಳಿಂದಲೂ ಪೂಜಿಸಿದನು. ನೈವೇದ್ಯ ಭಕ್ಷ್ಯಗಳ ಅರ್ಪಣೆಯಾದ ಮೇಲೆ ಕರ್ಪೂರ ತುಪ್ಪ ಮಾಣಿಕಗಳ ಆರತಿ ಎತ್ತಿದನು. ಗುಗ್ಗುಳ ಕದಂಬಾದಿ ಧೂಪಗಳನ್ನು ತೋರಿಸಿದನು. ಕದಳಿ ಖರ್ಜೂರ, ದ್ರಾಕ್ಷಿ, ಜಂಭೀರ ಫಲಗಳ ಸಮರ್ಪಿಸಿದನು. ಘನತರವಾದ ಅರ್ಘ್ಯಗಳಿಂದ ಶಾಂತಿಧಾರೆಯೆರೆದು ಅಮ್ಮನನ್ನು ಆರಾಧಿಸಿದನು. ಯಶಸ್ವತೀ ದೇವಿ ಜಿನನನ್ನು ಭಾವಿಸುತ್ತ ದೇವತೆಯಂತೆ ಕುಳಿತು ಸುಮ್ಮನೆ ನೋಡುತ್ತಿದ್ದಳು. ಸೊಸೆಯರು ಕೆಲವರು ಚಾಮರ ಬೀಸಿ ಸುಮನೋವೃಷ್ಟಿ ಮಾಡಿದರು. ಕೆಲವರು ಕನ್ನಡಿಪಿಡಿದು ಸೇವೆಸಲ್ಲಿಸಿದರು. ಎಲ್ಲರೂ ಸೇರಿ ನವರತ್ನದಾರತಿಯನ್ನು ಬೆಳಗಿ ನಿವಾಳಿಯನ್ನಿಟ್ಟು ಎರಗಿದರು. ಇದನ್ನು ನೋಡಿದ ಭರತೇಶನ ಕಣ್ಣಿನ ಪ್ರೀತಿ ಸಂದಿತು.

ಕೊನೆಯಲ್ಲಿ ಭರತನು ಸಾಷ್ಟಾಂಗವೆರಗಿ ಅಮ್ಮಾಜಿಯ ಎಡಭಾಗದಲ್ಲಿ ಕುಳಿತುಕೊಂಡನು. ಕೂಡಲೇ ಪೂಜಾದ್ರವ್ಯವನ್ನು ತೆಗೆದು ಎಡೆಮಾಡತೊಡಗಿದರು. ಯಶಸ್ವತೀ ದೇವಿ ಸೊಸೆಯರನ್ನು ಕರೆದು ಮನೆತುಂಬಿ ಕುಳ್ಳಿರಿಸಿದಳು. ಅದೊಂದು ಹಿರಿಯ ಹಬ್ಬವೇ ! ಭರತೇಶನು ತಾಯಿ ಹಂತಿಯಲ್ಲೇ ತನ್ನ ಅರಸಿಯರೊಂದಿಗೆ ಪಾರಣೆ ಮಾಡುವಾಗ ದೇವೇಂದ್ರನ ಭೋಗವೂ ಇದಕ್ಕೆ ಸರಿಯಿಲ್ಲವೆಂದು ತೋರಿತು. ಆ ಪಾರಣೆಯೆಂದರೆ ಕ್ಷೀರಸಮುದ್ರದಲ್ಲಾದ ಓಕುಳಿಯೇ ಸರಿ. ಕ್ರಮಾಚಾರದಂತೆ ಅನ್ನಾದಿಗಳನ್ನು ಸ್ವೀಕರಿಸಿ ತಣಿದು ಎಲ್ಲರೂ ಕೈತೊಳೆದರು. ಅಷ್ಟರಲ್ಲೇ ಘಂಟಾನಾದ ಕೇಳಿಸಿತು.

ಪಾರಣೆಯ ಶ್ರಮಕ್ಕಾಗಿ ಸಾರತಲ್ಪದಲ್ಲಿ ಒಂದಿಷ್ಟು ಪವಡಿಸಬೇಕೆಂದು ನೃಪತಿ ತಾನೇ ತಾಯಿಯನ್ನು ಕರೆದೊಯ್ದನು. ತೂಗುಮಂಚದಲ್ಲಿ ಒರಗಿದ ತಾಯಿಯನ್ನು ಭರತೇಶನು ತೂಗಿದನು. ಆಕೆ ಅವನನ್ನು ತೊಟ್ಟಿಲಲ್ಲಿ ಮಲಗಿಸಿ ತೂಗಿದ ಸಾಲವನ್ನು ತೀರಿಸುವನೋ ಎಂಬಂತೆ ತೋರಿತದು. ಹಾಲನ್ನೂಡಿ ನೀರೆರೆದು ಆಕೆ ಸಲಹಿದ ಋಣವನ್ನು ತಿದ್ದುವಂತೆ

ವೀಳ್ಯದೆಲೆಯನ್ನು ಬಾಯಿಗೆ ಇತ್ತು ಪನ್ನೀರನ್ನು ತಳಿದನು. ಪಚ್ಚೆಕರ್ಪೂರ ಗಂಧಗಳನ್ನು ಕೊಟ್ಟು ಬೀಸಣಿಗೆಯಿಂದ ಬೀಸಿದನು. ಆಗ ಅವನ ರಾಣಿಯರು ಅತ್ತೆಯ ಅಡಿಗಳನ್ನು ಒತ್ತಿದರು.

ಚಲಿಸುತ್ತಿರುವ ನರೆಗೂದಲನ್ನು ಓಸರಿಸುತ್ತ , 'ಅಮ್ಮಾಜಿ ಬಹಳ ಬಳಲಿರುವಿರಿ. ಮುಪ್ಪಿನಲ್ಲಿ ನಿಮಗೆ ಈ ಉಪವಾಸ ಸಾಧ್ಯವಾಗುವುದೇ?' ಎಂದು ನೊಂದು ಕೇಳಿದನು.

ಜಿನಭಾವನೆಯಲ್ಲೇ ತಲ್ಲೀನಳಾದ ಆಕೆ ಒಂದಿಷ್ಟು ಪವಡಿಸಿದಳು. ಕೂಡಲೇ, 'ಮಗನೆ ಪವಡಿಸುವುದಿಲ್ಲ ?' ಎಂದು ಎದ್ದು ಕುಳಿತಳು. ಜಿನನನ್ನು ನೆನೆದುಕೊಂಡು ಜಿನ ಶರಣೆಂದಳು. 'ಅಣ್ಣ, ನನಗೆ ನನ್ನ ಮನೆಗೆ ಹೋಗದೆ ನಿದ್ರೆ ಮುದ್ರಿಸದು. ನೀನಿಲ್ಲಿಯೆ ತಣ್ಣಗಿರು' ಎಂದವಳೇ ಎದ್ದಳು. ಹೊಂಬಣ್ಣದವ್ವೆಯ ಭರತನು ಕೈಕೊಟ್ಟು ಮನ್ನಿಸಿದನು. ಸಿರಿಗೆಲ್ಲ ಅಮ್ಮನೆ ಒಡತಿಯಾಗಿರಲು ತಾನೇನು ಕೊಡುವುದೆಂದು ಯೋಚಿಸಿದನು. ಆ ಮೇಲೆ ಮನೆಗೆ ಬಂದ ತಾಯಿ ಬರಿದೆ ತೆರಳಬಾರದು ಎಂದು ಉಪಚಾರದ ಮಂಗಲಕ್ಕಾಗಿ ನೂರಾರು ಪೆಟ್ಟಿಗೆಗಳಲ್ಲಿ ವಸ್ತ್ರ ಒಡವೆಗಳನ್ನು ತುಂಬಿಸಿ ಕಳುಹಿಸಿ ಕೊಟ್ಟನು.

ತಾಯಿ ಮಗನ ಕೈಹಿಡಿದು ಅಲ್ಪದೂರ ನಡೆದಳು. ಸೊಸೆಯರು ಮುಖ ನೋಡಿ ಅವರನ್ನು ಬೀಳ್ಕೊಟ್ಟಳು. ಆಮೇಲೆ ಮಗನೊಡನೆ ಮಾತನಾಡುತ್ತ ಒಂದಿಷ್ಟು ದೂರ ನಡೆದಳು. ಅಷ್ಟರಲ್ಲೇ ಇದಿರಾಗಿ ಪಲ್ಲಕ್ಕಿ ಬಂದಿತು. ಯಶಸ್ವತೀದೇವಿ ಅದನ್ನೇರಿ ವಂದಿಸಿದ ಮಗನನ್ನು ಹರಸಿದಳು. ಆಮೇಲೆ ತನ್ನ ಮಂದಿರದತ್ತ ಸಾಗಿದಳು. ರಾಯರ ದೇವನ ತಾಯಿ ತನ್ನ ಶ್ರೀಯುತ ರಾಜ ಮಂದಿರವನ್ನು ಸೇರುವಾಗ, ತಾಯಿಯನ್ನು ಬೀಳ್ಕೊಂಡ ಮಹಾರಾಜನು ತನ್ನ ಅರಮನೆಯನ್ನೂ ಸೇರಿದನು.

ನಾಳೆ ದಿಗ್ವಿಜಯದ ವಾರ್ತೆ ಮೊಳೆಯುವುದು. ಇಂದಿಗೆ ಆಲೋಚನೆಯೆಂಬುದಿಲ್ಲ ವೆಂದು ಲೋಲನೇತ್ರೆಯರ ಜೊತೆಯಲ್ಲಿ ರಾಜನು ಲೀಲೆಯಿಂದ ಮೆರೆದನು.

ಹೀಗೆ ಸಿರಿವೆತ್ತ ಕೋಸಲ ದೇಶದ ಅಯೋಧ್ಯಾಪುರದಲ್ಲಿ ಭರತ ರಾಜೇಂದ್ರನು ಭೋಗಯೋಗದಲ್ಲಿ ಮೆರೆಯುತಿದ್ದನು.